ಶಿವಮೊಗ್ಗ
ಬುಧವಾರ, 11 ಮಾರ್ಚ್ 2026
ಸಂಪುಟ 16, ಸಂಚಿಕೆ 318, ಪುಟಗಳು 12
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹4
RNI: KAR KAN 2010/64051
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಕದನವಿರಾಮ ಬಯಸಲ್ಲ: ಇರಾನ್ | 02
ಜಲಸಂಧಿ ವಶ: ಟ್ರಂಪ್ ಎಚ್ಚರಿಕೆ | 02
ಅರ್ಹ ಮತದಾರರನ್ನು ಹೊರಗಿಡಲ್ಲ: ಸಿಇಸಿ | 02

ಶುಭ ದಿನ

ಕಲಿಯುಗಾಬ್ದ 5127, ವಿಶ್ವಾವಸು ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುಣ ಮಾಸ, ಕೃಷ್ಣ ಪಕ್ಷ, ತಿಥಿ: ಅಷ್ಟಮಿ, ನಕ್ಷತ್ರ: ಜ್ಯೇಷ್ಠ

ದಿನದ ಮಾತು

ಸುಖಾಭಿಲಾಷಿಗೆ ವಿದ್ಯೆ ಇಲ್ಲ, ವಿದ್ಯಾರ್ಥಿಗೆ ಸುಖವಿಲ್ಲ, ವಿದ್ಯಾಕಾಂಕ್ಷಿ ಸುಖವನ್ನು ಬಿಡಬೇಕು.
▲ಸುಭಾಷಿತ

ಮಧ್ಯಪ್ರಾಚ್ಯ ಸಂಘರ್ಷ ಹಿನ್ನೆಲೆ ಕೇಂದ್ರ ಕ್ರಮ | ನೈಸರ್ಗಿಕ ಅನಿಲ ಹಂಚಿಕೆ ವ್ಯವಸ್ಥೆಯಲ್ಲಿ ಮಹತ್ವದ ಬದಲಾವಣೆ
ಮನೆ ಬಳಕೆ, ಸಾರಿಗೆ ಕ್ಷೇತ್ರಗಳಿಗೆ ಅನಿಲ ನಿರಂತರ ಪೂರೈಕೆ | ಎಲ್‌ಪಿಜಿ, ಸಿಎನ್‌ಜಿ, ಪಿಎನ್‌ಜಿ ಗ್ಯಾಸ್‌ಗೆ ಒತ್ತು

ಗೃಹ ಬಳಕೆ ಅನಿಲಕ್ಕೆ ಆದ್ಯತೆ

• ಹೊಸದಿಲ್ಲಿ: ನೈಸರ್ಗಿಕ ಅನಿಲ ಹಂಚಿಕೆ ವ್ಯವಸ್ಥೆಯಲ್ಲಿ ಕೇಂದ್ರ ಸರ್ಕಾರ ಮಂಗಳವಾರ ಮಹತ್ವದ ಬದಲಾವಣೆ ಮಾಡಿದೆ. ಮಧ್ಯಪ್ರಾಚ್ಯದಲ್ಲಿ ನಡೆಯುತ್ತಿರುವ ಸಂಘರ್ಷದಿಂದಾಗಿ ಭಾರತಕ್ಕೆ ಬರುವ ಅನಿಲ ಸರಬರಾಜಿನಲ್ಲಿ ವ್ಯತ್ಯಯ ಉಂಟಾದ ಹಿನ್ನೆಲೆಯಲ್ಲಿ ಮನೆ ಬಳಕೆ ಹಾಗೂ ಸಾರಿಗೆ ಕ್ಷೇತ್ರಗಳಿಗೆ ನಿರಂತರ ಸರಬರಾಜು ಖಚಿತಪಡಿಸಲು ಈ ಕ್ರಮ ಕೈಗೊಳ್ಳಲಾಗಿದೆ. ಹೊಸ ನಿಯಮಾವಳಿಯ ಪ್ರಕಾರ, ಎಲ್‌ಪಿಜಿ ಉತ್ಪಾದನೆ, ಸಿಎನ್‌ಜಿ ಮತ್ತು ಪೈಪ್ ಮೂಲಕ ಮನೆಗಳಿಗೆ ಒದಗಿಸುವ ಪಿಎನ್‌ಜಿ ಗ್ಯಾಸ್‌ಗೆ ಮೊದಲ ಆದ್ಯತೆ ನೀಡಲಾಗಿದೆ. ಭಾರತವು ದಿನಕ್ಕೆ ಸುಮಾರು 191 ಮಿಲಿಯನ್ ಸ್ಟ್ಯಾಂಡರ್ಡ್ ಕ್ಯೂಬಿಕ್ ಮೀಟರ್ (ಎಂಎಂಎಸ್‌ಸಿಎಂಡಿ) ಅನಿಲವನ್ನು ಬಳಸುತ್ತದೆ. ಇದರ ಅರ್ಧದಷ್ಟು ಭಾಗವನ್ನು ಆಮದು ಮೂಲಕ ಪೂರೈಸಲಾಗುತ್ತದೆ. ಆದರೆ ಮಧ್ಯಪ್ರಾಚ್ಯ ಸಂಘರ್ಷದ ಪರಿಣಾಮವಾಗಿ ಹಾರ್ಮುಜ್ ಜಲಸಂಧಿ ಮೂಲಕ ಸಾಗುವ ಎಲ್‌ಎನ್‌ಜಿ ಟ್ಯಾಂಕರ್‌ಗಳ ಸಂಚಾರ ತಾತ್ಕಾಲಿಕವಾಗಿ ಸ್ಥಗಿತಗೊಂಡಿದೆ. ಇದರ ಪರಿಣಾಮವಾಗಿ ಸುಮಾರು 60 ಎಂಎಂಎಸ್‌ಸಿಎಂಡಿ ಅನಿಲ ಸರಬರಾಜು ವ್ಯತ್ಯಯಗೊಂಡಿದೆ. ➡ಪುಟ ೪





ಪಾಕ್ ಸೇರಿ ರಾಷ್ಟ್ರಗಳಿಗೆ ಇಂಧನ ಕೊರತೆಯ ಬಿಸಿ

ಮಧ್ಯಪ್ರಾಚ್ಯ ಯುದ್ಧವು ಜಾಗತಿಕ ತೈಲ ಪೂರೈಕೆ ವ್ಯತ್ಯಯ ಸೃಷ್ಟಿಸಿದ್ದರಿಂದ ತೈಲ ಕೊರತೆಯ ಬಿಸಿ ನೆರೆಯ ಪಾಕಿಸ್ತಾನ ಸೇರಿದಂತೆ ಹಲವು ದೇಶಗಳಿಗೆ ಮುಟ್ಟಿದೆ. ಚೀನಾ ಹಲವು ಪೂರೈಕೆದಾರರನ್ನು ಹೊಂದಿದ್ದರೂ, ಚೀನಾದಲ್ಲಿ ತೈಲ ಬೆಲೆ ಏರಿಕೆಯಾಗಿದೆ. ➡ಪುಟ ೪

ವಿಮಾನಯಾನ ದರ ಏರಿಕೆ ಬಿಸಿ

• ಹೊಸದಿಲ್ಲಿ: ಮಧ್ಯಪ್ರಾಚ್ಯದಲ್ಲಿ ಉಂಟಾಗಿರುವ ಸಂಘರ್ಷದಿಂದಾಗಿ ಜೆಟ್ ಇಂಧನದ ಬೆಲೆ ತೀವ್ರವಾಗಿ ಏರಿಕೆಯಾಗಿರುವ ಕಾರಣ, ಏರ್ ಇಂಡಿಯಾ ಮತ್ತು ಏರ್ ಇಂಡಿಯಾ ಎಕ್ಸ್‌ಪ್ರೆಸ್ ವಿಮಾನ ಟಿಕೆಟ್‌ಗಳಿಗೆ ಹೆಚ್ಚುವರಿ ಇಂಧನ ಶುಲ್ಕ ವಿಧಿಸಲು ನಿರ್ಧರಿಸಿವೆ. ಮಾ.12ರಿಂದ ದೇಶೀಯ ವಿಮಾನ ಟಿಕೆಟ್‌ಗಳಿಗೆ ಪ್ರತಿ ಪ್ರಯಾಣಿಕನಿಗೂ 399 ರೂ. ಇಂಧನ ಹೆಚ್ಚುವರಿ ಶುಲ್ಕ ವಿಧಿಸಲಾಗುತ್ತದೆ. ಸಾರ್ಕ್ ದೇಶಗಳ ಮಾರ್ಗಗಳಿಗೂ ಇದು ಅನ್ವಯವಾಗುತ್ತದೆ. ➡ಪುಟ ೪

ಹೋಟೆಲ್ ಉದ್ಯಮಕ್ಕೆ ಭಾರೀ ಸಂಕಷ್ಟ

• ಬೆಂಗಳೂರು: ವಾಣಿಜ್ಯ ಬಳಕೆಯ ಎಲ್‌ಪಿಜಿ ಸಿಲಿಂಡರ್‌ಗಳ ಕೊರತೆ ಹೆಚ್ಚಾಗುತ್ತಿದ್ದು, ಇದರಿಂದ ಬೆಂಗಳೂರಿನಲ್ಲಿನ ಕೆಲವು ಹೋಟೆಲ್‌ಗಳಲ್ಲಿ ಕೇವಲ ಟೀ ಕಾಫಿ ಸೇರಿದಂತೆ ಕೆಲ ತಿಂಡಿ ತಿನಿಸುಗಳನ್ನು ಮಾತ್ರ ನೀಡುತ್ತಿದ್ದು, ಇನ್ನು ಕೆಲವು ಹೋಟೆಲ್‌ಗಳು ಸಂಪೂರ್ಣ ಬಂದ್ ಮಾಡಲು ಹೋಟೆಲ್ ಮಾಲೀಕರು ಮುಂದಾಗುತ್ತಿದ್ದಾರೆ. ಸೋಮವಾರ ಈ ಸಂಬಂಧ ಹೋಟೆಲ್ ಸಂಘವು ಹೋಟೆಲ್‌ಗಳಲ್ಲಿ ಸಿಲಿಂಡರ್ ಖಾಲಿ ಆದ ಹಾಗೇ ಬಂದ್ ಮಾಡಲಾಗುವುದು ಎಂದು ತಿಳಿಸಿತ್ತು. ಅದರಂತೆ ಮಂಗಳವಾರ ಕೆಲ ಹೋಟೆಲ್‌ಗಳಲ್ಲಿ ಕೇವಲ ಟೀ, ಕಾಫಿ ಮಾತ್ರ ನೀಡುತ್ತಿದ್ದರು, ಇನ್ನು ಕೆಲವೆಡೆ ಅಧಿಕ ಅನಿಲ ಖರ್ಚಾಗುವ ತಿನಿಸುಗಳನ್ನು ಹೊರತುಪಡಿಸಿ ಇತರ ತಿನಿಸುಗಳನ್ನು ನೀಡಲಾಗುತ್ತಿತ್ತು.



ಕೇಂದ್ರ ಸಚಿವರಿಗೆ ಸಿಎಂ ಮನವಿ

ಈ ಬಗ್ಗೆ ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವ ಹರ್ದೀಪ್ ಸಿಂಗ್ ಪುರಿ ಅವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪತ್ರ ಬರೆದು ಬೆಂಗಳೂರಿನ ಹಲವು ಹೋಟೆಲ್ ಮತ್ತು ರೆಸ್ಟೋರೆಂಟ್‌ಗಳು ವಾಣಿಜ್ಯ ಬಳಕೆಯ ಎಲ್‌ಪಿಜಿ ಸಿಲಿಂಡರ್‌ಗಳನ್ನು ಪಡೆಯಲು ಸಾಧ್ಯವಾಗುತ್ತಿಲ್ಲ, ಇದೇ ಪರಿಸ್ಥಿತಿ ಮುಂದುವರಿದರೆ ಹಲವಾರು ಹೋಟೆಲ್‌ಗಳನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸುವ ಪರಿಸ್ಥಿತಿ ಎದುರಾಗಬಹುದಾಗಿದೆ. ಆ ನಿಟ್ಟಿನಲ್ಲಿ ತಕ್ಷಣ ಕ್ರಮ ಕೈಗೊಳ್ಳುವಂತೆ ಮನವಿ ಮಾಡಿದ್ದಾರೆ.

ತತ್ವಾರದ ಸಮಯದಲ್ಲಿ ತತ್ವಾದರ್ಶ ಪಾಲಿಸೋಣ

ಇಸ್ರೇಲ್- ಅಮೆರಿಕ- ಇರಾನ್ ಯುದ್ಧ ನಡೆಯುತ್ತಿದೆ. ಅದು ಮಧ್ಯಪ್ರಾಚ್ಯ ದೇಶಗಳ ಮೇಲೆಲ್ಲ ಪರಿಣಾಮ ಬೀರಿದೆ. ಈಗಾಗಲೇ ಪಾಕಿಸ್ತಾನ ಮತ್ತು ಬಾಂಗ್ಲಾದೇಶ ವಿಪರೀತ ಸಮಸ್ಯೆ ಎದುರಿಸುತ್ತಿವೆ. ಪಾಕಿಸ್ತಾನದಲ್ಲಿ ಪೆಟ್ರೋಲ್ ಲೀಟರ್‌ಗೆ 55 ರುಪಾಯಿ ಹೆಚ್ಚಿಸಿರುವುದರ ಜತೆಗೆ ಶಾಲೆ- ಕಾಲೇಜಿಗೆ ರಜೆ ಕೊಟ್ಟು, ವಾರದಲ್ಲಿ ನಾಲ್ಕೇ ದಿನ ಕೆಲಸ ಎಂಬ ನಿಯಮವನ್ನೂ ಮಾಡಲಾಗಿದೆ. ಬಾಂಗ್ಲಾದೇಶದಲ್ಲಿ ಕೂಡ ಇಂಧನ ಸಮಸ್ಯೆ ಕಾಣಿಸಿಕೊಂಡಿದೆ. ಭಾರತ ತಕ್ಷಣಕ್ಕೆ ಬಾಂಗ್ಲಾದೇಶಕ್ಕೆ ಡೀಸೆಲ್ ಕಳಿಸಿಕೊಟ್ಟಿದೆ.

ನಮ್ಮ ದೇಶದಲ್ಲೂ ಗ್ಯಾಸ್ ಟ್ರಬಲ್ ಆರಂಭವಾಗಿದೆ. ಈಗ ಸದ್ಯಕ್ಕೆ ವಾಣಿಜ್ಯ ಬಳಕೆ ಸಿಲಿಂಡರ್ ಸರಿಯಾಗಿ ಪೂರೈಕೆಯಾಗುತ್ತಿಲ್ಲ, ಹಾಗಾಗಿ ಗೃಹಬಳಕೆ ಗ್ಯಾಸ್ ಸಿಲಿಂಡರ್ ಕೂಡ ಕೊರತೆಯಾಗಬಹುದು ಎಂಬ ನಿರೀಕ್ಷೆಯಿದೆ. ಸಹಜವಾಗಿ ಯಾವುದೇ ವಸ್ತುವಿನ ಕೊರತೆ ಆರಂಭವಾದಾಗ ನಾವು ಆತಂಕಕ್ಕೆ ಒಳಗಾಗುತ್ತೇವೆ. ಅದರಿಂದ ಬಚಾವಾಗಲು ಆ ವಸ್ತುವನ್ನು ಹೆಚ್ಚು ಶೇಖರಿಸಲು ಹವಣಿಸುತ್ತೇವೆ. ಈಗ ಗ್ಯಾಸ್ ವಿಷಯದಲ್ಲೂ ಹಾಗೇ ಆಗುತ್ತಿದೆ. ಗ್ಯಾಸ್ ಕೊರತೆ ಆಗಬಹುದು ಎಂದೆನಿಸುತ್ತಿದ್ದಂತೆ ಕೆಲವರು ದಿಢೀರನೆ ಗ್ಯಾಸ್ ಬುಕ್ ಮಾಡಲಾರಂಭಿಸಿದ್ದಾರೆ. ಶೀಘ್ರ ಖರೀದಿಸಿ ಇಟ್ಟುಕೊಳ್ಳೋಣ ಎಂಬ ಯೋಚನೆ ಸಹಜ. ಅದರ ಬದಲಾಗಿ ನಾವು ಕಡಿಮೆ ಗ್ಯಾಸ್ ಬಳಸುವ ಮಾರ್ಗ ಅನುಸರಿಸಬಹುದೆ? ಹೇಗೂ ಈಗ ಬೇಸಿಗೆ. ತಣ್ಣಗಿನ ಆಹಾರಗಳನ್ನು ಅಥವಾ ಬೆಂಕಿಯ ಅಗತ್ಯವಿಲ್ಲದ ಆಹಾರವನ್ನು ನಮ್ಮ ದಿನನಿತ್ಯದ ಬಳಕೆಯಲ್ಲಿ ಹೆಚ್ಚಿಸಬಹುದೆ? ಶಾಲೆ- ಕಾಲೇಜುಗಳಲ್ಲಿ ಬೆಂಕಿ ಇಲ್ಲದ ಅಡುಗೆಯ ಸ್ಪರ್ಧೆ ಇರುತ್ತದಲ್ಲ, ಅಂತಹ ಕೌಶಲ್ಯಗಳನ್ನು ನಾವು ಈ ಸಮಯದಲ್ಲಿ ಹೆಚ್ಚು ಬಳಸಬಹುದೆ ಎಂದು ಯೋಚಿಸಬಹುದು. ನಾವೇನ್ನಕ್ಕೆ ಹೆಸರಾದ ಭಾರತೀಯರಿಗೆ ಇದು ಅಸಾಧ್ಯವಾದ ಸಂಗತಿಯಂತೂ ಖಂಡಿತ ಅಲ್ಲ. ➡ಪುಟ ೪

ಕಿರುಸುದ್ದಿ

ಕೆಪಿಸಿಸಿ ಅಧ್ಯಕ್ಷ ಡಿಕೆಶಿಗೆ ಶುಭ ಹಾರೈಸಿದ ಸಿಎಂ



• ಬೆಂಗಳೂರು: ಕರ್ನಾಟಕ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಾಗಿ ಯಶಸ್ವಿಯಾಗಿ ಆರು ವರ್ಷ ಪೂರೈಸಿರುವ ಹಿನ್ನೆಲೆಯಲ್ಲಿ ಉಪ ಮುಖ್ಯಮಂತ್ರಿ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶುಭಾಶಯ ಕೋರಿದ್ದಾರೆ. ಈ ಕುರಿತು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಅವರು, ಕೆಪಿಸಿಸಿ ಅಧ್ಯಕ್ಷರಾಗಿ 6 ವರ್ಷಗಳನ್ನು ಯಶಸ್ವಿಯಾಗಿ ಪೂರೈಸಿರುವ ಡಿಸಿಎಂ ಡಿ.ಕೆ.ಶಿವಕುಮಾರ್ ಅವರಿಗೆ ಅಭಿನಂದನೆಗಳು. ಶಿವಕುಮಾರ್ ಅವರ ಸಂಘಟನಾ ಚಾತುರ್ಯ, ಸೈದ್ಧಾಂತಿಕ ಬದ್ಧತೆ ಮತ್ತು ಕಠಿಣ ಶ್ರಮ ನಮ್ಮ ಪಕ್ಷದ ಎಲ್ಲ ಯುವನಾಯಕರಿಗೆ ಮಾದರಿಯಾಗಿದ್ದಾರೆ ಎಂದಿದ್ದಾರೆ. ➡ಪುಟ ೪

ವೈದ್ಯರ ಮುಷ್ಕರ ವಾಪಸ್

• ಬೆಂಗಳೂರು: ವಿವಿಧ ಬೇಡಿಕೆಗೆ ಆಗ್ರಹಿಸಿ ಮಾ.11ರಿಂದ ಆರೋಗ್ಯ ಇಲಾಖೆಯ ವೈದ್ಯಾಧಿಕಾರಿಗಳು, ಸಿಬ್ಬಂದಿ ಕರೆ ನೀಡಿದ್ದ ಅನಿರ್ದಿಷ್ಟಾವಧಿ ಮುಷ್ಕರವನ್ನು ವೈದ್ಯಾಧಿಕಾರಿಗಳ ಸಂಘ ಮಂಗಳವಾರ ವಾಪಸ್ ಪಡೆದಿದೆ. ಒಪಿಡಿ ಎಂದಿನಂತೆ ಕಾರ್ಯನಿರ್ವಹಿಸಲಿದೆ. ಸರ್ಕಾರಿ ವೈದ್ಯಾಧಿಕಾರಿಗಳ ಸಂಘದ ಜತೆಗಿನ ಸಂಧಾನ ಸಭೆ ಹಿನ್ನೆಲೆಯಲ್ಲಿ ತಾತ್ಕಾಲಿಕವಾಗಿ ಸಂಘ ಮಂಗಳವಾರ ಮುಷ್ಕರವನ್ನು ಕೈಬಿಟ್ಟಿರುವುದರಿಂದ ಹೊರ ರೋಗಿಗಳ ಚಿಕಿತ್ಸೆ ವಿಭಾಗ ಎಂದಿನಂತೆ ಕಾರ್ಯನಿರ್ವಹಿಸಲಿವೆ. ಸರ್ಕಾರಿ ವೈದ್ಯಾಧಿಕಾರಿಗಳ ಸಂಘ ಇಟ್ಟಿರುವ 14 ಬೇಡಿಕೆಗಳ ಪೈಕಿ 13 ಬೇಡಿಕೆ ಈಡೇರಿಸುವುದಾಗಿ ರಾಜ್ಯ ಸರ್ಕಾರ ಭರವಸೆ ನೀಡಿದೆ. ➡ಪುಟ ೪

ಎಐಗೆ ತುಳು ಪಾಠ

• ಬೆಂಗಳೂರು: ಡಿಜಿಟಲ್ ಯುಗದಲ್ಲಿ ಕೃತಕ ಬುದ್ಧಿಮತ್ತೆ ವೇಗವಾಗಿ ಅಭಿವೃದ್ಧಿಯಾಗುತ್ತಿದ್ದರೂ, ಡೇಟಾ ಕಡಿಮೆ ಇರುವ ಭಾಷೆಗಳು ತಂತ್ರಜ್ಞಾನದಿಂದ ಹಿಂದೆ ಬೀಳುತ್ತಿರುವುದು ದೊಡ್ಡ ಸವಾಲಾಗಿ ಉಳಿದಿದೆ. ಆದರೆ, ಇದನ್ನೇ ಸವಾಲಾಗಿ ತೆಗೆದುಕೊಂಡು ಕರ್ನಾಟಕದ ತುಳು ಭಾಷೆಯಲ್ಲಿ ಎಐ ಸಂಭಾಷಣೆ ನಡೆಸುವಂತೆ ಮಾಡುವ ಹೊಸ ವಿಧಾನವನ್ನು ಸಂಶೋಧಕರು ಅಭಿವೃದ್ಧಿಪಡಿಸಿದ್ದಾರೆ.

ಪುಟ ೦೪

3 ಕೋಟಿ ಮೌಲ್ಯದ ವಜ್ರ, ಚಿನ್ನಾಭರಣ ವಶ

ಪುಟ ೦೪

ಹೆಚ್ಚುವರಿ ಡೀಸೆಲ್‌ಗಾಗಿ ಭಾರತಕ್ಕೆ ಬಾಂಗ್ಲಾ ಮನವಿ

• ಪುಟ ೦೭

ಸ್ವದೇಶಿ ಏರ್ ಡ್ರಾಪಬಲ್ ಕಂಟೇನರ್ ಪರೀಕ್ಷೆ ಯಶ

• ಪುಟ ೦೭

ಸರ್ಕಾರದ ವಿರುದ್ಧ ಪ್ರತಿಪಕ್ಷ ನಾಯಕ ಕಿಡಿ

ಬಜೆಟ್‌ನಲ್ಲಿ ಜನರಿಗೆ ಅನ್ಯಾಯ: ಅಶೋಕ



• ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯನವರು ಮಂಡಿಸಿದ ಬಜೆಟ್ ರಾಜ್ಯದ ಜನರನ್ನು ಸಾಲದ ಸುಳಿಯಲ್ಲಿ ಸಿಲುಕಿಸಿದೆ. ಹಿಂದುಳಿದ ವರ್ಗ, ಪರಿಶಿಷ್ಟ ವರ್ಗ ಹಾಗೂ ಎಲ್ಲ ವರ್ಗದ ಜನರಿಗೆ ಈ ಬಜೆಟ್ ತೀವ್ರ ಅನ್ಯಾಯ ಮಾಡಿದೆ. ವಿತ್ತೀಯ ಕೊರತೆ ಹಾಗೂ ಸಾಲದ ಪ್ರಮಾಣ ಮಿತಿಮೀರಿ ಹೋಗಿದೆ ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ ಆರೋಪಿಸಿದರು. ವಿಧಾನಸಭೆಯಲ್ಲಿ ಬಜೆಟ್ ಮೇಲಿನ ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಹಳೇ ಸಾಲ ತೀರಿಸಲು ಹೊಸ ಸಾಲ ಮಾಡಿದ್ದಾರೆ. ➡ಪುಟ ೪

ಸಾಲದ ಹೊರೆ ಹೆಚ್ಚಳ

ಮೂರು ವರ್ಷದಲ್ಲಿ ಒಟ್ಟು ವಿತ್ತೀಯ ಕೊರತೆ 54,660 ಕೋಟಿ ರೂ. ಆಗಿದೆ. ಈ ಮೂಲಕ ರಾಜ್ಯದ ಆರ್ಥಿಕ ಹೊಣೆ ದಯನೀಯ ಸ್ಥಿತಿಗೆ ಬಂದಿದೆ. ಸಿದ್ದರಾಮಯ್ಯ ಮಾತ್ರ 4,36,803 ಕೋಟಿ ರೂ. ಸಾಲ ಮಾಡಿದ್ದು, ಒಟ್ಟು ಸಾಲದಲ್ಲಿ ಅವರ ಸಾಲದ ಪ್ರಮಾಣ 52.33% ಆಗಿದೆ. ಸಿದ್ದರಾಮಯ್ಯನವರು ಸಾಲದ ರಾಮಯ್ಯ ಆಗಿದ್ದಾರೆ ಎಂದು ಅಶೋಕ ಆರೋಪಿಸಿದರು.

ಲೋಕಸಭೆ ಸ್ಪೀಕರ್ ವಿರುದ್ಧ ಅವಿಶ್ವಾಸ ನಿರ್ಣಯ ಚರ್ಚೆ | ಮಾತಿನ ಚಕಮಕಿ

ಪ್ರತಿಪಕ್ಷದ ವರ್ತನೆ ಬೇಜವಾಬ್ದಾರಿಯುತ: ಶಾ

• ಹೊಸದಿಲ್ಲಿ: ಲೋಕಸಭೆ ಸ್ಪೀಕರ್ ಓಂ ಬಿರ್ಲಾ ವಿರುದ್ಧದ ಅವಿಶ್ವಾಸ ನಿರ್ಣಯದ ಕುರಿತು ಲೋಕಸಭೆಯಲ್ಲಿ ಮಂಗಳವಾರ ಚರ್ಚೆ ಆರಂಭವಾಗುತ್ತಿದ್ದಂತೆ, ಆಡಳಿತ ಮತ್ತು ಪ್ರತಿಪಕ್ಷಗಳ ನಡುವೆ ತೀವ್ರ ವಾಗ್ವಾದ ನಡೆದಿದೆ. ಕಾಂಗ್ರೆಸ್ ಸಂಸದ ಗೌರವ್ ಗೊಗೊಯ್ ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ವಿರುದ್ಧ ಟೀಕೆ ಮಾಡಿದ್ದು, ಮಧ್ಯಪ್ರವೇಶಿಸಿ ಮಾತನಾಡಿದ ಕೇಂದ್ರ ಗೃಹ ಸಚಿವ ಅಮಿತ್ ಶಾ ಪ್ರತಿಪಕ್ಷದ ವರ್ತನೆಯನ್ನು ಬೇಜವಾಬ್ದಾರಿಯುತ ಎಂದು ಆರೋಪಿಸಿದರು.

ಇದಕ್ಕೂ ಮುನ್ನ ಚರ್ಚೆ ವೇಳೆ ಮಾತನಾಡಿದ ಗೊಗೊಯ್, ಭವಿಷ್ಯದಲ್ಲಿ ಸಂಸತ್ತಿನ ದಾಖಲೆಗಳನ್ನು ಪರಿಶೀಲಿಸಿದಾಗ ರಿಜಿಜು ಪ್ರತಿಪಕ್ಷವನ್ನು ಅತಿ ಹೆಚ್ಚು ಬಾರಿ ಅಡ್ಡಿಪಡಿಸಿದ ಸಂಸದೀಯ ವ್ಯವಹಾರಗಳ ಸಚಿವ ಎಂದು ನೆನಪಾಗುವರು ಎಂದು ಹೇಳಿದರು. ಇದಕ್ಕೆ ಪ್ರತಿಕ್ರಿಯಿಸಿದ ರಿಜಿಜು, ಪ್ರತಿಪಕ್ಷ ಸದಸ್ಯರು ಅಸಂಸದೀಯ ಪದಗಳನ್ನು ಬಳಸುತ್ತಿದ್ದಾರೆ ಎಂದು ಆರೋಪಿಸಿ, ತಾವು ಅದಕ್ಕೆ ಉತ್ತರ ನೀಡಬೇಕಾಗುತ್ತದೆ ಎಂದು ಹೇಳಿದರು. ಇದಕ್ಕೆ ತಿರುಗೇಟು ನೀಡಿದ ಗೊಗೊಯ್, ಸಂಸತ್ತಿನ ದಾಖಲೆಗಳೇ ರಿಜಿಜು ಅವರ ಅಡ್ಡಿಪಡಿಸುವ ದಾಖಲೆಯನ್ನು ತೋರಿಸುತ್ತವೆ ಎಂದು ವ್ಯಂಗ್ಯವಾಡಿದರು. ➡ಪುಟ ೪



ಚರ್ಚೆಯಲ್ಲಿ ಯಾರೆಲ್ಲಾ ಭಾಗಿ?

ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ನಿರ್ಣಯದ ಮೇಲಿನ ಚರ್ಚೆಯನ್ನು ಪ್ರಾರಂಭಿಸಲಿದ್ದಾರೆ. ಬಿಜೆಪಿ ಸಂಸದರಾದ ಅನುರಾಗ್ ಠಾಕೂರ್, ನಿಶಿಕಾಂತ್ ದುಬೆ, ರವಿಶಂಕರ್ ಪ್ರಸಾದ್ ಮತ್ತು ಭರ್ತೃಹರಿ ಮಹ್ತಾಬ್ ಈ ವಿಷಯದ ಕುರಿತು ಮಾತನಾಡಲಿದ್ದು, ಲೋಕ ಜನಶಕ್ತಿ ಪಕ್ಷ (ರಾಮ್ ವಿಲಾಸ್) ಚಿರಾಗ್ ಪಾಸ್ವಾನ್ ಕೂಡ ಚರ್ಚೆಯ ಸಂದರ್ಭದಲ್ಲಿ ಸದನವನ್ನು ಉದ್ದೇಶಿಸಿ ಮಾತನಾಡಲಿದ್ದಾರೆ. ಲೋಕಸಭಾ ಸ್ಪೀಕರ್ ಅವರನ್ನು ಪದಚ್ಯುತಗೊಳಿಸುವಂತೆ ಕೋರುವ ನಿರ್ಣಯದ ಪರವಾಗಿ ಕಾಂಗ್ರೆಸ್ ಸಂಸದರಾದ ಗೌರವ್ ಗೊಗೊಯ್, ಮನೀಶ್ ತಿವಾರಿ, ದೀಪೇಂದರ್ ಸಿಂಗ್ ಹೂಡಾ ಮತ್ತು ಜೋತಿಮಣಿ ಅವರು ತಮ್ಮ ವಾದ ಮಂಡಿಸಲಿದ್ದಾರೆ.

ಪಶ್ಚಿಮ ಬಂಗಾಳಕ್ಕೆ ತರಾಟೆ

• ಹೊಸದಿಲ್ಲಿ: ಪಶ್ಚಿಮ ಬಂಗಾಳ ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ (ಎಸ್ಐಆರ್) ಮೇಲುಸ್ತುವಾರಿ ನೋಡಿಕೊಳ್ಳುವ ನ್ಯಾಯಾಂಗ ಅಧಿಕಾರಿಗಳ ನಿಷ್ಠೆಯನ್ನೇ ಪ್ರಶ್ನಿಸುವುದನ್ನು ನಾನು ಸಹಿಸಲಾರೆ ಎಂದು ಭಾರತದ ಮುಖ್ಯ ನ್ಯಾಯಮೂರ್ತಿ(ಸಿಜೆಐ) ಸೂರ್ಯ ಕಾಂತ್ ತರಾಟೆಗೆತ್ತಿಕೊಂಡಿದ್ದಾರೆ.

ಪಶ್ಚಿಮ ಬಂಗಾಳದ ಎಸ್‌ಐಆರ್ ಪರಿಷ್ಕರಣೆಯನ್ನು ಪ್ರಶ್ನಿಸಿ ಸಲ್ಲಿಸಿದ ಅರ್ಜಿಗಳ ವಿಚಾರಣೆ ವೇಳೆ ಸಿಜೆಐ ಸೂರ್ಯ ಕಾಂತ್, ಈ ರೀತಿಯ ಅರ್ಜಿಗಳನ್ನು ಸಲ್ಲಿಸಲು ನಿಮಗೆ ಧೈರ್ಯ ಹೇಗೆ ಬಂತು? ನಿಮ್ಮ ಅರ್ಜಿ ತೀರಾ ಬಾಲಿಷವಾಗಿದೆ. ➡ಪುಟ ೪

» ನ್ಯಾಯಾಂಗ ಅಧಿಕಾರಿಗಳ ನಿಷ್ಠೆ ಪ್ರಶ್ನಿಸುವ ಧೈರ್ಯವೇ?: ಸಿಜೆಐ ಪ್ರಶ್ನೆ

ಷರಿಯತ್ ಕುರಿತ ಅರ್ಜಿ | ಸುಪ್ರೀಂ ಅಭಿಪ್ರಾಯ

ಯುಸಿಸಿ ಸಮಯ ಬಂದಿದೆ

• ಹೊಸದಿಲ್ಲಿ: ದೇಶದಲ್ಲಿ ಏಕರೂಪ ನಾಗರಿಕ ಸಂಹಿತೆ(ಯುಸಿಸಿ) ಅಗತ್ಯವಿರುವ ಸಮಯ ಬಂದಿದೆ ಎಂದು ಸುಪ್ರೀಂ ಕೋರ್ಟ್ ಮಂಗಳವಾರ ಅಭಿಪ್ರಾಯಪಟ್ಟಿದೆ.

1937ರ ಷರಿಯತ್ ಕಾನೂನಿನ ಕೆಲವು ವಿಧಿಗಳು ಮುಸ್ಲಿಂ ಮಹಿಳೆಯರ ವಿರುದ್ಧ ಭೇದಭಾವ ತೋರಿಸುತ್ತಿದ್ದು, ಅವನ್ನು ರದ್ದುಪಡಿಸುವಂತೆ ಸಲ್ಲಿಸಲಾದ ಅರ್ಜಿಯನ್ನು ಬಹಳ ಉತ್ತಮ ಪ್ರಕರಣ ಎಂದು ಹೇಳಿದ ನ್ಯಾಯಾಲಯ, ಈ ವಿಷಯವನ್ನು ಪರಿಶೀಲಿಸುವುದು ಮುಖ್ಯವಾಗಿ ಶಾಸಕಾಂಗದ ಕೆಲಸವಾಗಿರಬಹುದು ಎಂದು ಕೋರ್ಟ್ ಅಭಿಪ್ರಾಯಪಟ್ಟಿತು. ಇದೇ ವೇಳೆ ಯುಸಿಸಿ ಸಮಯ ಬಂದಿದೆ ಎಂದು ಹೇಳಿದೆ.

ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್, ನ್ಯಾಯಮೂರ್ತಿಗಳಾದ ಜೋಯ್ಮಲ್ಯ ಬಾಗ್ಚಿ ಮತ್ತು ಆರ್. ಮಹಾದೇವನ್ ಅವರಿದ್ದ ಪೀಠವು, ಷರಿಯತ್ ಪರಂಪರೆಯ ವಾರಸುದಾರಿಕೆ ನಿಯಮವನ್ನು ಕೋರ್ಟ್ ರದ್ದುಪಡಿಸಿದರೆ, ಕಾನೂನಾತ್ಮಕ ಶೂನ್ಯತೆ ಉಂಟಾಗಬಹುದು ಎಂದು ಹೇಳಿತು. ಏಕೆಂದರೆ ಮುಸ್ಲಿಂ ವಾರಸುದಾರಿಕೆಗೆ ಸಂಬಂಧಿಸಿದ ಪ್ರತ್ಯೇಕ ಕಾನೂನು ಇಲ್ಲ, ಸುಧಾರಣೆಗಳ ಬಗ್ಗೆ ಆತುರದಲ್ಲಿ ನಾವು ಅವರಿಗೆ ಈಗಿರುವ ಹಕ್ಕುಗಳಿಗಿಂತ ಕಡಿಮೆ ಸಿಗುವ ಪರಿಸ್ಥಿತಿ ಉಂಟುಮಾಡಬಹುದು. ➡ಪುಟ ೪

ನ್ಯಾಯಪೀಠ ಹೇಳಿದ್ದೇನು?

» ಷರಿಯತ್ ಕಾಯ್ದೆಯ ವಿಷಯದಲ್ಲಿ ಸುಧಾರಣೆಗಳನ್ನು ಮಾಡುವ ಮುಖ್ಯ ಅಧಿಕಾರ ಶಾಸನಸಭೆಗೆ ಇದೆ

» 1937ರ ಷರಿಯತ್ ಕಾಯ್ದೆ ರದ್ದುಪಡಿಸಿದರೆ ವಾರಸುದಾರಿಕೆಯಲ್ಲಿ ಕಾನೂನಾತ್ಮಕ ಶೂನ್ಯತೆ ಉಂಟಾಗುವ ಸಾಧ್ಯತೆ ಇದೆ

» ದೇಶದಲ್ಲಿ ಏಕರೂಪ ನಾಗರಿಕ ಸಂಹಿತೆ ಜಾರಿಗೆ ತರಬೇಕಾದ ಸಮಯ ಬಂದಿದೆ

» ವಿಷಯ ಸಂಕೀರ್ಣವಾಗಿರುವುದ ರಿಂದ ಹೆಚ್ಚಿನ ಅಧ್ಯಯನ, ಉಲ್ಲೇಖಗಳು, ಪರ್ಯಾಯ ಪರಿಹಾರಗಳು ಅಗತ್ಯ

ವಿಧಾನ ಪರಿಷತ್‌ನ 3 ಸ್ಥಾನಕ್ಕೆ ಹೆಸರು ಘೋಷಿಸಿದ ಬಿಜೆಪಿ

• ಬೆಂಗಳೂರು: ಮುಂದಿನ ನವೆಂಬರ್‌ನಲ್ಲಿ ವಿಧಾನ ಪರಿಷತ್‌ನ ನಾಲ್ಕು ಸ್ಥಾನಗಳಿಗೆ ನಡೆಯಲಿರುವ ಚುನಾವಣೆಗೆ ಬಿಜೆಪಿ ಮೂರು ಸ್ಥಾನಗಳಿಗೆ ತನ್ನ ಅಭ್ಯರ್ಥಿಗಳನ್ನು ಅಂತಿಮಗೊಳಿಸಿದೆ.

ಈಶಾನ್ಯ ಶಿಕ್ಷಕರ ಕ್ಷೇತ್ರದಿಂದ ಶಶಿಲ್ ಜಿ. ನಮೋಶಿ, ಪಶ್ಚಿಮ ಪದವೀಧರರ ಕ್ಷೇತ್ರದಿಂದ ಎಸ್.ವಿ.ಸಂಕನೂರು ಹಾಗೂ ಆಗ್ನೇಯ ಪದವೀಧರರ ಕ್ಷೇತ್ರದಿಂದ ಕೆ.ಎಂ.ಸುರೇಶ್ ಹೆಸರು ಅಂತಿಮಗೊಳಿಸಿ ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅರುಣ್ ಸಿಂಗ್ ಮಂಗಳವಾರ ಪ್ರಕಟಿಸಿದ್ದಾರೆ.

ಹಾಲಿ ಕಾಂಗ್ರೆಸ್ ಪಕ್ಷದ ಪುಟ್ಟಣ್ಣ ಇರುವ ಬೆಂಗಳೂರು ಶಿಕ್ಷಕರ ಕ್ಷೇತ್ರಕ್ಕೆ ಬಿಜೆಪಿ ತನ್ನ ಅಭ್ಯರ್ಥಿಯನ್ನು ಘೋಷಿಸಿಲ್ಲ, ಆಗ್ನೇಯ ಪದವೀಧರರ ಕ್ಷೇತ್ರವನ್ನು ಹಾಲಿ ಬಿಜೆಪಿ ಸದಸ್ಯ ಚಿದಾನಂದ ಎಂ.ಗೌಡ ಪ್ರತಿನಿಧಿಸುತ್ತಿದ್ದಾರೆ. ಅಲ್ಲಿ ದಾವಣಗೆರೆಯ ಕೆ.ಎಂ.ಸುರೇಶ್ ಅವರಿಗೆ ಬಿಜೆಪಿ ಅವಕಾಶ ಮಾಡಿಕೊಟ್ಟಿದೆ.

ಬೆಳ್ಳಿ ಬಂಗಾರ (ಬೆಂಗಳೂರು) ಬೆಳ್ಳಿ: 2,90,000(2,85,000) ಅಪರಂಜಿ ಚಿನ್ನ: 1,62,380(1,64,510) ಆಭರಣ ಚಿನ್ನ: 1,50,800(1,48,800) ಚಿನ್ನ 10 ಗ್ರಾಂ.ಗೆ, ಬೆಳ್ಳಿ 1 ಕೆ.ಜಿ.ಗೆ, ರೂ.ಗಳಲ್ಲಿ (ಆವರಣದಲ್ಲಿ ಹಿಂದಿನ ದಿನದ ದರ)
ಷೇರು ಸೂಚ್ಯಂಕ ಬಿಎಸ್‌ಇ 78,205(1,122↓) ಎನ್‌ಎಸ್‌ಇ 24,280(108↓) $1 = ₹91.96

ಕಿರುಸುದ್ದಿ

ಶ್ರೀ ಏಕನಾಥೇಶ್ವರಿ ಜಾತ್ರೆ ಪೂರ್ವಭಾವಿ ಸಭೆ ಇಂದು

• **ಚಿತ್ರದುರ್ಗ:** ಕೋಟೆನಾಡು ಜನರ ಆರಾಧ್ಯ ದೇವತೆ ಏಕನಾಥೇಶ್ವರಿ ಅಮ್ಮನವರ ಜಾತ್ರಾ ಮಹೋತ್ಸವದ ಪೂರ್ವಭಾವಿ ಸಭೆಯನ್ನು ಫಿಲ್ಟರ್ ಹೌಸ್ ಸಮೀಪದ ಏಕನಾಥೇಶ್ವರಿ ಪಾದಗುಡಿಯಲ್ಲಿ ಮಾ.11 ರ ಬೆಳಗ್ಗೆ 11 ಗಂಟೆಗೆ ತಹಸೀಲ್ದಾರ್ ಗೋವಿಂದರಾಜು ಅಧ್ಯಕ್ಷತೆಯಲ್ಲಿ ಕರೆಯಲಾಗಿದೆ. ಕಂದಾಯ ನಿರೀಕ್ಷಕರು, ಗ್ರಾಮಲೆಕ್ಕಾಧಿಕಾರಿಗಳು, ದೇವಸ್ಥಾನ ಸಮಿತಿಯವರು, ಭಕ್ತರು ಉಪಸ್ಥಿತರಲಿದ್ದು, ಹಾಲಿ ಮಾಜಿ ಜನಪ್ರತಿನಿಧಿಗಳು, ವಿವಿಧ ಸಂಘಟನೆಗಳ ಪದಾಧಿಕಾರಿಗಳು, ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಸಲಹೆ ಸೂಚನೆ ನೀಡುವಂತೆ ಪ್ರಕಟಣೆ ತಿಳಿಸಿದೆ.



ದ್ವಿತೀಯ ಪಿಯುಸಿ ಅರ್ಥಶಾಸ್ತ್ರ ಪರೀಕ್ಷೆ : 6364 ವಿದ್ಯಾರ್ಥಿಗಳು ಹಾಜರು

• **ಚಿತ್ರದುರ್ಗ:** ಜಿಲ್ಲೆಯಲ್ಲಿ ಮಂಗಳವಾರ ನಡೆದ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯ ಅರ್ಥಶಾಸ್ತ್ರ ವಿಷಯಕ್ಕೆ 6364 ವಿದ್ಯಾರ್ಥಿಗಳು ಹಾಜರಾಗಿದ್ದಾರೆ. 26 ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆ ಸುಗಮವಾಗಿ ನಡೆದಿದೆ. ಅರ್ಥಶಾಸ್ತ್ರ ವಿಷಯಕ್ಕೆ 6660 ವಿದ್ಯಾರ್ಥಿಗಳು ನೋಂದಣಿಯಾಗಿದ್ದು, ಈ ಪೈಕಿ 6364 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು, 296 ವಿದ್ಯಾರ್ಥಿಗಳು ಗೈರಾಗಿದ್ದಾರೆ. ಜಿಲ್ಲೆಯಲ್ಲಿ ಯಾವುದೇ ಡಿಬಾರ್ ಪ್ರಕರಣ ಇರುವುದಿಲ್ಲ ಎಂದು ಶಾಲಾ ಶಿಕ್ಷಣ ಇಲಾಖೆ (ಪದವಿಪೂರ್ವ) ಉಪನಿರ್ದೇಶಕ ಕೆ.ತಿಮ್ಮಯ್ಯ ತಿಳಿಸಿದ್ದಾರೆ.

ನಾಳೆ ಪೂರ್ವಭಾವಿ ಸಭೆ

• **ಚಿತ್ರದುರ್ಗ:** ವಿವಿಧ ಮಹನೀಯರ ಜಯಂತಿಗಳ ಆಚರಣೆ ಕುರಿತು ಅಗತ್ಯ ಸಿದ್ದತೆಗಳನ್ನು ಕೈಗೊಳ್ಳುವ ಸಂಬಂಧ ಇದೇ ಮಾರ್ಚ್ 12ರಂದು ಚಿತ್ರದುರ್ಗ ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಪೂರ್ವಭಾವಿ ಸಭೆ ಹಮ್ಮಿಕೊಳ್ಳಲಾಗಿದೆ. ಮಾರ್ಚ್ 23 ರಂದು ಆದ್ಯ ವಚನಕಾರ ಶ್ರೀ ದೇವರ ದಾಸಿಮಯ್ಯ ಜಯಂತಿ ಆಚರಣೆ ಕುರಿತು ಬೆಳಿಗ್ಗೆ 11 ಗಂಟೆಗೆ, ಮಾರ್ಚ್ 28 ರಂದು ಶ್ರೀ ಅಗ್ನಿಬನ್ನಿರಾಯ ಜಯಂತಿ ಆಚರಣೆ ಕುರಿತು ಬೆಳಿಗ್ಗೆ 11.30ಕ್ಕೆ ಹಾಗೂ ಮಾರ್ಚ್ 31 ರಂದು ಭಗವಾನ್ ಮಹಾವೀರ ಜಯಂತಿ ಆಚರಣೆ ಕುರಿತು ಮಧ್ಯಾಹ್ನ 12 ಗಂಟೆಗೆ ಪೂರ್ವಭಾವಿ ಸಭೆಗಳು ಜರುಗಲಿವೆ. ಜಿಲ್ಲಾಧಿಕಾರಿ ಟಿ.ವೆಂಕಟೇಶ್ ಸಭೆಯ ಅಧ್ಯಕ್ಷತೆ ವಹಿಸುವರು. ಜಿಲ್ಲಾ ಮಟ್ಟದ ಅಧಿಕಾರಿಗಳು, ಸಮಾಜದ ಮುಖಂಡರು, ಸಾರ್ವಜನಿಕರು ಸಭೆಗೆ ಹಾಜರಾಗಿ ಸೂಕ್ತ ಸಲಹೆ ಸೂಚನೆಗಳನ್ನು ನೀಡುವಂತೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಬಿ.ಎಂ.ಗುರುನಾಥ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅರ್ಜಿ ಸಲ್ಲಿಕೆ ಅವಧಿ ವಿಸ್ತರಣೆ

• **ಚಿತ್ರದುರ್ಗ:** ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ 2026-27ನೇ ಸಾಲಿನ ಡಾ. ಬಿ.ಆರ್. ಅಂಬೇಡ್ಕರ್ ಹಾಗೂ ಡಾ. ಬಾಬು ಜಗಜೀವನ್ ರಾಂ ರಾಜ್ಯ ಮಟ್ಟದ ಪ್ರಶಸ್ತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದ್ದು, ಅರ್ಜಿ ಸಲ್ಲಿಕೆ ಅವಧಿಯನ್ನು ಮಾರ್ಚ್ 15 ರವರೆಗೆ ವಿಸ್ತರಿಸಲಾಗಿದೆ. ಏಪ್ರಿಲ್ 05ರಂದು ಡಾ.ಬಾಬು ಜಗಜೀವನ್ ರಾಂ ಅವರ 119ನೇ ಜನ್ಮ ದಿನಾಚರಣೆ ಮತ್ತು ಏಪ್ರಿಲ್ 14ರಂದು ಡಾ.ಬಿ.ಆರ್.ಅಂಬೇಡ್ಕರ್ ಅವರ 135ನೇ ಜನ್ಮ ದಿನಾಚರಣೆಯನ್ನು ರಾಜ್ಯಮಟ್ಟದಲ್ಲಿ ಸರ್ಕಾರದ ವತಿಯಿಂದ ಆಚರಿಸಲಾಗುತ್ತಿದ್ದು, ಈ ಸಂದರ್ಭದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನಾಂಗದವರ ಶ್ರೇಯಸ್ಸಿಗಾಗಿ ಪ್ರೋತ್ಸಾಹಿಸಿ, ಶ್ರಮಿಸಿ, ಗಣನೀಯ ಸೇವೆ ಸಲ್ಲಿಸಿದ ಅರ್ಹ ವ್ಯಕ್ತಿಗಳನ್ನು ಗುರುತಿಸಿ ಪ್ರಶಸ್ತಿ ನೀಡಿ ಗೌರವಿಸಲಾಗುವುದು. ಪ್ರಶಸ್ತಿಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳಿಗೆ ಕನಿಷ್ಠ 35 ವರ್ಷ ವಯಸ್ಸಾಗಿರಬೇಕು. ಒಬ್ಬ ವ್ಯಕ್ತಿಯು ಕೇವಲ ಒಂದು ಪ್ರಶಸ್ತಿಗೆ ಮಾತ್ರ ಅರ್ಜಿ ಸಲ್ಲಿಸಲು ಅವಕಾಶವಿರುತ್ತದೆ. ಅರ್ಜಿಗಳನ್ನು 2026ರ ಮಾರ್ಚ್ 15 ರೊಳಗೆ ಉಪ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಚಿತ್ರದುರ್ಗ ಇವರ ಕಚೇರಿಗೆ ಸಲ್ಲಿಸಬೇಕು.

ಎ.ಹನುಮಂತಪ್ಪ ನಿಧನ

• **ಹಿರಿಯೂರು:** ತಾಲೂಕಿನ ಮರಡಿಹಳ್ಳಿ ಗ್ರಾಮದ ಸ್ವಾತಂತ್ರ್ಯ ಹೋರಾಟಗಾರ ಎ.ಹನುಮಂತಪ್ಪ (101) ಇವರು ವಯೋ ಸಹಜ ನಿಧನರಾಗಿದ್ದಾರೆ. ಮೃತರ ಪತ್ನಿ ಈ ಹಿಂದೆಯೇ ಮೃತಪಟ್ಟಿದ್ದು ಮೂವರು ಗಂಡು ಮಕ್ಕಳು ಇಬ್ಬರು ಹೆಣ್ಣು ಮಕ್ಕಳು ಹಾಗೂ ಮೊಮ್ಮಕ್ಕಳು ಮತ್ತು ಅಪಾರ ಬಂಧು ವರ್ಗವನ್ನು ಆಗಲಿರುತ್ತಾರೆ. ಅಂತ್ಯಕ್ರಿಯೆ ಬುಧವಾರ ಮರಡಿಹಳ್ಳಿಗ್ರಾಮದಲ್ಲಿ ನಡೆಸಲಾಗುವುದು ಎಂದು ಕುಟುಂಬದವರು ತಿಳಿಸಿದ್ದಾರೆ.





ಹಿರಿಯೂರಿನ ವಾಣಿವಿಲಾಸ ವಿದ್ಯಾಸಂಸ್ಥೆಯಲ್ಲಿ 10ನೇ ತರಗತಿ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ ಸಮಾರಂಭ ಹಾಗೂ ಶಾರದಾ ಪೂಜೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಆಲೂರು ಹನುಮಂತರಾಯಪ್ಪ, ಸೌಮ್ಯ, ವಸಂತಾ, ಹೇಮಲತಾ, ರಚನಾ, ರಜಿಯಾಬೇಗಂ, ರಂಜಿತಾ, ಸಬೀಹಾ, ಮುಬೀನಾ, ಸಾಧಿಕಾ, ಮಮತಾ, ಅಕ್ಷಿತಾ, ನಂದಿನಿ, ಭಾಗ್ಯ, ಜೈಸುಧಾ, ಸುಲೋಚನಾ, ಪೂಜಾ, ಕಾವ್ಯ, ಉಮೇಶ್‌ಯಾದವ್, ಶಿವರಾಜ್, ಶಾಲಾ ಸಿಬ್ಬಂದಿಗಳು ಉಪಸ್ಥಿತರಿದ್ದರು.

ಕಡೂರು ಬೆಟ್ಟದ ಶ್ರೀ ವೀರಭದ್ರೇಶ್ವರಸ್ವಾಮಿ ರಥೋತ್ಸವ

• **ಚಿಕ್ಕಜಾಜೂರು:** ಸಮೀಪದ ಕಡೂರು ಬೆಟ್ಟದ ರಥೋತ್ಸವ ಮಂಗಳವಾರ ನೆರವೇರಿತು. ಬೆಳಿಗ್ಗೆಯಿಂದ ಪೂಜಾ ಕಾರ್ಯಗಳು ಆರಂಭವಾಯಿತು. ನಂತರ ಸ್ವಾಮಿಯ ಮೂರ್ತಿಯನ್ನು ಅಲಂಕರಿಸಿ ರಥದಲ್ಲಿ ಪ್ರತಿಷ್ಠಾಪಿಸಲಾಯಿತು. ರಥಕ್ಕೆ ದೊಡ್ಡೆಡೆ ಸೇವೆ ನಡೆಸಲಾಯಿತು. ಬೆಟ್ಟದಲ್ಲಿ ಗಂಗಾ ಪೂಜೆ, ದುಗುಳಿ ಪೂಜೆ ಬಳಿಕ ಸ್ವಾಮಿಯ ಉತ್ಸವ ಮೂರ್ತಿಯನ್ನು ಪಲ್ಲಕ್ಕಿಯಲ್ಲಿ ಕೂರಿಸಿ ವೀರಗಾಸೆ ಡೊಳ್ಳು ಕುಣಿತ ನೃತ್ಯ ವಾದ್ಯ ದೊಂದಿಗೆ ದೇವಸ್ಥಾನದ ಮುಂಭಾಗ ನಿರ್ಮಿಸಿರುವ ಅಗ್ನಿಕೊಂಡ ಬಳಿಗೆ ತರಲಾಯಿತು. ಅರ್ಚಕರು ವಿವಿಧ ಪೂಜೆಯನ್ನು ಸಲ್ಲಿಸಿದರು. ನಂತರ ಭಕ್ತರು ಪಲ್ಲಕ್ಕಿಯನ್ನು ಅಗ್ನಿಕೊಂಡ ಪ್ರವೇಶಿಸಿದರು. ಭಕ್ತರ ಸರತಿ ಸಾಲಿನಲ್ಲಿ ನಿಂತು ಕೆಂಡಾರ್ಚನೆ ದುಗುಳ ಸೇವೆಯನ್ನು ಸಲ್ಲಿಸಿದರು. ಮಹಿಳೆಯರು ಬಾಯಿಗೆ ಬೀಗದ ಹರಕೆ ಸಲ್ಲಿಸಿದರು. ದವಸ ಧಾನ್ಯ ಹಣ ಮುಂತಾದ ಸೇವೆ ಸಲ್ಲಿಸಿದರು. ಸಂಜೆ 5 ಗಂಟೆಗೆ ಸಾವಿರಾರು ಭಕ್ತರು ಆಗಮಿಸಿ ರಥ ಎಳೆದರು ಚನ್ನಗಿರಿ ಭಕ್ತರಿಂದ ಪ್ರಸಾದ ವ್ಯವಸ್ಥೆ ಮಾಡಲಾಗಿತು. ರಾತ್ರಿ 9ಕ್ಕೆ ರಸಮಂಜರಿ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ಚಿತ್ರದುರ್ಗ ಬೃಹನ್ ಮಠದ ಶ್ರೀ ಬಸವ ಸ್ವಾಮಿಗಳು ಭಾಗವಹಿಸಿದ್ದರು. ತೇರಿನ ಮುಕ್ತಿ ಬಾವುಟವನ್ನು ಕೊಡಗವಳ್ಳಿ ಹಟ್ಟಿ ತಿಪ್ಪೇಸ್ವಾಮಿ ಅವರು 2. 50 ಲಕ್ಷ ರೂ.ಗೆ ತಮ್ಮದಾಗಿಸಿಕೊಂಡರು.



ಅಡುಗೆ ಅನಿಲ ಕೊರತೆಯಿಂದಾಗಿ ಪಿಜಿಗಳಲ್ಲಿ ಊಟದ ಮೆನು ಬದಲಾವಣೆ

ದುರ್ಗಕ್ಕೂ ಗ್ಯಾಸ್ ಟ್ರಬಲ್

• **ಚಿತ್ರದುರ್ಗ:** ಇರಾನ್ ಹಾಗೂ ಇಸ್ರೇಲ್ ನಡುವೆ ನಡೆಯುತ್ತಿರುವ ಯುದ್ದದಿಂದಾಗಿ ಅಡುಗೆ ಅನಿಲ ಹಾಗೂ ಅಡುಗೆ ಎಣ್ಣೆಯ ಬೆಲೆ ಏರಿಕೆಯಾಗಿದೆ. ದೇಶಾದ್ಯಂತ ಗ್ಯಾಸ್ ಸಮಸ್ಯೆ ಉಂಟಾಗಿದ್ದು, ಅದರಲ್ಲೂ ಹೋಟೆಲ್ ಉದ್ಯಮಕ್ಕೆ ದೊಡ್ಡ ಹೊಡೆತ ಬಿದ್ದಂತಾಗಿದೆ. ಇದರಿಂದಾಗಿ ಪಿಜಿ ಮಾಲೀಕರಿಗೂ ಆತಂಕ ಶುರುವಾಗಿದೆ. ಹೀಗಾಗಿ ಪಿಜಿಗಳಲ್ಲಿ ಊಟದ ಮೆನು ಚೇಂಜ್ ಮಾಡಲಾಗಿದೆ.

ಯುದ್ಧ ನಿಲ್ಲುವ ಯಾವ ಮುನ್ಸೂಚನೆಯೂ ಕಾಣುತ್ತಿಲ್ಲ, ಮಧ್ಯಪ್ರಾಚ್ಯದ ಯುದ್ಧದ ಎಫೆಕ್ಟ್ ನಿಂದ ಇಲ್ಲಿನ ಗ್ರಾಹಕರು ಕೂಡ ನಡುಗುವಂತೆ ಆಗಿದೆ. ಹಾಗಾಗಿ ಪೆಟ್ರೋಲ್, ಡಿಸೇಲ್ ದರವೂ ಏರಿಕೆಯಾಗುವ ಎಲ್ಲಾ ಸೂಚನೆಗಳು ಕಾಣಿಸುತ್ತಿವೆ.

ಪೆಟ್ರೋಲ್ ಪ್ರತಿ ಲೀಟರ್‌ಗೆ 22 ರೂಪಾಯಿ, ಡಿಸೇಲ್ 24 ರೂಪಾಯಿವರೆಗೂ ಏರಿಕೆಯಾಗುವ ಸಾಧ್ಯತೆ ಇದೆ ಎನ್ನಲಾಗುತ್ತಿದೆ, ಈ ಮೂಲಕ ಪೆಟ್ರೋಲ್ ದರ 125 ರೂಪಾಯಿ, ಡಿಸೇಲ್ ದರ 115 ರೂಪಾಯಿಗಳಿಗೆ ಹೆಚ್ಚಳವಾಗುವ ಸಾಧ್ಯತೆ ಇದೆ.

ಎಲ್ಲಾ ಡಿಸ್ಟ್ರಿಬ್ಯೂಟರ್ಸ್‌ಗಳಿಗೂ ಈಗಾಗಲೇ ಇಂಡಿಯನ್ ಆಯಿಲ್ ಕಾರ್ಪೋರೇಷನ್ ಲಿಮಿಟೆಡ್ ಪತ್ರ ಬರೆದಿದೆ. ಆ ಪತ್ರದಲ್ಲಿ ದರ ಏರಿಕೆಯ ಬಗ್ಗೆಯೂ ಮಾಹಿತಿ ನೀಡಲಾಗಿದೆ. ಹಾಗಾಗಿ ಯಾವುದೇ ಕ್ಷಣದಲ್ಲಾದರೂ ಇಂಧನ ದರ ಏರಿಕೆಯಾಗಬಹುದು ಎಂಬ ಮಾಹಿತಿಯನ್ನು ಆ ಪತ್ರದ ಮೂಲಕ ನೀಡಲಾಗಿದೆ.

ಮಧ್ಯ ಪ್ರಾಚ್ಯದಲ್ಲಿನ ಯುದ್ಧದ ಎಫೆಕ್ಟ್‌ನಿಮದಾಗಿ ದೇಶಾದ್ಯಂತ ಗ್ಯಾಸ್ ಸಿಲಿಂಡರ್‌ಗೆ ಆಹಾಕಾರ ಉಂಟಾಗಿದೆ. ಕಮರ್ಷಿಯಲ್ ಸಿಲಿಂಡರ್‌ಗೆ 115 ರೂ. ಏರಿಕೆ ಆಗಿದ್ದು, ಹೋಟೆಲ್ ಉದ್ಯಮಕ್ಕೆ ಭಾರೀ ಹೊಡೆತ ಬಿದ್ದಿದೆ. ಇತ್ತ ಜನಜೀವನದ ಮೇಲೂ ಯುದ್ಧದ ಪರಿಣಾಮ ಬೀರುತ್ತಿದೆ.



ಈಗಾಗಲೇ ಎಲ್‌ಪಿಜಿ ಸಿಲಿಂಡರ್ ದರ 60 ರೂಪಾಯಿ, ಹಾಗೆ ವಾಣಿಜ್ಯ ಸಿಲಿಂಡರ್ ದರ 115 ರೂಪಾಯಿ ಏರಿಕೆಯಾಗಿತ್ತು. ಪ್ರಸ್ತುತ ಸಿಲಿಂಡರ್‌ಗಳ ಕೊರತೆಯೂ ಕಾಡುತ್ತಿದೆ.

ಇರಾನ್ ಹಾಗೂ ಇಸ್ರೇಲ್ ಯುದ್ಧದ ಪರಿಣಾಮ ದೇಶದ ವಿವಿಧ ಕ್ಷೇತ್ರಗಳ ಮೇಲೆ ಉಂಟಾಗಿದೆ. ಇದರಿಂದಾಗಿ ನಿರುದ್ಯೋಗಿಗಳು, ಬಡವರು, ಮಧ್ಯಮ ವರ್ಗದವರು ಬೆಲೆ ಏರಿಕೆ ಬಿಸಿಯಿಂದ ಕಂಗಾಲಾಗುವಂತೆ ಮಾಡಿದೆ.

ಇನ್ನು ಸಾಮಾನ್ಯವಾಗಿ ಪಿಜಿಗಳಲ್ಲಿ ದಿನಕ್ಕೆ ಮೂರು ಬಾರಿ ಊಟದ ವ್ಯವಸ್ಥೆ ಮಾಡಲಾಗುತ್ತದೆ. ಆದರೆ ಇದೀಗ ಉಂಟಾಗಿರುವ ಗ್ಯಾಸ್ ಕೊರತೆಯಿಂದಾಗಿ ಪಿಜಿ ಮಾಲೀಕರು ಅಡುಗೆ ಮಾಡುವುದಕ್ಕೂ ಚಿಂತಿಸುವಂತಾಗಿದೆ. ಇದರಿಂದ ಊಟದ ಮೆನುವಿನಲ್ಲಿ ಬದಲಾವಣೆ ಮಾಡಲು ನಿರ್ಧಾರ ಮಾಡಿದ್ದೇವೆ. ಪಿಜಿಗಳಲ್ಲಿ ಚಪಾತಿ, ರೊಟ್ಟಿ ಮಾಡದಂತೆ ನಿರ್ಧರಿಸಲಾಗಿದೆ. ಅನ್ನ, ಸಾಂಬಾರ್, ಪಲಾವ್ ಹೀಗೆ ಗ್ಯಾಸ್ ಕಡಿಮೆ ಬಳಕೆ ಆಗುವ ಪದಾರ್ಥಗಳನ್ನು ಮಾಡಲು ನಿರ್ಧರಿಸಲಾಗಿದೆ.

ಇದರಿಂದಾಗಿ ಇಂದಿನಿಂದಲೇ ಹೊಸ ಮೆನು ಜಾರಿ ಆಗುತ್ತೆ. ಕಮರ್ಷಿಯಲ್ ಗ್ಯಾಸ್ ದರ ಹೆಚ್ಚಾದರೂ ಹೆಚ್ಚಳ ಮಾಡಲ್ಲ, ಸದ್ಯ ನಾವೇ ಭರಿಸುತ್ತೇವೆ. ಇದೇ ದರ ಮುಂದುವರೆದರೆ ಏನು ಮಾಡಬೇಕೆಂಬುದನ್ನು ಯೋಚನೆ ಮಾಡಲಾಗುವುದು. ಈ ಕುರಿತು ಕೇಂದ್ರ ಮತ್ತು ರಾಜ್ಯ ಸರ್ಕಾರ ನೆರವಿಗೆ ಮುಂದಾಗಬೇಕು ಎಂದು ಪಿಜಿ ಮಾಲೀಕರು ಒತ್ತಾಯಿಸಿದ್ದಾರೆ.

- ಇನ್ನು ಸಾಮಾನ್ಯವಾಗಿ ಪಿಜಿಗಳಲ್ಲಿ ದಿನಕ್ಕೆ ಮೂರು ಬಾರಿ ಊಟದ ವ್ಯವಸ್ಥೆ ಮಾಡಲಾಗುತ್ತದೆ.
- ಗ್ಯಾಸ್ ಕೊರತೆಯಿಂದಾಗಿ ಪಿಜಿ ಮಾಲೀಕರು ಊಟದ ಮೆನುವಿನಲ್ಲಿ ಬದಲಾವಣೆ ಮಾಡಲು ನಿರ್ಧಾರ ಮಾಡಿದ್ದಾರೆ
- ಪಿಜಿಗಳಲ್ಲಿ ಚಪಾತಿ, ರೊಟ್ಟಿ ಮಾಡದಂತೆ ನಿರ್ಧಾರ, ಅನ್ನ, ಸಾಂಬಾರ್, ಪಲಾವ್ ಹೀಗೆ ಗ್ಯಾಸ್ ಕಡಿಮೆ ಬಳಕೆ ಆಗುವ ಪದಾರ್ಥಗಳನ್ನು ಮಾಡಲು ನಿರ್ಧಾರ

ಕಾಲೇಜಿನಲ್ಲಿ ವಿಶೇಷ ಉಪನ್ಯಾಸ ಕಾರ್ಯಕ್ರಮ

ವಾಸ್ತುಶಿಲ್ಪ ಜ್ಞಾನ ಅಗತ್ಯ



• **ಚಿತ್ರದುರ್ಗ:** ಭಾರತೀಯ ದೇವಾಲಯಗಳ ಪರಂಪರೆಗೆ ಸುದೀರ್ಘ ಹಾಗೂ ಪ್ರಾಚೀನ ಇತಿಹಾಸವಿದೆ. ಮುಂದಿನ ದಿನಗಳಲ್ಲಿ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸಲು ವಿದ್ಯಾರ್ಥಿಗಳು ಭಾರತೀಯ ಕಲೆ ಮತ್ತು ವಾಸ್ತುಶಿಲ್ಪದ ಜ್ಞಾನ ಅಳವಡಿಸಿಕೊಳ್ಳುವುದು ಅತ್ಯಗತ್ಯ ಎಂದು ದಾವಣಗೆರೆ ವಿಶ್ವವಿದ್ಯಾಲಯದ ಸ್ನಾತಕೋತ್ತರ ಇತಿಹಾಸ ಮತ್ತು ಪುರಾತತ್ವ ವಿಭಾಗದ ಮುಖ್ಯಸ್ಥ ಡಾ.ಹೊನ್ನೂರು ಸ್ವಾಮಿ ಅಭಿಪ್ರಾಯಪಟ್ಟರು.

ನಗರದ ಸರ್ಕಾರಿ ಕಲಾ ಕಾಲೇಜು (ಸ್ವಾಯತ್ತ) ಸ್ನಾತಕೋತ್ತರ ಸಭಾಂಗಣದಲ್ಲಿ ಮಂಗಳವಾರ ಸರ್ಕಾರಿ ಕಲಾ ಕಾಲೇಜು ಇತಿಹಾಸ ವಿಭಾಗ ಹಾಗೂ ಐಕ್ಯೂಎಸಿ ಸಹಯೋಗದಲ್ಲಿ ಹಮ್ಮಿಕೊಂಡಿದ್ದ 'ಭಾರತೀಯ ಕಲೆ ಮತ್ತು ವಾಸ್ತುಶಿಲ್ಪ' ಕುರಿತ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಬೌದ್ಧ ಸ್ತೂಪಗಳು, ವಿಹಾರಗಳು ಹಾಗೂ ಚೈತ್ಯಾಲಯಗಳ ಅಧ್ಯಯನದಿಂದ ವಿವಿಧ ಧರ್ಮಗಳ ಮೂಲ ಆಶಯಗಳನ್ನು ಅರ್ಥಮಾಡಿಕೊಳ್ಳಲು ಸಾಧ್ಯವಿದೆ ಎಂದು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಸರ್ಕಾರಿ ಕಲಾ ಕಾಲೇಜಿನ ಪ್ರಾಂಶುಪಾಲ ಪ್ರೊ.ಜೆ. ಕರಿಯಪ್ಪ ಮಾಳಿಗೆ ಮಾತನಾಡಿ, ದೇವಾಲಯ ಮತ್ತು ವಾಸ್ತುಶಿಲ್ಪಗಳು ಜಾತ್ಯತೀತ ಮೌಲ್ಯಗಳನ್ನು ಒಳಗೊಂಡಿದ್ದು, ಸಮಾಜದಲ್ಲಿ ಸಾಮರಸ್ಯ ಮೂಡಿಸುವ ಕೆಲಸ ಮಾಡುತ್ತಿವೆ. ಹಾಗಾಗಿ, ಪ್ರಾಚೀನ ಪರಂಪರೆಯ ಬಗ್ಗೆ ವಿದ್ಯಾರ್ಥಿಗಳು ತೀವ್ರ ಕಳಕಳಿ ಹೊಂದಬೇಕು ಎಂದರು.

ಇತಿಹಾಸ ವಿಭಾಗದ ಮುಖ್ಯಸ್ಥ ಡಾ. ಬಿ. ಸುರೇಶ್ ಅವರು ಗಾಂಧಾರ ಮತ್ತು ಮಥುರಾ ಕಲೆಗಳ ವಿಶೇಷತೆ ಪರಿಚಯಿಸಿದರು. ಐಕ್ಯೂಎಸಿ ಸಂಚಾಲಕಿ ಪ್ರೊ. ತಾರಿಣಿ ಶುಭದಾಯಿನಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ಅಧ್ಯಾಪಕರ ಸಂಘದ ಕಾರ್ಯದರ್ಶಿ ಪ್ರೊ. ಹನುಮಂತಪ್ಪ, ಡಾ. ರೇವಣಸಿದ್ದಪ್ಪ ಹಾಗೂ ಸ್ನಾತಕ ಪದವಿ ಮುಖ್ಯಸ್ಥ ಪ್ರೊ. ಮಷ್ಹದ್ ಬಾಷ, ಪ್ರೊ. ಬಿ. ಜಗನ್ನಾಥ ಎಸ್.ಬಿ.ಶಿವಪ್ರಸಾದ್ ಇದ್ದರು.

ಮ್ಯಾಪಿಂಗ್ ಕಾರ್ಯ ಮುಗಿಸಲು ಗಡುವು

• **ಚಿತ್ರದುರ್ಗ:** ಮತದಾರರ ಪಟ್ಟಿಗಳ ಸಮಗ್ರ ಪರಿಷ್ಕರಣೆ (ಎಸ್‌ಐಆರ್)-2026ರ ಸಂಬಂಧ ಬಾಕಿ ಇರುವ ಮತದಾರರ ಪಟ್ಟಿಗಳ ಮ್ಯಾಪಿಂಗ್ ಕಾರ್ಯವನ್ನು ಇದೇ ಮಾರ್ಚ್ 20ರೊಳಗಾಗಿ ಶೇ.100ರಷ್ಟು ಪೂರ್ಣಗೊಳಿಸಬೇಕು ಎಂದು ಜಿಲ್ಲಾ ಚುನಾವಣಾಧಿಕಾರಿಗಳು ಹಾಗೂ ಜಿಲ್ಲಾಧಿಕಾರಿ ಟಿ.ವೆಂಕಟೇಶ್ ಸೂಚನೆ ನೀಡಿದ್ದಾರೆ.

2002ರ ಮತದಾರರ ಪಟ್ಟಿಗೆ 2025ರ ಮತದಾರರ ಪಟ್ಟಿಯನ್ನು ಮ್ಯಾಪಿಂಗ್ ಮಾಡುವ ಪ್ರಕ್ರಿಯೆಯು ಜಿಲ್ಲೆಯ ಆರು ವಿಧಾನಸಭಾ ಕ್ಷೇತ್ರಗಳಲ್ಲಿ ಈಗಾಗಲೇ ಪ್ರಗತಿಯಲ್ಲಿದೆ. 2025ರ ಸೆಪ್ಟೆಂಬರ್ ಮಾಹೆಯಿಂದ ಮತಗಟ್ಟೆ ಮಟ್ಟದ ಅಧಿಕಾರಿಗಳು (ಬಿಎಲ್‌ಒ) ಈ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದಾರೆ. ಕೆಲವು ಮತಗಟ್ಟೆ ಮಟ್ಟದ ಅಧಿಕಾರಿಗಳು ಶೇ.50 ರಿಂದ80ರಷ್ಟು ಪೂರ್ಣಗೊಳಿಸಿದ್ದು, ಇನ್ನೂ ಬಾಕಿ ಇರುವ ಮತದಾರರ ಮ್ಯಾಪಿಂಗ್ ಕಾರ್ಯವನ್ನು ಇದೇ ಮಾರ್ಚ್ 20 ರೊಳಗಾಗಿ ಶೇ.100 ರಷ್ಟು ಪೂರ್ಣಗೊಳಿಸಬೇಕು. ಮತದಾರರ ಪಟ್ಟಿಗಳ ಮ್ಯಾಪಿಂಗ್ ಕಾರ್ಯವನ್ನು ಬಾಕಿ ಉಳಿಸಿಕೊಂಡು ನಿರ್ಲಕ್ಷ್ಯ ತೋರುವ ಮತಗಟ್ಟೆ ಮಟ್ಟದ ಅಧಿಕಾರಿಗಳ ವಿರುದ್ಧ ಪ್ರಜಾ ಪ್ರಾತಿನಿಧ್ಯ ಕಾಯ್ದೆಯಡಿ ಶಿಸ್ತು ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾ ಚುನಾವಣಾಧಿಕಾರಿಗಳು ಹಾಗೂ ಜಿಲ್ಲಾಧಿಕಾರಿ ಟಿ.ವೆಂಕಟೇಶ್ ತಿಳಿಸಿದ್ದಾರೆ.



ಒಳ ಮೀಸಲಾತಿ ಮೂಲಕ ಹುದ್ದೆ ಭರ್ತಿಗೆ ಆಗ್ರಹ

• **ಚಿತ್ರದುರ್ಗ:** ಖಾಲಿ ಇರುವ ಹುದ್ದೆಗಳನ್ನು ಒಳಮೀಸಲಾತಿ ಇಲ್ಲದೆ ತುಂಬಲು ಹೊರಡಿಸಿರುವ ನೋಟಿಫಿಕೇಷನ್ ಹಿಂಪಡೆದು, ಮಾದಿಗರಿಗೆ ಶೇ6 ರಷ್ಟು ಒಳಮೀಸಲಾತಿ ನೀಡಿ, ಒಳಮೀಸಲಾತಿ ಅನ್ವಯವೇ ಹೊಸ ನೇಮಕಾತಿ ಮಾಡಲು ಮರು ನೋಟಿಫೀಕೇಷನ್ ಮಾಡುವಂತೆ ಒತ್ತಾಯಿಸಿ ಮಾಜಿ ಸಚಿವ ಹೆಚ್.ಆಂಜನೇಯ ರಾಜ್ಯ ಸರ್ಕಾರಕ್ಕೆ ಪತ್ರ ಬರೆದು ಒತ್ತಾಯಿಸಿದ್ದಾರೆ.

ರಾಜ್ಯದಲ್ಲಿ ಮಾದಿಗರ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ಪ್ರಮಾಣ ಸಿಗುತ್ತಿಲ್ಲ, ಒಳಮೀಸಲಾತಿ ಬೇಕೇ ಬೇಕೆಂದು ಕಳೆದ 35 ವರ್ಷಗಳಿಂದ ಹೋರಾಟ ಮಾಡಿದ್ದೇವೆ. ನಮ್ಮ ಬೇಡಿಕೆಗೆ ಸ್ಪಂದಿಸಿ ಒಳಮೀಸಲಾತಿ ಹಂಚಿಕೆ ಮಾಡಲಾಗಿದೆ. ಆಂಧ್ರ, ತೆಲಂಗಾಣದಲ್ಲಿ ಈಗಾಗಲೇ ಒಳಮೀಸಲಾತಿ ಅನುಷ್ಠಾನಗೊಂಡಿದೆ. ಅಲ್ಲಿ ಯಾವುದೇ ಗೊಂದಲ ಇಲ್ಲದೆ ಪರಿಶಿಷ್ಟ ಜಾತಿಯವರೆಲ್ಲರೂ ಅದನ್ನು ಸ್ವಾಗತಿಸಿ, ಮೀಸಲಾತಿ ಹಂಚಿಕೊಂಡು ಸೌಲಭ್ಯ ಪಡೆಯುತ್ತಿದ್ದಾರೆ. ಇಂತಹ ವಾತಾವರಣ ರಾಜ್ಯದಲ್ಲಿ ನಿರ್ಮಾಣ ಮಾಡಬೇಕಿದೆ. ರಾಜ್ಯದಲ್ಲಿ ಪರಿಶಿಷ್ಟ ಜಾತಿಯಲ್ಲಿ ಹೆಚ್ಚು ಮೀಸಲಾತಿ ಸೌಲಭ್ಯ ಪಡೆದಿರುವ ಸಮುದಾಯಗಳು ಅನಾವಶ್ಯಕವಾಗಿ ಸಂವಿಧಾನ ವಿರುದ್ಧವಾಗಿ, ಅಂಬೇಡ್ಕರ್ ಆಶಯಗಳಿಗೆ ತದ್ವಿರುದ್ಧವಾಗಿ ನಡೆದುಕೊಳ್ಳುತ್ತಿರುವುದು ಮಾದಿಗ ಸಮುದಾಯದಲ್ಲಿ ಆತಂಕಕ್ಕೆ ಕಾರಣವಾಗಿದೆ ಎಂದಿದ್ದಾರೆ.

ಇದೀಗ ಒಳಮೀಸಲಾತಿ ಕೈಬಿಟ್ಟು 56432 ಹುದ್ದೆಗಳ ನೇಮಕಾತಿ ಮಾಡಲು ಮುಂದಾಗಿರುವುದು ದುರದೃಷ್ಟಕರ. ಈ ಹುದ್ದೆಗಳನ್ನು ತುಂಬಲು ನೀಡಿರುವ ನೋಟಿಫಿಕೇಷನ್ ರದ್ದುಗೊಳಿಸಿ ಒಳ ಮೀಸಲಾತಿ ಅಳವಡಿಸಿ ಹುದ್ದೆ ತುಂಬುವ ಪ್ರಕ್ರಿಯೆ ಆರಂಭಿಸಬೇಕು ಎಂದು ಮಾಜಿ ಸಚಿವರಾದ ಹೆಚ್. ಆಂಜನೇಯ ಒತ್ತಾಯಿಸಿದ್ದಾರೆ.



ಹಿರಿಯೂರಿನ ನಗರ ದೇವತೆ ಶ್ರೀ ದುರ್ಗಾಪರಮೇಶ್ವರಿ ಅಮ್ಮನವರ ಜಾತ್ರಾ ಮಹೋತ್ಸವ ನಡೆಯುತ್ತಿದ್ದು ಮಂಗಳವಾರ ಉಡಿ ತುಂಬುವ ಕಾರ್ಯಕ್ರಮ ಹಾಗೂ ಆರತಿ ಸೇವೆ ಜರುಗಿತು ಇದರ ಅಂಗವಾಗಿ ದುರ್ಗಾಪರಮೇಶ್ವರಿ ದೇವತೆಗೆ ವಿಶೇಷ ಅಲಂಕಾರ ಮಾಡಲಾಗಿತ್ತು.

ಕಠಿಣ ಅಭ್ಯಾಸದಿಂದ ಮಾತ್ರ ಉತ್ತಮ ಅಂಕ ಪಡೆಯಲು ಸಾಧ್ಯ

• **ಹಿರಿಯೂರು:** ಇಂದಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ಕಠಿಣ ಪರಿಶ್ರಮದಿಂದ ಅಭ್ಯಾಸ ಮಾಡಿದಾಗ ಮಾತ್ರ ಉತ್ತಮ ಅಂಕಗಳನ್ನು ಪಡೆಯಲು ಸಾಧ್ಯ, ತಮ್ಮ ಕ್ರಿಯಾಶೀಲತೆಯನ್ನು ಪ್ರದರ್ಶಿಸುವ ವಿದ್ಯಾರ್ಥಿಗಳಿಗೆ ಮಾತ್ರ ಉದ್ಯೋಗ ಅವಕಾಶಗಳು ಲಭ್ಯವಿದ್ದು, ವಿದ್ಯಾರ್ಥಿಗಳು ಆಧುನಿಕ ತಂತ್ರಜ್ಞಾನಕ್ಕೆ ತಕ್ಕಂತೆ ಶಿಕ್ಷಣವನ್ನು ಪಡೆಯುವ ಮೂಲಕ ಸಮಾಜದಲ್ಲಿ ಉತ್ತಮ ಹೆಸರು ಮಾಡಬೇಕು ಎಂಬುದಾಗಿ ವಿದ್ಯಾಸಂಸ್ಥೆಯ ಕಾರ್ಯದರ್ಶಿ ಆಲೂರು ಹನುಮಂತರಾಯಪ್ಪ ಹೇಳಿದರು.

ಹಿರಿಯೂರಿನ ವಾಣಿವಿಲಾಸ ವಿದ್ಯಾಸಂಸ್ಥೆಯಲ್ಲಿ 10ನೇ ತರಗತಿ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ ಸಮಾರಂಭ ಹಾಗೂ ಶಾರದಾ ಪೂಜೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.



ವಿದ್ಯಾರ್ಥಿಗಳು ಮೊಬೈಲ್, ಟಿವಿಗಳಂತಹ ಯಾವುದೇ ಮಾಧ್ಯಮಗಳ ವ್ಯಾಮೋಹಕ್ಕೆ ಒಳಗಾಗದೆ ಒಂದು ವೇಳಾಪಟ್ಟಿಯನ್ನು ಸಿದ್ದಮಾಡಿಕೊಂಡು, ಸಮಯ ವ್ಯರ್ಥ ಮಾಡದೇ ಸತತ ಪರಿಶ್ರಮದಿಂದಓದುವ ಮೂಲಕ ಪರೀಕ್ಷೆಯಲ್ಲಿ ಉತ್ತಮ ಅಂಕಗಳನ್ನು ಪಡೆದು ಹೆತ್ತವರಿಗೆ ಹಾಗೂ ಓದಿದ ಶಾಲೆಗೆ ಕೀರ್ತಿಯನ್ನು ತರಬೇಕು ಎಂಬುದಾಗಿ ಹೇಳಿದರು.

ಉಪನ್ಯಾಸಕಿ ಗಂಗಮ್ಮ ಮಾತನಾಡಿ, ವಿದ್ಯಾರ್ಥಿಗಳು ಪರೀಕ್ಷೆಯನ್ನು ಹಬ್ಬದಂತೆ ಸಡಗರ ಹಾಗೂ ಸಂಭ್ರಮದಿಂದ ಆಚರಿಸಿ, ಪರೀಕ್ಷೆಯ ಬಗ್ಗೆ ಭಯ ಬೇಡ, ಭಯವನ್ನು ಬಿಟ್ಟು ಧೈರ್ಯ ಹಾಗೂ ಆತ್ಮವಿಶ್ವಾಸದಿಂದ ಪರೀಕ್ಷೆಯನ್ನು ಎದುರಿಸುವ ಮೂಲಕ ಪರೀಕ್ಷೆಯಲ್ಲಿ ಉತ್ತಮ ಅಂಕಗಳನ್ನು ಗಳಿಸಿ, ಸಮಾಜದಲ್ಲಿ ಉತ್ತಮ ವ್ಯಕ್ತಿಗಳಾಗಿ ಹೊರಹೊಮ್ಮಬೇಕು ಎಂಬುದಾಗಿ ಹೇಳಿದರು.

ಉಪನ್ಯಾಸಕ ಉಮೇಶ್‌ಯಾದವ್, ಸೌಮ್ಯ, ವ್ಯವಸ್ಥಾಪಕಿ ವಸಂತಾ, ಆಡಳಿತಾಧಿಕಾರಿ ಹೇಮಲತಾ, ಕೋ ಆರ್ಡಿನೇಟರ್ ರಚನ, ಶಿಕ್ಷಕಿಯರುಗಳಾದ ರಜಿಯಾಬೇಗಂ, ರಂಜಿತಾ, ಸಬೀಹಾ, ಮುಬೀನಾ, ಸಾಧಿಕಾ, ಮಮತಾ, ಅಕ್ಷಿತಾ, ನಂದಿನಿ,ಭಾಗ್ಯ, ಜೈಸುಧಾ, ಸುಲೋಚನಾ, ಪೂಜಾ, ಕಾವ್ಯ ಇದ್ದರು.

ರಾಜ್ಯ ಸರ್ಕಾರಿ ವೈದ್ಯಾಧಿಕಾರಿಗಳ ಸಂಘದ ಡಾ.ಬಸವರಾಜ್ ಮಾಹಿತಿ

ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಇಂದಿನಿಂದ ಧರಣಿ

• **ಚಿತ್ರದುರ್ಗ:** ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಅಧಿಕಾರಿಗಳು ಹಾಗೂ ನೌಕರರ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಮಾ.11 ರಿಂದ ಅನಿರ್ದಿಷ್ಟಾವಧಿ ಮುಷ್ಕರ ಆರಂಭಿಸಲಾಗುವುದು ಎಂದು ಡಾ.ಬಸವರಾಜ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನೌಕರರ ನ್ಯಾಯಯುತ ಬೇಡಿಕೆಗಳನ್ನು ಈಡೇರಿಸುವಂತೆ ಕರ್ನಾಟಕ ಸರ್ಕಾರಿ ವೈದ್ಯಾಧಿಕಾರಿಗಳ ಸಂಘ ಹಾಗೂ ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆಯ ವಿವಿಧ ವೃಂದಗಳ ಕೇಂದ್ರ ಸಂಘವು ವಿವಿಧ ದಿನಾಂಕಗಳಂದು 14 ಬಾರಿ ಇಲಾಖಾ ಸಚಿವರು ಹಾಗೂ ಉನ್ನತ ಮಟ್ಟದ ಅಧಿಕಾರಿಗಳೊಂದಿಗೆ ಸಭೆಗಳನ್ನು ನಡೆಸಲಾಗಿದೆ. ಇಲಾಖಾ ನೌಕರರ ಬೇಡಿಕೆಗಳನ್ನು ಈಡೇರಿಸಲು ಮನವಿ ಸಲ್ಲಿಸಿದ್ದರೂ ಸಹ ಅವುಗಳನ್ನು ಪರಗಣನೆಗೆ ತೆಗೆದುಕೊಂಡಿರುವುದಿಲ್ಲ ಎಂದು ದೂರಿದರು.

ಆರೋಗ್ಯ ಮತ್ತು ಕುಟುಂಬ ಕಲ್ಯಾಣಾ ಇಲಾಖೆಯಲ್ಲಿ ವಿವಿಧ ವೃಂದಗಳಲ್ಲಿ ಒಟ್ಟು 36397 ಅಧಿಕಾರಿ, ನೌಕರರು ಕಾರ್ಯ ನಿರ್ವಹಿಸುತ್ತಿದ್ದಾರೆ.



ರಾಜ್ಯದ 6 ಕೋಟಿ ಜನರಿಗೆ ಆರೋಗ್ಯ ಸೇವೆ ಒದಗಿಸುವಲ್ಲಿ ಇವರು ಪ್ರಮುಖ ಪಾತ್ರ ನಿರ್ವಹಿಸುತ್ತಿದ್ದು, ಪ್ರಸ್ತುತ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ ನೌಕರರ ಸಂಖ್ಯೆ, ವಯೋನಿವೃತ್ತಿ ಮತ್ತು ಇತರೆ ಕಡಿಮೆಯಾಗುತ್ತಿದ್ದು, ಖಾಲಿ ಹುದ್ದೆಗಳ ಭರ್ತಿ ಅಧಿಕಾರಿ -ನೌಕರರ ಕಾರಣಗಳಿಂದಾಗಿ ಆಗದೇ ಇರುವುದರಿಂದ ಪ್ರಸ್ತುತ ಕರ್ತವ್ಯ ನಿರ್ವಹಿಸುತ್ತಿರುವ ಮೇಲೆ ಹೆಚ್ಚಿನ ಕಾರ್ಯ ಒತ್ತಡ ಉಂಟಾಗುತ್ತಿದೆ ಎಂದರು.

ಅಲ್ಲದೆ ಇಲಾಖೆ ಮುಖ್ಯಸ್ಥರ ಅಧ್ಯಕ್ಷತೆಯಲ್ಲಿ ನಡೆದ ಕೆಲವು ಸಭೆಗಳ ಸಭಾ ನಡವಳಿಗಳನ್ನು ಸಹ ದಾಖಲಿಸದೆ ಇಲಾಖೆಯ ಅಧಿಕಾರಿ-ನೌಕರರ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ಇಲಾಖೆಯ ಉನ್ನತ ಮಟ್ಟದ ಅಧಿಕಾರಿಗಳು ನಿರ್ಲಕ್ಷ್ಯ ವಹಿಸುತ್ತಿದ್ದು, ಇಲ್ಲಿಯವರೆಗೆ ಈ ಕೆಳಕಂಡ ಬೇಡಿಕೆಗಳನ್ನು ಈಡೇರಿಸಿರುವುದಿಲ್ಲ, ಹಾಗಾಗಿ ಅಧಿಕಾರಿ-ನೌಕರರ ನ್ಯಾಯಯುತ ಬೇಡಿಕೆಗಳ ಸಂಬಂಧ ನಡೆದ ರಾಜ್ಯ ಕಾರ್ಯಕಾರಿಣಿ ಮತ್ತು ಎಲ್ಲಾ ವೃಂದ ಸಂಘಗಳ ಸಭೆಯಲ್ಲಿ ಅನಿರ್ದಿಷ್ಟಾವಧಿ ಮುಷ್ಕರವನ್ನು ಕೈಗೊಳ್ಳಲು ಸರ್ವಾನುಮತದಿಂದ ತೀರ್ಮಾನಿಸಲಾಗಿದೆ ಎಂದು ತಿಳಿಸಿದರು.

ಡಾ.ಅಭಿನವ್ ಮಾತನಾಡಿ, ವಿಭಾಗಗಳನ್ನು ಬಂದ್ ಮಾಡಲಾಗುವುದು. ಸರ್ಕಾರ ನಮ್ಮ ಮನವಿಗೆ ಸ್ಪಂದಿಸದಿದ್ದಲ್ಲಿ ಹಂತ ಹಂತವಾಗಿ ಮುಷ್ಕರ ವಿಸ್ತರಿಸಲಾಗುವುದು ಎಂದು ಹೇಳಿದರು.

ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಮಾಲತೇಶ ಮುದ್ದಜ್ಜಿ ಮಾತನಾಡಿ, ಆರೋಗ್ಯ ಇಲಾಖೆ ವೈದಾಧಿಕಾರಿಗಳು ಹಾಗೂ ನೌಕರರು ವಿವಿಧ ಬೇಡಿಕೆಗಳ ಈಡೇರಿಕೆಗೆ ನಡೆಸುತ್ತಿರುವ ಮುಷ್ಕರ ನ್ಯಾಯಯುತವಾಗಿದೆ. ಹಾಗಾಗಿ ನಮ್ಮ ಸಂಘದಿಂದ ಸಂಪೂರ್ಣ ಬೆಂಬಲ ನೀಡಲಾಗುವುದು ಎಂದರು. ಸುದ್ದಿಗೋಷ್ಠಿಯಲ್ಲಿ ಡಾ.ಮಧುಕುಮಾರ್, ಪೂಜಾರಗೌಡ, ಸಿದ್ದೇಶ್ ಸೇರಿದಂತೆ ಮತ್ತಿತರ ಆರೋಗ್ಯ ಸಿಬ್ಬಂದಿ ಹಾಜರಿದ್ದರು.

ಚಿತ್ರದುರ್ಗದಲ್ಲಿ ಎಸ್‌ಸಿ, ಎಸ್‌ಟಿ ನೌಕರರ ಒಕ್ಕೂಟದ ವತಿಯಿಂದ ಧರಣಿ

ಒಳ ಮೀಸಲಾತಿ ಅನ್ವಯ ನೇಮಕಾತಿಗೆ ಒತ್ತಾಯ

• **ಚಿತ್ರದುರ್ಗ:** ಒಳ ಮೀಸಲಾತಿ ವಿರೋಧಿಗಳ ಮಾತು ಕೇಳಿಕೊಂಡು ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯನವರು ತಾವು ನಂಬಿರುವ ಸಿದ್ಧಾಂತಗಳಿಗೆ ದ್ರೋಹವೆಸಗುತ್ತಿರುವುದರಿಂದ ಮಾದಿಗರು ಅನ್ಯಾಯಕ್ಕೊಳಗಾಗುತ್ತಿದ್ದಾರೆಂದು ಜನತಂತ್ರ ಸಂರಕ್ಷಣೆಗಾಗಿ ಆಂದೋಲನದ ರಾಜ್ಯ ಪ್ರಧಾನ ಸಂಚಾಲಕ ಸಿ.ಕೆ.ಮಹೇಶ್ ಟೀಕಿಸಿದರು.

ಒಳ ಮೀಸಲಾತಿ ಅನ್ವಯ ರಾಜ್ಯ ಸರ್ಕಾರ 56,432 ಹುದ್ದೆಗಳನ್ನು ಭರ್ತಿ ಮಾಡುವಂತೆ ಒತ್ತಾಯಿಸಿ ಸಾಮಾಜಿಕ ಸಂಘರ್ಷ ಸಮಿತಿ, ಕರ್ನಾಟಕ ರಾಜ್ಯ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಗಳ ನೌಕರರ ಒಕ್ಕೂಟದ ವತಿಯಿಂದ ಜಿಲ್ಲಾಧಿಕಾರಿ ಕಚೇರಿ ವೃತ್ತದಲ್ಲಿ ಮಂಗಳವಾರ ಹಮ್ಮಿಕೊಳ್ಳಲಾಗಿದ್ದ ಪ್ರತಿಭಟನೆಯಲ್ಲಿ ಭಾಗವಹಿಸಿ ಮಾತನಾಡಿದರು.ಸ

ಮಾದಿಗ ರಾಜಕಾರಣಿಗಳು ಮತ್ತು ಮಾದಿಗರ ಮತಗಳನ್ನು ಪಡೆದು ಗೆದ್ದಿರುವ ಶಾಸಕರು, ಸಂಸದರುಗಳು ಒಳ ಮೀಸಲಾತಿಯನ್ನು ರಾಜಕೀಯ ಅಸ್ತ್ರವನ್ನಾಗಿ ಬಳಸಿಕೊಳ್ಳುತ್ತಿದ್ದಾರೆಯೇ ವಿನ ಒಳ ಮೀಸಲಾತಿ ಜಾರಿಯಾಗುವುದು ಬೇಕಿಲ್ಲ. ಸಮಾಜ ಕಲ್ಯಾಣ ಸಚಿವ ಹೆಚ್.ಸಿ. ಮಹದೇವಪ್ಪ ನೆಪಮಾತ್ರಕ್ಕೆ ಅಂಬೇಡ್ಕರ್ ಬಗ್ಗೆ ಮಾತನಾಡುತ್ತಾರೆ ಎಂದು ಕಿಡಿಕಾರಿದರು.



ನಮ್ಮ ಮತಗಳಿಂದ ಗೆದ್ದಿರುವ ಮಾದಿಗರು ಹಾಗೂ ಮೇಲ್ಜಾತಿಯ ಶಾಸಕರು ಸಂಸದರು ಒಳ ಮೀಸಲಾತಿಗೆ ಸಂಬಂಧಿಸಿದಂತೆ ನಿಖರವಾದ ನಿಲುವು ತೆಗೆದುಕೊಳ್ಳದ ಹೊರತು ಈ ಸಮಸ್ಯೆ ಬಗೆಹರಿಯುವುದಿಲ್ಲ. 150 ಕ್ಷೇತ್ರಗಳಲ್ಲಿ 40 ರಿಂದ 45 ಮಾದಿಗರ ಮತಗಳಿದ್ದು, ಚುನಾವಣೆಯಲ್ಲಿ ಮತಗಳನ್ನು ಮಾರಿಕೊಳ್ಳದೆ ಕಾಪಾಡಿಕೊಳ್ಳುವ ಜಾಗೃತಿ ಮೂಡಿದಾಗ ಮುಂದೆ ರಾಜಕೀಯ ಶಕ್ತಿಯಾಗಿ ಬೆಳೆಯಬಹುದು ಎಂದು ಹೇಳಿದರು.

ಕರ್ನಾಟಕ ರಾಜ್ಯ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಗಳ ನೌಕರರ ಒಕ್ಕೂಟದ ರಾಜ್ಯಾಧ್ಯಕ್ಷ ಹಿರೇಹಳ್ಳಿ ಮಲ್ಲಿಕಾರ್ಜುನ್ ಮಾತನಾಡಿ ಒಳ ಮೀಸಲಾತಿಗಾಗಿ ಕಳೆದ 35 ವರ್ಷಗಳಿಂದಲೂ ಹೋರಾಟ ಮಾಡಿಕೊಂಡು ಬರುತ್ತಿದ್ದರೂ ಇಲ್ಲಿಯವರೆಗೂ ಅಧಿಕಾರ ನಡೆಸಿದ ಎಲ್ಲಾ ಪಕ್ಷಗಳು ಮಾದಿಗರಿಗೆ ವಂಚಿಸುತ್ತಲೆ ಕಾಲ ಕಳೆದಿವೆ ಎಂದರು. ಕೆ.ಕುಮಾರ್, ದುರುಗೇಶ್, ಚಿಕ್ಕಣ್ಣ, ಟಿ.ರಾಮು, ರಾಮುಗೋಸಾಯಿ, ಸುಧಾಕರ್, ಪ್ರಭಾಕರ್, ರಾಮಲಿಂಗಪ್ಪ, ಸಂಪತ್, ಶಿವಣ್ಣ, ತಿಪ್ಪೇಸ್ವಾಮಿ ಧರಣಿಯಲ್ಲಿ ಪಾಲ್ಗೊಂಡಿದ್ದರು.

ಕಿರುಸುದ್ದಿ

ಡಿ.ಟಿ.ಪಿ. ಕುರಿತು 45 ದಿನಗಳ ಉಚಿತ ತರಬೇತಿ

ಚಿಕ್ಕಮಗಳೂರು: ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಶಿಕ್ಷಣ ಟ್ರಸ್ಟ್ ಮತ್ತು ಕೆನರಾ ಬ್ಯಾಂಕ್‌ನ ಸಹಯೋಗದಲ್ಲಿ ನಡೆಸುತ್ತಿರುವ ರುಡ್‌ಸೆಟ್ ಸಂಸ್ಥೆಯ ವತಿಯಿಂದ ಕಂಪ್ಯೂಟರ್ ಡಿ.ಟಿ.ಪಿ (ಡೆಸ್ಕ್ ಟಾಪ್ ಪಬ್ಲಿಂಗ್) ಕುರಿತು 45 ದಿನಗಳ ಉಚಿತ ತರಬೇತಿಯನ್ನು ಏಪ್ರಿಲ್ 2 ರಿಂದ ಹಮ್ಮಿಕೊಳ್ಳಲಾಗಿದ್ದು, ಗ್ರಾಮೀಣ ಆಸಕ್ತ ನಿರುದ್ಯೋಗಿ ಯುವಕ-ಯುವತಿಯರು ಅರ್ಜಿ ಸಲ್ಲಿಸಬಹುದು.

ಆಸಕ್ತರು 18 ರಿಂದ 50 ವರ್ಷ ವಯೋಮಾನದವರಾಗಿದ್ದು, ಕನ್ನಡ ಭಾಷೆ ಓದಲು ಮತ್ತು ಬರೆಯಲು ಬಲ್ಲವರಾಗಿರಬೇಕು. ಗ್ರಾಂಇಣ ಭಾಗದ ಬಿಪಿಎಲ್ ಕಾರ್ಡ್ ಹಾಗೂ ಆಧಾರ್ ಕಾರ್ಡ್ ಅನ್ನು ಕಡ್ಡಾಯವಾಗಿ ಹೊಂದಿರಬೇಕು. ತರಬೇತಿಯ ಅವಧಿಯಲ್ಲಿ ಉಚಿತವಾಗಿ ಊಟ ಮತ್ತು ವಸತಿ ನೀಡಲಾಗುವುದು ಹಾಗೂ ತರಬೇತಿಯ ಅವಧಿ ಪೂರ್ಣಗೊಂಡ ನಂತರ ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ಧಿ ಸಚಿವಾಲಯದಿಂದ ಪ್ರಮಾಣ ಪತ್ರವನ್ನು ತರಿಸಲಾಗುವುದು.

ಆಸಕ್ತರು ಅರ್ಜಿ ಸಲ್ಲಿಸಲು ಹಾಗೂ ಹೆಚ್ಚಿನ ಮಾತಿಗೆ ರುಡ್‌ಸೆಟ್ ಸಂಸ್ಥೆ, ಅರಿಶಿನಕುಂಟೆ, ನೆಲಮಂಗಲ ತಾಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಅಥವಾ ಮೊಬೈಲ್ ಸಂಖ್ಯೆ: 9380162042, 9481506564, 9481778047 ಅನ್ನು ಸಂಪರ್ಕಿಸಬಹುದು ಎಂದು ರುಡ್‌ಸೆಟ್ ಸಂಸ್ಥೆಯ ಬೆಂಗಳೂರು ಶಾಖೆಯ ನಿರ್ದೇಶಕ ರವಿಕುಮಾರ ತಿಳಿಸಿದ್ದಾರೆ.

ಅಪರಿಚಿತ ವ್ಯಕ್ತಿ ಸಾವು

ಚಿಕ್ಕಮಗಳೂರು: ಕಳೆದ ನವೆಂಬರ್ 18ರಂದು ಬಣಕಲ್‌ನ ದೇವರಮನೆ ಕ್ರಾಸ್‌ನ ಸೇತುವೆ ಬಳಿ ನಿತ್ರಾಣನಾಗಿ ಮಲಗಿದ್ದ ಅಪರಿಚಿತ ವ್ಯಕ್ತಿಯೊಬ್ಬರನ್ನು ಮೂಡಿಗೆರೆಯ ಎಂ.ಜಿ.ಎಂ. ಆಸ್ಪತ್ರೆಗೆ ದಾಖಲಿಸಲಾಗಿದ್ದು. ನವೆಂಬರ್ 25 ರಂದು ಚಿಕಿತ್ಸೆ ಫಲಿಸದೆ ಮೃತಪಟ್ಟಿದ್ದಾರೆ. ಸುಮಾರು 55 ವರ್ಷದ ಈ ವ್ಯಕ್ತಿ ಬಗ್ಗೆ ಮಾತಿ ಇದ್ದಲ್ಲಿ ಬಣಕಲ್ ಪೊಲೀಸ್ ಠಾಣೆ (08263-229049) ಅಥವಾ ಜಿಲ್ಲಾ ಪೊಲೀಸ್ ಕಂಟ್ರೋಲ್ ರೂಂ ಅನ್ನು ಸಂಪರ್ಕಿಸಬಹುದು.

ಸೌಹರ್ದತೆ ಕಲಿಸುವ ರಾಷ್ಟ್ರೀಯ ಸೇವಾ ಯೋಜನೆ



ಶೃಂಗೇರಿ: ವಿದ್ಯಾರ್ಥಿಗಳಿಗೆ ಸ್ನೇಹ ಸೌಹರ್ದತೆಯಿಂದ ಜೀವನ ನಡೆಸುವ ವಾಸ್ತವತೆಯನ್ನು ರಾಷ್ಟ್ರೀಯ ಸೇವಾ ಯೋಜನೆಯ ವಿಶೇಷ ಶಿಬಿರವು ಕಲಿಸುತ್ತದೆ ಎಂದು ಶ್ರೀ ಶಾರದಾ ಪೀಠದ ಅಧಿಕಾರಿ ಸತೀಶ್ ಭಟ್ ಹೇಳಿದರು.

ಮರ್ಕಲ್ ಗ್ರಾಮ ಪಂಚಾಯಿತಿಯ ಕಿಗ್ಗಾದ ಶ್ರೀ ಅಭಿನವ ರಾಮಾನಂದ ಸರಸ್ವತಿ ಪ್ರೌಢಶಾಲೆಯಲ್ಲಿ ಮಂಗಳವಾರ ಶ್ರೀ ಜೆಸಿಬಿಎಂ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆಯ ವಿಶೇಷ ಶಿಬಿರದ ಸಮಾರೋಪ ಭಾಷಣ ಮಾಡಿದರು. ಯುವ ಜನತೆಗೆ ರಾಷ್ಟ್ರೀಯ ಮನೋಭಾವನೆಯನ್ನು ಕಲಿಸುತ್ತದೆ. ಶಿಸ್ತುಬದ್ಧ ಜೀವನ, ಒಗ್ಗಟ್ಟಿನ ಅಗತ್ಯತೆ ಸೇರಿದಂತೆ ಅನೇಕ ವಿಚಾರವನ್ನು ಶಿಬಿರದಿಂದ ಕಲಿಯಬಹುದಾಗಿದೆ ಎಂದರು.

ಕಾಲೇಜಿನ ಹಿರಿಯ ವಿದ್ಯಾರ್ಥಿ ಅಡೇಖಂಡಿ ಕೃಷ್ಣಮೂರ್ತಿ ಮಾತನಾಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪ್ರಾಂಶುಪಾಲ ಡಾ. ಸ್ವಾಮಿ ವಹಿಸಿದ್ದರು.

ಇದೇ ಸಂದರ್ಭದಲ್ಲಿ ವಿವಿಧ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳು ಹಾಗೂ ಗ್ರಾಮಸ್ಥರಿಗೆ ಬಹುಮಾನ ವಿತರಿಸಲಾಯಿತು.ಉತ್ತಮ ಸ್ವಯಂ ಸೇವಕಿ ಪ್ರಶಸ್ತಿಯನ್ನು ಸ್ಪರ್ಶ ಹಾಗೂ ನಾಗಶ್ರೀ, ಅಮೃತ, ವರ್ಷ, ಚಂದನ, ಆಪ್ತಿ ಸಹಿತ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ಕಾಲೇಜು ಆಡಳಿತ ಮಂಡಳಿಯ ಪುಷ್ಪಾಲಕ್ಷ್ಮೀನಾರಾಯಣ, ಕೆ.ಎಂ. ಮಂಜುನಾಥ್, ಕೆ.ಎಂ. ಶ್ರೀನಿವಾಸ್, ತ್ಯಾಗರಾಜ್, ಕಿಗ್ಗಾ ದೇವಸ್ಥಾನದ ಮಂಜುನಾಥ್, ಸ್ವಾಗತ ಸಮಿತಿಯ ಎ.ಎಸ್. ನಯನ, ನೂತನ ಕುಮಾರ್, ವಿಠ್ಠಲ್, ಶಿಬಿರಾಧಿಕಾರಿಗಳಾದ ಎ.ಜಿ. ಪ್ರಶಾಂತ್, ಸಂತೋಷ ಕುಮಾರ್ ಇದ್ದರು.

ಸವಿತಾ ಪರಮೇಶ್ ಆಯ್ಕೆ

ಚಿಕ್ಕಮಗಳೂರು: ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ಧ್ವನಿ)ಯ ಬಣಕಲ್ ಹೋಬಳಿಗೆ ಮಹಿಳಾ ಅಧ್ಯಕ್ಷರಾಗಿ ಸವಿತಾ ಪರಮೇಶ್ ಸಬ್ಲಿ ಅವರನ್ನು ಆಯ್ಕೆ ಮಾಡಲಾಗಿದೆ.

ಸಂಘಟನೆ ಸಿದ್ಧಾಂತ ಹಾಗೂ ಬಡವರ ಪರವಾಗಿ ಸಾಮಾಜಿಕವಾಗಿ ಜವಾಬ್ದಾರಿಯನ್ನು ನಿಬಾಹಿಸಬೇಕು ಎಂದು ಮೂಡಿಗೆರೆ ದಸಂಸ ತಾಲ್ಲೂಕು ಅಧ್ಯಕ್ಷ ಪೂರ್ಣೇಶ್ ಬೆಟ್ಟದಮನೆ ಸೂಚಿಸಿದ್ದಾರೆ.

ಉದ್ಯೋಗ ಅವಕಾಶಕ್ಕಾಗಿ ತರಬೇತಿ ಕಾರ್ಯಾಗಾರ

ಚಿಕ್ಕಮಗಳೂರು: ಕಲಚೇತನರ ಹಾಗೂ ರಿಯ ನಾಗರೀಕರ ಸಬಲೀಕರಣ ಇಲಾಖೆ, ಜೀತ ಫೌಂಡೇಶನ್, ಬೆಂಗಳೂರಿನ ಯೂತ್ ಫಾರ್ ಜಾಬ್, ಜಿಲ್ಲಾ ವಿಕಲಚೇತನರ ಪುನರ್ವಸತಿ ಕೇಂದ್ರ, ಎಂಆರ್‌ಡಬ್ಲ್ಯು, ಯುಆರ್‌ಡಬ್ಲ್ಯು, ಆರ್‌ಡಬ್ಲ್ಯು, ಕಡೂರಿನ ಸಿ.ಎಂ.ಎಸ್.ಎಸ್ ಸಂಸ್ಥೆಯ ಸಹಯೋಗದಲ್ಲಿ ವಿಕಲಚೇತನರನ್ನು ಶಕ್ತಗೊಳಿಸುವ ಮತ್ತು ಉದ್ಯೋಗ ಅವಕಾಶಗಳನ್ನು ಕಲ್ಪಿಸುವ ಉದ್ದೇಶದಿಂದ ಮಾರ್ಚ್ 11ರಂದು ಬೆಳಗ್ಗೆ 10 ಗಂಟೆಗೆ ನಗರದ ತೊಗರಿ ಹಂಕಲ್ ಸರ್ಕಲ್ ಸಮೀಪರುವ (ಪ್ರಭು ಬೀದಿಯ ಚರ್ಚ್ ಎದುರು) ಜಿಲ್ಲಾ ವಿಕಲಚೇತನರ ಪುನರ್ವಸತಿ ಕೇಂದ್ರದಲ್ಲಿ ಉದ್ಯೋಗ ಅವಕಾಶ ಕಲ್ಪಿಸಲು ತರಬೇತಿ ಕಾರ್ಯಾಗಾರ ಹ್ಮುಕೊಳ್ಳಲಾಗಿದೆ.

ಅರ್ಹತೆಗಳು: ಎಸ್‌ಎಸ್‌ಎಲ್‌ಸಿ, ಪಿಯುಸಿ, ಐಟಿಐ, ಡಿಪ್ಲೊಮಾ ಹಾಗೂ ಯಾವುದೇ ಪದ ಪಡೆದ 18 ರಿಂದ 35 ವಯೋಉತಿಯ ವಾಕ್ ಮತ್ತು ಶ್ರವಣ ದೋಷ, ದೈಕ ನ್ಯೂನತೆ, ಕುಬ್ಜತೆ ಹಾಗೂ ಮಂದದೃಷ್ಟಿ-ಹೀಗೆ ಅಂಗ ವೈಕಲ್ಯ ಹೊಂದಿರುವ ಅಭ್ಯರ್ಥಿಗಳು ಕಾರ್ಯಕ್ರಮಕ್ಕೆ ಆಗಮಿ ಸುವಾಗ ಈ ಮುಂದೆ ತಿಳಿಸಿರುವ ತಮ್ಮ ಶೈಕ್ಷಣಿಕ ಹಾಗೂ ವೈಯಕ್ತಿಕ ದಾಖಲೆಗಳನ್ನು (ಯುಡಿಐಡಿ ಕಾರ್ಡ್ ಜೆರಾಕ್ಸ್, ಎಸ್.ಎಸ್.ಎಲ್.ಸಿ .ಅಂಕಪಟ್ಟಿ, ಆಧಾರ್ ಕಾರ್ಡ್, ರೇಷನ್ ಕಾರ್ಡ್) ತರಬೇಕು. ಹೆಚ್ಚಿನ ಮಾತಿಗೆ ದೂರವಾಣಿ ಸಂಖ್ಯೆ (9741898804, 9448420715) ಗಳನ್ನು ಸಂಪರ್ಕಿಸಬಹುದು ಎಂದು ಜಿಲ್ಲಾ ಕಲಚೇತನರ ಪುನರ್ವಸತಿ ಕೇಂದ್ರದ ಸದಸ್ಯ ಕಾರ್ಯದರ್ಶಿಗಳು ತಿಳಿಸಿದ್ದಾರೆ.

ಶಿಕಕರಿಗೆ ಅಭಿನಂದನಾ ಸಮಾರಂಭ



ಮೂಡಿಗೆರೆ : ಕರ್ನಾಟಕ ರಾಜ್ಯ ಅನುದಾನಿತ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ, ಜಿಲ್ಲಾ ಘಟಕ ಚಿಕ್ಕಮಗಳೂರು ತಾಲೂಕು ಘಟಕ ಮೂಡಿಗೆರೆ ಹಾಗೂ ವಿದ್ಯಾ ಭಾರತಿ ವಿದ್ಯಾಸಂಸ್ಥೆ (ರಿ) ಬಣಕಲ್‌ನ ಸಂಯುಕ್ತ ಆಶ್ರಯದಲ್ಲಿ ಜಿಲ್ಲಾ ಶೈಕ್ಷಣಿಕ ಕಾರ್ಯಾಗಾರ ಮತ್ತು ಶಿಕ್ಷಕರಿಗೆ ಅಭಿನಂದನಾ ಸಮಾರಂಭ ಬಣಕಲ್‌ನ ವಿದ್ಯಾಭಾರತಿ ವಿದ್ಯಾ ಸಂಸ್ಥೆ ಆವರಣದಲ್ಲಿ ನಡೆಯಿತು.

ಕರ್ನಾಟಕ ರಾಜ್ಯ ಅನುದಾನಿತ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ರಾಜ್ಯಾಧ್ಯಕ್ಷ ಎನ್. ರಾಜಗೋಪಾಲ್ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಪ್ರತಿಯೊಬ್ಬ ಅನುದಾನಿತ ಶಿಕ್ಷಕರ ಸೇವಾ ಅವಧಿಯಲ್ಲಿ ಅವರಿಗೆ ಎದುರಾಗುವಂತಹ ಕೆಲವೊಂದು ತೊಂದರೆಗಳಿಗೆ ಪರಿಹಾರ ಕಂಡುಕೊಳ್ಳುವ ಸಲುವಾಗಿ ಶಿಕ್ಷಕರ ಸಂಘವನ್ನು ಪ್ರಾರಂಭಿಸಲಾಗಿದೆ. ಇದರ ಕಾರ್ಯ ವ್ಯಾಪ್ತಿಯನ್ನು ಎಲ್ಲಾ ತಾಲೂಕುಗಳಿಗೆ ವಿಸ್ತರಿಸಿ ಅಲ್ಲಿನ ಶಿಕ್ಷಕರ ಆಗು, ಹೋಗುಗಳ ಬಗ್ಗೆ ಸರ್ಕಾರದ ಗಮನಕ್ಕೆ ತಂದು ಪರಿಹಾರ ಕಂಡುಕೊಳ್ಳುವಲ್ಲಿ ಸಂಘ ಕಾರ್ಯ ನಿರ್ವಹಿಸುತ್ತಾ ಬಂದಿದೆ ಎಂದು ಹೇಳಿದರು.

ಜಿಲ್ಲಾ ಅಧ್ಯಕ್ಷರಾದ ಶಾರದಾ, ಬಿ. ಶಿವರಾಮ ಶೆಟ್ಟಿ, ಅಖಿಲೇಶ್, ಸಾಕ್ಷಿತ, ಧನಶ್, ಎಸ್. ಸಾನ್ವಿಕ, ಜೆ .ಹೆಚ್. ಆಸ್ತಾಗುಪ್ತ ಸಂತ ಜೋಸೆಫರ ಕಾನ್ವೆಂಟ್ ಸಿಸ್ಟರ್ ರೆಜಿನಾ ಮೇರಿ, ನಿರ್ಮಲ ಅಣ್ಣೇಗೌಡ ಹೆಚ್., ಸಂತ ಮಾರ್ಥಸ್ ಹಿರಿಯ ಪ್ರಾಥಮಿಕ ಶಾಲೆ ಮೂಲಿ ಎಂ.ಟಿ., ಕಡೂರು ವಿಶ್ವ ಭಾರತಿ ಹಿರಿಯ ಪ್ರಾಥಮಿಕ ಜಿ.ಪಿ. ಇಂದ್ರಮ್ಮ ಇವರಿಗೆ ಜಿಲ್ಲಾ ಉತ್ತಮ್ಮ ಶಿಕ್ಷಕ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಹಾಗೂ ನಿವೃತ್ತಿ ಹೊಂದುವ ಶಿಕ್ಷಕರಾದ ಚಿಕ್ಕಮಗಳೂರಿನ ಅನ್ನಮರಿಯ ಮತ್ತು ಗ್ರೆಸ್ಸಿಲ್ಲ ಪಿಂಟೋ ವಿದ್ಯಾ ಭಾರತಿ ಶಾಲೆಯ ಶೇಖರಪ್ಪ ಅವರಿಗೆ ಅಭಿನಂದಿಸಲಾಯಿತು.

ವೈದ್ಯಾಧಿಕಾರಿಗಳ ಸಂಘದ ಜಿಲ್ಲಾಧ್ಯಕ್ಷ ಡಾ. ಶ್ರೀನಿವಾಸ್

ಅನಿರ್ದಿಷ್ಟಾವಧಿ ಮುಷ್ಕರ



ಚಿಕ್ಕಮಗಳೂರು: ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಮಾ.11ರಿಂದ 15ರವರೆಗೆ ಸಮಸ್ತ ಆರೋಗ್ಯ ಇಲಾಖೆಯ ಅಧಿಕಾರಿ ನೌಕರರು ಅನಿರ್ದಿಷ್ಟಾವಧಿ ಮುಷ್ಕರ ನಡೆಸಲು ನಿರ್ಧರಿಸಿದ್ದಾರೆ ಎಂದು ಕರ್ನಾಟಕ ಸರಕಾರಿ ವೈದ್ಯಾಧಿಕಾರಿಗಳ ಸಂಘದ ಜಿಲ್ಲಾಧ್ಯಕ್ಷ ಡಾ. ಶ್ರೀನಿವಾಸ್ ಹೇಳಿದರು.

ಅವರು ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ರಾಜ್ಯ ವೈದ್ಯಾಧಿಕಾರಿಗಳ ಸಂಘ, ಕರ್ನಾಟಕ ರಾಜ್ಯ ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆ ನೌಕರರ ಸಂಘ, ಇಲಾಖೆಯ ಎಲ್ಲ ವೃಂದ ಸಂಘಗಳ ಸಹಯೋಗದೊಂದಿಗೆ ಮುಷ್ಕರ ಹಮ್ಮಿಕೊಂಡಿದ್ದು, ಸರಕಾರ ನಮ್ಮ ಮುಷ್ಕರಕ್ಕೆ ಮನ್ನಣೆ ನೀಡದಿದ್ದಲ್ಲಿ ಮಾ.16ರಿಂದ ಅನಿರ್ದಿಷ್ಟಾವಧಿವರೆಗೆ ಕರ್ತವ್ಯಕ್ಕೆ ಹಾಜರಾಗಲು ತೀರ್ಮಾನಿಸಿದ್ದೇವೆ ಎಂದು ಹೇಳಿದರು.

ರಾಜ್ಯದ ಎಲ್ಲ ಆಸ್ಪತ್ರೆಗಳಿಗೆ ಕಾಲಕಾಲಕ್ಕೆ ಸಮರ್ಪಕವಾಗಿ ಔಷಧಿ ಪೂರೈಕೆ ಮಾಡದಿರುವುದು, ವೃಂದ ಮತ್ತು ನೇಮಕಾತಿ ನಿಯಮಗಳನ್ನು ಪ್ರತಿ 3 ವರ್ಷಕ್ಕೊಮ್ಮೆ ತಿದ್ದುಪಡಿ ಮಾಡಲು ಆದೇಶವಿದ್ದರೂ ಅದನ್ನು ಉಲ್ಲಂಘಿಸಿ 1973 ದಿಂದೀಚೆಗೆ ನೇಮಕಾತಿ ನಿಯಮಗಳನ್ನೇ ತಿದ್ದುಪಡಿ ಮಾಡದಿರುವುದು ಸಂಘ ಖಂಡಿಸುತ್ತದೆ ಎಂದರು.

ಇಲಾಖೆಯ ಎಲ್ಲ ವೃಂದಗಳ ಜೇಷ್ಠತಾ ಪಟ್ಟಿಯನ್ನು ಇದುವರೆಗೆ ಪ್ರಕಟಿಸದಿರುವುದರಿಂದ ಅರ್ಹರಿಗೆ ಅನ್ಯಾಯವಾಗುತ್ತಿದೆ. ಎಲ್ಲ ವೃಂದದ ಅಧಿಕಾರಿ ನೌಕರರಿಗೆ ಕಳೆದ 5 ವರ್ಷದಿಂದ ಮುಂಬಡ್ತಿ ನೀಡದಿರುವುದರಿಂದ ಹೊಸ ನೇಮಕಾತಿಗಳು ಆಗದ ಸಿಬ್ಬಂದಿಗಳ ಕೊರತೆಗೆ ಕಾರಣವಾಗುತ್ತಿದೆ ಎಂದು ದೂರಿದರು.

ಸೇವಾನಿರತ ವೈದ್ಯರು, ಅಧಿಕಾರಿ ನೌಕರರ ಉನ್ನತ ವ್ಯಾಸಂಗ, ಸ್ನಾತಕೋತ್ತರ ವ್ಯಾಂಸಂಗಕ್ಕೆ ಅವಕಾಶ ನೀಡದಿರುವುದು, ಇಲಾಖೆಯ ವರ್ಗಾವಣೆ ಕಾಯಿದೆಯಲ್ಲಿನ ನ್ಯೂನತೆಗಳನ್ನು ಸರಿಪಡಿಸದೆ ಅವೈಜ್ಞಾನಿಕವಾಗಿ ಕೌನ್ಸೆಲಿಂಗ್ ವರ್ಗಾವಣೆ ಮಾಡುತ್ತಿರುವುದರಿಂದ ಅರ್ಹ ಸಿಬ್ಬಂದಿಗಳಿಗೆ ತೊಂದರೆ ಆಗುತ್ತಿದೆ ಎಂದು ದೂರಿದರು.

> **ಪ್ರತಿಭಟನೆ ವೇಳೆ ಮಾರ್ಚ್ 11ರಿಂದ 15ರವರೆಗೆ ಕಪ್ಪುಪಟ್ಟಿ ಧರಿಸಿ ಕೆಲಸಕ್ಕೆ ಹಾಜರಾಗುತ್ತೇವೆ. ಆದರೆ ಹೊರ ರೋಗಿ ವಿಭಾಗವನ್ನು ಬಂದ್ ಮಾಡಲಾಗುವುದು. ಕೇವಲ ತುರ್ತು ಚಿಕಿತ್ಸೆ ಮತ್ತು ಹೆರಿಗೆ ಪ್ರಕರಣಗಳಲ್ಲಿ ಮಾತ್ರ ಕರ್ತವ್ಯ ನಿರ್ವಹಿಸಲಾಗುವುದು. ಅಷ್ಟರೊಳಗಾಗಿ ಸರ್ಕಾರ ನಮ್ಮ ಬೇಡಿಕೆಗಳನ್ನು ಈಡೇರಿಸಲು ಕ್ರಮ ಕೈಗೊಳ್ಳದಿದ್ದಲ್ಲಿ ಮಾರ್ಚ್ 16ರಿಂದ ಅನಿರ್ಧಿಷ್ಟವಾಗಿ ಎಲ್ಲಾ ವೈದ್ಯರು ಮತ್ತು ಸಿಬ್ಬಂದಿಗಳು ಕರ್ತವ್ಯಕ್ಕೆ ಗೈರು ಹಾಜರಾಗುವ ಮೂಲಕ ಪ್ರತಿಭಟನೆ ನಡೆಸಲಿದ್ದಾರೆ.**

ಅಲ್ಲದೆ ಸಾರ್ವನಿಕರಿಗೆ ಉತ್ತಮ ಸೇವೆ ನೀಡುವ ದೃಷ್ಟಿಯಿಂದ ಇಲಾಖೆಯಲ್ಲಿ ಖಾಲಿ ಇರುವ ವೈದ್ಯರು, ಅರೆ ವೈದ್ಯಕೀಯ ಹಾಗೂ ಇತರೆ ವೃಂದದ ಹುದ್ದೆಗಳನ್ನು ಭರ್ತಿಮಾಡಬೇಕು. ಗುತ್ತಿಗೆ ವೈದ್ಯರು, ನೌಕರರು ಹಾಗೂ ಎನ್‌ಎಚ್‌ಎಂ ಗುತ್ತಿಗೆ ನೌಕರರಿಗೆ ಕಾಲಕಾಲಕ್ಕೆ ಸೂಕ್ತ ವೇತನ ಹೆಚ್ಚಳ ಮಾಡಬೇಕು. ಇಲಾಖೆಯಲ್ಲಿ ಕೇಂದ್ರ ಪುರಸ್ಕೃತ ಯೋಜನೆಯಡಿ ಕಾರ್ಯನಿರತ ಸುಮಾರು 6 ಸಾವಿರ ನೌಕರರಿಗೆ ಹಲವು ವರ್ಷದಿಂದ 3-4 ತಿಂಗಳಿಗೊಮ್ಮೆ ವೇತನ ನೀಡುವುದು ತಪ್ಪಬೇಕು ಹಾಗೂ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ವೈದ್ಯರು, ತಜ್ಞ ವೈದ್ಯರು ಇತರೆ ಸಿಬ್ಬಂದಿ ವೈದ್ಯಕೀಯ ಶಿಕ್ಷಣ ಇಲಾಖೆಯ ಮಾದರಿಯಲ್ಲಿ ವೇತನ ನೀಡುವುದು ಸೇರಿದಂತೆ ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಮುಷ್ಕರ ಹಮ್ಮಿಕೊಂಡಿರುವುದಾಗಿ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಪ್ರಾಥಮಿಕ ಆರೋಗ್ಯ ಸುರಕ್ಷಾಧಿಕಾರಿಗಳ ಸಂಘದ ಅಧ್ಯಕ್ಷೆ ವಸಂತಕುಮಾರಿ, ಖಜಾಂಚಿ ಅನುಪಮ, ಅಧಿಕಾರಿ, ಸಿಬ್ಬಂದಿಯಾದ ದೇವರಾಜ್, ವೆಂಕಟೇಶ್ ಮತ್ತಿತರರಿದ್ದರು.

ರಾಜ್ಯಾದ್ಯಂತ ತೀವ್ರ ಹೋರಾಟ

ರೈತರ ಮೇಲಿರುವ ಕೇಸು ವಾಪಸ್ ಪಡೆಯಿರಿ

ಚಿಕ್ಕಮಗಳೂರು: ತುಂಗ ಭದ್ರಾ ಎಡದಂಡೆ ಭಾಗದ ರೈತರಿಗೆ ನೀರು ಹರಿಸಬೇಕು ಎಂದು ಹೋರಾಟ ನಡೆಸಿದ ರೈತ ಮುಖಂಡರ ಮೇಲೆ ಹಾಕಿರುವ ಪೊಲೀಸ್ ಕೇಸುಗಳನ್ನು ಸರಕಾರ ವಾಪಸ್ಸು ಪಡೆಯದಿದ್ದರೆ ರಾಜ್ಯಾದ್ಯಂತ ಹೋರಾಟ ತೀವ್ರಗೊಳಿಸುವುದಾಗಿ ಅಖಿಲ ಕರ್ನಾಟಕ ರಾಜ್ಯ ಅನ್ನದಾತ ರೈತ ಸಂಘದ ರಾಜ್ಯ ಮಹಿಳಾ ಘಟಕದ ಅಧ್ಯಕ್ಷೆ ಸರೋಜ ಬಸವರಾಜು ಎಚ್ಚರಿಸಿದರು.

ಅವರು ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ತುಂಗಾಭದ್ರಾ ಎಡದಂಡೆ ಭಾಗದ ರೈತರಿಗೆ ಬೇಸಿಗೆ ಬೆಳಗೆ ನೀರು ಹರಿಸಬೇಕು ಎಂದು ಆಗ್ರಹಿಸಿ ನಮ್ಮ ಸಂಘದ ರಾಜ್ಯಾಧ್ಯಕ್ಷ ಶರಣೇಗೌಡ ಕೆಸರಟ್ಟಿ, ಉಪಾಧ್ಯಕ್ಷ ಶರಣಪ್ಪ ಕೊತ್ವಾಲ್ ನೇತೃತ್ವದಲ್ಲಿ ಅಹೋರಾತ್ರಿ ಧರಣಿ ಹಮ್ಮಿಕೊಳ್ಳಲಾಗಿತ್ತು. ಈ ವೇಳೆ ಅಲ್ಲಿನ ಜಿಲ್ಲಾ ಸಚಿವ ಶಿವರಾಜ್ ತಂಗಡಗಿ ಅವರ ಕುಮ್ಮಕ್ಕಿನಿಂದ ನಮ್ಮ ಮುಖಂಡರನ್ನು ಬಂಧಿಸಿ ಸುಳ್ಳು ಕೇಸು ದಾಖಲಿಸಲಾಗಿದೆ. ರೈತ ಹೋರಾಟವನ್ನು ಹತ್ತಿಕ್ಕುವ ಉದ್ದೇಶದಿಂದ ಅವರ ಮೇಲೆ ನಿರಂತರವಾಗಿ ಕೇಸು ದಾಖಲಿಸಲಾಗಿದೆ ಎಂದು ದೂರಿದರು.

ಈ ಬಗ್ಗೆ ಸಚಿವ ಶಿವರಾಜ್ ತಂಗಡಗಿ ಅವರ ಸರ್ವಾಧಿಕಾರಿ ಧೋರಣೆ ಬಗ್ಗೆ ಮಾನವ ಹಕ್ಕು ಆಯೋಗಕ್ಕೆ ದೂರು ಸಲ್ಲಿಸುತ್ತಿದ್ದೇವೆ. ಅವರನ್ನು ಸಚಿವ ಸಂಪುಟದಿಂದ ವಜಾ ಮಾಡುವಂತೆ ಮುಖ್ಯಮಂತ್ರಿ ಆಗ್ರಹಿಸಿದ್ದೇವೆ ಎಂದರು.

> **ಜಿಲ್ಲಾ ಸಚಿವ ಶಿವರಾಜ್ ತಂಗಡಗಿ ಅವರ ಕುಮ್ಮಕ್ಕಿನಿಂದ ನಮ್ಮ ಮುಖಂಡರನ್ನು ಬಂಧಿಸಿ ಸುಳ್ಳು ಕೇಸು ದಾಖಲಿಸಲಾಗಿದೆ. ರೈತ ಹೋರಾಟವನ್ನು ಹತ್ತಿಕ್ಕುವ ಉದ್ದೇಶದಿಂದ ಅವರ ಮೇಲೆ ನಿರಂತರವಾಗಿ ಕೇಸು ದಾಖಲಿಸಲಾಗಿದೆ**

ರೈತ ಹೋರಾಟಗಾರರ ಮೇಲೆ ಸುಳ್ಳು ಕೇಸು ದಾಖಲಿಸಿರುವ ಕಾರಟಗಿ ಪೊಲೀಸ್ ಅಧಿಕಾರಿ ಸುಧೀರ್ ಬೆಂಕಿ ವಿರುದ್ಧ ಕ್ರಮ ಕೈಗೊಳ್ಳಲು ಗೃಹ ಇಲಾಖೆಗೆ ಮನವಿ ಸಲ್ಲಿಸಿದ್ದೇವೆ. ಒಂದು ವೇಳೆ ನಮ್ಮ ಮನವಿಗೆ ಸ್ಪಂದನೆ ದೊರೆಯದಿದ್ದಲ್ಲಿ ರಾಜ್ಯಾದ್ಯಂತ ಹೋರಾಟ ರೂಪಿಸಲು ನಿರ್ಧರಿಸಲಿದ್ದೇವೆ ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಜಿಲ್ಲಾಧ್ಯಕ್ಷೆ ಪ್ರೇಮ, ರೈತ ಮುಖಂಡರಾದ ಮರೀಗೌಡ, ವಿಶ್ವನಾಥ, ಸುಖಿತ್, ಮತ್ತಿತರರಿದ್ದರು.



ವಿದ್ಯಾರ್ಥಿಗಳು ಭವಿಷ್ಯದ ರೂವಾರಿಗಳು

ಶೃಂಗೇರಿ: ವಿದ್ಯಾರ್ಥಿಗಳು ಭಾರತದ ಭವಿಷ್ಯತ್ತಿನ ರೂವಾರಿಗಳು.ಅವರಲ್ಲಿ ಆತ್ಮವಿಶ್ವಾಸ,ಉತ್ತಮ ಚಿಂತನೆ ಬೆಳೆಸಿದ್ದರೆ ದೇಶದ ಉನ್ನತೀಕರಣ ಸಾಧ್ಯ ವೇದಶಾಸ್ತ್ರ ವಿದ್ವನ್ನಿಧಿ ಪ್ರತಿಷ್ಠಾನಮ್ ಅಧ್ಯಕ್ಷ ವಿಶ್ವನಾಥ್ ಹೇಳಿದರು.

ಪಟ್ಟಣದ ಸರಕಾರಿ ಬಾಲಕಿಯರ ಶಾಲೆಯಲ್ಲಿ ಮಂಗಳವಾರ ವಿದ್ಯಾರ್ಥಿಗಳಿಗೆ ನೋಟ್ ಬುಕ್ ಹಾಗೂ ಲೇಖನ ಸಾಮಗ್ರಿ ವಿತರಣಾ ಸಮಾರಂಭದಲ್ಲಿ ಮಾತನಾಡಿದರು.

ಸರಕಾರಿ ಶಾಲೆಗಳು ವಿದ್ಯಾರ್ಥಿಗಳ ಶಿಕ್ಷಣಕ್ಕೆ ಆದ್ಯತೆ ನೀಡುವ ಜೊತೆಗೆ ಅವರ ಪ್ರತಿಭೆಗೆ ಪ್ರೋತ್ಸಾಹ ನೀಡುತ್ತದೆ. ಶಿಕ್ಷಣದ ಜೊತೆಗೆ ಸಂಸ್ಕಾರವನ್ನು ಪ್ರತಿ ಶಾಲೆಯ ಶಿಕ್ಷಕರು ನೀಡಿದ್ದರೆ ಮಾತ್ರ ಸಮಾಜ ಸುಸಂಸ್ಕೃತವಾಗಲು ಸಾಧ್ಯ.ಪ್ರತಿಷ್ಠಾನಮ್ ವತಿಯಿಂದ ವಿದ್ಯಾರ್ಥಿಳ ಶಿಕ್ಷಣಕ್ಕೆ ಪೂರಕವಾದ ಸವಲತ್ತುಗಳನ್ನು ನಾವು ನೀಡುತ್ತಾ ಬಂದಿದ್ದೇವೆ.ಹೆಣ್ಣುಮಕ್ಕಳ ಶಿಕ್ಷಣ ಅಭಿವೃದ್ಧಿಗೆ ಹೆಚ್ಚು ಒತ್ತು ನೀಡುತ್ತೇವೆ. ಸರಕಾರಿ ಶಾಲೆಗಳ ಅಭಿವೃದ್ಧಿಗೂ ಆರ್ಥಿಕ ಸಹಕಾರ ನೀಡುತ್ತಾ ಬರಲಾಗಿದೆ ಎಂದರು.ರೂ.60 ಸಾವಿರ ರೂ ಆರ್ಥಿಕ ಸಹಕಾರವನ್ನು ಪ್ರತಿಷ್ಠಾನಮ್ ವತಿಯಿಂದ ಬಾಲಕಿಯರ ಪಾಠಶಾಲೆಗೆ ನೀಡಲಾಯಿತು. ಕಾರ್ಯದರ್ಶಿ ಗಂಗಾಧರ್ ಭಟ್, ಋತ್ವಿಜರಾದ ಸುಬ್ರಮಣ್ಯ ಭಟ್, ವೀಣಾ, ದಿವಾಕರಭಟ್, ರಮೇಶ್ ಭಟ್ ಉಪಸ್ಥಿತರಿದ್ದರು.



ವಿಧಾನ ಪರಿಷತ್ ಮಾಜಿ ಸದಸ್ಯೆ ಎ.ವಿ. ಗಾಯತ್ರಿ ಶಾಂತೇಗೌಡ

ಹೆಣ್ಣು ಜಗತ್ತಿಗೆ ಒಂದು ಬೆಳಕಿನಂತೆ

ಚಿಕ್ಕಮಗಳೂರು: ಸಮಾಜದ ಎಲ್ಲಾ ಕ್ಷೇತ್ರಗಳಲ್ಲಿ ಹೆಣ್ಣಿನ ಸಾಧನೆಯ ಮೆಟ್ಟಿಲು ದೊಡ್ಡದಾಗಿದೆ. ಮಗು ತೂಗುವ ತೊಟ್ಟಿಲಿನಿಂದ, ದೇಶದ ಆಳ್ವಿಕೆ ನಡೆಸುವವರೆಗೂ ಹೆಣ್ಣು ಸಮರ್ಥಳಾಗಿದ್ದಾಳೆ ಎಂದು ವಿಧಾನ ಪರಿಷತ್ ಮಾಜಿ ಸದಸ್ಯ ಎ.ವಿ. ಗಾಯತ್ರಿ ಶಾಂತೇಗೌಡ ಹೇಳಿದರು.

ನಗರದ ಕನಕ ಭವನದಲ್ಲಿ ಮಂಗಳವಾರ ಕನಕಶ್ರೀ ಮಹಿಳಾ ಸಮಾಜದಿಂದ ಆಯೋಜಿಸಿದ್ದ ಮಹಿಳಾ ದಿನಾಚರಣೆ ಹಾಗೂ ವಾರ್ಷಿಕೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಹೆಣ್ಣು ಮಗಳು, ಮನೆಯ ಕಣ್ಣಿನಂತೆ. ಸಂಸಾರದ ಬಹುತೇಕ ಜವಾಬ್ದಾರಿಯನ್ನು ನಿರ್ವಹಿಸುವ ಕರುಣಾಮಯಿ. ತಾಯಿಯಾಗಿ ಮಕ್ಕಳನ್ನು ಸದಾಕಾಲ ಕಾಪಾಡುತ್ತಾಳೆ. ಮಡದಿ, ತಂಗಿಯಾಗಿ ಗಂಡಿನ ಶ್ರೇಯಸ್ಸನ್ನು ಬಯಸುವ ಮಹಿಳೆಯರು ಜಗತ್ತಿಗೆ ಒಂದು ಬೆಳಕಿನಂತೆ ಎಂದು ತಿಳಿಸಿದರು.

ಭಾರತೀಯ ಸಂಸ್ಕೃತಿಯಲ್ಲಿ ಮಹಿಳೆಗೆ ವಿಶೇಷ ಸ್ಥಾನಮಾನವಿದೆ. ಈ ನೆಲದಲ್ಲಿ ಶಾರದಾ ದೇವಿ, ದುರ್ಗಿ, ಚಾಮುಂಡಿ, ಕಾಳಿ ಎಂಬ ಅವತಾರದೊಂದಿಗೆ ದೇವತೆಗಳು ಹೆಣ್ಣಿನ ಸ್ವರೂಪದಲ್ಲಿವೆ. ಹೀಗಾಗಿ ಹೆಣ್ಣನ್ನು ಪೂಜನೀಯ ಭಾವದಿಂದ ನೋಡುವ, ಗೌರವಿಸುವ ಹಾಗೂ ಸತ್ಕರಿಸುವ ಸಂಸ್ಕೃತಿಯಿದೆ ಎಂದರು.

ಕೇವಲ ಮನೆಗೆ ಹೆಣ್ಣು ಸೀಮಿತಳಾಗದೇ, ರಾಜಕೀಯ ರಂಗದಲ್ಲೂ ಛಾಪು ಮೂಡಿಸಿದ್ದಾಳೆ. ಅಲ್ಲದೇ ಜಿ.ಪಂ. ಮತ್ತು ತಾ.ಪಂ. ಚುನಾವಣೆಗಳಲ್ಲಿ ಮಹಿಳೆಗೆ ಶೇ.50ರಷ್ಟು ಮೀಸಲಾತಿ ನೀಡುವ ಮೂಲಕ ಸಮಾಜಸೇವಾ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದಾಳೆ ಎಂದು ತಿಳಿಸಿದರು.

ರಾಜ್ಯ ಪರಿಸರ ಮೌಲ್ಯಮಾಪನ ಸಮಿತಿ ಅಧ್ಯಕ್ಷ ಎ.ಎನ್. ಮಹೇಶ್ ಮಾತನಾಡಿ, ಪುರುಷರಿಗಿಂತ ಹೆಣ್ಣು ಅತಿ ಹೆಚ್ಚು ಅರ್ಹತೆ, ತಿಳುವಳಿಕೆ ಹೊಂದಿರುವ ಗುಣದವಳು. ಕೀಳರಿಮೆ, ಹಿಂಜರಿಕೆ ತ್ಯಜಿಸಿ, ಆತ್ಮವಿಶ್ವಾಸದಿಂದ ನಿಂತ ಪರಿಣಾಮ ಇಂದಿರಾಗಾಂಧೀ ಪ್ರಧಾನಿಯಾದರು. ಮತ್ತೋರ್ವರು ದೇಶದ ರಾಷ್ಟ್ರಪತಿಗಳಾಗಿ ಕಾರ್ಯ ನಿರ್ವಹಿಸುತ್ತಿದ್ದಾಳೆ ಎಂದರು.

ಅನೇಕ ವರ್ಷಗಳಿಂದ ಹೆಣ್ಣನ್ನು ಬ್ರೂಣದಲ್ಲಿ ಪತ್ತೆಹಚ್ಚಿ ನಶಿಸುವಂಥ ಕೆಲಸವಾಗುತ್ತಿತ್ತು. ಇದೀಗ ಹೆಣ್ಣು ಮಕ್ಕಳೆಂದರೆ ಅತ್ಯಂತ ಸಂಭ್ರಮದಿಂದ ಹರ್ಷಿಸುತ್ತಾರೆ. ಸಮಾಜದಲ್ಲಿ ಗಂಡಿಗಿಂತ ಹೆಣ್ಣುಮಕ್ಕಳೇ ಪಾಲಕರನ್ನು ಕಾಳಜಿಯಿಂದ ಆರೈಕೆ ಮಾಡುತ್ತಿದ್ದು, ಹೆಣ್ಣು ಪ್ರೀತಿಯಿಂದ ನೋಡಿಕೊಳ್ಳುವ ಕಣ್ಣಾಗಿದ್ದಾಳೆ ಎಂದರು.

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಅಧಿಕಾರಿ ಮಂಜುಳಾ ಹುಲ್ಲಹಳ್ಳಿ ಮಾತನಾಡಿ ಜೀವಕ್ಕೆ ಜೀವ ಕೊಡುವಂಥ ಶಕ್ತಿ ಹೆಣ್ಣಿಗಿದೆ. ಸಮಾಜದಲ್ಲಿ ಪುರುಷರು ಹೆಣ್ಣನ್ನು ಅವಲಂಬಿಸಿಯೇ ಜೀವನ ನಡೆಸುತ್ತಿದ್ದಾರೆ. ಮನೆಯಲ್ಲಿ ಹೆಣ್ಣಿಲ್ಲದಿದ್ದರೆ ಆ ಮನೆ ದುಸ್ಥಿತಿಗೆ ಕಾರಣ. ಅತ್ತೆ-ಮಾವ ಕೂಡಾ ಸೊಸೆಯನ್ನು ಹೆತ್ತ ಮಗಳಂತೆ ನೋಡಿಕೊಂಡರೆ ಆ ಕುಟುಂಬವು ಸುಖಿ ಕುಟುಂಬವಾಗಲಿದೆ ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಕನಕಶ್ರೀ ಮಹಿಳಾ ಸಮಾಜದ ಅಧ್ಯಕ್ಷೆ ಶಾರದಾ ಮಾಸ್ತೇಗೌಡ ಸಮಾಜವು ಅನೇಕ ವರ್ಷಗಳಿಂದ ಸಾಮಾಜಿಕ, ಶೈಕ್ಷಣಿಕ ಹಾಗೂ ಸಮಾಜಮುಖಿ ಕಾರ್ಯಕ್ರಮ ಗಳೊಂದಿಗೆ ಸಾಗುತ್ತಾ ಬಂದಿದೆ ಎಂದರು.

ಸಾಮಾಜಿಕ ಚಿಂತಕಿ ಕಾವ್ಯ ಸಂತೋಷ್, ಸಮಾಜದ ಕಾರ್ಯದರ್ಶಿ ವನಜಾಕ್ಷಿ ಗೋಪಾಲೇಗೌಡ, ಖಜಾಂಚಿ ಅನ್ನಪೂರ್ಣ ಗೋಪಾಲಕೃಷ್ಣ ಹಾಗೂ ನಿರ್ದೇಶಕರು ಇದ್ದರು.



ಬಸ್ ನಿಲ್ದಾಣದ ಅವ್ಯವಸ್ಥೆಗೆ ಪ್ರಯಾಣಿಕರ ಪರದಾಟ

ಶೃಂಗೇರಿ: ಪಟ್ಟಣದ ಬಸ್ ನಿಲ್ದಾಣದ ಅವ್ಯವಸ್ಥೆಯಿಂದಾಗಿ ಪ್ರಯಾಣಿಕರು ಪರದಾಡುವಂಥ ಸ್ಥಿತಿ ನಿರ್ಮಾಣವಾಗಿದ್ದು ಹೇಳುವವರು ಕೇಳುವವರೇ ಇಲ್ಲದಂತಾಗಿದೆ.



ಬಸ್ ನಿಲ್ದಾಣದ ಸುತ್ತಮುತ್ತ ಚರಂಡಿಯಿಂದ ಇಡೀ ವಾತಾವರಣವೇ ಗಬ್ಬು ದುರ್ನಾಥ ಬೀರುತ್ತಿದ್ದು ಎಲ್ಲೆಡೆ ಕಸದ ರಾಶಿ ಲೈಟ್ ವ್ಯವಸ್ಥೆ ಹಾಗೂ ಇಲ್ಲಿ ಜಾಹಿರಾತು ಫಲಕಗಳು ರಸ್ತೆಯ ಮೇಲೆ ರಾರಾಜಿಸುತ್ತಿರುತ್ತದೆ. ಇನ್ನು ಇಲ್ಲಿನ ಶೌಚಾಲಯ ನರಕ ಸದೃಶವಾಗಿದೆ. ಸಾರ್ವಜನಿಕರು ಈ ಅವ್ಯವಸ್ಥೆಗಳನ್ನು ಸಹಿಸುತ್ತಲೇ ಪ್ರಯಾಣ ಬೆಳೆಸಬೇಕಾದ ದುಸ್ಥಿತಿ ಇದೆ.

ಬಸ್ ನಿಲ್ದಾಣವೋ ಖಾಸಗಿ ವಾಹನಗಳ ತಂಗುದಾಣವೋ:

ಖಾಸಗಿ ವಾಹನ ತಂಗುದಾಣವೋ ಬಸ್ ನಿಲ್ದಾಣವೋ ಎಂಬ ಅನುಮಾನ ಹುಟ್ಟಿಸುತ್ತಿದೆ. ಈ ಬಸ್ ನಿಲ್ದಾಣಕ್ಕೆ ಬರುವ ಎಲ್ಲಾ ಖಾಸಗಿ ಬಸ್ಸುಗಳಿಂದ ಶುಲ್ಕ ವಸೂಲಿ ಮಾಡಲಾಗುತ್ತದೆ. ಆದರೆ ಯಾವುದೇ ಸಮಯದ ಪರಿವೇ ಇಲ್ಲದೆ ಬಸ್ ನಿಲ್ದಾಣದೊಳಗೆ ಕಾರು ಪಿಕಪ್ ಸಹಿತ ಖಾಸಗಿ ವಾಹನಗಳು ದಿನಗಟ್ಟಲೆ ನಿಂತಿರುತ್ತದೆ. ನಿಲುಗಡೆ ಹೇಗಿದೆ ಎಂದರೆ ಹೇಗೆ ಬೇಕೋ ಹಾಗೆ ನಿಲ್ಲಿಸಿ ಸ್ಥಳ ಆಕ್ರಮಿಸಿ ಬಸ್ ನಿಲುಗಡೆಗೆ ಸ್ಥಳವೇ ಇಲ್ಲದಂತಾಗಿರುತ್ತದೆ. ಕೆಲವೊಮ್ಮೆ ಬಸ್ಸುಗಳು ಹಿಂದೆ ಮುಂದೆ ಚಲಿಸಲು ತಿರುಗಿಸಲು ಆಗದೆ ಚಾಲಕರು ಹರಸಾಹಸ ಪಡುತ್ತಿರುತ್ತಾರೆ.

ಸದಾಮುಚ್ಚಿಕೊಂಡಿರುವ ಗೃಹ:ಪಟ್ಟಣಕ್ಕೆ ಕುಡಿಯುವ ನೀರನ್ನು ಪ್ರತಿದಿನ ನೀಡುವ ಪಟ್ಟಣ ಪಂಚಾಯಿತಿಯಲ್ಲಿ ನೀರಿಲ್ಲ ಎಂಬ ಸಬೂಬು ಹೇಳಲಾಗುತ್ತದೆ .ಇದರಿಂದ ಸದಾ ಶೌಚಾಲಯ ಮುಚ್ಚಿಕೊಂಡೇ ಇರುತ್ತದೆ.

- ಏನೇನೆಲ್ಲ ಆಗಬೇಕಿದೆ
- ಬಸ್ ನಿಲ್ದಾಣದಲ್ಲಿ ಸ್ವಚ್ಛತೆಗೆ ಆದ್ಯತೆ ನೀಡಬೇಕು.
- ಬಿತ್ತಿ ಪತ್ರ ಸಹಿತ ಪೋಸ್ಟರ್ ಅಂಟಿಸಲು ಬಿಡಬಾರದು.
- ಪ್ರಯಾಣಿಕರಿಗೆ ಕುಳಿತುಕೊಳ್ಳಲು ಉತ್ತಮ ವ್ಯವಸ್ಥೆ ರೂಪಿಸಬೇಕಾಗಿದೆ.

ನಿರ್ವಹಣೆ ಕೊರತೆ: ಬಸ್ ನಿಲ್ದಾಣದಲ್ಲಿ ಕಾಯುವ ಪ್ರಯಾಣಿಕರು ಕುಳಿತುಕೊಳ್ಳಲು ವ್ಯವಸ್ಥೆ ಇದ್ದರೂ ನಿರ್ವಹಣೆ ಇಲ್ಲದೆ ಇರುವುದರಿಂದ ಪ್ರಯಾಣಿಕರು ಅದನ್ನು ಸಮರ್ಪಕವಾಗಿ ಬಳಸಲಾಗದ ಸ್ಥಿತಿಯಲ್ಲಿದೆ. ನಿರಂತರ ನಿರ್ವಹಣೆಗೆ ಸ್ಥಳೀಯ ಆಡಳಿತ ಮೇಲ್ವಿಚಾರಣೆ ನಡೆಸಬೇಕು ಎಂಬುದು ಸಾರ್ವಜನಿಕರ ಆಗ್ರಹವಾಗಿದೆ.

> **ಈಗಾಗಲೇ ಆಡಳಿತ ಅಧಿಕಾರಿಗಳು ಹಾಗೂ ಜಿಲ್ಲಾಧಿಕಾರಿಗಳ ಗಮನಕ್ಕೆ ತರಲಾಗಿದೆ ಸಂಬಂಧಪಟ್ಟವರಿಗೆ ನೋಟಿಸ್ ಜಾರಿ ಮಾಡಿದ್ದು ಶೀಘ್ರ ಕ್ರಮ ಕೈಗೊಳ್ಳಲಾಗುತ್ತದೆ.**
> ■ ಷಣ್ಮುಖ ಸರಸ್ವತಿ ಸುಂದರಿ, ಮುಖ್ಯ ಅಧಿಕಾರಿ ಪಟ್ಟಣ ಪಂಚಾಯಿತಿ ಶೃಂಗೇರಿ.

ದಿಗಂತ ವಿಶೇಷ

ನಾಮಫಲಕಗಳಿಲ್ಲ : ಆಯಾ ಸ್ಥಳಗಳಿಗೆ ಹೋಗಲು ಬಸ್ ನಿಲಗಡೆ ಸ್ಥಳದಲ್ಲಿ ಈ ಹಿಂದೆ ನಾಮಫಲಕವಿತ್ತು. ಈಗ ಆ ಫಲಕಗಳೇ ಕಣ್ಮರೆಯಾಗಿದೆ. ಇರುವ ಒಂದೆರಡು ಫಲಕಗಳು ಶಿಥಿಲಾವಸ್ಥೆಗೆ ತಲುಪಿದೆ. ಆದರೆ ಜಾಹೀರಾತು ಫಲಕಗಳು ಯಥೇಚ್ಛವಾಗಿ ರಾರಾಜಿಸುತ್ತಿದೆ.

ಉಚಿತ ಬ್ಯೂಟಿ ಪಾರ್ಲರ್ ತರಬೇತಿ

ಚಿಕ್ಕಮಗಳೂರು: ಬೆಂಗಳೂರು ಗ್ರಾಮಾಂತರ ಜಿಲ್ಲೆ ಹೊಸಕೋಟೆ ತಾಲೂಕು ಸೊಣ್ಣಹಳ್ಳಿಪುರದಲ್ಲಿರುವ ಕೆನರಾ ಬ್ಯಾಂಕ್ ಗ್ರಾಮೀಣ ಸ್ವ ಉದ್ಯೋಗ ತರಬೇತಿ ಸಂಸ್ಥೆಯಲ್ಲಿ ಏಪ್ರಿಲ್ ಒಂದರಿಂದ 35 ದಿನಗಳ ಕಾಲ ನಿರುದ್ಯೋಗಿ ಮಹಿಳೆಯರಿಗೆ ಉಚಿತ ಬ್ಯೂಟಿ ಪಾರ್ಲರ್ ತರಬೇತಿ ಶಿಬಿರವನ್ನು ಏರ್ಪಡಿಸಿದೆ.

ಸ್ವಯಂ ಉದ್ಯೋಗಿಗಳಾಗಲು ಬಯಸುವ 18 ರಿಂದ 45 ವರ್ಷ ವಯಸ್ಸಿನ ಕರ್ನಾಟಕ ರಾಜ್ಯದ ಯಾವುದೇ ಜಿಲ್ಲೆಯ ನಿರುದ್ಯೋಗಿ ಮಹಿಳೆಯರು ಈ ಶಿಬಿರದಲ್ಲಿ ಪಾಲ್ಗೊಳ್ಳಬಹುದು. ಈ ಶಿಬಿರದ ಸಮಯದಲ್ಲಿ ತರಬೇತಿ, ಊಟ ಹಾಗೂ ವಸತಿ ಸೌಕರ್ಯಗಳನ್ನು ಉಚಿತವಾಗಿ ಶಿಬಿರಾರ್ಥಿಗಳಿಗೆ ಕಲ್ಪಿಸಲಾಗುವುದು. ಗ್ರಾಮೀಣ ಭಾಗದ ಬಿಪಿಎಲ್ ಅಭ್ಯರ್ಥಿಗಳಿಗೆ ಮೊದಲ ಆದ್ಯತೆ ನೀಡಲಾಗುವುದು. ಅಭ್ಯರ್ಥಿಗಳು ಸ್ಥಳೀಯ ಭಾಷೆ ಬಲ್ಲವರಾಗಿದ್ದು, ಕನ್ನಡ ಓದಲು ಮತ್ತು ಬರೆಯಲು ತಿಳಿದಿರಬೇಕು. ತರಬೇತಿ ನಂತರ ಕೇಂದ್ರ ಸರ್ಕಾರದ ಗ್ರಾಮೀಣ ಸಚಿವಾಲಯದಿಂದ ಪ್ರಮಾಣ ಪತ್ರವನ್ನು ವಿತರಿಸಲಾಗುವುದು.

ಆಸಕ್ತರು ಮಾರ್ಚ್ 23ರ ಬೆಳಿಗ್ಗೆ 10 ಗಂಟೆಗೆ ಕೆನರಾ ಬ್ಯಾಂಕ್ ಗ್ರಾಮೀಣ ಸ್ವ ಉದ್ಯೋಗ ತರಬೇತಿ ಸಂಸ್ಥೆ, ಸೊಣ್ಣಹಳ್ಳಿಪುರ, ಹಸಿಗಾಳ(ಅಂಚೆ), ಹೊಸಕೋಟೆ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇಲ್ಲಿ ನಡೆಯುವ ತರಬೇತಿಗೆ ನೇರವಾಗಿ ವಿದ್ಯಾರ್ಹತೆ ಮತ್ತು ವಿಳಾಸ ದಾಖಲಾತಿಗಳೊಂದಿಗೆ ಹಾಜರಾಗುವಂತೆ ಸೂಚಿಸಲಾಗಿದೆ. ಸಂದರ್ಶನಕ್ಕೆ ಹಾಜರಾಗಲು ಅಸಾಧ್ಯವಾದಲ್ಲಿ ಮಾರ್ಚ್ 23 ರೊಳಗೆ ಸಂಸ್ಥೆಯನ್ನು (ದೂರವಾಣಿ ಸಂಖ್ಯೆ 8970476050, 9591514154) ಗಳಿಗೆ ಸಂಪರ್ಕಿಸಿ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬಹುದು.

ಕಿರುಸುದ್ದಿ

ಕ್ರಿಕೆಟ್ ಪಂದ್ಯ: ವಿಜೇತರಿಗೆ ಬಹುಮಾನ ವಿತರಣೆ

• **ಮಲೇಬೆನ್ನೂರು:** ಕುಂಬಳೂರು ಗ್ರಾಮದ ಹೊರ ವಲಯದಲ್ಲಿ ಅಂಜನಿ ಪುತ್ರ ಕ್ರಿಕೆಟರ್ಸ್ ವತಿಯಿಂದ ಹಮ್ಮಿಕೊಂಡಿದ್ದ ಕುಂಬಳೂರು ಪ್ರೀಮಿಯರ್ ಲೀಗ್ ಪಂದ್ಯಾವಳಿಯ ಸಮಾರೋಪ ಸಮಾರಂಭದಲ್ಲಿ ವಿಜೇತ ತಂಡಗಳಿಗೆ ಬಹುಮಾನ ವಿತರಣೆ ಮಾಡಲಾಯಿತು.

ಪ್ರಥಮ ಬಹುಮಾನ ಪಡೆದ ಕುಂಬಳೂರಿನ ಗೋಲ್ಡನ್ ಸ್ಟ್ರೈಕರ್ಸ್ ತಂಡಕ್ಕೆ 15 ಸಾವಿರ ರೂ. ನಗದು, ಪಾರಿತೋಷಕ ಹಾಗೂ ದ್ವಿತೀಯ ಬಹುಮಾನ ಪಡೆದ ಕುಂಬಳೂರಿನ ಬ್ರದರ್‌ಹುಡ್ ತಂಡಕ್ಕೆ 10 ಸಾವಿರ ರೂ. ನಗದು, ಪಾರಿತೋಷಕ ಹಾಗೂ ತೃತೀಯ ಬಹುಮಾನ ಪಡೆದ ಕುಂಬಳೂರು ಕಾ ಕಿಂಗ್ ತಂಡಕ್ಕೆ 5 ಸಾವಿರ ರೂ. ನಗದು, ಪಾರಿತೋಷಕವನ್ನು ನೀಡಲಾಯಿತು. ಈ ಸಂದರ್ಭದಲ್ಲಿ ಹರಿಹರ ತಾಲೂಕು ಕಿಸಾನ್ ಕಾಂಗ್ರೆಸ್ ಅಧ್ಯಕ್ಷ ಎಂ. ವಾಸುದೇವಮೂರ್ತಿ, ಗ್ರಾಪಂ ಮಾಜಿ ಅಧ್ಯಕ್ಷ ಬಿ. ಕೆಂಪೇಗೌಡ, ಪತ್ರಕರ್ತ ಜಿಗಳಿ ಪ್ರಕಾಶ್ ಮತ್ತು ಮಲೇಬೆನ್ನೂರಿನ ಕೆ.ಪಿ. ಗಂಗಾಧರ್, ಭೋವಿ ಕುಮಾರ್, ಪಿ.ಆರ್. ಕುಮಾರ್, ಶಿವ ಬ್ಯಾಂಕ್ ಮೋಹನ್, ಅಂಜನಿ ಪುತ್ರ ಕ್ರಿಕೆಟರ್ಸ್ ಹೆಚ್. ದೇವರಾಜ್, ಕುಮಾರ್, ಪ್ರಶಾಂತ್, ಸಿದ್ದೇಶ್, ನವೀನ್, ಆಂಜನೇಯ, ಸೀನಪ್ಪ, ರಾಕೇಶ್, ತರುಣ್, ಕಡೂರು ಮಂಜುನಾಥ್, ಕಿರಣ್ ಹಾಜರಿದ್ದರು.

ಇಂದು ರಕ್ತದಾನ ಶಿಬಿರ

• **ನ್ಯಾಮತಿ:** ತಾಲೂಕಿನ ದೊಡ್ಡೆತ್ತಿನಹಳ್ಳಿ ಗ್ರಾಮದಲ್ಲಿ ಶ್ರೀ ನಾಗಯಲ್ಲಮ್ಮ ದೇವಿ ಮತ್ತು ತರೋಟಯಲ್ಲಮ್ಮ ದೇವಿಯ ಪೂಜಾ ಮಹೋತ್ಸವ ಕಾರ್ಯಕ್ರಮದ ನಿಮಿತ್ತ ಮಾ.11ರ ಬುಧವಾರದಂದು ರಕ್ತದಾನ ಶಿಬಿರವನ್ನು ಏರ್ಪಡಿಸಲಾಗಿದೆ. ಬೆಳಿಗ್ಗೆ 9ರಿಂದ ಮಧ್ಯಾಹ್ನ 3 ಘಂಟೆಯವರೆಗೆ ದಾವಣಗೆರೆ ಚಿಗಟೇರಿ ಜಿಲ್ಲಾ ಆಸ್ಪತ್ರೆಯಲ್ಲಿ ರಕ್ತದಾನ ಶಿಬಿರವನ್ನು ಏರ್ಪಡಿಸಲಾಗಿದೆ.

ಸಿಸಿ ರಸ್ತೆ ಕಾಮಗಾರಿ ಆರಂಭ

• **ನ್ಯಾಮತಿ:** ಪಟ್ಟಣದ ತಿಲಕ್ ರಸ್ತೆಯ ಅಗಲೀಕರಣಕ್ಕೆ ಅಲ್ಲಿನ ನಿವಾಸಿಗಳು ಹಸಿರು ನಿಶಾನೆ ತೋರಿದ್ದು, ಪಟ್ಟಣದ ಎಲ್ಲಾ ಮುಖ್ಯ ರಸ್ತೆಗಳು 2016ರಲ್ಲಿ ಅಗಲೀಕರಣವಾಗಿ ಸಿಸಿ ರಸ್ತೆಗಳು ಆಗಿದ್ದವು. ತಿಲಕ್ ರಸ್ತೆಗಳು ಮಾತ್ರ ಆಗಿದ್ದಿಲ್ಲ, ಈಗ ಆ ಬೀದಿಯ ನಿವಾಸಿಗಳು ಅಗಲಿಕರಣಕ್ಕೆ ಒಪ್ಪಿಗೆ ನೀಡಿದ ನಂತರ ಸಿಸಿ ರಸ್ತೆಗೆ ಕಾಮಗಾರಿ ನಡೆಯುತ್ತಿದೆ. ಆ ಭಾಗದಲ್ಲಿ ಎರಡು ಕಡೆ ಹೊಸದಾಗಿ ವಿದ್ಯುತ್ ಕಂಬ ಹಾಕಲಾಗುತ್ತಿದೆ.

ಸಮರ್ಪಕ ವಿದ್ಯುತ್ ಪೂರೈಕೆಗೆ ಆಗ್ರಹಿಸಿ ಪಾದಯಾತ್ರೆ ನಾಳೆ

• **ಜಗಳೂರು :** ಸಮರ್ಪಕ ವಿದ್ಯುತ್ ಪೂರೈಕೆಗೆ ಆಗ್ರಹಿಸಿ ಮಾರ್ಚ್ 12ರಂದು ಬೃಹತ್ ಪಾದಯಾತ್ರೆ ಹಮ್ಮಿಕೊಳ್ಳಲಾಗಿದ್ದು ರೈತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗು ಹಸಿರು ಸೇನೆ ಹುಚ್ಚವ್ವನಹಳ್ಳಿ ಮಂಜುನಾಥ್ ಬಣದ ತಾಲ್ಲೂಕು ಪ್ರಧಾನ ಕಾರ್ಯದರ್ಶಿ ಬೈರನಾಯಕನ ಹಳ್ಳಿ ರಾಜು ಮನವಿ ಮಾಡಿದರು ಪಟ್ಟಣದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ಹಗಲು ವೇಳೆ 8 ತಾಸು ವಿದ್ಯುತ್ ಪೂರೈಕೆ ಮಾಡಬೇಕಿತ್ತು. ಆದರೆ ಕೇವಲ 5 ತಾಸು ವಿದ್ಯುತ್ ನೀಡುವ ಮೂಲಕ ರೈತರಿಗೆ ವಂಚನೆ ಮಾಡುತ್ತಿದ್ದಾರೆ. ರಾಜಕಾರಣಿಗಳ ಇಚ್ಛಾಶಕ್ತಿ ಕೊರತೆಯಿಂದ 220 ವಿದ್ಯುತ್ ಸಂಗ್ರಹಣ ಕೇಂದ್ರ ಸ್ಥಾಪನೆ ವಿಳಂಬವಾಗುತ್ತಿದೆ. ಇದರಿಂದ ರೈತರಿಗೆ ತೊಂದರೆಯಾಗಿದ್ದು ದಿನ ದೂಡುವ ಬದಲು ರೈತರ ಹಿತ ಕಾಪಾಡಬೇಕು. ಆದಕ್ಕಾಗಿ ಮಾ. 12ರಂದು ಪಟ್ಟಣದ ಪ್ರವಾಸಿ ಮಂದಿರದಿಂದ ಬೆಸ್ಕಾಂ ಕಚೇರಿವರೆಗೂ ಪಾದಯಾತ್ರೆ ಮಾಡಲಾಗುವುದು ಎಂದು ತಿಳಿಸಿದರು ಈ ಸಂದರ್ಭದಲ್ಲಿ ಮುಖಂಡರಾದ ಮಡ್ರಳ್ಳಿ ತಿಪ್ಪೇಸ್ವಾಮಿ, ಪರುಶುರಾಮಪ್ಪ, ಕೆಚ್ಚೇನಹಳ್ಳಿ ಮಲ್ಲಪ್ಪ , ಹಾಲೇಶ್, ರಂಗಪ್ಪ ಇದ್ದರು

ಶೇ.20 ರಿಯಾಯಿತಿ

• **ದಾವಣಗೆರೆ:** ಲಿಡಕರ್ ನಿಗಮದಿಂದ ಯುಗಾದಿ ಮತ್ತು ರಂಜಾನ್ ಹಬ್ಬ ಹಾಗೂ ಶೀರುವಳಿ ಮಾರಾಟ ಪ್ರಯುಕ್ತ ಮಾರ್ಚ್ 25 ರವರೆಗೆ ಚರ್ಮದ ಉತ್ಪನ್ನಗಳ ಮೇಲೆ ಶೇ.20ರಷ್ಟು ರಿಯಾಯಿತಿ ಮಾರಾಟ ಇರುತ್ತದೆ. ನಗರದ ಅಕ್ಕಮಹಾದೇವಿ ರಸ್ತೆ ಹಾಗೂ ಕೆಎಸ್ಸಾರ್ಟಿಸಿ ಬಸ್ ನಿಲ್ದಾಣದ ಜಗಳೂರು ಪ್ಲಾಟಫಾರಂ ಮಳಿಗೆ ನಂಬರ್ 11ರಲ್ಲಿ ಅಪ್ಪಟ ಚರ್ಮದ ಪಾದರಕ್ಷೆ, ಶೂ, ಬೆಲ್ಟ್, ಪರ್ಸ್, ವ್ಯಾನಿಟಿ ಬ್ಯಾಗ್ ಲಭ್ಯವಿವೆ. ಗ್ರಾಹಕರು ಇದರ ಪ್ರಯೋಜನ ಪಡೆಯಬೇಕೆಂದು ಸಂಸ್ಥೆಯ ಜಿಲ್ಲಾ ವ್ಯವಸ್ಥಾಪಕರು ತಿಳಿಸಿದ್ದಾರೆ.

ತರಬೇತಿ ಶಿಬಿರಕ್ಕೆ ಆಹ್ವಾನ

• **ದಾವಣಗೆರೆ:** ಜಿಲ್ಲಾ ಪೊಲೀಸ್ ವತಿಯಿಂದ ನಾಗರಿಕ ಬಂದೂಕು ತರಬೇತಿ ಶಿಬಿರವನ್ನು ಮಾರ್ಚ್ ತಿಂಗಳಿನಲ್ಲಿ ನಗರದ ಜಿಲ್ಲಾ ಸಶಸ್ತ್ರ ಮೀಸಲು ಪೊಲೀಸ್ ಪಡೆಯ ಕವಾಯತು ಮೈದಾನದಲ್ಲಿ ಏರ್ಪಡಿಸಲಾಗಿದೆ. ಜಿಲ್ಲೆಯ ಆಸಕ್ತ ನಾಗರೀಕರು ಮಾ.15ರೊಳಗೆ ಹತ್ತಿರದ ಪೊಲೀಸ್ ಠಾಣೆ ಸಂಪರ್ಕಿಸಿ, ಲಿಖಿತ ಮನವಿಗಳನ್ನು ಪೂರಕ ದಾಖಲೆಗಳೊಂದಿಗೆ ಸಲ್ಲಿಸಿ, ಪರಿಶೀಲನಾ ವರದಿಯೊಂದಿಗೆ ಅರ್ಜಿಗಳನ್ನು ಪೊಲೀಸ್ ಉಪಾಧೀಕ್ಷಕರು, ಜಿಲ್ಲಾ ಸಶಸ್ತ್ರ ಮೀಸಲು ಪೊಲೀಸ್ ಪಡೆ, ಪಿ.ಜೆ ಬಡಾವಣೆ, ದಾವಣಗೆರೆ ಇವರಿಗೆ ಸಲ್ಲಿಸಲು ಸೂಚಿಸಿದೆ. ಹೆಚ್ಚಿನ ಮಾಹಿತಿಗಾಗಿ ದೂ:08192-272005 ಸಂಪರ್ಕಿಸಿರಿ.

ಸಾಂತ್ವನ ಮಹಿಳಾ ಕೇಂದ್ರ, ಹೆಣ್ಣು ಮಕ್ಕಳಿಗೆ ತವರುಮನೆ ಇದ್ದಂತೆ: ಅನಿತಾ ಪಾಟೀಲ್



• **ದಾವಣಗೆರೆ:** ಸಂಕಷ್ಟದಲ್ಲಿರುವ ಮಹಿಳೆಯರ ಸಮಸ್ಯೆಗಳಿಗೆ ಪರಿಹಾರ ಒದಗಿಸುವ ಕಾರ್ಯದಲ್ಲಿ ಹೋರಾಡುತ್ತಿರುವ ಸಾಂತ್ವನ ಮಹಿಳಾ ಕೇಂದ್ರವು ಹೆಣ್ಣುಮಕ್ಕಳಿಗೆ ತವರುಮನೆ ಇದ್ದಂತೆ ಎಂದು ಕೇಂದ್ರದ ಅಧ್ಯಕ್ಷೆ ಅನಿತಾ ಪಾಟೀಲ್ ಹೇಳಿದರು.

ಮಂಗಳವಾರ ಇಲ್ಲಿನ ವಿದ್ಯಾನಗರದ ವಿನಾಯಕ ಬಡಾವಣೆಯಲ್ಲಿ ವಿನೂತನ ಮಹಿಳಾ ಸಮಾಜ ಆಯೋಜಿಸಿದ್ದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿ ಅವರು ಮಾತನಾಡಿದರು.

ಸಾಂತ್ವನ ಕೇಂದ್ರಕ್ಕೆ ಬರುವ ಮಹಿಳೆಯರ ವೈಯಕ್ತಿಕ ಮಾಹಿತಿಯನ್ನು ಹೊರಗೆ ಬಿಟ್ಟು ಕೊಡದೆ ಸಂಪೂರ್ಣ ಗೌಪ್ಯವಾಗಿಡಲಾಗುತ್ತದೆ. ಸಂಕಷ್ಟದಲ್ಲಿರುವ ಮಹಿಳೆಯರಿಗೆ ಧೈರ್ಯ ತುಂಬಿ ಅವರ ಸಮಸ್ಯೆಗಳಿಗೆ ಪರಿಹಾರ ನೀಡುವುದೇ ನಮ್ಮ ಕೇಂದ್ರದ ಮುಖ್ಯ ಉದ್ದೇಶವಾಗಿದೆ ಎಂದು ಹೇಳಿದರು.

ನನಗೆ ದೊಡ್ಡ ಮಟ್ಟದ ಭಾಷಣ ಮಾಡಲು ಬರುವುದಿಲ್ಲ, ಜನರ ಸಮಸ್ಯೆಗಳನ್ನು ಕೇಳಿ ಪರಿಹಾರ ನೀಡುವುದು ನನ್ನ ಕಾರ್ಯವಾಗಿದೆ. ಆರಂಭದಲ್ಲಿ ವಿಕಲಚೇತನರ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿದ್ದ ನನಗೆ ನಂತರ ದಿನಗಳಲ್ಲಿ ಮಹಿಳೆಯರ ಪರವಾಗಿ ಹೋರಾಡುವ ಅವಕಾಶ ಸಿಕ್ಕಿತು. ಅಂದಿನಿಂದ ಇಂದಿನವರೆಗೆ ನಿರಂತರವಾಗಿ ಮಹಿಳೆಯರ ಸಮಸ್ಯೆಗಳಿಗೆ ಸ್ಪಂದಿಸುತ್ತಿದ್ದೇನೆ ಎಂದರು.

2012ರಿಂದ ಇಂದಿನವರೆಗೆ ಸಾವಿರಾರು ಪ್ರಕರಣಗಳನ್ನು ನೋಡಿಕೊಂಡಿದ್ದು, ಶೇ.90ಕ್ಕೂ ಹೆಚ್ಚು ಪ್ರಕರಣಗಳನ್ನು ಮಾತುಕತೆಯ ಮೂಲಕ ಬಗೆಹರಿಸಲಾಗಿದೆ. ಮಹಿಳೆಯರಿಗೆ ಅನಗತ್ಯವಾಗಿ ಹಣ ಖರ್ಚು ಮಾಡಿ ಕೋರ್ಟ್ ಅಥವಾ ಪೊಲೀಸ್ ಠಾಣೆ ಮೆಟ್ಟಿಲೇರುವ ಅಗತ್ಯವಿಲ್ಲ, ನಮ್ಮ ಎಲ್ಲಾ ಸೇವೆಗಳು ಸಂಪೂರ್ಣ ಉಚಿತವಾಗಿವೆ ಎಂದು ಅವರು ತಿಳಿಸಿದರು.

ಕಾರ್ಯಕ್ರಮದ ಅಂಗವಾಗಿ ಮಹಿಳೆಯರಿಗಾಗಿ ಐದು ಸುತ್ತಿನ ವಿವಿಧ ಸ್ಪರ್ಧೆಗಳು ಆಯೋಜಿಸಲ್ಪಟ್ಟಿದ್ದು, ವಿಜೇತರಿಗೆ ಬಹುಮಾನ ವಿತರಿಸಲಾಯಿತು.

ಈ ಸಂದರ್ಭದಲ್ಲಿ ವಿನೂತನ ಮಹಿಳಾ ಸಮಾಜದ ಪದಾಧಿಕಾರಿಗಳಾದ ಹೇಮಾ ಗಂಗೇಶ್ ಶೆಟ್, ವಿ.ಜೆ.ಸುಮತಿ ಜಯಪ್ಪ, ಟಿ.ನೀಲಾಂಬಿಕೆ, ವಿನೋದ ಅಳಗಣ್ಣನವರ್ ಹಾಗೂ ಸ್ಥಳೀಯ ಮಹಿಳೆಯರು ಉಪಸ್ಥಿತರಿದ್ದರು.

ಪಾಂಡೋಮಟ್ಟಿ ವಿರಕ್ತ ಮಠದ ಗುರುಬಸವ ಸ್ವಾಮೀಜಿ ಮಾಹಿತಿ

ರಾಜ್ಯಾದ್ಯಂತ ಜನಜಾಗೃತಿ ಆಂದೋಲನ



• **ಚನ್ನಗಿರಿ:** ನಮ್ಮ ನಡೆ-ಸರ್ವೋದಯದ ಕಡೆಗೆ ಜನ ಜಾಗೃತಿ ಆಂದೋಲನ ಕಾರ್ಯಕ್ರಮವನ್ನು ಮೇ 1ರಿಂದ 16ರವರೆಗೆ ರಾಜ್ಯದ ಎಲ್ಲ ಜಿಲ್ಲೆಗಳಲ್ಲೂ ನಡೆಸಲು ಸರ್ವೋದಯ ಸಂಘಟನೆ ತೀರ್ಮಾನಿಸಿದೆ ಎಂದು ಪಾಂಡೋಮಟ್ಟಿ ವಿರಕ್ತ ಮಠದ ಗುರುಬಸವ ಸ್ವಾಮೀಜಿ ತಿಳಿಸಿದರು.

ತಾಲೂಕಿನ ಪಾಂಡೋಮಟ್ಟಿ ವಿರಕ್ತ ಮಠದಲ್ಲಿ ಸರ್ವೋದಯ ಸಂಘಟನೆಯಿಂದ ಜನ ಜಾಗೃತಿ ಆಂದೋಲನ ಅಂಗವಾಗಿ ಮಂಗಳವಾರ ನಡೆದ ಪೂರ್ವಭಾವಿ ಸಮಾಲೋಚನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಮೇ 1ರಿಂದ ಮೇ 16ರವರೆಗೆ ರಾಜ್ಯದ 30 ಜಿಲ್ಲೆಗಳಲ್ಲಿ ಬೆಳಗಿನ ವೇಳೆ ಒಂದು ಜಿಲ್ಲೆ ಹಾಗೂ ಸಂಜೆಯ ವೇಳೆ ಒಂದು ಜಿಲ್ಲೆಯಲ್ಲಿ ಜನ ಜಾಗೃತಿ ಆಂದೋಲನ ಕಾರ್ಯಕ್ರಮವನ್ನು ನಡೆಸಲಾಗುತ್ತದೆ. ಪ್ರತಿ ಕಾರ್ಯಕ್ರಮದಲ್ಲೂ ನಾಡಿನ ವಿವಿಧ ತಜ್ಞರು ಹಾಗೂ ಸಂಪನ್ಮೂಲ ವ್ಯಕ್ತಿಗಳಿಂದ ಉಪನ್ಯಾಸವನ್ನು ಏರ್ಪಡಿಸಲಾಗುತ್ತದೆ. ಈ ನಾಡನ್ನು ಸರ್ವೋದಯ ನಾಡನ್ನಾಗಿ ಮಾಡಲು ಪ್ರತಿಯೊಬ್ಬರ ಸಹಕಾರ ತುಂಬಾ ಅಗತ್ಯವಾಗಿದೆ ಎಂದರು.

ಪರಿಸರ, ಕೃಷಿ, ಆರೋಗ್ಯ, ಶಿಕ್ಷಣ ಹಾಗೂ ಆಡಳಿತ ಇವು ಸರ್ವೋದಯದ ಆಧಾರ ಸ್ತಂಭಗಳಾಗಿವೆ. ಪರಿಸರ ಅಸಮತೋಲನ ಹಾಗೂ ಮಾನವನ ದುರಾಸೆಯಿಂದ ಪರಿಸರ ಹಾಳಾಗುತ್ತಿದೆ. ಜಾಗತಿಕ ತಾಪಮಾನ ತುಂಬಾ ಹೆಚ್ಚುತ್ತಿರುವುದು ಕಳವಳಕಾರಿಯಾಗಿದೆ. ಹಾಗಾಗಿ ಸಮಯಕ್ಕೆ ಸರಿಯಾಗಿ ಮಳೆ ಬಾರದೇ ಕೆರೆಕಟ್ಟೆಗಳು ಖಾಲಿಯಾಗಿ ಅಂತರ್ಜಲ ಮಟ್ಟ ಕುಸಿತವನ್ನು ಕಾಣುವಂತಾಗಿದೆ. ರೈತರು ಏಕ ಪದ್ಧತಿ ಬೆಳೆಗಳಿಗೆ ಮಾರುಹೋಗಿ ತಮ್ಮ ಕೃಷಿ ಭೂಮಿಯ ಫಲವತ್ತತೆಯನ್ನು ಹಾಳು ಮಾಡಿಕೊಳ್ಳುತ್ತಿದ್ದಾರೆ ಎಂದರು.

ಸಾಣೇಹಳ್ಳಿಯ ಡಾ. ಪಂಡಿತಾರಾಧ್ಯ ಶಿವಾಚಾರ್ಯಸ್ವಾಮೀಜಿ ಮಾತನಾಡಿ, ಆರೋಗ್ಯದ ಬಗ್ಗೆ ಜನರು ನಿರ್ಲಕ್ಷ್ಯ ಭಾವವನ್ನು ತೋರುತ್ತಿದ್ದು, ಇದರಿಂದ ಅನೇಕ ರೋಗ-ರುಜಿನಗಳಿಗೆ ತುತ್ತಾಗಿ ಪ್ರಾಣವನ್ನು ಕಳೆದುಕೊಳ್ಳುತ್ತಿದ್ದಾರೆ. ಶಿಕ್ಷಣ ಎನ್ನುವುದು ನಿಂತ ನೀರಾಗಿದೆ. ವೈಚಾರಿಕತೆ, ಮಾನವೀಯ ಮೌಲ್ಯಗಳನ್ನು ಬಿತ್ತುವ ಶಿಕ್ಷಣ ನೀಡುವಲ್ಲಿ ವಿಫಲರಾಗಿದ್ದೇವೆ. ಅಂಕ ಗಳಿಕೆಗೆ ಹೆಚ್ಚು ಪ್ರಾಮುಖ್ಯತೆಯನ್ನು ನೀಡಲಾಗುತ್ತಿದೆ. ಹಾಗಾಗಿ ಇವೆಲ್ಲದರ ಬಗ್ಗೆ ರಾಜ್ಯದ ಜನರಲ್ಲಿ ಜಾಗೃತಿ ಮೂಡಿಸಲು ನಮ್ಮ ನಡೆ-ಸರ್ವೋದಯ ಕಡೆಗೆ ಜನ ಜಾಗೃತಿ ಆಂದೋಲನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

ಜನ ಜಾಗೃತಿ ಆಂದೋಲನದಲ್ಲಿ ನಾಡಿನ ಸಮಾನ ಮನಸ್ಕ ಮಠಾಧೀಶರು, ಚಿಂತಕರು, ಸಾಹಿತಿಗಳು, ಶಿಕ್ಷಣ ತಜ್ಞರು, ರಾಜಕೀಯ ಮುಖಂಡರು ಭಾಗವಹಿಸಲಿದ್ದಾರೆ. ನಮ್ಮ ನಾಡನ್ನು ಸರ್ವೋದಯ ನಾಡನ್ನಾಗಿ ನಿರ್ಮಾಣ ಮಾಡಬೇಕಾಗಿದೆ. ಆಸಕ್ತಿವುಳ್ಳವರು ಹೆಚ್ಚಿನ ಸಂಖ್ಯೆಯಲ್ಲಿ ಈ ಆಂದೋಲನದಲ್ಲಿ ಭಾಗವಹಿಸಬೇಕು ಎಂದು ಮನವಿ ಮಾಡಿದರು.

ಮಾಜಿ ಶಾಸಕ ಮಹಿಮ ಪಟೇಲ್, ಬಸವಲಿಂಗಪ್ಪ ಶಿವನಕೆರೆ, ಕೆಆರ್‌ಎಸ್ ಪಕ್ಷದ ಸಂಸ್ಥಾಪಕ ಅಧ್ಯಕ್ಷ ರವಿಕೃಷ್ಣರೆಡ್ಡಿ, ಜೀವ ವೈವಿಧ್ಯ ನಿಗಮದ ಅಧ್ಯಕ್ಷ ವಡ್ನಾಳ್ ಜಗದೀಶ್ ಉಪಸ್ಥಿತರಿದ್ದರು. ಬೆಟ್ಟದಹಳ್ಳಿ ಗವಿಮಠದ ಚಂದ್ರಶೇಖರ ಸ್ವಾಮೀಜಿ, ಮಾಡಾಳು ನಿರಂಜನ ಪೀಠದ ರುದ್ರಮುನಿ ಸ್ವಾಮೀಜಿ, ಚಿಕ್ಕಮಗಳೂರಿನ ಜಯಬಸವನಂದಾ ಸ್ವಾಮೀಜಿ, ಹೊಳಲ್ಕೆರೆ ಒಂಟಿಕಂಬದ ಮಠದ ತಿಪ್ಪೇಸ್ವಾಮೀಜಿ, ಚನ್ನಗಿರಿ ಹಿರೇಮಠದ ಶಿವಶಾಂತವೀರ ಶಿವಾಚಾರ್ಯ ಸ್ವಾಮೀಜಿ ಸಭೆಯಲ್ಲಿ ಭಾಗವಹಿಸಿದ್ದರು.

ಬೆನ್ನಿಗೆ ಚೂರಿ ಹಾಕುವ ಸಂಸ್ಕೃತಿ ಜಿಲ್ಲಾ ಕಾಂಗ್ರೆಸ್‌ನಲ್ಲಿದೆ: ಜಾಧವ್



• **ದಾವಣಗೆರೆ:** ರಾಜಕೀಯದಲ್ಲಿ ಅಧಿಕಾರಕ್ಕಾಗಿ ಹೊಡೆದಾಡುವುದು, ಬೆನ್ನಿಗೆ ಚೂರಿ ಹಾಕುವ ಸಂಸ್ಕೃತಿ ದಾವಣಗೆರೆ ಜಿಲ್ಲಾ ಕಾಂಗ್ರೆಸ್ ಪಕ್ಷದಲ್ಲಿ ಇದೆಯೇ ಹೊರತು ಬಿಜೆಪಿಯಲ್ಲಿ ಇಲ್ಲ ಎಂದು ಬಿಜೆಪಿಯ ಮಾಜಿ ಜಿಲ್ಲಾಧ್ಯಕ್ಷ ಯಶವಂತರಾವ್ ಜಾಧವ್ ತಿಳಿಸಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಿಜೆಪಿ ಆಂತರಿಕ ವಿಷಯಗಳ ಕುರಿತು ಜಿಲ್ಲಾ ಉಸ್ತುವಾರಿ ಸಚಿವರು ಬಿಜೆಪಿಯವರು ಹೊಡೆದಾಡಿಕೊಳ್ಳುತ್ತಿದ್ದಾರೆ ಎನ್ನುವ ಹೇಳಿಕೆ ನೀಡಿದ್ದಾರೆ. ಹಾಗೆ ನೋಡಿದರೆ ನಿಮ್ಮ ಮುಂದೆ ಯಾರನ್ನು ಬೆಳೆಯಲು ಬಿಡದೇ ನಿಮ್ಮ ಪಕ್ಷದಲ್ಲಿ ನಾಯಕತ್ವ ತೋರಿದವರನ್ನೆಲ್ಲಾ ತುಳಿದು ಮಟ್ಟಹಾಕಿರುವುದು ಎಲ್ಲರಿಗೂ ತಿಳಿದ ವಿಚಾರ ಎಂದರು.

ಬಿಜೆಪಿಯಲ್ಲಿ ಆಂತರಿಕ ಪ್ರಜಾಪ್ರಭುತ್ವ ಇದೆ. ಇಲ್ಲಿ ಸಾಮಾನ್ಯ ಕಾರ್ಯಕರ್ತರಿಗೂ ಮಾತನಾಡುವ ಹಕ್ಕಿದೆ. ಆದರೆ ನಿಮ್ಮ ಹಾಗೆ ಮಾತನಾಡಿದವರನ್ನೆಲ್ಲಾ ಮೂಲೆಗುಂಪು ಮಾಡುವ ಪಕ್ಷ ನಮ್ಮದಲ್ಲ, ಬಿಜೆಪಿಯಲ್ಲಿ ಅವರವರ ಜವಾಬ್ದಾರಿ ತಿಳಿದು ಕೆಲಸ ಮಾಡುತ್ತೇವೆ. ನಮ್ಮ ಪಕ್ಷದ ವಿಚಾರ ನಿಮಗೇಕೆ ಎಂದು ಪ್ರಶ್ನಿಸಿದರು.2008ರ ಚುನಾವಣೆಯಲ್ಲಿ ನೀವು ಅಲ್ಪ ಸಂಖ್ಯಾತ ಅಭ್ಯರ್ಥಿ ಸ್ಪರ್ಧಿಸಲು ಮುಂದಾದಾಗ ಏನೆಲ್ಲಾ ರಾದ್ಧಾಂತ ನಡೆಯಿತು ಎಂದು ಜಿಲ್ಲೆಯ ಜನರಿಗೆ ಗೊತ್ತಿದೆ. ಅಲ್ಪಸಂಖ್ಯಾತರಿಗೆ ಬಂದ ನಿಮ್ಮ ಪಕ್ಷದ ಬಿ ಫಾರಂ ಹರಿದು ಹಾಕಿ, ಅವರಿಗೆ ಅವಕಾಶವೇ ಸಿಗದಂತೆ ಮಾಡಿದ್ದೀರಿ, ನಿಮ್ಮಂತೆ ಹಿಟ್ಲರ್ ಸಂಸ್ಕೃತಿ ನಮ್ಮಲ್ಲಿ ಇಲ್ಲ ಎಂದು ಹೇಳಿದರು.

ಈ ಹಿಂದೆ ನಿಮ್ಮ ತಂದೆಗೆ ಕಾಂಗ್ರೆಸ್ ಪಕ್ಷದ ಟಿಕೆಟ್ ಸಿಗಲು ಅಬ್ದುಲ್ ಜಬ್ಬಾರ್ ಅವರೇ ಕಾರಣ ಎನ್ನುವುದನ್ನು ನೀವು ಮರೆತಂತೆ ಕಾಣುತ್ತದೆ. ರಾಜಕೀಯವಾಗಿ ಬೆಳೆಯುವವರನ್ನು ತುಳಿಯುವುದು ಎಷ್ಟು ಸರಿ, ಅಲ್ಪ ಸಂಖ್ಯಾತರನ್ನು ನಿಮ್ಮ ಚುನಾವಣೆಗೆ ಬಳಸಿ ಕೊಂಡಿದ್ದೀರಿ, ಇದೀಗ ಎಸ್.ಎಸ್. ಮಲ್ಲಿಕಾರ್ಜುನ ಹಾಗೂ ಅಲ್ಪ ಸಂಖ್ಯಾತರ ನಡೆಯುವ ಚುನಾವಣೆಯಂತಾಗಿದೆ ಎಂದರು.

ಯಾರನ್ನೂ ರಾಜಕೀಯವಾಗಿ ಬೆಳೆಯಲು ಬಿಡದ ಹಿಟ್ಲರ್‌ನಂತೆ ವರ್ತಿಸುತ್ತಾ ತೀರ ಕೆಳಮಟ್ಟದ ರಾಜಕಾರಣ ಮಾಡುತ್ತಿರುವ ನಿಮ್ಮ ಈ ವರ್ತನೆಯನ್ನು ತಿದ್ದಿಕೊಳ್ಳಿ, ಇಲ್ಲವಾದರೆ ಇದೀಗ ಎಚ್ಚೆತ್ತುಕೊಂಡಿರುವ ಅಲ್ಪಸಂಖ್ಯಾತರೇ ನಿಮಗೆ ಸ್ಪರ್ಧಿಗಳಾಗಲಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ಶಂಕರ್‌ಗೌಡ ಬಿರಾದಾರ್, ಟಿಂಕರ್ ಮಂಜಣ್ಣ, ಜೆ.ಕಿಶೋರ್ ಕುಮಾರ್, ಬಾಲಚಂದ್ರ ಶ್ರೇಷ್ಠಿ, ಹರೀಶ್, ಜಗದೀಶ್, ರಾಮಣ್ಣ, ಶಿವನಗೌಡ ಪಾಟೀಲ್ ಇತರರು ಇದ್ದರು.

ಸಾಗರಪೇಟೆ - ಸಂಗಾಹಳ್ಳಿ ರಸ್ತೆ ಹದಗೆಟ್ಟು ಸಂಚಾರಕ್ಕೆ ಅಡಚಣೆ



• **ಬಸವಾಪಟ್ಟಣ :** ಸಮೀಪದ ಸಾಗರಪೇಟೆಯಿಂದ ಸಂಗಾಹಳ್ಳಿ ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ಪ್ರಮುಖ ಗ್ರಾಮೀಣ ರಸ್ತೆ ಸಂಪೂರ್ಣ ಹದಗೆಟ್ಟು ಸಾರ್ವಜನಿಕರು ಹಾಗೂ ವಾಹನ ಸವಾರರು ತೀವ್ರ ಸಂಕಷ್ಟ ಅನುಭವಿಸುತ್ತಿದ್ದಾರೆ.

ಹಲವು ವರ್ಷಗಳಿಂದ ರಸ್ತೆ ದುರಸ್ತಿ ಮಾಡದ ಕಾರಣ ರಸ್ತೆಯಲ್ಲಿ ಗುಂಡಿಗಳಿಂದ ತುಂಬಿದ್ದು, ಕೆಲವೆಡೆ ರಸ್ತೆ ಮಧ್ಯದಲ್ಲೇ ಆಳವಾದ ಗುಂಡಿಗಳು ಉಂಟಾಗಿ ಅಪಾಯಕಾರಿಯಾಗಿದೆ. ರಸ್ತೆ ಮಧ್ಯದಲ್ಲೇ ಉಂಟಾಗಿರುವ ದೊಡ್ಡ ಗುಂಡಿಯನ್ನು ತೋರಿಸಲು ಸ್ಥಳೀಯರು ಕಡ್ಡಿ ಮತ್ತು ಬಟ್ಟೆ ಕಟ್ಟಿ ತಾತ್ಕಾಲಿಕ ಎಚ್ಚರಿಕೆ ಸೂಚನೆ ನೀಡಿರುವುದು ಕಂಡು ಬಂದಿದೆ.

ಯಾವುದೇ ಸಮಯದಲ್ಲಿ ವಾಹನ ಸವಾರರು ಈ ಗುಂಡಿಗೆ ಬಿದ್ದು ಅಪಘಾತ ಸಂಭವಿಸುವ ಸಾಧ್ಯತೆ ಇದೆ ಎಂದು ಗ್ರಾಮಸ್ಥರು ಆತಂಕ ವ್ಯಕ್ತಪಡಿಸಿದ್ದಾರೆ.

ಈ ರಸ್ತೆಯಲ್ಲಿ ಪ್ರತಿದಿನ ಸಂಗಾಹಳ್ಳಿ, ಚಿಕ್ಕ ಕುರುಬರ ಹಳ್ಳಿ ಬೆಳಲಗೆರೆ ಹಾಗೂ ರೆಡ್ಡಿ ಹಳ್ಳಿ ಗ್ರಾಮದ ಶಾಲಾ ಮಕ್ಕಳು ಬಸವಾಪಟ್ಟಣ ಶಾಲೆಗೆ ಹೋಗಿ ಬರಲು ಈ ರಸ್ತೆಯಲ್ಲೇ ಸಂಚಾರ ಮಾಡುತ್ತಾರೆ. ಅಲ್ಲದೇ ನಾಲ್ಕು ಗ್ರಾಮಗಳ ನಾಗರಿಕರು ಬ್ಯಾಂಕ್, ನಾಡಕಛೇರಿ, ಆಸ್ಪತ್ರೆ ಮತ್ತು ದಿನನಿತ್ಯದ ಕೆಲಸ ಕಾರ್ಯಗಳಿಗೆ ಬಸವಪಟ್ಟಣಕ್ಕೆ ಬರಲು ಈ ರಸ್ತೆಯನ್ನೇ ಬಳಸಿ ಕೊಂಡು ಓಡಾಡುತ್ತಾರೆ. ಆದರೆ ರಸ್ತೆ ಹದಗೆಟ್ಟಿರುವುದರಿಂದ ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಭಯ ಭೀತಿಯಿಂದ ಸಂಚಾರ ನಡೆಸುವಂತಾಗಿದೆ.

ಮಳೆಗಾಲದಲ್ಲಿ ರಸ್ತೆ ಗುಂಡಿಗಳು ನೀರಿನಿಂದ ತುಂಬಿ ಅಪಘಾತ ಸಂಭವಿಸುವ ಭೀತಿ ಮತ್ತಷ್ಟು ಹೆಚ್ಚಾಗುತ್ತದೆ ಎಂದು ಸ್ಥಳೀಯರು ತಿಳಿಸಿದ್ದಾರೆ.

ಸಂಬಂಧಪಟ್ಟ ಅಧಿಕಾರಿಗಳು ಈ ರಸ್ತೆ ದುರಸ್ತಿಗೆ ತಕ್ಷಣ ಕ್ರಮ ಕೈಗೊಳ್ಳಬೇಕೆಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

ಮಾ.16ರಂದು ಅಹೋ ರಾತ್ರಿ ಪ್ರತಿಭಟನೆ: ಬಸವರಾಜಪ್ಪ



• **ಹರಿಹರ :** ಮಡಿವಾಳ ಸಮುದಾಯವನ್ನು ಪರಿಶಿಷ್ಟ ಜಾತಿ ಪಟ್ಟಿಯಲ್ಲಿ ಸೇರ್ಪಡೆಗೆ ಒತ್ತಾಯಿಸಿ ಮಾ.16ರಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ನಡೆಯುವ ಅಹೋ ರಾತ್ರಿ ಪ್ರತಿಭಟನೆಗೆ ಹರಿಹರ ತಾಲೂಕಿನಿಂದ ಸಾವಿರ ಜನ ಸಮುದಾಯದ ಬಂಧುಗಳು ತೆರಳಲು ಸಿದ್ಧತೆ ನಡೆಸಲಾಗಿದೆ ಎಂದು ಹರಿಹರ ತಾಲೂಕು ಮಡಿವಾಳ ಕ್ಷೇಮಾಭಿವೃದ್ಧಿ ಸಂಘದ ಗೌರವ ಅಧ್ಯಕ್ಷ ಬಸವರಾಜಪ್ಪ ತಿಳಿಸಿದರು.

ನಗರದ ಪತ್ರಿಕಾ ಭವನದಲ್ಲಿ ಸಮಾಜದ ಮತ್ತು ಸಂಘದ ಮುಖಂಡರುಗಳೊಂದಿಗೆ ಸುದ್ದಿಗೋಷ್ಠಿ ನಡೆಸಿ ಅವರು ಮಾತನಾಡಿ, ಕರ್ನಾಟಕ ರಾಜ್ಯ ಮಡಿವಾಳರ ಕ್ಷೇಮಾಭಿವೃದ್ಧಿ ಸಂಘ ಹಾಗೂ ಉತ್ತರ ಕರ್ನಾಟಕ ಮಡಿವಾಳರ ಸಂಘದ ಜಂಟಿಯಾಗಿ ಡಾ. ಶ್ರೀ ಬಸವ ಮಾಚಿದೇವ ಮಹಾಸ್ವಾಮೀಜಿ, ಶ್ರೀ ಮುಕ್ತಾನಂದ ಸ್ವಾಮೀಜಿ ನೇತೃತ್ವದಲ್ಲಿ ಅಹೋರಾತ್ರಿ ಪ್ರತಿಭಟನೆ ನಡೆಯಲಿದೆ ಎಂದರು.

ಪಿಎಲ್‌ಡಿ ಬ್ಯಾಂಕಿನ ಸದಸ್ಯ ಗುತ್ತೂರು ಚಂದ್ರಪ್ಪ ಮಾತನಾಡಿ, ಆಂಧ್ರ ಪ್ರದೇಶ, ತಮಿಳುನಾಡು ಮತ್ತು ಇತರೆ ಕೆಲವು ಕಡೆಗಳಲ್ಲಿ ಮಡಿವಾಳ ಸಮುದಾಯವನ್ನು ಪರಿಶಿಷ್ಟ ಜಾತಿಯ ಪಟ್ಟಿಯಲ್ಲಿ ಪರಿಗಣಿಸಲಾಗಿದೆ. ಅದರಂತೆ ಅನ್ನಪೂರ್ಣಮ್ಮ ವರದಿಯ ಪ್ರಕಾರ ನಮ್ಮ ಸಮುದಾಯವನ್ನು ಪರೀಕ್ಷಿಸಿ ಜಾತಿಯ ಪಟ್ಟಿಗೆ ಸೇರಿಸಬೇಕೆಂಬುದು ನಮ್ಮ ಒತ್ತಾಯವಾಗಿದೆ ಎಂದರು.

ಸಂಘದ ಅಧ್ಯಕ್ಷ ಎಂ.ಹೆಚ್. ಭೀಮಣ್ಣ ಮಾತನಾಡಿ, ನಮ್ಮ ತಾಲೂಕಿನ ನಗರ ಹಾಗೂ ಗ್ರಾಮೀಣ ಪ್ರದೇಶಗಳಿಂದ ಬಸ್‌ಗಳ ಮೂಲಕ ಕರೆದೊಯ್ಯಲು ಸಜ್ಜುಗೊಳಿಸಲಾಗುತ್ತಿದೆ ಈಗಾಗಲೇ ಬಸ್ ಗಳನ್ನು ಸಿದ್ಧತೆ ಮಾಡಲಾಗಿದ್ದು ಮಾರ್ಚ್ 15ರ ಭಾನುವಾರ ರಾತ್ರಿ 10:30ಕ್ಕೆ ಪೇಟೆ ಆಂಜನೇಯ ದೇವಸ್ಥಾನದ ಬಳಿ ಸೇರಿ ಅಲ್ಲಿಂದ ಬೆಂಗಳೂರಿಗೆ ತೆರಳುವುದು ಎಂದು ನಿರ್ಣಯಿಸಲಾಗಿದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಪಿ.ಎಂ. ಈಶಣ್ಣ, ಸಮಾಜದ ದೇವರ ಬೆಳಕೆರೆ ಮಹೇಶಪ್ಪ, ಚಿಂತಾಮಣಿ, ರವಿಕುಮಾರ್, ಮಾರುತಿ, ಲೋಕೇಶ್, ವೀರಬಸಪ್ಪ, ಅಣ್ಣಪ್ಪ ಲೋಕೀಕೆರೆ ಮತ್ತಿತರರು ಉಪಸ್ಥಿತರಿದ್ದರು.

ಆತ್ಮಹತ್ಯೆಗೆ ಯತ್ನಿಸಿ ನದಿಗೆ ಹಾರಿದ ಪ್ರೇಮಿಗಳು: ಅಪಾಯದಿಂದ ಪಾರು



• **ದಾವಣಗೆರೆ:** ಕೌಟುಂಬಿಕ ವಿರೋಧದ ಹಿನ್ನೆಲೆಯಲ್ಲಿ ತುಂಗಭದ್ರಾ ನದಿಗೆ ಹಾರಿ ಆತ್ಮಹತ್ಯೆಗೆ ಯತ್ನಿಸಿದ ಇಬ್ಬರು ಪ್ರೇಮಿಗಳನ್ನು ಹೊನ್ನಾಳಿ ಅಗ್ನಿಶಾಮಕ ದಳದ ಸಿಬ್ಬಂದಿ ಸಮಯಪ್ರಜ್ಞೆ ಮೆರೆದು ರಕ್ಷಿಸಿದ ಘಟನೆ ಮಂಗಳವಾರ ನಡೆದಿದೆ.

ದಾವಣಗೆರೆ ಮೂಲದ ಸಮೀರ್ ಹಾಗೂ ಸಿಂಚನಾ ಎಂ. ರಕ್ಷಿಸಲ್ಪಟ್ಟವರು. ಇಬ್ಬರೂ ಒಂದೇ ಊರಿನವರಾಗಿದ್ದು, ಇವರ ಸಂಬಂಧಕ್ಕೆ ಮನೆಯವರಿಂದ ತೀವ್ರ ವಿರೋಧ ವ್ಯಕ್ತವಾಗಿತ್ತು ಎನ್ನಲಾಗಿದೆ. ಇದರಿಂದ ಮನನೊಂದು ಇಬ್ಬರೂ ಮೈಸೂರಿಗೆ ಹೋಗಿ ಮರಳಿ ಬರುತ್ತಿದ್ದ ವೇಳೆ ಹೊನ್ನಾಳಿ ಸೇತುವೆಯ ಮೇಲಿಂದ ತುಂಗಭದ್ರಾ ನದಿಗೆ ಹಾರಿದ್ದಾರೆ ಎಂದು ತಿಳಿದುಬಂದಿದೆ.

ಬೆಳಿಗ್ಗೆ ಸುಮಾರು 8:45 ಗಂಟೆ ಸುಮಾರಿಗೆ ಮಾಹಿತಿ ದೊರಕುತ್ತಿದ್ದಂತೆಯೇ ಸ್ಥಳಕ್ಕೆ ಧಾವಿಸಿದ ಅಗ್ನಿಶಾಮಕ ದಳದ ಸಿಬ್ಬಂದಿ, ನದಿಯಲ್ಲಿ ಕೊಚ್ಚಿ ಹೋಗುತ್ತಿದ್ದವರನ್ನು ರಕ್ಷಿಸಿ ದಡಕ್ಕೆ ತಂದಿದ್ದಾರೆ. ಬಳಿಕ ಇಬ್ಬರನ್ನೂ ಚಿಕಿತ್ಸೆಗಾಗಿ ಸ್ಥಳೀಯ ಆಸ್ಪತ್ರೆಗೆ ದಾಖಲಿಸಿ ನಂತರ ಪೊಲೀಸರಿಗೆ ಒಪ್ಪಿಸಿದ್ದಾರೆ.

ಹೊನ್ನಾಳಿ ಅಗ್ನಿಶಾಮಕ ಠಾಣಾಧಿಕಾರಿ ಟಿ.ಆರ್. ಪರಶುರಾಮ್ ಅವರ ನೇತೃತ್ವದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಬಸವರಾಜ್ ಅಕ್ಕಣ್ಣನವರ್ (ಲೀಡಿಂಗ್ ಫೈರ್‌ಮ್ಯಾನ್), ನಿರಂಜನ ಡಿ.ಎಂ. (ಚಾಲಕ ಕಮ್ ಮೆಕ್ಯಾನಿಕ್), ಭೀಮಸೇನ (ಚಾಲಕ), ಗೌಡೇಶ್ ಪಾಟೀಲ್ ಹಾಗೂ ವಿನಯ್ (ಅಗ್ನಿಶಾಮಕ ಸಿಬ್ಬಂದಿ) ಭಾಗವಹಿಸಿದ್ದರು.

ಅಗ್ನಿಶಾಮಕ ದಳದ ಈ ಸಮಯೋಚಿತ ಕಾರ್ಯಾಚರಣೆಗೆ ಸಾರ್ವಜನಿಕ ವಲಯದಲ್ಲಿ ಪ್ರಶಂಸೆ ವ್ಯಕ್ತವಾಗಿದೆ.

ದಿನಕ್ಕೆ 7 ತಾಸು ವಿದ್ಯುತ್ ಪೂರೈಕೆಗೆ ಆಗ್ರಹಿಸಿ ರೈತರ ಪ್ರತಿಭಟನೆ



• **ಜಗಳೂರು:** ವಿದ್ಯುತ್ ಪಂಪ್‌ಸೆಟ್‌ಗಳಿಗೆ ನಿರಂತರ 7 ತಾಸು ವಿದ್ಯುತ್ ಪೂರೈಕೆ ಮಾಡುವಂತೆ ಆಗ್ರಹಿಸಿ ಗೋಗುದ್ದು ಗ್ರಾಮಸ್ಥರು ಮಂಗಳವಾರ ಬೆಸ್ಕಾಂ ಕಚೇರಿಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿದರು.

ಅಣಬೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗೋಗುದ್ದು ಸೇರಿದಂತೆ ಐದಾರು ಹಳ್ಳಿಗಳಲ್ಲಿ ನಿತ್ಯ ಏಳು ತಾಸು ವಿದ್ಯುತ್ ನೀಡದೇ ಕೇವಲ ಐದು ತಾಸು ನೀಡಲಾಗುತ್ತಿದೆ. ಅದರಲ್ಲೂ ರಾತ್ರಿ ಮತ್ತು ಹಗಲಿನಲ್ಲಿ ತಲಾ 2.5 ತಾಸು ನೀಡಲಾಗುತ್ತಿದೆ. ಒಮ್ಮೊಮ್ಮೆ ತಾಂತ್ರಿಕ ಸಮಸ್ಯೆಯ ನೆಪವೊಡ್ಡಿ ಒಂದು ತಾಸು ನೀಡುವುದಿಲ್ಲ, ಇದ ರಿಂದ ಬೆಳೆಗಳು ಸಂಪೂರ್ಣ ಒಣ ಗುತ್ತಿವೆ ಎಂದು ರೈತರು ದೂರಿದರು.

ಮುಖಂಡ ಶೇಖರಪ್ಪ ಮಾತನಾಡಿ, ನಮ್ಮ ಗ್ರಾಮದ ಸುತ್ತಮುತ್ತಲೂ ಅರಣ್ಯವಿರುವುದರಿಂದ ಕಾಡು ಪ್ರಾಣಿಗಳಾದ ಕರಡಿ, ಹಂದಿಗಳ ಉಪಟಳವಿದೆ. ಆದರೆ ಬೆಸ್ಕಾಂ ಅಧಿಕಾರಿಗಳು ತಡ ರಾತ್ರಿ ವಿದ್ಯುತ್ ನೀಡಿದರೆ ರೈತರು ನಿದ್ದೆಗೆಟ್ಟು ಬೆಳೆಗಳಿಗೆ ನೀರಾಯಿಸಬೇಕು. ಜಮೀನುಗಳಲ್ಲಿ ನೀರಾಯಿಸುವ ವೇಳೆ ಕಾಡು ಪ್ರಾಣಿಗಳು ದಾಳಿ ಮಾಡಿ ಅನೇಕ ರೈತರು ಗಾಯಗೊಂಡಿದ್ದಾರೆ. ಆದ್ದರಿಂದ ರಾತ್ರಿ ಬದಲು ಹಗಲಿನಲ್ಲಿ ಏಳು ತಾಸು ವಿದ್ಯುತ್ ಕೊಡಬೇಕು ಇಲ್ಲದಿದ್ದರೆ ಇಡೀ ಗ್ರಾಮವೆ ಕಚೇರಿ ಮುಂದೆ ಧರಣಿ ನಡೆಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ರೈತ ದಾದಾಕಲಂದರ್ ಮಾತನಾಡಿ, ಬೇಸಿಗೆಯಿಂದ ಬೆಳೆಗಳು ಬಾಡುತ್ತಿವೆ. ನೀರಾಯಿಸದಿದ್ದರೆ ಕೈಗೆ ಬಂದ ಬೆಳೆಗಳು ಸಿಗುವುದಿಲ್ಲ, ಬೇರೆ ಗ್ರಾಮಗಳಲ್ಲಿ ವಿದ್ಯುತ್ ಪೂರೈಕೆಯಾಗುತ್ತಿದೆ. ನಮ್ಮ ಗ್ರಾಮದಲ್ಲಿ ಪದೇ ಪದೇ ವಿದ್ಯುತ್ ಕಡಿತಗೊಳಿಸುವುದು ನ್ಯಾಯವೇ. ಸರ್ಕಾರ ಕೂಡ ಗಂಭೀರವಾಗಿ ಪರಿಗಣಿಸಿ ರೈತರ ಸಮಸ್ಯೆಗಳನ್ನು ಬಗೆಹರಿಸಬೇಕು ಎಂದು ಆಗ್ರಹಿಸಿದರು.

ಬೆಸ್ಕಾಂ ಎಇಇ ಮಲ್ಲಿಕಾರ್ಜುನ್ ಮಾತನಾಡಿ, ವಿದ್ಯುತ್ ಸಮಸ್ಯೆ ಕೇವಲ ಜಗಳೂರಿನಲ್ಲಿ ಮಾತ್ರವಲ್ಲ, ಇಡೀ ರಾಜ್ಯದಲ್ಲಿ ಸಮಸ್ಯೆ ಇದೆ. ಪಟ್ಟಣದಲ್ಲಿ 220ಕೆವಿ ಪವರ್ ಸ್ಟೇಷನ್ ನಿರ್ಮಾಣವಾದರೆ ಎಲ್ಲ ಸಮಸ್ಯೆ ಬಗೆಹರಿಯುತ್ತದೆ. ಈಗ ಲೋಡ್ ಶೆಡ್ಡಿಂಗ್ ಏರುಪೇರಿನಿಂದ ತೊಂದರೆಯಾಗುತ್ತಿದೆ. ಇನ್ನೊಂದು ವಾರದಲ್ಲಿ ಸರಿಪಡಿಸಲಾಗುವುದು ರೈತರು ಸಹಕರಿಸಬೇಕು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಗ್ರಾಮಸ್ಥರಾದ ಬಸವರಾಜ್, ಸಲೀಂ, ದಾದು, ಅಬ್ದುಲ್, ಹುಸೇನ್, ರಾಜಪ್ಪ, ಸುನಿಲ್, ವಕೀಲ ತಿಪ್ಪೇಸ್ವಾಮಿ, ಶಿವಣ್ಣ, ಇಂಜಿನಿಯರ್ ಶ್ರೀಧರ್, ಹುಸೇನ್, ನೂರುಲ್ಲಾ, ಹಫೀಜ್, ಅಜ್ಜು ಮನ್ಸೂರು, ಚಂದ್ರಪ್ಪ, ಪ್ರಕಾಶ್, ಚಮನ್ ಪಾಲ್ಗೊಂಡಿದ್ದರು.

ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಪ್ರತಿಭಟನೆ



• **ಹೊನ್ನಾಳಿ:** ಆರೋಗ್ಯ ಇಲಾಖೆ ನೌಕರರ ಬೇಡಿಕೆ ಈಡೇರಿಕೆಗಾಗಿ ಆಗ್ರಹಿಸಿ ಮಂಗಳವಾರದಿಂದ ಕಪ್ಪುಪಟ್ಟಿ ಧರಿಸಿ ಓಪಿಡಿ ಬಂದ್, ಅನಿರ್ದಿಷ್ಟಾವಧಿ ಮುಷ್ಕರ ಮಾಡಲಾಗುವುದು. ನಂತರವೂ ಸರ್ಕಾರ ಎಚ್ಚೆತ್ತುಕೊಳ್ಳದಿದ್ದರೆ ಮಾ.16ರಿಂದ ಕರ್ತವ್ಯಕ್ಕೆ ಗೈರಾಗಿ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು ಎಂದು ತಾಲೂಕು ವೈದ್ಯಾಧಿಕಾರಿಗಳು ತಹಶೀಲ್ದಾರ್ ರಾಜೇಶ್‌ಕುಮಾರ್ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಿ ಎಚ್ಚರಿಕೆ ನೀಡಿದರು.

ರಾಜ್ಯದ ಎಲ್ಲಾ ಸರ್ಕಾರಿ ಆಸ್ಪತ್ರೆಗಳಿಗೆ ಕಾಲಕಾಲಕ್ಕೆ ಸಮರ್ಪಕವಾಗಿ ಔಷಧಿಗಳನ್ನು ಸರಬರಾಜು ಮಾಡದ ಕಾರಣ ರೋಗಿಗಳಿಗೆ ಹೇಗೆ ಔಷಧೋಪಚಾರ ಮಾಡಬೇಕು ಎಂದು ಪ್ರಶ್ನಿಸಿದರು. ವೃಂದ ಮತ್ತು ನೇಮಕಾತಿ ನಿಯಮಗಳನ್ನು ಪ್ರತಿ ಮೂರು ವರ್ಷಕ್ಕೊಮ್ಮೆ ತಿದ್ದುಪಡಿ ಮಾಡಲು ಸರ್ಕಾರದ ಆದೇಶ ಇದ್ದರೂ ಅದನ್ನು ಉಲ್ಲಂಘಿಸಿ 1973ರಿಂದ ಇಲ್ಲಿಯವರೆವಿಗೂ ನಿಯಮಗಳನ್ನು ತಿದ್ದುಪಡಿ ಮಾಡುತ್ತಿಲ್ಲ ಇದರಿಂದ ನಮಗೆಲ್ಲ ಅನ್ಯಾಯವಾಗುತ್ತಿದೆ ಎಂದರು.

ಗುತ್ತಿಗೆ ವೈದ್ಯರು, ನೌಕರರು ಹಾಗೂ ಎನ್.ಎಚ್.ಎಂ. ಗುತ್ತಿಗೆ ನೌಕರರಿಗೆ ಕಾಲ ಕಾಲಕ್ಕೆ ಸೂಕ್ತ ವೇತನ ನೀಡುತ್ತಿಲ್ಲ ಹಾಗೂ ವೇತನವನ್ನೂ ಹೆಚ್ಚಳ ಮಾಡುತ್ತಿಲ್ಲ, ಪರಿಸ್ಥಿತಿ ಹೀಗಾದರೆ ನಾವೆಲ್ಲರೂ ಹೊಟ್ಟೆ ಮೇಲೆ ತಣ್ಣೀರು ಬಟ್ಟೆ ಹಾಕಿಕೊಳ್ಳಬೇಕಾದ ಎಂದು ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಸರ್ಕಾರ ಈ ಬಗ್ಗೆ ಗಂಭೀರವಾಗಿ ಚಿಂತಿಸಿ ನಮ್ಮ ಇಲಾಖೆಯ ಸರ್ವಸಮ್ಮತ ಬೇಡಿಕೆಗಳನ್ನು ಈಡೇರಿಸದಿದ್ದರೆ ಸರ್ಕಾರ ಗಂಭೀರ ಪರಿಣಾಮ ಎದುರಿಸಬೇಕಾಗುತ್ತದೆ.ಇದಕ್ಕೆ ನಾವುಗಳು ಜವಬ್ದಾರರಲ್ಲ ಎಂದು ವೈದ್ಯಾಧಿಕಾರಿಗಳು ಹಾಗೂ ಇಲಾಖೆಯ ನೌಕರರು ರಾಜ್ಯ ಸರ್ಕಾರಕ್ಕೆ ಎಚ್ಚರಿಕೆ ನೀಡಿದರು.

ತಾಲೂಕು ವೈದ್ಯಾಧಿಕಾರಿ ಡಾ.ಗಿರೀಶ್, ವೈದ್ಯಾಧಿಕಾರಿಗಳಾದ ಡಾ. ಚಂದ್ರಪ್ಪ, ಡಾ.ಸಮತೋಷ್, ಡಾ.ನಟರಾಜ್, ಡಾ.ಚಂದ್ರಶೇಖರಪ್ಪ, ಡಾ.ಪ್ರದೀಪ್, ಡಾ.ಮಂಜಾನಾಯ್ಕ್, ಎಸ್.ಆರ್.ರೂಪ್ಲಾನಾಯ್ಕ್, ಶಿವಪದ್ಮ, ರಾಜರಾಮ್, ನಿಂಗಪ್ಪ, ಚೇತನಾ, ನಾಗರತ್ನ ಇತರರು ಇದ್ದರು.

ಕಿರುಸುದ್ದಿ

ಅಡಿಕೆ ಧಾರಣೆ

ಶಿವಮೊಗ್ಗ	ಸಾಗರ
ಸರಕು-59,800-98,496	ರಾಶಿ-36,609-58,699
ರಾಶಿ-40,166-56,259	ಚಾಲಿ-39,199-42,899
ಬೆಟ್ಟೆ-50,610-64,310	ಕೆಂಪುಗೋಟು-34,999-37,899
ಗೊರಬಲು-19,159-39,599	ಬಿಳಿಗೋಟು-24,989-33,066
	ಸಿಪ್ಪೆಗೋಟು-11,786-22,200

ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಮುಷ್ಕರ ಇಂದು

ಭದ್ರಾವತಿ : ಆರೋಗ್ಯ ಇಲಾಖೆಯ ಅಧಿಕಾರಿ ಮತ್ತು ನೌಕರರ ಪ್ರಮುಖ 12 ಬೇಡಿಕೆಗಳ ಈಡೇರಿಕೆಗಾಗಿ ರಾಜ್ಯಾದ್ಯಂತ ಮಾ.11 ರಿಂದ 15ರವರೆಗೆ ಮುಷ್ಕರ ಹಮ್ಮಿ ಕೊಳ್ಳಲಾಗಿದ್ದು, ಈ ಹಿನ್ನಲೆಯಲ್ಲಿ ತಾಲೂಕು ಸಾರ್ವಜನಿಕ ಸರ್ಕಾರಿ ಆಸ್ಪತ್ರೆ ಸೇರಿದಂತೆ ತಾಲೂಕಿನ ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ಕೇವಲ ತುರ್ತು ಸೇವೆಗೆ ಮಾತ್ರ ಅವಕಾಶ ನೀಡಲಾಗಿದೆ. ಕರ್ನಾಟಕ ಸರ್ಕಾರಿ ವೈದ್ಯಾಧಿಕಾರಿಗಳ ಸಂಘ, ಕರ್ನಾಟಕ ರಾಜ್ಯ ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಇಲಾಖಾ ನೌಕರರ ಸಂಘ, ಇಲಾಖೆಯ ಎಲ್ಲಾ ವೃಂದ ಸಂಘಗಳು ಹಾಗೂ ಗುತ್ತಿಗೆ ಮತ್ತು ಹೊರಗುತ್ತಿಗೆ ನೌಕರರ ಸಂಘ ಸೇರಿದಂತೆ ಎಲ್ಲಾ ಸಂಘಟನೆಗಳ ಸಾರಥ್ಯದಲ್ಲಿ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಬೆಂಬಲದೊಂದಿಗೆ ಆರೋಗ್ಯ ಇಲಾಖೆಯ ಅಧಿಕಾರಿ ಮತ್ತು ನೌಕರರು ತಮ್ಮ ಕೇಂದ್ರ ಸ್ಥಾನಗಳಲ್ಲಿ ಕಪ್ಪುಪಟ್ಟಿ ಧರಿಸಿ ಹೊರರೋಗಿ ಸೇವೆ ನೀಡದೆ ಕೇವಲ ತುರ್ತು ಸೇವೆ ಒದಗಿಸುವುದರ ಮೂಲಕ ಮುಷ್ಕರ ಹಮ್ಮಿಕೊಳ್ಳಲಾಗುತ್ತಿದ್ದು, ಸಾರ್ವಜನಿಕರು ಸಹಕರಿಸುವ ಮೂಲಕ ಮುಷ್ಕರ ಬೆಂಬಲಿಸುವಂತೆ ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆ ನೌಕರರ ಸಂಘದ ಗೌರವಾಧ್ಯಕ್ಷರಾದ ತಾಲೂಕು ಆರೋಗ್ಯಾಧಿಕಾರಿ ಡಾ. ಎಂ.ವಿ ಅಶೋಕ್, ತಾಲೂಕು ಸಾರ್ವಜನಿಕ ಸರ್ಕಾರಿ ಆಸ್ಪತ್ರೆ ಮುಖ್ಯ ವೈದ್ಯಾಧಿಕಾರಿ ಡಾ. ಶಂಕರಪ್ಪ, ಅಧ್ಯಕ್ಷೆ ಕೆ. ಸುಶೀಲಬಾಯಿ ಮತ್ತು ಪ್ರಧಾನ ಕಾರ್ಯದರ್ಶಿ ಲೋಕೇಶ್ ಕೋರಿದ್ದಾರೆ.

ಚಾನೆಲ್‌ಗೆ ಬಿದ್ದಿದ್ದ ವ್ಯಕ್ತಿ ರಕ್ಷಣೆ

ಶಿವಮೊಗ್ಗ : ಚಾನೆಲ್ ನೀರಿಗೆ ಬಿದ್ದಿದ್ದ ವ್ಯಕ್ತಿಯನ್ನು ಪೊಲೀಸ್ ಸಿಬ್ಬಂದಿ ರಕ್ಷಿಸಿದ್ದಾರೆ. ಭದ್ರಾವತಿ ಹುತ್ತ ಕಾಲೋನಿ ಮೀನು ಮಾರುಕಟ್ಟೆ ಹತ್ತಿರ ವ್ಯಕ್ತಿಯೊಬ್ಬ ಮಾ.9ರ ಮಧ್ಯ ರಾತ್ರಿ ವೇಗವಾಗಿ ಬೈಕ್ ಚಾಲನೆ ಮಾಡಿಕೊಂಡು ಬಂದು ಕಾಮಗಾರಿ ನಡೆಯುತ್ತಿರುವ ಸೇತುವೆಯ ಹತ್ತಿರ ಚಾನೆಲ್ ನೀರಿಗೆ ಬಿದ್ದರು ಎಂಬ ಮಾಹಿತಿ ಬಂದಿತ್ತು. ನ್ಯೂಟೌನ್ ಪೊಲೀಸ್ ಠಾಣೆ ಇ.ಆರ್.ವಿ ಅಧಿಕಾರಿ ಮಲ್ಲಿಕಾರ್ಜುನ್ ಹಾಗೂ ಚಾಲಕ ಪ್ರವೀಣ್ ಕೂಡಲೇ ಸ್ಥಳಕ್ಕೆ ಹೋಗಿ, ಸಾರ್ವಜನಿಕರ ಸಹಾಯದಿಂದ ಚಾನೆಲ್‌ಗೆ ಬಿದ್ದಿದ್ದ ವ್ಯಕ್ತಿಯನ್ನು ಮೇಲಕ್ಕೆ ಎತ್ತಿ ಆಂಬುಲೆನ್ಸ್ ಮೂಲಕ ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಿಸಿದರು. ಅವರು ಕಾರ್ಯಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ನಿಖಿಲ್ ಅಭಿನಂದಿಸಿದ್ದಾರೆ.

ಮನೆ ಮುಂದೆ ಮಲಗಿದ್ದ ನಾಯಿ ಮೇಲೆ ಚಿರತೆ ದಾಳಿ: ಗ್ರಾಮಸ್ಥರ ಆತಂಕ

ತೀರ್ಥಹಳ್ಳಿ : ತಾಲೂಕಿನ ಹೊದಲ ಅರಳಾಪುರ ಗ್ರಾಪಂ ವ್ಯಾಪ್ತಿಯ ಅರಳಾಪುರ ಗ್ರಾಮ ವಡ್ಡಿನಬೈಲು ಟಿ. ಜಿ. ಜಗದೀಶ್ ಅವರ ಸಾಕು ನಾಯಿ ಮನೆಯ ಮುಖ್ಯದ್ವಾರದ ಹೊಸ್ತಿಲಲ್ಲಿ ಮಲಗಿದ್ದ ವೇಳೆ ರಾತ್ರಿ 11 ಗಂಟೆ ಸಮಯದಲ್ಲಿ ಚಿರತೆಯೊಂದು ದಾಳಿ ಮಾಡಿದ ಘಟನೆ ಸೋಮವಾರ ರಾತ್ರಿ ನಡೆದಿದೆ. ನಾಯಿಯ ಕುತ್ತಿಗೆ ಭಾಗದಲ್ಲಿ ಗಂಭೀರ ಗಾಯವಾಗಿದ್ದು ಸ್ಥಳೀಯರು ಓಡಾಡಲು ಆತಂಕ ಪಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಹೊದಲ ತೀರ್ಥಹಳ್ಳಿ ರಸ್ತೆಯಲ್ಲಿ ರಾತ್ರಿ ವೇಳೆ ಓಡಾಡುವವರು ಜಾಗೃತಿ ವಹಿಸಲು ಹಾಗೂ ಒಂಟಿ ಮನೆಯಿರುವ ಮನೆಯ ಆವರಣ, ದನದ ಕೊಟ್ಟಿಗೆಯ ಲೈಟ್‌ಗಳನ್ನು ರಾತ್ರಿವೇಳೆ ಆರಿಸದಂತೆ ಅರಣ್ಯ ಇಲಾಖೆಯ ಸಿಬ್ಬಂದಿಯವರು ಸ್ಥಳಕ್ಕಾಗಮಿಸಿ ರಾತ್ರಿ ಗಸ್ತು ನಡೆಸುವುದಾಗಿ ತಿಳಿಸಿರುತ್ತಾರೆ. ಈ ಸಂದರ್ಭದಲ್ಲಿ ಅರಣ್ಯ ಇಲಾಖೆಯ ಫಾರೆಸ್ಟರ್ ಶಿವಕುಮಾರ್, ಗಾರ್ಡ್ ಅಶ್ವಿನಿ, ಮಾಜಿ ಗ್ರಾಪಂ ಉಪಾಧ್ಯಕ್ಷ ವಿಶ್ವನಾಥ ಪ್ರಭು, ಮಾಜಿ ಗ್ರಾಪಂ ಸದಸ್ಯ ಹೊದಲ ದಿನೇಶ್ ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

ಅನಾಮಧೇಯ ವ್ಯಕ್ತಿ ಶವ ಪತ್ತೆ: ವಾರಸುದಾರರಿಗೆ ಮನವಿ

ಶಿವಮೊಗ್ಗ : ಮಾ.8ರಂದು ತುಪ್ಪೂರು ಗ್ರಾಮದ ಬಿಎಚ್ ರಸ್ತೆಯ ಆನೆಮುರುವು ಬಳಿ ರಸ್ತೆ ಪಕ್ಕದಲ್ಲಿ ಸುಮಾರು 40-50 ವಯಸ್ಸಿನ ಅನಾಮಧೇಯ ವ್ಯಕ್ತಿಯ ಶವ ಪತ್ತೆಯಾಗಿದೆ.ದೃಢಕಾಯವಾಗಿದ್ದು, ಎಡ ಪಕ್ಕೆಯಲ್ಲಿ ಸಾಸಿವೆ ಗಾತ್ರದ ಮಚ್ಚೆ ಇರುತ್ತದೆ, ಮೃತದೇಹದ ಮೇಲೆ ನೀಲಿ ಬಣ್ಣದ ತುಂಬು ತೋಳಿನ ಟೀ ಶರ್ಟ್, ತಿಳಿ ಹಸಿರು ಬಣ್ಣದ ನೈಟ್ ಪ್ಯಾಂಟ್ ಇರುತ್ತದೆ. ಈ ಮೃತ ವ್ಯಕ್ತಿಯ ವಾರಸುದಾರರು ಪತ್ತೆಯಾದಲ್ಲಿ ಅಥವಾ ಯಾವುದೇ ಪೊಲೀಸ್ ಠಾಣೆಯಲ್ಲಿ ಮನುಷ್ಯಕಾಣೆ ಪ್ರಕರಣ ದಾಖಲಾಗಿದ್ದಲ್ಲಿ ಪಿ.ಐ ಕುಂಸಿ ಠಾಣೆ 9480803351, ಕುಂಸಿ ಪೊಲೀಸ್ ಠಾಣೆ 8277982830, ಶಿವಮೊಗ್ಗ ಕಂಟ್ರೋಲ್ ರೂಂ 08182 261413 ಸಂಪರ್ಕಿಸಲು ಕೋರಲಾಗಿದೆ.

ಇಂದು ಶನೈಶ್ಚರ ದೇವಾಲಯದ 36ನೇ ವಾರ್ಷಿಕೋತ್ಸವ

ಶಿವಮೊಗ್ಗ : ದುರ್ಗಿಗುಡಿಯ ಶನೈಶ್ಚರ ದೇವಾಲಯ ಸಮಿತಿ ಟ್ರಸ್ಟ್ ವತಿಯಿಂದ ಮಾ.11ರಂದು 36ನೇ ವಾರ್ಷಿಕೋತ್ಸವದ ಅಂಗವಾಗಿ ದೇವಾಲಯದಲ್ಲಿ ಪ್ರತಿಷ್ಠಾಪಿಸಿರುವ ಶನೈಶ್ಚರ ಸ್ವಾಮಿ, ವಿಘ್ನೇಶ್ವರ, ಸೀತಾ-ರಾಮಾಂಜನೇಯ, ಲಕ್ಷ್ಮಣ ದೇವರಿಗೆ 108 ಕಳಶದ ಕುಂಭಾಭಿಷೇಕ ಹಾಗೂ ಅನ್ನಸಂತರ್ಪಣೆ ಆಯೋಜಿಸಲಾಗಿದೆ ಎಂದು ಟ್ರಸ್ಟ್ ಉಪಾಧ್ಯಕ್ಷ ವಿ.ರಾಜು ತಿಳಿಸಿದರು.

ನಗರದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ದುರ್ಗಿಗುಡಿಯ ಮುಖ್ಯರಸ್ತೆಯಲ್ಲಿರುವ ಶನೈಶ್ಚರ ದೇವಾಲಯ ಸುಮಾರು 75 ವರ್ಷಗಳ ಹಿಂದಿನ ದೇವಾಲಯವಾಗಿದೆ. ಸುಮಾರು 40 ವರ್ಷಗಳಿಂದ ಇಲ್ಲಿನ ಶನೈಶ್ಚರ ಸ್ವಾಮಿಯ ಫೋಟೋಗೆ ಪೂಜೆ ಸಲ್ಲಿಸುತ್ತಾ ಬರಲಾಗಿತ್ತು. 1990ರಲ್ಲಿ ಸ್ಥಿರಮೂರ್ತಿಯನ್ನು, ವಿಘ್ನೇಶ್ವರ ಹಾಗೂ ಸೀತಾ ರಾಮಾಂಜನೇಯ ದೇವರುಗಳನ್ನು ಕೃಷ್ಣಶಿಲೆಯಲ್ಲಿ ಪ್ರತಿಷ್ಠಾಪನೆ ಮಾಡಲಾಯಿತು. ಈಗ 36ನೇ ವಾರ್ಷಿಕೋತ್ಸವದ ಅಂಗವಾಗಿ ಅನ್ನಸಂತರ್ಪಣೆ ಹಾಗೂ ಕುಂಭಾಭಿಷೇಕ ಆಯೋಜಿಸಲಾಗಿದೆ ಎಂದರು. ಪ್ರಧಾನಕಾರ್ಯದರ್ಶಿ ಸ.ನ.ಮೂರ್ತಿ ಮಾತನಾಡಿ, ಟ್ರಸ್ಟ್ ಅಧ್ಯಕ್ಷರಾಗಿರುವ ಮಾಜಿ ಉಪಮುಖ್ಯಮಂತ್ರಿ ಕೆ.ಎಸ್.ಈಶ್ವರಪ್ಪ ಮತ್ತು ಟ್ರಸ್ಟ್‌ನ ಎಲ್ಲಾ ಪದಾಧಿಕಾರಿಗಳ ಸಹಕಾರದಲ್ಲಿ ಈ ಕಾರ್ಯಕ್ರಮ ಆಯೋಜಿಸಲಾಗಿದೆ. ಕುಂಭಾಭಿಷೇಕ ಮಾಡುವ ಭಕ್ತರು ಅರ್ಚಕರಲ್ಲಿ 150ರೂ.ಪಾವತಿಸಿ ರಶೀದಿ ಪಡೆಯಬೇಕು ಎಂದರು. ಟ್ರಸ್ಟ್ ಉಪಾಧ್ಯಕ್ಷ ಗೋವಿಂದಪ್ಪ, ಸಹಕಾರ್ಯದರ್ಶಿ ಎಸ್.ಎನ್.ವೆಂಕಟೇಶ್, ಟ್ರಸ್ಟಿಗಳಾದ ಬಿ.ಡಿ.ರಮೇಶ್, ಎಸ್.ಹೆಚ್. ಸಂತೋಷ್ ಇದ್ದರು.



ಶಿವಮೊಗ್ಗ: ಶರಾವತಿ ಪಂಪ್ ಸ್ಟೋರೇಜ್ ಯೋಜನೆ ವಿರೋಧಿಸಿ ಮಾ.24ರಂದು ಹಮ್ಮಿಕೊಂಡಿರುವ ಬೃಹತ್ ಅಹೋರಾತ್ರಿ ಧರಣಿ ಪ್ರಯುಕ್ತ ರಾಷ್ಟ್ರ ಭಕ್ತ ಬಳಗದಿಂದ ಮಾಜಿ ಡಿಸಿಎಂ ಕೆ.ಎಸ್.ಈಶ್ವರಪ್ಪ ನೇತೃತ್ವದಲ್ಲಿ ಪೂರ್ವಭಾವಿ ಸಭೆ ಅವರ ನಿವಾಸದ ಆವರಣದಲ್ಲಿ ನಡೆಸಲಾಯಿತು. ಪಾಲಿಕೆ ಮಾಜಿ ಸದಸ್ಯ ವಿಶ್ವಾಸ್, ಪ್ರಮುಖರಾದ ಶ್ರೀಕಾಂತ್, ಜಾಧವ್, ಬಾಲು, ಶಿವಾಜಿ ಮತ್ತಿತರರು ಇದ್ದರು.

ಸದನದಲ್ಲಿ ವಿಧಾನ ಪರಿಷತ್ ಶಾಸಕ ಡಿ.ಎಸ್. ಅರುಣ್ ಪ್ರಸ್ತಾಪ

ಕಾಂಗ್ರೆಸ್ ಕಚೇರಿಗೆ ಜಮೀನು; ರಾಜ್ಯ ಖಜಾನೆಗೆ ಆರ್ಥಿಕ ನಷ್ಟ

ಶಿವಮೊಗ್ಗ : ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷದ ಕಚೇರಿಗಳ ನಿರ್ಮಾಣಕ್ಕಾಗಿ ಸರ್ಕಾರಿ ಜಮೀನುಗಳನ್ನು ಮಾರ್ಗದರ್ಶಿ ದರದ ಕೇವಲ ಶೇ.5ರ ದರದಲ್ಲಿ ಶಾಶ್ವತವಾಗಿ ಮಂಜೂರು ಮಾಡಿರುವ ವಿಷಯವನ್ನು ವಿಧಾನ ಪರಿಷತ್ ಶಾಸಕ ಡಿ.ಎಸ್. ಅರುಣ್ ಸದನದಲ್ಲಿ ಪ್ರಸ್ತಾಪಿಸಿದರು.

ತುಮಕೂರು, ಬಾಗಲಕೋಟೆ, ಶಿವಮೊಗ್ಗ, ದೇವನಹಳ್ಳಿ, ಮಂಡ್ಯ, ಬಾದಾಮಿ, ಚಾಮರಾಜನಗರ ಸೇರಿದಂತೆ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ 22ಕ್ಕೂ ಹೆಚ್ಚು ಆಸ್ತಿಗಳನ್ನು ಕಾಂಗ್ರೆಸ್ ಪಕ್ಷದ ಕಚೇರಿಗಳ ನಿರ್ಮಾಣಕ್ಕಾಗಿ ಸರ್ಕಾರಿ ಜಮೀನನ್ನು ಮಾರ್ಗದರ್ಶಿ ದರದ ಕೇವಲ ಶೇ.5 ದರದಲ್ಲಿ ಶಾಶ್ವತವಾಗಿ ಮಂಜೂರು ಮಾಡಿರುವುದರಿಂದ ರಾಜ್ಯ ಖಜಾನೆಗೆ ಎಷ್ಟು ಆರ್ಥಿಕ ನಷ್ಟವಾಗಿದೆ ಎಂಬುದರ ಕುರಿತು ಸರ್ಕಾರ ಸ್ಪಷ್ಟ ಉತ್ತರ ನೀಡಬೇಕು ಎಂದು ಒತ್ತಾಯಿಸಿದರು.

ಸರ್ಕಾರಿ ಜಮೀನನ್ನು ಒಂದು ರಾಜಕೀಯ ಪಕ್ಷದ ಆಸ್ತಿಯನ್ನಾಗಿ ಮಾಡುವುದು ಅನುಚಿತ ಕ್ರಮವಾಗಿದೆ. ಇಷ್ಟು ಕಡಿಮೆ ದರದಲ್ಲಿ ಶಾಶ್ವತವಾಗಿ ಜಮೀನು ನೀಡುವುದು ಸಾರ್ವಜನಿಕ ಆಸ್ತಿಯ ದುರುಪಯೋಗ



ಆಗುತ್ತದೆ. ರಾಜ್ಯ ಖಜಾನೆಗೆ ನೇರ ನಷ್ಟ ಉಂಟುಮಾಡುವ ಕ್ರಮವಾಗಿದೆ ಎಂದು ಆರೋಪಿಸಿದರು.

ಸರ್ಕಾರದಲ್ಲೇ ಇರುವ ವ್ಯಕ್ತಿಗಳು ಕಾಂಗ್ರೆಸ್ ಟ್ರಸ್ಟ್‌ನಲ್ಲೂ ಇದ್ದಾರೆ. ಅದೇ ಸರ್ಕಾರದ ಸಚಿವ ಸಂಪುಟದಲ್ಲಿ ಜಮೀನು ಮಂಜೂರಾತಿಗೆ ಅನುಮೋದನೆ ಪಡೆಯುತ್ತಿರುವುದು ಸಚಿವ ಸಂಪುಟದ ಅಧಿಕಾರ ದುರುಪಯೋಗ ಆಗುತ್ತಿದೆ ಎಂದು ಆಕ್ಷೇಪಿಸಿದರು.

ಇಂತಹ ಮಂಜೂರಾತಿಗೆ ಮುನ್ನ ಯಾವುದೇ ಸಾರ್ವಜನಿಕ ಟೆಂಡರ್ ಅಥವಾ ಮುಕ್ತ ಅರ್ಜಿ ಪ್ರಕ್ರಿಯೆ ಅನುಸರಿಸಿಲ್ಲ, ಎಲ್ಲಾ ನಿಯಮಗಳನ್ನು ಕಡೆಗಣಿಸಿ ಸರ್ಕಾರ ಏಕಪಕ್ಷೀಯವಾಗಿ ನಿರ್ಧಾರ ಕೈಗೊಂಡಿರುವುದು ಸ್ಪಷ್ಟವಾಗಿದೆ. ಸಾರ್ವಜನಿಕ ಆಸ್ತಿಯನ್ನು ಈ ರೀತಿಯಾಗಿ ಅತೀ ಕಡಿಮೆ ದರದಲ್ಲಿ ರಾಜಕೀಯ ಪಕ್ಷದ ಕಚೇರಿಗಳ ನಿರ್ಮಾಣಕ್ಕೆ ಶಾಶ್ವತವಾಗಿ ಮಂಜೂರು ಮಾಡಿರುವುದು ಗಂಭೀರ ಹಾಗೂ ಖಂಡನೀಯ ಕ್ರಮವಾಗಿದೆ ಎಂದು ಡಿ.ಎಸ್. ಅರುಣ್ ತೀವ್ರ ಆಕ್ಷೇಪ ವ್ಯಕ್ತಪಡಿಸಿದರು.

ಡಿ.ಎಸ್. ಅರುಣ್ ಅವರು ಸದನದಲ್ಲಿ ಎತ್ತಿದ ಈ ಗಂಭೀರ ವಿಷಯಕ್ಕೆ ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ವಿಧಾನ ಪರಿಷತ್ ಸದಸ್ಯರಾದ ರವಿಕುಮಾರ್, ಸಿ.ಟಿ.ರವಿ ಸೇರಿದಂತೆ ಹಲವಾರು ವಿಧಾನ ಪರಿಷತ್ ಶಾಸಕರು ಬೆಂಬಲ ವ್ಯಕ್ತಪಡಿಸಿದರು.

> **ಆಡಳಿತಾತ್ಮಕ ನಿರ್ಲಕ್ಷ್ಯ**
> **ಜನರ ಆಸ್ತಿಯನ್ನು ಪಕ್ಷದ ಹಿತಾಸಕ್ತಿಗಾಗಿ ಬಳಸುವುದು ಸಾರ್ವಜನಿಕ ಹಿತಾಸಕ್ತಿಗೆ ವಿರುದ್ಧವಾಗಿದೆ. ಇಂತಹ ನಿರ್ಧಾರ ಕೈಗೊಳ್ಳುವ ಮೊದಲು ಹಣಕಾಸು ಇಲಾಖೆಯ ಅಭಿಪ್ರಾಯ ಪಡೆಯದೇ ಮುಂದುವರಿದಿರುವುದು ಗಂಭೀರ ಆಡಳಿತಾತ್ಮಕ ನಿರ್ಲಕ್ಷ್ಯವಾಗಿದೆ ಎಂದು ಡಿ.ಎಸ್. ಅರುಣ್ ದೂರಿದರು.**

ಗಜಾನನ ಭಟ್-ಭಾರತಿ ದಂಪತಿಗೆ ಸೌಲಭ್ಯ ಒದಗಿಸಲು ಸೂಚನೆ

ವೃದ್ಧ ದಂಪತಿಗೆ ಆಧಾರ್ ಕಾರ್ಡ್ ವಿತರಿಸಿದ ಬೇಳೂರು



ಸಾಗರ : ಇಲ್ಲಿನ ಭೀಮನಕೋಣೆ ರಸ್ತೆಯಲ್ಲಿರುವ ವೃದ್ಧ ದಂಪತಿಗಳ ಮನೆಗೆ ಶಾಸಕ ಗೋಪಾಲಕೃಷ್ಣ ಬೇಳೂರು ಸೋಮವಾರ ಅಧಿಕಾರಿಗಳ ಜೊತೆ ಭೇಟಿ ನೀಡಿ ಸ್ವಹಸ್ತದಿಂದ ಕುಟುಂಬಕ್ಕೆ ಆಧಾರ್ ಕಾರ್ಡ್, ಪಡಿತರ ಚೀಟಿ, ಮತದಾರರ ಗುರುತಿನ ಪತ್ರ ಹಸ್ತಾಂತರಿಸುವ ಜೊತೆಗೆ ವೃದ್ಧಾಪ್ಯ ವೇತನಕ್ಕೆ ಬೇಕಾದ ಸೌಲಭ್ಯ ಕಲ್ಪಿಸಲು ಸ್ಥಳದಲ್ಲಿದ್ದ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಗಾಂಧಿನಗರ ಮತ್ತು ವಿಜಯ ನಗರದ ದ್ವಿಪಥ ರಸ್ತೆಯಲ್ಲಿ ಗಜಾನನ ಭಟ್ ಮತ್ತು ಭಾರತಿ ದಂಪತಿಗಳು ಅನೇಕ ವರ್ಷಗಳಿಂದ ಬಾಡಿಗೆ ಮನೆಯಲ್ಲಿ ವಾಸವಿದ್ದಾರೆ. ಕುಟುಂಬಕ್ಕೆ ಯಾರೂ ಆಧಾರ ಇಲ್ಲದೆ, ಕುಟುಂಬವೂ ತೀರ ಸಂಕಷ್ಟದಲ್ಲಿತ್ತು. ಜೊತೆಗೆ ಭಾರತಿ ಅವರಿಗೆ ಆಧಾರ್ ಕಾರ್ಡ್, ರೇಷನ್ ಕಾರ್ಡ್, ಮತದಾರರ ಗುರುತಿನ ಪತ್ರ ಸಹ ಇಷ್ಟು ವರ್ಷಗಳಿಂದ ಸಿಕ್ಕಿರಲಿಲ್ಲ. ಇದರ ಮಾಹಿತಿ ಪಡೆದ ಶಾಸಕ ಗೋಪಾಲಕೃಷ್ಣ ಬೇಳೂರು ಎರಡು ತಿಂಗಳ ಹಿಂದೆ ಕುಟುಂಬಕ್ಕೆ ಸೂಕ್ತ ಸೌಲಭ್ಯ ಕಲ್ಪಿಸಲು ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದರು.

ಉಪವಿಭಾಗಾಧಿಕಾರಿ ವೀರೇಶ್ ಕುಮಾರ್, ತಹಶೀಲ್ದಾರ್ ರಶ್ಮಿ ಹಾಲೇಶ್ ಇನ್ನಿತರ ತಾಲೂಕು ಮಟ್ಟದ ಅಧಿಕಾರಿಗಳ ಜೊತೆ ಶಾಸಕ ಗೋಪಾಲಕೃಷ್ಣ ಬೇಳೂರು ಸೋಮವಾರ ವೃದ್ಧ ದಂಪತಿಗಳ ಮನೆಗೆ ಬಂದು ಆಧಾರ್ ಕಾರ್ಡ್, ಓಟರ್ ಐಡಿ., ಗೃಹಲಕ್ಷ್ಮೀ ಆದೇಶ ಪತ್ರ, ವೃದ್ಧಾಪ್ಯ ವೇತನ ಯೋಜನೆಯ ಆದೇಶ ಪ್ರತಿಯನ್ನು ನೀಡಿದ್ದಾರೆ.

ಕುಟುಂಬದ ದಯಾನೀಯ ಪರಿಸ್ಥಿತಿಯನ್ನು ಕಂಡು ತೀವ್ರ ಬೇಸರ ವ್ಯಕ್ತಪಡಿಸಿದ ಶಾಸಕ ಬೇಳೂರು ವೈಯಕ್ತಿಕ ಧನ ಸಹಾಯ ಮಾಡುವ ಜೊತೆಗೆ ಮನೆಗೆ ಸುಣಬಣ್ಣ ಹೊಡೆಸಿಕೊಡಲು ಪಕ್ಷದ ಪ್ರಮುಖರಿಗೆ ಸೂಚನೆ ನೀಡಿದರು. ವೃದ್ಧ ದಂಪತಿಗಳಿಗೆ ಕೆಲಸ ಮಾಡಲು ಆಗುವುದಿಲ್ಲ, ಅವರಿಗೆ ಬೇಕಾದ ಪಡಿತರವನ್ನು ಮನೆಗೆ ತಲುಪಿಸುವ ವ್ಯವಸ್ಥೆ ಮಾಡಲಾಗುತ್ತದೆ. ಕುಟುಂಬಕ್ಕೆ ಕಾಲಕಾಲಕ್ಕೆ ಸಹಕಾರ ನೀಡುವುದಾಗಿ ಶಾಸಕರು ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಮಾ.ಸ.ನಂಜುಂಡಸ್ವಾಮಿ, ಮಾ.ವೆಂ.ಸ. ಪ್ರಸಾದ್, ಚೇತನರಾಜ್ ಕಣ್ಣೂರು, ಗೌತಮ್ ಪಿ., ಗಣಪತಿ ಮಂಡಗಳಲೆ ಇದ್ದರು.

ಅಡುಗೆ ಅನಿಲ ಬೆಲೆ ಏರಿಕೆ ಖಂಡಿಸಿ ಪ್ರತಿಭಟನೆ



ಶಿವಮೊಗ್ಗ : ಅಡುಗೆ ಅನಿಲದ ಬೆಲೆ ಏರಿಸಿರುವುದನ್ನು ಖಂಡಿಸಿ ಜಿಲ್ಲಾ ಯುವ ಕಾಂಗ್ರೆಸ್ ಸಮಿತಿ ವತಿಯಿಂದ ನಗರದ ಸೀನಪ್ಪಶೆಟ್ಟಿ (ಗೋಪಿ)ವೃತ್ತದಲ್ಲಿ ಸೌದೆ ಒಲೆಯನ್ನು ಹಚ್ಚಿ ಟೀ ಮಾಡುವ ಮೂಲಕ ಪ್ರತಿಭಟನೆ ನಡೆಸಲಾಯಿತು.

ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಪದೇ ಪದೇ ಅಗತ್ಯ ವಸ್ತುಗಳ ಬೆಲೆ ಏರಿಕೆ ಮಾಡುವ ಮೂಲಕ ಜನಸಾಮಾನ್ಯರ ಮೇಲೆ ಗಧಾ ಪ್ರಹಾರ ನಡೆಸುತ್ತಿದೆ. ಇದನ್ನು ಜಿಲ್ಲಾ ಯುವ ಕಾಂಗ್ರೆಸ್ ತೀವ್ರವಾಗಿ ಖಂಡಿಸುತ್ತದೆ. ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದ ತೆರಿಗೆ ಹೊರೆ ಅಧಿಕವಾಗಿ ಜನಸಾಮಾನ್ಯರ ಬದುಕು ದುಸ್ತರವಾಗಿದೆ. ಬಡ ಮತ್ತು ದಿನಗೂಲಿ ಕಾರ್ಮಿಕರು, ವಿದ್ಯಾರ್ಥಿಗಳು, ಜನಸಾಮಾನ್ಯರು ಹಾಗೂ ಮಧ್ಯಮವರ್ಗದ ಕುಟುಂಬಗಳ ಮೇಲೆ ಭಾರೀ ಹೊರೆ ಬಿದ್ದಿದೆ. ಎಂದು ದೂರಿದರು.

ಅಡುಗೆ ಅನಿಲದ ಬೆಲೆಯನ್ನು 60 ರೂ. ಹಾಗೂ ವಾಣಿಜ್ಯ ಸಿಲಿಂಡರ್ ಬೆಲೆಯನ್ನು 115 ರೂ.ಗಳಿಗೆ ಹೆಚ್ಚಿಸಿರುವುದು ಖಂಡನೀಯ. ಬಿಜೆಪಿ ಅಧಿಕಾರಕ್ಕೆ ಬಂದ ದಿನದಿಂದಲೂ ಉದ್ಯೋಗ ಸೃಷ್ಟಿ ಮಾಡುವುದನ್ನಾಗಲೀ, ಜನಸಾಮಾನ್ಯರ ಜೀವನವನ್ನು ಸರಳಗೊಳಿಸುವ ಕೆಲಸವನ್ನಾಗಲಿ ಮಾಡುತ್ತಿಲ್ಲ. ಬದಲಿಗೆ ಜನರಿಂದ ಮಿತಿಮೀರಿ ತೆರಿಗೆ ವಸೂಲು ಮಾಡುವಮೂಲಕ ಜನರನ್ನು ಸುಲಿಗೆಮಾಡಲು ಹೊರಟಿದೆ ಎಂದು ಆರೋಪಿಸಿದರು.

ರಾಷ್ಟ್ರಪತಿಗಳು ಕೂಡಲೇ ಮಧ್ಯಪ್ರವೇಶ ಮಾಡಿ ಕೇಂದ್ರ ಸರ್ಕಾರದ ಬೆಲೆ ಏರಿಕೆ ನಿರ್ಧಾರ ಹಿಂಪಡೆಲು ನಿರ್ದೇಶನ ನೀಡಬೇಕು. ಇಲ್ಲವೇ ಜನವಿರೋಧಿ ಕೇಂದ್ರ ಸರ್ಕಾರವನ್ನು ಕಿತ್ತೊಗೆಯಬೇಕು ಆಗ್ರಹಿಸಿದರು.

ಜವಳಿ ನಿಗಮದ ಅಧ್ಯಕ್ಷ ಕೆ. ಚೇತನ್‌ಗೌಡ, ಯುವ ಕಾಂಗ್ರೆಸ್ ಸಮಿತಿ ಜಿಲ್ಲಾಧ್ಯಕ್ಷ ಹರ್ಷಿತ್ ಗೌಡ, ಚರಣ ಜೆ.ಶೆಟ್ಟಿ, ಹೆಚ್.ಸಿ.ಯೋಗೀಶ್, ಮಧು, ಶಿವಕುಮಾರ್, ಸುವರ್ಣ ನಾಗರಾಜ್, ಚಿನ್ನಪ್ಪ, ವಿಜಯ್ ಸೇರಿದಂತೆ ಹಲವರಿದ್ದರು.



ಹೊಸನಗರ: ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯ ಮುಂಭಾಗ ಶಿವಮೊಗ್ಗ ಮಲ್ಲಿ ಪರ್ಪಸ್ ಸೋಶಿಯಲ್ ಸರ್ವಿಸ್ ಸೊಸೈಟಿ, ಸ್ತ್ರೀಬಂಧು ಸ್ವಸಹಾಯ ಸಂಘಗಳ ಒಕ್ಕೂಟದ ಆಶ್ರಯದಲ್ಲಿ ಹಸಿದವರಿಗೆ ಅನ್ನ ಎಂಬ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಚರ್ಚ್‌ನ ಧರ್ಮಗುರು ಸ್ಯೈಮನ್ ಹೊರ್ಟ ಹೋಲಿ ರೆಡಿಮರ್ ಮುಖ್ಯ ಶಿಕ್ಷಕಿಯಾದ ವಿಲ್ಲಾ ಪಿಂಟೊ, ಸಿಸ್ಟರ್ ರೋಸಿಟಾ, ಡಾ. ಲಿಂಗರಾಜ್, ಡಾ. ಹೇಮಂತ್, ಮಧುಸೂದನ್ ಮತ್ತಿತರರು ಉಪಸ್ಥಿತರಿದ್ದರು.

ಪಟ್ಟಣ ಪಂಚಾಯಿತಿ ಆಡಳಿತ ನಿರ್ಲಕ್ಷ್ಯ । ಸಾರ್ವಜನಿಕರ ಆಕ್ರೋಶ

ಸೊಳ್ಳೆ ಉತ್ಪಾದನಾ ಕೇಂದ್ರವಾದ ಅಣ್ಣಯ್ಯ ಬಡಾವಣೆ !

ತೀರ್ಥಹಳ್ಳಿ: ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಕೆಲವು ಕಡೆಗಳಲ್ಲಿ ಡ್ರೈನೇಜ್ ಅವ್ಯವಸ್ಥೆಯಾದರೆ ಶೀಘ್ರ ಪರಿಹಾರ ದೊರೆಯುವುದಿಲ್ಲ, ಚರಂಡಿ ಬ್ಲಾಕ್ ಆಗಿ ದಿನಗಟ್ಟಲೇ ರಸ್ತೆಗಳ ಮೇಲೆ ನೀರು ಹರಿಯುತ್ತ ದುರ್ವಾಸನೆಯಿಂದ ಕೂಡಿರುತ್ತದೆ. ಪಟ್ಟಣದ ವಾರ್ಡ್ ನಂ.5ರ ಅಣ್ಣಯ್ಯ ಗೌಡ ಬಡಾವಣೆಯಲ್ಲಿ ಡ್ರೈನೇಜ್ ಅವ್ಯವಸ್ಥೆಯಿಂದಾಗಿ ಕೊಳಚೆ ನೀರು ಹೊರಬರುವ ಮೂಲಕ ಪರಿಸರ ದುರ್ವಾಸನೆಯಿಂದ ಕೂಡಿದೆ ಎಂದು ಸ್ಥಳೀಯ ಸಾರ್ವಜನಿಕರು ಆರೋಪಿಸಿದ್ದಾರೆ.

ಇಲ್ಲಿನ ಡ್ರೈನೇಜ್‌ನಿಂದ ಹೊರಬರುವ ಕೊಳಚೆ ಮಲ ವಿಸರ್ಜನ ಪಿಟ್ ಬಾವಿಯ ನೀರನ್ನು ನೇರವಾಗಿ ಜನರು ರಾತ್ರಿಯ ಸಮಯದಲ್ಲಿ ಚರಂಡಿಗೆ ಬಿಡುವುದರಿಂದ ಕೊಳಚೆ ನೀರು ರಸ್ತೆಯ ಉದ್ದಗಲಕ್ಕೂ ಹರಿಯುತ್ತಿದೆ. ಸ್ಥಳೀಯರು ಮೂಗು ಮುಚ್ಚಿಕೊಂಡು ಅನಾರೋಗ್ಯ ಭೀತಿಯಿಂದ ಓಡಾಡುವ ಪರಿಸ್ಥಿತಿ ನಿರ್ಮಾಣಗೊಂಡಿದೆ. ಇಲ್ಲಿ ಓಡಾಡುವ ಸ್ಥಳೀಯರು ಮಾಸ್ಕ್ ಧರಿಸಿಯೇ ಓಡಾಡಬೇಕಾದಂತಹ ಪರಿಸ್ಥಿತಿ ಕೂಡ



ನಿರ್ಮಾಣಗೊಂಡಿದೆ.

ಇತ್ತ ಚರಂಡಿಯಲ್ಲಿ ನಿಂತ ನೀರಿನಿಂದ ಆರೋಗ್ಯಕ್ಕೆ ಮಾರಕವಾದ ಸೊಳ್ಳೆಗಳ ಉತ್ಪಾದಿಸುವ ಕಾರ್ಖಾನೆಯಂತಾಗಿದೆ. ಜನರಿಗೆ ಡೆಂಗ್ಯೂ, ಮಲೇರಿಯಾ ಜ್ವರಬಾಧೆಗಳ ಭೀತಿ ಎದುರಿಸುತ್ತಿದ್ದಾರೆ. ಈ ಲೇಔಟ್ ಪರಿಸರದಲ್ಲಿ ಹರಡಿರುವ ವಾಕರಿಕೆ ತರಿಸುವ ಅಸಹ್ಯ ವಾಸನೆಯಿಂದಾಗಿ, ಆಹಾರವನ್ನೂ ಸೇವಿಸಲಾಗದ ಸ್ಥಿತಿ ಸ್ಥಳೀಯರದ್ದಾಗಿದೆ.

ಅಣ್ಣಯ್ಯ ಗೌಡ ಬಡಾವಣೆ ಮುಖ್ಯರಸ್ತೆಯಲ್ಲಿ ದುರ್ವಾಸನೆ ಬರುತ್ತಿರುವುದನ್ನು ಅಧಿಕಾರಿಗಳು ಗಮನಿಸಿ ಈ ಸಮಸ್ಯೆ ಬಗ್ಗೆ ಶೀಘ್ರ ಸ್ಪಂದಿಸಿ ಪರಿಹಾರ ನೀಡುವಂತೆ ಪಟ್ಟಣ ಪಂಚಾಯತಿಯನ್ನು ಅನೇಕ ಬಾರಿ ಒತ್ತಾಯಿಸಿದ್ದಾರೆ. ಆದರೆ ಸಂಬಂಧಪಟ್ಟ ಪಟ್ಟಣ ಪಂಚಾಯಿತಿ ಸಿಬ್ಬಂದಿಗಳು ಆರು ತಿಂಗಳಿಗೊಮ್ಮೆ ಬಂದು ಕೆಲವೊಂದು ಕಡೆ ಚರಂಡಿಗೆ ತಾಗಿಕೊಂಡಿರುವ ಗಿಡಗಂಟಿಗಳನ್ನು ಕಡಿದು ಪುನಃ ಚರಂಡಿಗೆ ಕಸಹಾಕಿ ಹೋಗಿದ್ದಾರೆ .

ಪಟ್ಟಣದಲ್ಲಿ ಚರಂಡಿ ಸ್ವಚ್ಛತೆ ವ್ಯವಸ್ಥೆ ಹಿಂದೆ ಬಿಜೆಪಿ ಆಡಳಿತದಲ್ಲಿದ್ದಾಗ ಉತ್ತಮವಾಗಿತ್ತು. ಆದರೆ ಈಗ ಸ್ವಚ್ಛತೆ ಕುಲಗೆಟ್ಟ ಹೋಗಿದೆ. ಪೂರ್ಣಪ್ರಮಾಣದಲ್ಲಿ ಚರಂಡಿಯಲ್ಲಿರುವ ಹುಳು ತೆಗೆದು ವ್ಯವಸ್ಥಿತವಾಗಿ ಸ್ವಚ್ಛತೆ ನಡೆಸಿದರೆ ಮಾತ್ರ ಈ ಸಮಸ್ಯೆ ಪರಿಹಾರವಾಗಿತ್ತದೆ ಎಂಬುದು ಪಟ್ಟಣ ಪಂಚಾಯಿತಿ ಮಾಜಿ ಸದಸ್ಯರಾದ ನಯನ ಜಯಪ್ರಕಾಶ್ ಶೆಟ್ಟಿ ಅವರ ಸಲಹೆ ಆಗಿದೆ.

ಆನಂದಪುರ: ಅದ್ಧೂರಿ ಮಾರಿಕಾಂಬಾ ಜಾತ್ರೆಗೆ ಕ್ಷಣಗಣನೆ

ಆನಂದಪುರ : ಇಲ್ಲಿನ ಕಡ್ಲೆಹಂಕ್ಲು ಮಾರಿಕಾಂಬಾ ಜಾತ್ರಾ ಮಹೋತ್ಸವದಲ್ಲಿ ದೇವಸ್ಥಾನದ ಮುಂಭಾಗದಸಭಾಂಗಣದಲ್ಲಿನಡೆಯುವ ಸಾಂಸ್ಕೃತಿಕ ಕಾರ್ಯಕ್ರಮಗಳು ಜಾತ್ರೆಗೆ ಮೆರುಗು ನೀಡಲಿದೆ.



ಮಾ. 11ರಂದು ಸಂಜೆ 6.30ಕ್ಕೆ ಶ್ರೀಧರ ಭಜನಾ ಮಂಡಳಿಯಿಂದ ಭಜನೆ, ಸಾಂಸ್ಕೃತಿಕ ಸಂಭ್ರಮ ಕಾರ್ಯಕ್ರಮವನ್ನು ಮುರುಘಾಮಠದ ಮಲ್ಲಿಕಾರ್ಜುನ ಮುರುಘರಾಜೇಂದ್ರ ಸ್ವಾಮೀಜಿ ಉದ್ಘಾಟಿಸುವರು. ಅಧ್ಯಕ್ಷತೆಯನ್ನು ಜಾತ್ರಾ ಸಮಿತಿಯ ಅಧ್ಯಕ್ಷ ಎಲ್.ಎಸ್. ವೆಂಕಟೇಶ್ ವಹಿಸಲಿದ್ದಾರೆ. ಶಾಸಕ ಗೋಪಾಲಕೃಷ್ಣ ಬೇಳೂರು, ತಹಶೀಲ್ದಾರ್ ರಶ್ಮಿ ಹಾಲೇಶ್, ಎಎಸ್ಪಿ ಬೆನಕ ಪ್ರಸಾದ್ ಭಾಗವಹಿಸಲಿದ್ದಾರೆ. ರಾತ್ರಿ 10ಕ್ಕೆ ಸಂಪೂರ್ಣ ಶ್ರೀದೇವಿ ಮಹಾತ್ಮೆ ಎಂಬ ಯಕ್ಷಗಾನ ನಡೆಯಲಿದೆ.

ಮಾ. 12ರಂದು ಸಂಜೆ 6.30ಕ್ಕೆ ಮಾರಿಕಾಂಬಾ ಭಜನಾ ಮಂಡಳಿಯಿಂದ ಭಜನೆ, ವಸುದಾ ಪ್ರಭು ಅವರಿಂದ ಸಂಗೀತ, ಭರತ ನಾಟ್ಯ ನಂತರ ಸಾಗರದ ವಿಶೇಷ ಚೇತನ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ, ರಾತ್ರಿ 8.30 ಕ್ಕೆ ಮಹಾಲಾಸ ಮೆಲೋಡೀಸ್ ಅವರಿಂದ ರಸಮಂಜರಿ ಕಾರ್ಯಕ್ರಮ ನಡೆಯಲಿದೆ. ಮಾ. 13ರಂದು ಸಂಜೆ 6 ಕ್ಕೆ ಕೋಟೆ ಆಂಜನೇಯ ಸ್ವಾಮಿ ಭಜನಾ ಮಂಡಳಿ ಹಾಗೂ ಶ್ರೀರಾಮ ಸೇವಾ ಭಜನಾ ಮಂಡಳಿ ವತಿಯಿಂದ ಭಜನೆ ಪುನೀತ್ ಮೆಲೋಡೀಸ್ ಅವರಿಂದ ನೃತ್ಯ ಹಾಗೂ ರಸಮಂಜರಿ ಕಾರ್ಯಕ್ರಮ, ರಾತ್ರಿ 9ಕ್ಕೆ ಜೀ ಕನ್ನಡ ರಿಯಾಲಿಟಿ ಶೋ ಚಾಂಪಿಯನ್ ಜ್ಞಾನ ಐತಾಳ್ ನೇತೃತ್ವದ ಹೆಜ್ಜೆನಾದ ತಂಡದಿಂದ ರಸಮಂಜರಿ ಕಾರ್ಯಕ್ರಮ ನಡೆಯಲಿದೆ.

ಮಾ.14ರಂದು ರಾತ್ರಿ 8 ಕ್ಕೆ ಸಭಾ ಕಾರ್ಯಕ್ರಮ ನಡೆಯಲಿದ್ದು, ಸಂಸದರಾದ ಬಿ. ವೈ ರಾಘವೇಂದ್ರ, ಮಾಜಿ ಸಚಿವ ಹರತಾಳು ಹಾಲಪ್ಪ, ಬಿಜೆಪಿ ಮುಖಂಡರಾದ ಮೇಘರಾಜ್, ರತ್ನಾಕರ್ ಹೊನಗೋಡು, ಸಾಗರ ವೃತ್ತ ನಿರೀಕ್ಷಕರಾದ ಸಂತೋಷ್ ಶೆಟ್ಟಿ ಭಾಗವಹಿಸಲಿದ್ದಾರೆ. ರಾತ್ರಿ 9ಕ್ಕೆ ಜೀ ಕನ್ನಡ ಸರಿಗಮಪ ಖ್ಯಾತಿಯ ಕಲಾವಿದರಿಂದ ರಸಮಂಜರಿ ಕಾರ್ಯಕ್ರಮ ನಡೆಯಲಿದೆ.

ಮಾ. 15ರಂದು ಸಭಾ ಕಾರ್ಯಕ್ರಮ ನಡೆಯಲಿದ್ದು, ಶಾಸಕರಾದ ಗೋಪಾಲಕೃಷ್ಣ ಬೇಳೂರು, ಮಾಜಿ ಸಚಿವ ಕಾಗೋಡು ತಿಮ್ಮಪ್ಪ, ಪ್ರಮುಖರಾದ ಅನಿತಾ ಕುಮಾರಿ, ಗಜೇಂದ್ರ, ಉಮೇಶ್, ಚೇತನ್ ರಾಜ್ ಕಣ್ಣೂರ್, ಸೋಮಶೇಖರ್ ಲ್ಯಾವಿಗೆರೆ ಭಾಗವಹಿಸಲಿದ್ದಾರೆ. ಮಾ. 16 ಸಂಜೆ 6 ಕ್ಕೆ ಜೀ ಕನ್ನಡ ಖ್ಯಾತಿಯ ಡಿಕೆ ಉಮೇಶ್ ಅವರಿಂದ ರಸಮಂಜರಿ ಕಾರ್ಯಕ್ರಮ ನಡೆಯಲಿದೆ.

ರಾಜ್ಯಮಟ್ಟದ ಕುಸ್ತಿ ಪಂದ್ಯಾವಳಿ: ಮಾರ್ಚ್ 14 ಮತ್ತು 15 ರಂದು ಮಧ್ಯಾಹ್ನ 3.30 ರಿಂದ 6.30 ರವರೆಗೆ ರಾಜ್ಯಮಟ್ಟದ ಕುಸ್ತಿ ಪಂದ್ಯಾವಳಿ ನಡೆಯಲಿದೆ. ವಿಜೇತರಿಗೆ ನಗದು ಬಹುಮಾನ ನೀಡಲಾಗುವುದು ಎಂದು ಸಮಿತಿ ಪ್ರಕಟಣೆಯಲ್ಲಿ ತಿಳಿಸಿದೆ.

ಟಿಸಿ ದುರಸ್ತಿಗೆ ಆಗ್ರಹಿಸಿ ತಳಲೆ ಗ್ರಾಮಸ್ಥರ ಪ್ರತಿಭಟನೆ

ರಿಪ್ಪನ್ ಪೇಟೆ: ಸಮೀಪದ ತಳಲೆ ಗ್ರಾಮದಲ್ಲಿ ಟಿಸಿ ಸುಟ್ಟು ಹೋಗಿ 7 ದಿನ ಕಳೆದರೂ ದುರಸ್ತಿ ಮಾಡದ ಹಿನ್ನೆಲೆಯಲ್ಲಿ ಗ್ರಾಮದಲ್ಲಿ ವಿದ್ಯುತ್ ಸಂಪರ್ಕ ಕಡಿತಗೊಂಡು ಕುಡಿಯುವ ನೀರು ಹಾಗೂ ತೋಟಗಳಿಗೆ ನೀರು ಸಾಧ್ಯವಾಗಿರುವುದಿಲ್ಲ, ಕೂಡಲೇ ಸರಿಪಡಿಸುವಂತೆ ಆಗ್ರಹಿಸಿ ಮೆಸ್ಕಾಂ ಕಚೇರಿ ಮುಂಭಾಗ ಗ್ರಾಮಸ್ಥರು ಪ್ರತಿಭಟನೆ ನಡೆಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ರೈತ ಚಂದ್ರಶೇಖರ್, ಗ್ರಾಮದಲ್ಲಿ ಟಿಸಿ ಸುಟ್ಟು ಹೋಗಿ ಏಳು ದಿನಗಳಾದರೂ ವಿದ್ಯುತ್ ಸಂಪರ್ಕ ಕಲ್ಪಿಸಿಲ್ಲ, ನೀರಿಲ್ಲದೆ ಅಡಿಕೆ ತೋಟಗಳು ಹಾಳಾಗುತ್ತಿವೆ. ಕುಡಿಯಲು ಸಹ ನೀರಿಲ್ಲ , ಮತ್ತೊಂದು ಕಡೆ ಕತ್ತಲಲ್ಲಿ ಬದುಕುವ ಪರಿಸ್ಥಿತಿ ಎದುರಾಗಿದೆ. ಕೂಡಲೇ ಹೊಸ ಟಿಸಿ ಅಳವಡಿಸಬೇಕು ಎಂದು ಆಗ್ರಹಿಸಿದರು.

ಕಗ್ಗಲಿ ಲಿಂಗಪ್ಪ ಮಾತನಾಡಿ, ಹೊಸ ಟಿಸಿ ಅಳವಡಿಸುವವರೆಗೆ ನಮ್ಮ ಹೋರಾಟ ಮುಂದುವರಿಯಲಿದೆ. ಮೆಸ್ಕಾಂ ಅಧಿಕಾರಿಗಳು ಕೂಡಲೇ ಸ್ಥಳಕ್ಕೆ ಭೇಟಿ ನೀಡಿ ಸಮಸ್ಯೆ ಪರಿಹರಿಸಬೇಕು. ಇಲ್ಲವಾದರೆ ಅಹೋರಾತ್ರಿ ಧರಣಿ



ನಡೆಸುತ್ತೇವೆ ಎಂದು ಎಚ್ಚರಿಸಿದರು.

ಸ್ಥಳಕ್ಕಾಗಮಿಸಿದ ಮೆಸ್ಕಾಂ ಸಹಾಯಕ ಎಂಜಿನಿಯರ್ ಅಶ್ವಲ್ ಮಾತನಾಡಿ, ರೈತರ ಸಮಸ್ಯೆಯನ್ನು ನಾವು ಅರಿತಿದ್ದೇವೆ. ಹಿರಿಯ ಅಧಿಕಾರಿಗಳೊಂದಿಗೆ ಮಾತುಕತೆ ನಡೆಸಿದ್ದೇವೆ. ಸಾಗರದಿಂದ ಸಂಜೆಯೊಳಗೆ ಹೊಸ ಟಿಸಿ ತರಲಾಗುತ್ತದೆ. ರೈತರ ಕಷ್ಟಗಳಿಗೆ ಇಲಾಖೆ ಖಂಡಿತ ಸ್ಪಂದಿಸುತ್ತದೆ ಎಂದು ಭರವಸೆ ನೀಡಿದರು. ಆದರೆ ಟಿಸಿ ಅಳವಡಿಸುವವರೆಗೆ ಹೋರಾಟ ನಿಲ್ಲಿಸುವುದಿಲ್ಲ ಎಂದು ಗ್ರಾಮಸ್ಥರು ಪಟ್ಟು ಹಿಡಿದರು. ದ್ವಿತೀಯ ಪಿಯುಸಿ ಪರೀಕ್ಷೆಗಳು ನಡೆಯುತ್ತಿವೆ. ವಿದ್ಯುತ್ ಇಲ್ಲದ ಕಾರಣ ಮಕ್ಕಳಿಗೆ ಓದಲು ಸಾಧ್ಯವಾಗುತ್ತಿಲ್ಲ, ಫೆಬ್ರವರಿ 22ರಂದು ಸಹ ಮನವಿಯನ್ನು ಸಲ್ಲಿಸಲಾಗಿತ್ತು ತದನಂತರ ಈಗ ಕಳೆದ 5-6 ದಿನಗಳಿಂದ ಮನವಿ ಸಲ್ಲಿಸಿದ್ದರೂ ಯಾವುದೇ ಕ್ರಮ ಕೈಗೊಳ್ಳಲಿಲ್ಲ ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಬೆಳ್ಳೂರು ತಿಮ್ಮಪ್ಪ, ಶ್ಯಾಮಸುಂದರ, ನಾಗರತ್ನ, ಗೌರಮ್ಮ, ಶ್ರೇಯಸ್, ಮಂಜಪ್ಪ, ಮಾಳಿ ಕೊಲಪ್ಪ, ಮಂಜಪ್ಪ, ಕೆ ಸಿ ಷಣ್ಮುಖಪ್ಪ, ವಾಸು ಪೂಜಾರಿ, ಗಿರೀಶ್ ಕಗ್ಗಲಿ, ಯುವರಾಜ್ ಕಗ್ಗಲಿ, ಕಾರ್ತಿಕ್, ಬಸವರಾಜ್, ರಮೇಶ್ ಮಾಳಿ, ಯುವರಾಜ್ ಉಪಸ್ಥಿತರಿದ್ದರು.

ಅರಣ್ಯ ಇಲಾಖೆ ನೋಟಿಸ್: ನಗರ ಹೋಬಳಿ ರೈತರಿಂದ ಧರಣಿ

ನಗರ(ಹೊಸನಗರ): ಈವರೆಗಿನ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ರೈತರ ಕೃಷಿ ಅವಲಂಬಿತ ಕಾರ್ಮಿಕರ, ಬಡವರ ಪರ ಸೂರಿಗಾಗಿ ತಂದಿರುವ ಭೂ ಒಡೆತನದ ತಿದ್ದುಪಡಿಯನ್ನು ಕಂದಾಯ ಇಲಾಖೆ ಅರಣ್ಯ ಇಲಾಖೆ ಮೂಲಕ ಶೀಘ್ರ ಅನುಷ್ಠಾನಗೊಳ್ಳಲಿ, ಮಲೆನಾಡಿಗರ ವಾಸದ ಮನೆಯ ಭೂಮಿಗೆ ಹಕ್ಕುಪತ್ರ ಕೊಡುವ ಕೆಲಸವಾಗಲಿ, ಕಾನೂನನ್ನು ಮುಂದಿಟ್ಟುಕೊಂಡು ರೈತರ ಭೂಮಿಯನ್ನು ಅರಣ್ಯಭೂಮಿ ಮಾಡಲು ಅಥವಾ ಒಕ್ಕಲೆಬ್ಬಿಸಲು ಸಾಧ್ಯವಿಲ್ಲಾ ಎಂದು ಮಲೆನಾಡು ರೈತರ ಹೋರಾಟ ಸಮಿತಿಯ ಸಂಚಾಲಕ ತೀ.ನ.ಶ್ರೀನಿವಾಸ ಹೇಳಿದರು.

ಹೊಸನಗರ ತಾಲೂಕಿನ ನಗರದ ವಲಯ ಅರಣ್ಯಾಧಿಕಾರಿಗಳ ಕಚೇರಿಯ ಮುಂಭಾಗದಲ್ಲಿ ನಡೆಯುತ್ತಿದ್ದ ನಗರ ಹೋಬಳಿ ರೈತರ ಅನಿರ್ದಿಷ್ಟಾವಧಿಯ ಮುಷ್ಕರದಲ್ಲಿ ಪಾಲ್ಗೊಂಡು ಮಾತನಾಡಿದ ಅವರು ಮಾತನಾಡಿದರು.

ಯುವಮುಖಂಡ ಮಾಸ್ತಿಕಟ್ಟೆ ಸುಬ್ರಹ್ಮಣ್ಯ ರವರು ಮಾತನಾಡಿ, ನಗರ ಹೋಬಳಿಯ ರೈತರು 60ರ ದಶಕದಿಂದ ಈವರೆಗೆ 5 ಅಣೆಕಟ್ಟುಗಳಿಗಾಗಿ ಭೂಮಿ ತ್ಯಾಗ ಮಾಡಿದ್ದು ಈಗ ಅಳಿದುಳಿದ ರೈತ ಕುಟುಂಬಗಳಿಗೆ ಅರಣ್ಯ ಇಲಾಖೆಯಿಂದ ನೀಡುತ್ತಿರುವ ಕಿರುಕುಳ ನಿಲ್ಲಲೇಬೇಕು ಈ ಬಗ್ಗೆ ಹಿರಿಯ



ಅಧಿಕಾರಿಗಳು ಸೂಕ್ತ ನ್ಯಾಯ ಕೊಡಿಸುವವರೆಗೆ ಧರಣಿ ಮುಂದುವರಿಯುತ್ತದೆ ಎಂದರು.

ಯುವ ಮುಖಂಡ ಹಾಲಗದ್ದೆ ಉಮೇಶ್ ಮಾತನಾಡಿ, ಭೂಮಿಯ ಹಕ್ಕಿಗಾಗಿ ಪಕ್ಷಭೇದ ಮರೆತು ರೈತರ ಹೋರಾಟಕ್ಕೆ ಭಾಗವಹಿಸಿದ್ದು ನ್ಯಾಯ ಸಿಗುವರೆಗೂ ಕದಲುವುದಿಲ್ಲ ಎಂದರು.

ನಗರ ವಲಯ ಅರಣ್ಯಾಧಿಕಾರಿ ಸಂತೋಷ್ ಮಾತನಾಡಿ, ನಮ್ಮ ವ್ಯಾಪ್ತಿಯ ರೈತರಿಗೆ ನೋಟಿಸ್ ನೀಡಿರುವುದು ಹೌದಾದರೂ ಜಿಲ್ಲೆಯಲ್ಲಿ ಮೀಸಲು ಅರಣ್ಯ ಅನುಷ್ಠಾನಕ್ಕಾಗಿಯೇ ಸ್ವತಂತ್ರ ಅರಣ್ಯವ್ಯವಸ್ಥಾಪನಾ ಸಮಿತಿಯಿದ್ದು, ಈ ಸಮಿತಿಯಿಂದ ಬಂದ ನೋಟಿಸ್‌ಗಳಿಗೆ ಪೂರಕ ದಾಖಲೆ ಅಥವಾ ಆಕ್ಷೇಪಣೆಗಳನ್ನು ಸಲ್ಲಿಸಿ ಸಾಗುವಳಿ ಭೂಮಿಯ ಸಮಸ್ಯೆ ಬಗೆಹರಿಸಿಕೊಳ್ಳಲು ರೈತರಿಗೆ ಅವಕಾಶವಿರುತ್ತದೆ ಎಂದರು.

ಮುಷ್ಕರಕ್ಕೆ ಮಧ್ಯಾಹ್ನ ಭೇಟಿ ನೀಡಿದ ಹೊಸನಗರ ತಾಲೂಕಿನ ಅರಣ್ಯ ಉಪಸಂರಕ್ಷಣಾಧಿಕಾರಿ ಮೋಹನ್ ರವರು ಹಾಗೂ ನಗರ ವಲಯ ಅರಣ್ಯಾಧಿಕಾರಿ ಸಂತೋಷಮಲ್ಲನಗೌಡರ್ ಜೊತೆಯಲ್ಲಿ ಪ್ರತಿಭಟನಾನಿರತ ರೈತರೊಂದಿಗೆ ಮಾತನಾಡಿ, ಜಿಲ್ಲಾ ಅರಣ್ಯ ಸಂರಕ್ಷಣಾಧಿಕಾರಿಗಳು ಹಾಗೂ ನೋಟಿಸ್ ನೀಡಿರುವ ಅರಣ್ಯ ವ್ಯವಸ್ಥಾಪನಾ ಅಧಿಕಾರಿಗಳನ್ನು ಇನ್ನೆರಡು ದಿನಗಳಲ್ಲಿ ನಗರದ ಅರಣ್ಯ ಇಲಾಖೆಯ ಕಛೇರಿಯಲ್ಲಿ ಸೇರಿ ರೈತರೊಂದಿಗೆ ಕುಳಿತು ಸಮಸ್ಯೆ ಬಗೆಹರಿಸುವುದಾಗಿ ಭರವಸೆ ನೀಡಿದರು. ಅಧಿಕಾರಿಗಳ ಮಾತಿಗೆ ರೈತರು ಮಾರ್ಚ್11ರವರೆಗೆ ಕಾಯುವುದಾಗಿ ತಿಳಿಸಿ ಮುಷ್ಕರ ತಾತ್ಕಾಲಿಕವಾಗಿ ನಿಲ್ಲಿಸಿದರು.

ಕರಿಮನೆಯ ಹೆಚ್.ಟಿ.ರಮೇಶ್, ಗೋಪಾಲ್, ಎನ್.ವೈ.ಸುರೇಶ್ ಕಾಡಿಗ್ಗೇರಿಯ ಹೆನ್ರಿರೆಬೆಲ್ಲೋ, ಸುಧಾಕರ ಗ್ರೆಗರಿರೆಬೆಲ್ಲೋ, ಸುಮಾಸುಬ್ರಹ್ಮಣ್ಯ, ನಗರನಿತೀನ್ ನೂಲಿಗ್ಗೇರಿ ವಿಶ್ವನಾಥ್ ಮಳಲಿಸತೀಶ್ ದೇವೇಂದ್ರ, ಬೈಸೆಅರುಣ್, ಬೈಸೆಸುರೇಶ್ ಗೋಪಾಲಶೆಟ್ಟಿ ವಿನಾಯಕ್.ಸಿ ಕಾಡಿಗ್ಗೇರಿ ಗಣೇಶ್ ಉಮೇಶ್ ಕಬಳೆ, ನಿಲ್ಸಕಲ್ ಸಾದಗಲ್ ಚಕ್ರಾನಗರ ಬೈಸೆ ಸುಳಗೋಡು ನೂಲಿಗ್ಗೇರಿ ಮಳಲಿ ಕಾಡಿಗ್ಗೇರಿ ಮುಂಡಕೋಡು ಗ್ರಾಮದ ರೈತ ಮಹಿಳೆಯರು ಕೃಷಿಅವಲಂಬಿತ ಕಾರ್ಮಿಕರು ಗ್ರಾಮಸ್ಥರು ಮುಷ್ಕರದಲ್ಲಿ ಪಾಲ್ಗೊಂಡಿದ್ದರು.

ಕಳವು ಪ್ರಕರಣದ ವ್ಯಕ್ತಿ ಸೆರೆ: 3 ಕೋಟಿ ಮೌಲ್ಯದ ವಜ್ರ, ಚಿನ್ನಾಭರಣ ವಶ

• **ಬೆಂಗಳೂರು:** ಯಲಹಂಕದ ಜೂಡಿಷಿಯಲ್ ಲೇಔಟ್‌ನಲ್ಲಿ ನಡೆದಿದ್ದ ಭಾರಿ ಮೊತ್ತದ ಕಳವು ಪ್ರಕರಣವನ್ನು ಭೇದಿಸಿರುವ ನಗರ ಪೊಲೀಸರು, ರಾಜಸ್ಥಾನ ಮೂಲದ ಓರ್ವ ವ್ಯಕ್ತಿಯನ್ನು ಬಂಧಿಸಿ ಸುಮಾರು 3 ಕೋಟಿ ರೂ. ಮೌಲ್ಯದ ವಜ್ರ ಮತ್ತು ಚಿನ್ನಾಭರಣಗಳನ್ನು ವಶಪಡಿಸಿಕೊಂಡಿದ್ದಾರೆ.



ವೆಲಾರಾಮ ಮೀನಾ ಅಲಿಯಾಸ್ ಸುನೀಲ (19) ಬಂಧಿತ ಆರೋಪಿ. ಈತ ಟೈಲ್ಸ್ ಕೆಲಸ ಮಾಡಿಕೊಂಡು ಜೂಡಿಷಿಯಲ್ ಲೇಔಟ್‌ನಲ್ಲಿ ವಾಸವಾಗಿದ್ದ. ದೂರುದಾರರ ಚಿಕ್ಕಪ್ಪ ಅಮೆರಿಕಾದಲ್ಲಿ ಸಾಫ್ಟ್‌ವೇರ್ ಡೆವಲಪರ್ ಆಗಿ ಕೆಲಸ ಮಾಡುತ್ತಿದ್ದು, ಅವರ ಪತ್ನಿ ಪ್ರತಿ ಆರು ತಿಂಗಳಿಗೊಮ್ಮೆ ಅಲ್ಲಿಗೆ ಹೋಗಿ ಬರುತ್ತಿದ್ದರು. ಈ ಸಂದರ್ಭವನ್ನು ಬಳಸಿಕೊಂಡ ಆರೋಪಿ, ಕಳೆದ ಫೆ.15ರಂದು ರಾತ್ರಿ ಮನೆಯ ಟೆರೇಸ್ ಬಾಗಿಲನ್ನು ಮುರಿದು ಒಳನುಗ್ಗಿ ಚಿನ್ನಾಭರಣಗಳನ್ನು ಕಳವು ಮಾಡಿದ್ದರು. ಈ ಬಗ್ಗೆ ಯಲಹಂಕ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಪ್ರಕರಣದ ತನಿಖೆ ಕೈಗೆತ್ತಿಕೊಂಡ ಪೊಲೀಸರು ವಿವಿಧ ಆಯಾಮಗಳಲ್ಲಿ ಕಾರ್ಯಾಚರಣೆ ನಡೆಸಿ, ಫೆ.18ರಂದು ರಾಜಸ್ಥಾನದ ಮಣಗಿರಿಪಾಲ ಗ್ರಾಮದಲ್ಲಿ ಆರೋಪಿಯನ್ನು ವಶಕ್ಕೆ ಪಡೆದರು. ವಿಚಾರಣೆಯ ವೇಳೆ ಆರೋಪಿಯು ಕೃತ್ಯವನ್ನು ಒಪ್ಪಿಕೊಂಡಿದ್ದು, ಆತನ ಮನೆಯಲ್ಲಿ ಬಚ್ಚಿಟ್ಟಿದ್ದ 1.833 ಕೆ.ಜಿ. ತೂಕದ ವಜ್ರ ಮತ್ತು ಚಿನ್ನಾಭರಣಗಳನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ.

ಬಂಧಿತನನ್ನು ರಾಜಸ್ಥಾನದ ನ್ಯಾಯಾಲಯದ ಮುಂದೆ ಹಾಜರುಪಡಿಸಿ ಟ್ರಾನ್ಸಿಟ್ ವಾರಂಟ್ ಪಡೆದು ಬೆಂಗಳೂರಿಗೆ ಕರೆತಂದು, ಮಾ.6ರಂದು ಆತನನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಈ ಯಶಸ್ವಿ ಕಾರ್ಯಾಚರಣೆಯನ್ನು ಈಶಾನ್ಯ ವಿಭಾಗದ ಡಿಸಿಪಿ ಮಿಥುನ್ ಕುಮಾರ್ ಅವರ ಮಾರ್ಗದರ್ಶನದಲ್ಲಿ, ಎಸಿಪಿ ನರಸಿಂಹಮೂರ್ತಿ ಮತ್ತು ಇನ್‌ಸ್ಪೆಕ್ಟರ್ ಕೃಷ್ಣಮೂರ್ತಿ ಸಿಬ್ಬಂದಿ ತಂಡ ನಡೆಸಿದೆ.

ಗೃಹಬಳಕೆ ಅನಿಲಕ್ಕೆ ಆದ್ಯತೆ

ಪುಟ ೧➡ ಈ ಪರಿಸ್ಥಿತಿಯನ್ನು ಗಮನದಲ್ಲಿಟ್ಟು ಕೊಂಡು, ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯವು ಲಭ್ಯವಿರುವ ಅನಿಲವನ್ನು ಪ್ರಮುಖ ಬಳಕೆದಾರರಿಗೆ ಮರುಹಂಚಿಕೆ ಮಾಡುವ ನಿರ್ಧಾರ ತೆಗೆದುಕೊಂಡಿದೆ.

ಮನೆ ಬಳಕೆ ಮತ್ತು ಸಾರಿಗೆಗೆ 100% ಸರಬರಾಜು: ಸರ್ಕಾರದ ಹೊಸ ಆದೇಶದ ಪ್ರಕಾರ ಎಲ್‌ಪಿಜಿ ಉತ್ಪಾದನೆ, ಸಿಎನ್‌ಜಿ ಹಾಗೂ ಮನೆಗಳಿಗೆ ಪೈಪ್ ಮೂಲಕ ನೀಡುವ ಪಿಎನ್‌ಜಿ ಬಳಕೆದಾರರಿಗೆ ಕಳೆದ ಆರು ತಿಂಗಳ ಸರಾಸರಿ ಬಳಕೆಯ ಶೇ.100ರಷ್ಟು ಅನಿಲವನ್ನು ನೀಡಲಾಗುತ್ತದೆ. ಇದರಿಂದ ಅಡುಗೆ ಅನಿಲ ಸರಬರಾಜು ಮತ್ತು ವಾಹನಗಳಿಗೆ ಬಳಸುವ ಸಿಎನ್‌ಜಿ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗದಂತೆ ನೋಡಿಕೊಳ್ಳಲಾಗುತ್ತಿದೆ. ಕೇಂದ್ರ ಪೆಟ್ರೋಲಿಯಂ ಸಚಿವ ಹರ್ದೀಪ್ ಸಿಂಗ್ ಪುರಿ ಅವರು ಸಾಮಾಜಿಕ ಜಾಲತಾಣದಲ್ಲಿ ನೀಡಿದ ಪ್ರತಿಕ್ರಿಯೆಯಲ್ಲಿ, ದೇಶೀಯ ಬಳಕೆದಾರರಿಗೆ ಯಾವುದೇ ಕೊರತೆ ಉಂಟಾಗದಂತೆ ಸರ್ಕಾರ ಕ್ರಮ ಕೈಗೊಂಡಿದೆ ಎಂದು ಹೇಳಿದ್ದಾರೆ. ಜನರು ಆತಂಕಪಡುವ ಅಗತ್ಯವಿಲ್ಲ ಎಂದು ಅವರು ಸ್ಪಷ್ಟಪಡಿಸಿದ್ದಾರೆ.

ಗೊಬ್ಬರ ಮತ್ತು ಕೈಗಾರಿಕಾ ಕ್ಷೇತ್ರಗಳಿಗೆ ಕಡಿತ: ಪ್ರಮುಖ ಕ್ಷೇತ್ರಗಳಿಗೆ ಆದ್ಯತೆ ನೀಡಿದ ನಂತರ ಉಳಿದ ಅನಿಲವನ್ನು ಇತರ ಕ್ಷೇತ್ರಗಳಿಗೆ ನೀಡಲಾಗುತ್ತದೆ. ಗೊಬ್ಬರ ಉತ್ಪಾದನಾ ಘಟಕಗಳಿಗೆ ಕಳೆದ ಆರು ತಿಂಗಳ ಸರಾಸರಿ ಬಳಕೆಯ ಕನಿಷ್ಠ 70ರಷ್ಟು ಅನಿಲ ಒದಗಿಸಲಾಗುತ್ತದೆ.

ಇದಲ್ಲದೆ ಚಹಾ ಉದ್ಯಮ, ತಯಾರಿಕಾ ಕೈಗಾರಿಕೆಗಳು ಹಾಗೂ ಇತರ ಕೈಗಾರಿಕಾ ಬಳಕೆದಾರರಿಗೆ ಸುಮಾರು 80ರಷ್ಟು ಅನಿಲವನ್ನು ಪೂರೈಸಲಾಗುತ್ತದೆ. ನಗರ ಅನಿಲ ವಿತರಣೆ ಸಂಸ್ಥೆಗಳು (ಸಿಜಿಡಿ) ತಮ್ಮ ಕೈಗಾರಿಕಾ ಮತ್ತು ವಾಣಿಜ್ಯ ಗ್ರಾಹಕರಿಗೆ ಇದೇ ಪ್ರಮಾಣದಲ್ಲಿ ಅನಿಲ ಒದಗಿಸಬೇಕಾಗಿದೆ.

ರಿಫೈನರಿಗಳು ಮತ್ತು ಪೆಟ್ರೋಕೆಮಿಕಲ್ ಘಟಕಗಳ ಮೇಲೆ ಪರಿಣಾಮ: ಈ ಮರುಹಂಚಿಕೆಯ ಪರಿಣಾಮವಾಗಿ ಪೆಟ್ರೋಕೆಮಿಕಲ್ ಘಟಕಗಳು, ವಿದ್ಯುತ್ ಉತ್ಪಾದನಾ ಘಟಕಗಳು ಹಾಗೂ ಹೆಚ್ಚಿನ ಬೆಲೆಯ ಅನಿಲ ಬಳಕೆದಾರರಿಗೆ ಅನಿಲ ಸರಬರಾಜಿನಲ್ಲಿ ಕಡಿತವಾಗಲಿದೆ. ತೈಲ ಶುದ್ಧೀಕರಣ ಕಂಪನಿಗಳು ತಮ್ಮ ಅನಿಲ ಬಳಕೆಯನ್ನು ಕಳೆದ ಆರು ತಿಂಗಳ ಸರಾಸರಿಯ ಸುಮಾರು ಶೇ.65 ಕಡಿಮೆ ಮಾಡಿಕೊಳ್ಳಬೇಕಾಗಿದೆ.

ಇದಲ್ಲದೆ ಎಲ್‌ಪಿಜಿ ಉತ್ಪಾದನೆಯನ್ನು ಹೆಚ್ಚಿಸಲು ಸರ್ಕಾರ ಈಗಾಗಲೇ ರಿಫೈನರಿಗಳಿಗೆ ಕೆಲವು ಪೆಟ್ರೋಕೆಮಿಕಲ್ ಪ್ರಕ್ರಿಯೆಗಳ ಅನಿಲವನ್ನು ಅಡುಗೆ ಅನಿಲ ಉತ್ಪಾದನೆಗೆ ತಿರುಗಿಸುವಂತೆ ಸೂಚಿಸಿದೆ.

ಹೋಟೆಲ್ ಉದ್ಯಮಕ್ಕೆ ಭಾರೀ ಸಂಕಷ್ಟ

ಪುಟ ೧➡ **ಕೇಂದ್ರ ಸಚಿವರಿಗೆ ತೇಜಸ್ವಿ ಪತ್ರ:** ರೆಸ್ಟೋರೆಂಟ್ ಮತ್ತು ಆಹಾರ ಸೇವಾ ಉದ್ಯಮವು ದೈನಂದಿನ ಅಡುಗೆ ಕಾರ್ಯಾಚರಣೆಗಳಿಗೆ ವಾಣಿಜ್ಯ ಎಲ್‌ಪಿಜಿಯನ್ನು ಅವಲಂಬಿಸಿರುತ್ತದೆ. ಇತರ ಹಲವಾರು ವಲಯಗಳಿಗಿಂತ ಭಿನ್ನವಾಗಿ, ಹೆಚ್ಚಿನ ವಾಣಿಜ್ಯ ಅಡುಗೆಮನೆಗಳು ಪ್ರಸ್ತುತ ಪಿಎನ್‌ಜಿ ಸಂಪರ್ಕ ಅಥವಾ ವಿದ್ಯುತ್ ಅಡುಗೆ ವ್ಯವಸ್ಥೆಗಳಂತಹ ತಕ್ಷಣದ ಪರ್ಯಾಯಗಳನ್ನು ಹೊಂದಿಲ್ಲ. ಎಲ್‌ಪಿಜಿ ಸರಬರಾಜಿನಲ್ಲಿನ ಯಾವುದೇ ಅಡಚಣೆಯು ರೆಸ್ಟೋರೆಂಟ್ ಕಾರ್ಯಾಚರಣೆಗಳು, ವಲಯದಲ್ಲಿನ ಉದ್ಯೋಗ ಮತ್ತು ಗ್ರಾಹಕರಿಗೆ ಒದಗಿಸಲಾದ ಸೇವೆಗಳ ಮೇಲೆ ನೇರವಾಗಿ ಪರಿಣಾಮ ಬೀರಬಹುದು ಎಂದು ತೇಜಸ್ವಿ ಸೂರ್ಯ ಕೇಂದ್ರ ಸಚಿವ ಹರ್ದೀಪ್ ಸಿಂಗ್ ಪುರಿಗೆ ಬರೆದ ಪತ್ರದಲ್ಲಿ ಮನವಿ ಮಾಡಿದ್ದಾರೆ.

ಪಾಕ್ ಸೇರಿ ರಾಷ್ಟ್ರಗಳಿಗೆ ಇಂಧನ ಕೊರತೆಯ ಬಿಸಿ

ಪುಟ ೧➡ ಯುರೋಪ್ ಮತ್ತು ಅಮೆರಿಕದಲ್ಲೂ ಆರ್ಥಿಕ ಅಸ್ಥಿರತೆ ಎದುರಾಗುವ ನಿರೀಕ್ಷೆಯಿದೆ. ಇನ್ನು ಪಾಕ್ ಸರ್ಕಾರ ತೈಲ ಕೊರತೆ ಸಮಸ್ಯೆ ಎದುರಿಸಲು ಹಲವು ಕ್ರಮಗಳನ್ನು ತೆಗೆದುಕೊಂಡಿದೆ. ಸರ್ಕಾರದ ವೆಚ್ಚ ಕಡಿತ, ಕಡ್ಡಾಯ ವರ್ಕ್ ಫ್ರಮ್ ಹೋಮ್, ಮುಂದಿನ ಎರಡು ತಿಂಗಳು ಸರ್ಕಾರಿ ವಾಹನಗಳ ಇಂಧನ ಬಳಕೆ ಶೇ.50 ಕಡಿತ ಮತ್ತು ಶೇ.60ರಷ್ಟು ಸರ್ಕಾರಿ ವಾಹನ ಬಳಕೆ ಕಡಿತಗೊಳಿಸಲು ಪಾಕ್ ಪ್ರಧಾನಿ ಶೆಹಬಾಜ್ ಷರೀಫ್ ಆದೇಶಿಸಿದ್ದಾರೆ.

ವಿಮಾನಯಾನ ದರ ಏರಿಕೆ ಬಿಸಿ

ಪುಟ ೧➡ ಅಂತೆಯೇ ಅಂತಾರಾಷ್ಟ್ರೀಯ ಮಾರ್ಗಗಳಿಗೂ ಶುಲ್ಕ ಹೆಚ್ಚಿಸಲಾಗಿದೆ. ಪಶ್ಚಿಮ ಏಷ್ಯಾ ಮಾರ್ಗಗಳಿಗೆ 10 ಡಾಲರ್, ಆಫ್ರಿಕಾ ಮಾರ್ಗಗಳಿಗೆ 30 ಡಾಲರ್ ಹೆಚ್ಚಿಸಿ 90 ಡಾಲರ್‌ಗೆ ಮತ್ತು ದಕ್ಷಿಣ ಪೂರ್ವ ಏಷ್ಯಾ ಮಾರ್ಗಗಳಿಗೆ 20 ಡಾಲರ್ ಹೆಚ್ಚಿಸಿ 60 ಡಾಲರ್‌ನಷ್ಟು ಇಂಧನ ಶುಲ್ಕ ವಿಧಿಸಲಾಗುತ್ತದೆ.

ಕಿಡಿ ನುಡಿ

• ವಾಸುದೇವರಾವ್ ಕಕ್ಕೆನೇಜಿ

◈ ಹಿಂದುತ್ವ ಸರ್ವರಿಗೂ ಶ್ರೇಯಸ್ಸನ್ನು ಬಯಸುತ್ತದೆ. ಈ ಕಾರಣದಿಂದಾಗಿ ಭಾರತವು ಸರ್ವ ಧರ್ಮಗಳಿಗೆ ಆಶ್ರಯತಾಣವಾಗಿದೆ
– ಶ್ರೀ ವಿದ್ಯಾಪ್ರಸನ್ನ ತೀರ್ಥ ಸ್ವಾಮೀಜಿ
– ಸರ್ವ ಧರ್ಮಗಳಿಗೂ ಆಶ್ರಯತಾಣವಾಗಿದೆ ಎಂಬುದಕ್ಕಾಗಿ ಹೆಮ್ಮೆಯಾಗುತ್ತಿದೆ. ಇನ್ನೊಂದೆಡೆ ಧರ್ಮದ ಹೆಸರಿನಲ್ಲಿ ಅಧರ್ಮ ಮಾಡುವ ಮಂದಿಗೂ ಆಶ್ರಯತಾಣವಾಗುತ್ತಿದೆಯೋ ಎಂಬ ಭಯವಾಗುತ್ತಿದೆ!

ದಿನ ಭವಿಷ್ಯ

ಮೇಷ ಹೊಂದಾಣಿಕೆ ಸ್ವಭಾವ ತೋರಿ. ಹಠ, ಬೇಕಾಬಿಟ್ಟಿ ಧೋರಣೆ ಸಂಬಂಧ ಕೆಡಿಸೀತು. ವಿದ್ಯಾರ್ಥಿಗಳಿಗೆ ಪರೀಕ್ಷೆಯಲ್ಲಿ ಸಫಲತೆ.

ವೃಷಭ ನೀವು ನಿರೀಕ್ಷಿಸಿದ ಫಲ ಇಂದು ಸಿಗದು. ವೃತ್ತಿ ಕ್ಷೇತ್ರದಲ್ಲಿ ಬಯಸದ ಬೆಳವಣಿಗೆ. ನಿಮ್ಮ ಮನಸ್ಸು ಕೆಡಿಸುವ ವ್ಯಕ್ತಿಗಳ ಸಂಗದಿಂದ ದೂರವಿರಿ.

ಮಿಥುನ ನಿರಾಳ ದಿನ. ಮುಖ್ಯ ಕೆಲಸವನ್ನು ಬಹುತೇಕ ನೆರವೇರಿಸಿದ ಸಮಾಧಾನ. ಉದ್ಯಮದಲ್ಲಿ ಪ್ರಗತಿ. ಆರೋಗ್ಯ ಸುಸ್ಥಿರ. ಬಂಧುಮಿತ್ರರ ಸಹಕಾರ.

ಕಟಕ ವೃತ್ತಿಯಲ್ಲಿ ಎಲ್ಲವೂ ಉತ್ತಮವಾಗಿ ಸಾಗಲಿದೆ. ಆದರೆ ಕೌಟುಂಬಿಕ ಬದುಕಲ್ಲಿ ಏರುಪೇರು ಎದುರಿಸುವಿರಿ. ಅತಿರೇಕವಾಗಿ ವರ್ತಿಸದಿರಿ.

ಸಿಂಹ ಎಂದಿಗಿಂತ ಹೆಚ್ಚೇ ಕೆಲಸದ ಒತ್ತಡ. ಸಹಚರರ ಜತೆ ಸಂಘರ್ಷ. ಹಣಕ್ಕೆ ಸಂಬಂಧಿಸಿ ಪ್ರಮುಖ ನಿರ್ಧಾರ ತಾಳದಿರಿ. ಕಾದು ನೋಡುವುದೊಳಿತು.

ಕನ್ಯಾ ವೃತ್ತಿ ಮತ್ತು ಖಾಸಗಿ ಬದುಕಿನ ಮಧ್ಯೆ ಹೊಂದಾಣಿಕೆಯ ಕೊರತೆ. ಎರಡನ್ನೂ ಸಮಾನವಾಗಿ ನಿಭಾಯಿಸಿ. ಯಾವುದನ್ನೂ ಕಡೆಗಣಿಸಬೇಡಿ.

ತುಲಾ ಕೆಲವು ದಿನಗಳ ಕಠಿಣ ಶ್ರಮಕ್ಕೆ ಸೂಕ್ತ ಫಲ ಸಿಗಲಿದೆ. ಸಂತೃಪ್ತಿ. ವಿದ್ಯಾರ್ಥಿಗಳಿಂದ ಕಠಿಣ ಪರಿಶ್ರಮ ಅಗತ್ಯ. ನಿರ್ಲಕ್ಷ್ಯ ಸಲ್ಲದು.

ವೃಶ್ಚಿಕ ಎಲ್ಲರ ಮಾತೂ ಕೇಳುತ್ತಾ ಹೋದರೆ ನಿಮ್ಮ ಮೇಲಿನ ಒತ್ತಡ ಹೆಚ್ಚಲಿದೆ. ನೀವೇ ವಿವೇಕಯುತವಾಗಿ ಯೋಚಿಸಿ. ಮನೆಯಲ್ಲಿ ಸೌಹಾರ್ದ ಪರಿಸರ.

ಧನು ಸಂತೋಷ ಹೆಚ್ಚಿಸುವ ದಿನ. ಅದೃಷ್ಟ ನಿಮ್ಮ ಜತೆಗಿದೆ. ಕಾಡುತ್ತಿದ್ದ ಸಮಸ್ಯೆ ಪರಿಹಾರ. ಆಪ್ತರ ಜತೆಗಿನ ಭಿನ್ನಮತ ನಿವಾರಣೆ. ವೆಚ್ಚ ಅಧಿಕ.

ಮಕರ ಪ್ರಗತಿಪರ ದಿನ. ದೃಢಚಿತ್ತದಿಂದ ಕೆಲಸ ನಿರ್ವಹಿಸಿ. ಉತ್ತಮ ಫಲ ಖಂಡಿತ. ಆರ್ಥಿಕ ಸ್ಥಿತಿ ತೃಪ್ತಿಕರ. ದಂಪತಿ ಮಧ್ಯೆ ವಿರಸ ಉಂಟಾದೀತು.

ಕುಂಭ ಆರ್ಥಿಕ ಲಾಭ. ಉದ್ಯಮದಲ್ಲಿ ಯಶಸ್ಸು. ವಯಸ್ಸಾದವರು ಆರೋಗ್ಯದ ಕಡೆ ಹೆಚ್ಚು ಗಮನ ಕೊಡಿ. ಕೌಟುಂಬಿಕ ಸಾಮರಸ್ಯ.

ಮೀನ ಗ್ರಹಗತಿ ಒಳಿತನ್ನು ಸೂಚಿಸುತ್ತಿದೆ. ವೃತ್ತಿಯಲ್ಲಿ ಉನ್ನತಿ. ನಿರುದ್ಯೋಗಿಗಳಿಗೆ ಉದ್ಯೋಗಾವಕಾಶ. ಪ್ರೀತಿ, ಸ್ನೇಹದಲ್ಲಿ ವಿರಸ ಮಾಯ, ಸಮರಸತೆ ಬೆಳೆಯಲಿದೆ.

ರಾಹುಕಾಲ: 12.00-1.30
ಗುಳಿಕಕಾಲ: 10.30-12.00
ಅದೃಷ್ಟ ಸಂಖ್ಯೆ : 5,3,7,1

ಆ್ಯಸಿಡ್ ದಾಳಿ: ಸಂತ್ರಸ್ತರಿಗೆ ಸರ್ಕಾರದ ಬೆಂಬಲ | ಉತ್ತರಿಸಿದ ಸಚಿವ

₹50 ಸಾವಿರ ಮಾಸಾಶನ

• **ವಿಧಾನ ಪರಿಷತ್:** ರಾಜ್ಯದಲ್ಲಿ ಆ್ಯಸಿಡ್ ದಾಳಿಗೊಳಗಾದವರು ಜೀವಂತ ಶವವಾಗಿದ್ದಾರೆ. ಹೆತ್ತ ಮಕ್ಕಳೇ ಅವರನ್ನು ಹೊರಗಟ್ಟುತ್ತಿದ್ದಾರೆ. ಸರ್ಕಾರದಿಂದ ಮನೆಯೂ ಸಿಕ್ಕಿಲ್ಲ, ಮನೆ ಬಾಡಿಗೆ ನೀಡಲು ಯಾರೂ ಮುಂದೆ ಬರುತ್ತಿಲ್ಲ, ಅನಿವಾರ್ಯತೆಯಿಂದ ಅವರು ಆತ್ಮಹತ್ಯೆಯ ಹಾದಿ ತುಳಿದರೆ ಅದಕ್ಕೆ ಸರ್ಕಾರವೇ ಹೊಣೆ ಎಂದು ಸದಸ್ಯ ಶಿವಕುಮಾರ್ ಕೆ. ಮೇಲ್ಮನೆಗೆ ಪ್ರಸ್ತಾಪಿಸಿದರು.

ಗಮನ ಸೆಳೆಯುವ ಸೂಚನೆಗಳ ಅಡಿ ಆ್ಯಸಿಡ್ ದಾಳಿಗೊಳಗಾದ ಸಂತ್ರಸ್ತೆಯರಿಗೆ ವೈದ್ಯಕೀಯ ಚಿಕಿತ್ಸೆ, ಮಾಸಿಕ ಪರಿಹಾರ, ವೇತನ, ವಾಸಸ್ಥಳ ವಸತಿ ಸೌಲಭ್ಯ, ಸರ್ಕಾರಿ ಉದ್ಯೋಗ ಮತ್ತು ಮೀಸಲಾತಿ ಒದಗಿಸುವ ಕುರಿತು ವಿಷಯ ಪ್ರಸ್ತಾಪಿಸಿದ ಅವರು, ರಾಜ್ಯದಲ್ಲಿ ಆ್ಯಸಿಡ್ ದಾಳಿಗೊಳಗಾಗಿರುವ 169 ಜನ ಹೆಣ್ಣು ಮಕ್ಕಳ ಜೀವಂತ ನರಕ ಅನುಭವಿಸುತ್ತಿದ್ದಾರೆ. ಪ್ರೀತಿ, ಪ್ರೇಮ ನಿರಾಕರಣೆ, ದ್ವೇಷ ಮತ್ತಿತರ ಕಾರಣದಿಂದ ರಾಜ್ಯದಲ್ಲಿ 169 ಜನ ಹೆಣ್ಣು ಮಕ್ಕಳು ಆ್ಯಸಿಡ್ ದಾಳಿಗೆ ಒಳಗಾಗಿದ್ದಾರೆ. ಬಹುತೇಕರ ಮುಖ ಅತ್ಯಂತ ವಿರೂಪವಾಗಿದೆ. ಅನೇಕರಿಗೆ ತಲೆಯಲ್ಲಿ ಕೂದಲಿಲ್ಲ, ಲಕ್ಷಾಂತರ ರೂ. ಖರ್ಚು ಮಾಡಿ 10 ರಿಂದ 15 ಬಾರಿ ಪ್ಲಾಸ್ಟಿಕ್ ಸರ್ಜರಿ ಮಾಡಿಸಿಕೊಂಡಿದ್ದರೂ, ಅವರ ಮುಖ ನೋಡುವ ಸ್ಥಿತಿಯಲ್ಲಿಲ್ಲ ಎಂದು ಹೇಳಿದರು.

ಈ ಕೂಡಲೇ ಸರ್ಕಾರ ಸಂತ್ರಸ್ತರಿಗೆ ನೀಡುವ ಮಾಸಾಶನವನ್ನು 10 ರಿಂದ 15 ಸಾವಿರ ರೂ. ಗೆ ಹೆಚ್ಚಿಸಬೇಕು. ಆ್ಯಸಿಡ್ ದಾಳಿ ಮಾಡುವ ಆರೋಪಿಗೆ 3 ರಿಂದ 4 ವರ್ಷದಲ್ಲಿ ಶಿಕ್ಷೆಯಾಗಬೇಕು ಎಂದು ಆಗ್ರಹಿಸಿದರು. ಅದಕ್ಕೆ ಧ್ವನಿಗೂಡಿಸಿದ ಭಾರತಿ ಶೆಟ್ಟಿ, ಹೇಮಲತಾ ನಾಯಕ್ ಹಾಗೂ ಉಮಾಶ್ರೀ ಅವರು, ಯಾವುದೇ ತಪ್ಪಿಲ್ಲದಿದ್ದರೂ ಹೆಣ್ಣು ಮಕ್ಕಳ ಮೇಲೆ ಆಸಿಡ್ ದಾಳಿಯಾಗಿರುವುದು ಅನೇಕ ಪ್ರಕರಣಗಳಲ್ಲಿ ಕಂಡು ಬಂದಿದೆ. ಬಿ.ಎಸ್. ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದ ವೇಳೆ ಮೊದಲ ಬಾರಿಗೆ 3 ಸಾವಿರ ರೂ. ಮಾಶಾಸನ ನೀಡಿದ್ದರು. ನಂತರ ಅವರೇ ಅದನ್ನು 10 ಸಾವಿರ ರೂ.ಗೆ ಹೆಚ್ಚಿಸಿದ್ದರು. ಕನಿಷ್ಠ 25 ಸಾವಿರ ರೂ. ಮಾಶಾಸನ ನೀಡಬೇಕು. ಹೊರಗುತ್ತಿಗೆ ನೇಮಕಾತಿಯಲ್ಲಿ ಅವರಿಗೆ ಆದ್ಯತೆ ನೀಡಬೇಕು ಎಂದು ಮನವಿ ಮಾಡಿದರು.





ಸಂತ್ರಸ್ತರ ಪರ ಧ್ವನಿಗೂಡಿಸಿದ ಡಿಸಿಎಂ, ಛಲವಾದಿ
ಇದೇ ವೇಳೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ, ಸದಸ್ಯ ಪೂಜಾರ್ ಚರ್ಚೆಯಲ್ಲಿ ಪಾಲ್ಗೊಂಡು, ಸಂತ್ರಸ್ತರ ಪರ ಧ್ವನಿಗೂಡಿಸಿದರು.

▸▸ ರಾಜ್ಯದಲ್ಲಿ 169 ಜನ ಹೆಣ್ಣು ಮಕ್ಕಳು ಆ್ಯಸಿಡ್ ದಾಳಿಗೆ ಒಳಗಾಗಿದ್ದಾರೆ

ಇದಕ್ಕೆ ಉತ್ತರಿಸಿದ ಗೃಹ ಸಚಿವ ಡಾ.ಜಿ.ಪರಮೇಶ್ವರ್, ಅಮಾನವೀಯ ಕೃತ್ಯದ ಸಂತ್ರಸ್ಥರಿಗೆ ನೆರವಾಗುವುದು ನಮ್ಮ ಕರ್ತವ್ಯ. ಈವರೆಗೆ ಸರ್ಕಾರದಿಂದ 59 ಜನರಿಗೆ ತಲಾ 10 ಸಾವಿರ ರೂ. ಮಾಶಾಸನ ಸಿಗುತ್ತಿದೆ. ಇನ್ನುಮುಂದೆ ಎಲ್ಲ 169 ಜನರಿಗೆ ತಲಾ 50 ಸಾವಿರ ರೂ. ಮಾಶಾಸನ ನೀಡಲಾಗುವುದು. ಜತೆಗೆ 5 ಲಕ್ಷ ರೂ. ಸಾಲವನ್ನಾಗಿ ನೀಡದೇ ಒಂದು ಬಾರಿಗೆ ಆರ್ಥಿಕ ನೆರವು ಕಲ್ಪಿಸಲು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸಚಿವರು ಮತ್ತು ಮುಖ್ಯಮಂತ್ರಿಗಳ ಮನವೊಲಿಸುವುದಾಗಿ ಭರವಸೆ ನೀಡಿದ್ದಾರೆ. ಅಲ್ಲದೇ, ಆ್ಯಸಿಡ್ ದಾಳಿ ಸಂತ್ರಸ್ತರು ಸರ್ಕಾರದ ಪರಿಹಾರ ಪಡೆಯಲು ದಾಖಲೆಗಳ ಸಲ್ಲಿಕೆಯಲ್ಲಿ ವಿನಾಯಿತಿ ನೀಡಲಾಗುವುದು ಎಂದರು.

ಅದಕ್ಕೆ ಬೆಂಬಲ ಸೂಚಿಸಿದ ಕಾರ್ಮಿಕ ಸಚಿವ ಸಂತೋಷ್‌ಲಾಡ್, ಕಾರ್ಮಿಕ ಇಲಾಖೆಯ ಅಸಂಘಟಿತ ಕಾರ್ಮಿಕರ ನಿಗಮದಡಿಯೂ ಸಂತ್ರಸ್ತರ ಗಂಭೀರತೆಯನ್ನು ಆಧರಿಸಿ, ಗರಿಷ್ಠ 2 ಲಕ್ಷ ರೂ. ವರೆಗೆ ಪರಿಹಾರ ನೀಡಲು ಕ್ರಮ ವಹಿಸುವುದಾಗಿ ತಿಳಿಸಿದರು.

ಎಐಗೆ ತುಳು ಪಾಠ!

• **ಬೆಂಗಳೂರು:** ಡಿಜಿಟಲ್ ಯುಗದಲ್ಲಿ ಕೃತಕ ಬುದ್ಧಿಮತ್ತೆ ವೇಗವಾಗಿ ಅಭಿವೃದ್ಧಿಯಾಗುತ್ತಿದ್ದರೂ, ಡೇಟಾ ಕಡಿಮೆ ಇರುವ ಭಾಷೆಗಳು ತಂತ್ರಜ್ಞಾನದಿಂದ ಹಿಂದೆ ಬೀಳುತ್ತಿರುವುದು ದೊಡ್ಡ ಸವಾಲಾಗಿ ಉಳಿದಿದೆ. ಆದರೆ, ಸವಾಲಾಗಿ ತೆಗೆದುಕೊಂಡು ಕರ್ನಾಟಕದ ತುಳು ಭಾಷೆಯಲ್ಲಿ ಎಐ ಸಂಭಾಷಣೆ ನಡೆಸುವಂತೆ ಮಾಡುವ ಹೊಸ ವಿಧಾನವನ್ನು ಸಂಶೋಧಕರು ಅಭಿವೃದ್ಧಿಪಡಿಸಿದ್ದಾರೆ.

ಸಂಶೋಧಕರಾದ ಪ್ರಥಮೇಶ್ ದೇವಾಗ ಮತ್ತು ಪರಾಸ್ ಚೋಪ್ರಾ ಅವರು ಈ ಅಧ್ಯಯನ ನಡೆಸಿದ್ದು, ''ಮೇಕಿಂಗ್ ಲಾರ್ಜ್ ಲಾಂಗ್ವೇಜ್ ಮಾಡೆಲ್ಸ್ ಸ್ಪೀಕ್ ತುಳು: ಸ್ಟ್ರಕ್ಚರ್ಡ್ ಪ್ರಾಂಪ್ಟಿಂಗ್ ಫಾರ್ ಆ್ಯನ್ ಎಕ್ಸ್‌ಟ್ರೀಮ್ಲಿ ಲೋ ರಿಸೋರ್ಸ್ ಲಾಂಗ್ವೇಜ್'' ಎಂಬ ಶೀರ್ಷಿಕೆಯಲ್ಲಿ ಸಂಶೋಧನಾ ಪ್ರಬಂಧ ಪ್ರಕಟವಾಗಿದೆ. ತುಳು ಭಾಷೆಗೆ ಸುಮಾರು 20 ಲಕ್ಷಕ್ಕೂ ಹೆಚ್ಚು ಭಾಷಿಕರು ಇದ್ದರೂ ಡಿಜಿಟಲ್ ಮಾಹಿತಿಯ ಕೊರತೆ ಇರುವುದರಿಂದ ದೊಡ್ಡ ಭಾಷಾ ಮಾದರಿಗಳು (ಎಲ್‌ಎಲ್‌ಎಂ) ಇದನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ. ಇದನ್ನು ಗಮನದಲ್ಲಿಟ್ಟುಕೊಂಡು ಸಂಶೋಧಕರು ''ಸ್ಟ್ರಕ್ಚರ್ಡ್ ಪ್ರಾಂಪ್ಟಿಂಗ್'' ಎಂಬ ವಿಧಾನವನ್ನು ಬಳಸಿದ್ದಾರೆ. ಈ ವಿಧಾನದಲ್ಲಿ ಭಾಷೆಯ ವ್ಯಾಕರಣ ನಿಯಮಗಳು, ತಪ್ಪು ಪದಗಳನ್ನು ತಪ್ಪಿಸಲು ನಿಯಂತ್ರಣ ಸೂಚನೆಗಳು, ಹಾಗೂ ಉದಾಹರಣೆಗಳ ಮೂಲಕ ಮಾದರಿಯನ್ನು ಮಾರ್ಗದರ್ಶಿಸುವ ಕ್ರಮವನ್ನು ಬಳಸಲಾಗಿದೆ.

ವ್ಯಾಕರಣ ನಿಖರತೆ

ಈ ವಿಧಾನವನ್ನು ಜಗತ್ತಿನ ಪ್ರಮುಖ ಎಐ ಮಾದರಿಗಳಾದ ಚಾಟ್ ಜಿಪಿಟಿ, ಜೆಮಿನಿ ಮತ್ತು ಎಲ್‌ಎಲ್‌ಎಎಂಎ ಮೇಲೆ ಪರೀಕ್ಷಿಸಲಾಗಿದೆ. ಇದರಲ್ಲಿ ಬಂದ ಫಲಿತಾಂಶದ ಪ್ರಕಾರ, ತುಳು ಭಾಷೆಯ ವ್ಯಾಕರಣ ನಿಖರತೆ ಸುಮಾರು ಶೇ.85 ಮಟ್ಟಕ್ಕೆ ಏರಿದರೆ, ತುಳು ಬದಲು ಕನ್ನಡ ಪದಗಳು ಬಳಕೆಯಾಗುವ ಪ್ರಮಾಣ ಶೇ.80ರಿಂದ ಕೇವಲ ಶೇ.5ಕ್ಕೆ ಇಳಿದಿದೆ ಎಂದು ಸಂಶೋಧಕರು ತಿಳಿಸಿದ್ದಾರೆ.
ಈ ಪ್ರಯೋಗವು ಭವಿಷ್ಯದಲ್ಲಿ ತುಳು ಮಾತ್ರವಲ್ಲ, ಡೇಟಾ ಕಡಿಮೆ ಇರುವ ಅನೇಕ ಭಾರತೀಯ ಭಾಷೆಗಳಿಗೂ ಎಐ ತಂತ್ರಜ್ಞಾನವನ್ನು ತಲುಪಿಸಲು ಮಹತ್ವದ ಹೆಜ್ಜೆಯಾಗಲಿದೆ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.


ಡೇಟಾ ಇಲ್ಲದ ಭಾಷೆಯನ್ನೂ ಮಾತನಾಡುವಂತೆ ಮಾಡಿದ ಹೊಸ ಸಂಶೋಧನೆ



- ▸▸ ತುಳು ಭಾಷೆಯಲ್ಲಿ ಎಐ ಪ್ರಯೋಗ
- ▸▸ ಡೇಟಾ ಇಲ್ಲದ ಭಾಷೆಗೆ ಹೊಸ ತಂತ್ರ
- ▸▸ ಇಬ್ಬರು ಸಂಶೋಧಕರ ಅಧ್ಯಯನ
- ▸▸ ಸ್ಟ್ರಕ್ಚರ್ಡ್ ಪ್ರಾಂಪ್ಟಿಂಗ್ ವಿಧಾನ ಬಳಕೆ

ಪ್ರತಿಪಕ್ಷದ ವರ್ತನೆ ಬೇಜವಾಬ್ದಾರಿಯುತ: ಶಾ

ಪುಟ ೧➡ **ಪ್ರತಿಪಕ್ಷದ ವರ್ತನೆಯೇ ಕಾರಣ:** ಗೊಗೊಯ್ ಹೇಳಿಕೆಗೆ ಪ್ರತಿಕ್ರಿಯಿಸಿದ ಅಮಿತ್ ಶಾ, ರಿಜಿಜು ಹೆಚ್ಚು ಬಾರಿ ಮಧ್ಯಪ್ರವೇಶ ಮಾಡಿದ್ದಾರೆ ಎಂಬುದನ್ನು ಒಪ್ಪಿಕೊಂಡರೂ, ಅದಕ್ಕೆ ಕಾರಣ ಪ್ರತಿಪಕ್ಷದ ವರ್ತನೆ ಎಂದು ಹೇಳಿದರು. ಹೌದು, ರಿಜಿಜು ಅವರು ಹೆಚ್ಚು ಬಾರಿ ಮಧ್ಯಪ್ರವೇಶ ಮಾಡಿದ್ದಾರೆ. ಆದರೆ ಇಷ್ಟು ಬೇಜವಾಬ್ದಾರಿಯುತ ಪ್ರತಿಪಕ್ಷವನ್ನು ನಾವು ಹಿಂದೆ ಕಂಡಿಲ್ಲ ಎಂದು ಶಾ ಹೇಳಿದರು. ಸಂಸತ್ತಿನ ನಿಯಮಗಳನ್ನು ಉಲ್ಲಂಘಿಸಿದಾಗ ಮಧ್ಯಪ್ರವೇಶ ಮಾಡುವುದು ಅಗತ್ಯವಾಗುತ್ತದೆ ಎಂದು ಶಾ ಸ್ಪಷ್ಟಪಡಿಸಿದರು.



ನಿರ್ಣಯಕ್ಕೆ 50ಕ್ಕೂ ಹೆಚ್ಚು ಸಂಸದರ ಬೆಂಬಲ: ಲೋಕಸಭಾ ಸ್ಪೀಕರ್ ಓಂ ಬಿರ್ಲಾ ವಿರುದ್ಧ ಅವಿಶ್ವಾಸ ನಿರ್ಣಯವನ್ನು ಕಾಂಗ್ರೆಸ್ ಸಂಸದ ಮೊಹಮ್ಮದ್ ಜಾವೇದ್ ಮಂಡಿಸಿದರು. ಈ ನಿರ್ಣಯಕ್ಕೆ 50ಕ್ಕೂ ಹೆಚ್ಚು ಸಂಸದರು ಬೆಂಬಲ ಸೂಚಿಸಿದ ನಂತರ ಸಭಾಧ್ಯಕ್ಷ ಸ್ಥಾನದಲ್ಲಿದ್ದ ಬಿಜೆಪಿ ಸಂಸದ ಜಗದಾಂಬಿಕಾ ಪಾಲ್ ಚರ್ಚೆಗೆ ಅನುಮತಿ ನೀಡಿದರು. ಈ ವಿಷಯದ ಚರ್ಚೆಗೆ ಒಟ್ಟು 10 ಗಂಟೆಗಳ ಸಮಯ ನೀಡಲಾಗಿದೆ ಎಂದು ಪಾಲ್ ತಿಳಿಸಿದ್ದಾರೆ.

ಪ್ರತಿಪಕ್ಷದ ಆರೋಪಗಳೇನು?: ಒಟ್ಟು 118 ಪ್ರತಿಪಕ್ಷ ಸಂಸದರು ಈ ನಿರ್ಣಯಕ್ಕೆ ಸಹಿ ಹಾಕಿದ್ದಾರೆ. ಸ್ಪೀಕರ್ ಪಕ್ಷಪಾತಿ ರೀತಿಯಲ್ಲಿ ನಡೆದುಕೊಂಡಿದ್ದಾರೆ ಎಂಬ ಆರೋಪವನ್ನು ವಿಪಕ್ಷ ಸದಸ್ಯರು ಮಾಡಿದ್ದಾರೆ. ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ ಅವರಿಗೆ ಲೋಕಸಭೆಯಲ್ಲಿ ಮಾತನಾಡಲು ಅವಕಾಶ ನೀಡಲಾಗಲಿಲ್ಲ ಎಂಬುದು ಪ್ರಮುಖ ಕಾರಣಗಳಲ್ಲಿ ಒಂದಾಗಿದೆ. ಗೊಗೊಯ್ ತಮ್ಮ ಭಾಷಣದಲ್ಲಿ, ಈ ನಿರ್ಣಯವನ್ನು ವೈಯಕ್ತಿಕ ವೈಮನಸ್ಸಿನಿಂದ ತರಲಾಗಿಲ್ಲ, ಸಂಸದೀಯ ಸದನದ ಗೌರವವನ್ನು ಕಾಪಾಡುವ ಜವಾಬ್ದಾರಿಯ ಭಾಗವಾಗಿ ಈ ನಿರ್ಣಯವನ್ನು ತರಲಾಗಿದೆ ಎಂದು ಹೇಳಿದರು.

ಉಪಸಭಾಪತಿ ನೇಮಿಸಲು ಆಗ್ರಹ: ಇದೇ ವೇಳೆ, ಎಐಎಂಐಎಂ ಸಂಸದ ಅಸಾದುದ್ದೀನ್ ಓವೈಸಿ, ಲೋಕಸಭೆ ಉಪಸಭಾಪತಿಯ ನೇಮಕ ಕುರಿತು ಪ್ರಸ್ತಾಪಿಸಿದರು. ಕೇಂದ್ರ ಸರ್ಕಾರವು ಕಳೆದ ಹಲವಾರು ವರ್ಷಗಳಿಂದ ಉಪಸಭಾಪತಿಯನ್ನು ನೇಮಿಸಿಲ್ಲ, ಇದು ಸಾಂವಿಧಾನಿಕ ನಿರ್ವಾತವನ್ನು ಸೃಷ್ಟಿಸಿದೆ ಎಂದು ಕಾಂಗ್ರೆಸ್ ಸಂಸದ ಕೆ.ಸಿ.ವೇಣುಗೋಪಾಲ್ ಹೇಳಿದರು. ಪೀಠದಲ್ಲಿ ಕುಳಿತಿದ್ದ ಜಗದಾಂಬಿಕಾ ಪಾಲ್ ಅವರ ಅಧಿಕಾರ ವ್ಯಾಪ್ತಿಯನ್ನು ಪ್ರಶ್ನಿಸಿದ ಅವರು, ನಿಮ್ಮನ್ನು ಲೋಕಸಭಾ ಸ್ಪೀಕರ್ ನೇಮಿಸಿದ್ದಾರೆ. ಸ್ಪೀಕರ್ ವಿರುದ್ಧದ ನಿರ್ಣಯದ ಚರ್ಚೆಯನ್ನು ಉಪಸಭಾಪತಿಗಳ ಅಧ್ಯಕ್ಷತೆಯಲ್ಲಿ ನಡೆಯಬೇಕಲ್ಲವೇ ಎಂದು ಪ್ರಶ್ನಿಸಿದರು.

ವಿಪಕ್ಷಗಳ ಆಕ್ಷೇಪಣೆಗಳಿಗೆ ತಿರುಗೇಟು ನೀಡಿದ ಬಿಜೆಪಿ ಸಂಸದರಾದ ರವಿಶಂಕರ್ ಪ್ರಸಾದ್ ಮತ್ತು ನಿಶಿಕಾಂತ್ ದುಬೆ, ಈ ಆಕ್ಷೇಪವೇ ಆಧಾರರಹಿತ ಎಂದರು. ಕೇಂದ್ರ ಸಂಸದೀಯ ಸಚಿವ ಕಿರಣ್ ರಿಜಿಜು ಮಾತನಾಡಿ, ಉಪ ಸಭಾಪತಿಗಳ ವಿಷಯವನ್ನು ಚರ್ಚಿಸುವ ಅಗತ್ಯವೇ ಇಲ್ಲ ಎಂದರು.

ಬಜೆಟ್‌ನಲ್ಲಿ ಜನರಿಗೆ ಅನ್ಯಾಯ: ಅಶೋಕ

ಪುಟ ೧➡ ಹಿಂದಿನ ಯೋಜನೆಗಳ ಪ್ರಗತಿಯನ್ನು ಹೇಳದೆ ಸಾಲ ಮಾತ್ರ ಮಾಡಿದ್ದಾರೆ ಎಂದು ಟೀಕಿಸಿದರು.



ಈ ಬಾರಿಯ ಬಜೆಟ್‌ನಲ್ಲಿ 11 ಜಿಎಂದು ಉಲ್ಲೇಖಿಸಿದ್ದು, ನಗರಾಭಿವೃದ್ಧಿಯಲ್ಲಿ ಮುಂಚೂಣಿಯಲ್ಲಿದ್ದೇವೆ ಎಂದಿದ್ದಾರೆ. ಆದರೆ ಆಂಧ್ರಪ್ರದೇಶ ಸಿಎಂ ರೇವಂತ್ ರೆಡ್ಡಿ ಬೆಂಗಳೂರನ್ನು ತೆಗಳಿದ್ದಾರೆ. ಬೆಂಗಳೂರಿನ ಯಾವುದೇ ರಸ್ತೆಯು ಕಸಮುಕ್ತವಾಗಿಲ್ಲ, 10 ಸಾವಿರ ರೂ. ಲಂಚ ಪಡೆದು ಇ ಖಾತಾ ಮಾಡುತ್ತಿದ್ದಾರೆ. ಜನರ ಹೆಸರಿನ ಖಾತೆಯನ್ನು ಮರಳಿ ಜನರ ಹೆಸರಿಗೇ ಮಾಡಿಕೊಡುತ್ತಿದ್ದಾರೆ. ಇದರಿಂದಾಗಿ ಅಧಿಕಾರಿಗಳಿಗೆ ಲಾಭವಾಗಿದೆ ಎಂದು ಆರೋಪಿಸಿದರು.

ಅವೈಜ್ಞಾನಿಕ ಗ್ಯಾರಂಟಿಗಳಿಂದ ಸಾಲ: 2018ರಿಂದ 2023ರವರೆಗೆ ಜಿಎಸ್‌ಡಿಪಿ ಬೆಳವಣಿಗೆ ದರ ಸರಾಸರಿ ಶೇ.12.16ರಷ್ಟು ಇತ್ತು. ಈಗ ಶೇ.11.51ಕ್ಕೆ ಬಂದಿದೆ. ಕೋವಿಡ್ ಸಮಯದ ಹೊರತುಪಡಿಸಿ ಬಿಜೆಪಿ ಅವಧಿಯಲ್ಲಿ ಎಂದೂ ಹೀಗೆ ಕುಸಿತವಾಗಿರಲಿಲ್ಲ, ಅವೈಜ್ಞಾನಿಕ ಗ್ಯಾರಂಟಿಗಳಿಂದ 2024ರಲ್ಲಿ 92,025 ಕೋಟಿ ರೂ. 2025ರಲ್ಲಿ 1.16 ಲಕ್ಷ ಕೋಟಿ ರೂ. ಸಾಲ ಮಾಡಲಾಗಿದೆ. 3 ವರ್ಷಗಳಲ್ಲಿ 2,89,025 ಕೋಟಿ ರೂ. ಸಾಲ ಮಾಡಲಾಗಿದೆ. ಸಿದ್ದರಾಮಯ್ಯ ಅವರೇ ಮುಂದುವರಿದರೆ ಒಟ್ಟು 6 ಲಕ್ಷ ಕೋಟಿ ರೂ. ಆಗಲಿದೆ. ಇದು ಸಿದ್ದರಾಮಯ್ಯ ಅವರದ್ದೇ ಪ್ರತ್ಯೇಕ ದಾಖಲೆ ಎಂದರು.

ಕಡಿಮೆ ವೆಚ್ಚ: ಕಳೆದ ಬಜೆಟ್‌ನಲ್ಲಿ ಶೇ.59.43ರಷ್ಟು ಹಣವನ್ನು ಮಾತ್ರ ಈವರೆಗೆ ಖರ್ಚು ಮಾಡಲಾಗಿದೆ. ಉಳಿದ 41ರಷ್ಟು ಹಣ ಬಳಸಿಯೇ ಇಲ್ಲ, ಬಜೆಟ್ ಗಾತ್ರ ದೊಡ್ಡದಿದ್ದರೂ ಅನುದಾನ ಚಿಕ್ಕದಾಗಿದೆ. ಕಳೆದ ವರ್ಷದ ವೆಚ್ಚಕ್ಕೆ ಹೋಲಿಸಿದರೆ ಶೇ.3.44 ರಷ್ಟು ಕಡಿಮೆಯಾಗಿದೆ. ಇಲಾಖೆಗಳಿಗೆ 2,44,465 ಕೋಟಿ ರೂ. ಹಂಚಲಾಗಿದೆ. ಅದರಲ್ಲಿ 2,07,954 ಕೋಟಿ ರೂ. ಮಾತ್ರ ಖರ್ಚು ಮಾಡಲಾಗಿದೆ. 36,510 ಕೋಟಿ ರೂ. ಇನ್ನೂ ಖರ್ಚು ಮಾಡಿಲ್ಲ, ಕಳೆದ ವರ್ಷಕ್ಕೆ ಹೋಲಿಸಿದರೆ 5,239.10 ಕೋಟಿ ರೂ. ಕಡಿಮೆ ವೆಚ್ಚ ಮಾಡಲಾಗಿದೆ ಅಂಕಿ ಅಂಶಗಳನ್ನು ಮುಂದಿಟ್ಟರು.

ಎಸ್‌ಸಿಪಿ, ಟಿಎಸ್‌ಪಿ ಹಣ ವರ್ಗಾವಣೆ

ಎಸ್‌ಸಿಪಿ, ಟಿಎಸ್‌ಪಿಯ ಹಣದಲ್ಲಿ 2026-27ರಲ್ಲಿ ಗೃಹಲಕ್ಷ್ಮಿಗೆ 8296 ಕೋಟಿ ರೂ., ಶಕ್ತಿಗೆ 1,537 ಕೋಟಿ ರೂ. ಅನ್ನಭಾಗ್ಯಕ್ಕೆ 1,612 ಕೋಟಿ ರೂ. ಗೃಹಜ್ಯೋತಿಗೆ 2,591 ಕೋಟಿ ರೂ. ಯುವನಿಧಿಗೆ 1,062 ಸೇರಿ ಒಟ್ಟು 14,198 ಕೋಟಿ ರೂ. ಹಣವನ್ನು ವರ್ಗಾವಣೆ ಮಾಡಲಾಗಿದೆ. ಒಟ್ಟಾರೆಯಾಗಿ 53,059.45 ಕೋಟಿ ರೂ. ಹಣ ವರ್ಗಾಯಿಸಲಾಗಿದೆ. ಗ್ಯಾರಂಟಿ ಹೊರತುಪಡಿಸಿ ಯೋಜನೆಗಳಿಗೆ 30 ಸಾವಿರ ಕೋಟಿ ರೂ. ಹಣ ದುರ್ಬಳಕೆಯಾಗಿದೆ ಎಂದು ಗಮನ ಆಶೋಕ ಗಮನ ಸೆಳೆದರು.

ಕೇಂದ್ರದ ನೆರವು

ಕೇಂದ್ರ ಸರ್ಕಾರದಿಂದ 63,049 ಕೋಟಿ ರೂ. ಅನುದಾನ ಬಂದಿದೆ. 50 ವರ್ಷಕ್ಕೆ ಬಡ್ಡಿ ರಹಿತ ಸಾಲ ನೀಡಲಾಗಿದೆ. 8191 ಕಿ.ಮೀ. ರಾಷ್ಟ್ರೀಯ ಹೆದ್ದಾರಿ ನಿರ್ಮಾಣವಾಗಿದೆ. ಭಾರತ್ ಮಾಲ ಯೋಜನೆಯಲ್ಲಿ ಕರ್ನಾಟಕಕ್ಕೆ 63,304 ಕೋಟಿ ರೂ. ವೆಚ್ಚದ ಕಾರಿಡಾರ್ ಸಿಕ್ಕಿದೆ. ಮೋದಿ ಅವರಿಂದ ಬೋಯಿಂಗ್ ಸಂಸ್ಥೆ, ಎಚ್‌ಎಎಲ್ ಫ್ಯಾಕ್ಟರಿ ಸಿಕ್ಕಿದೆ. ಕೇಂದ್ರ ಸರ್ಕಾರ ಇಷ್ಟೊಂದು ಹಣ ನೀಡಿದ್ದರೂ ಆರೋಪ ಮಾಡಲಾಗುತ್ತಿದೆ ಅಶೋಕ ಹೇಳಿದರು.

ಯುಸಿಸಿ ಸಮಯ ಬಂದಿದೆ

ಪುಟ ೧➡1937ರ ಷರಿಯತ್ ಕಾಯ್ದೆ ತೆಗೆದುಹಾಕಿದರೆ, ನಂತರ ಏನು ಆಗುತ್ತದೆ? ಅದು ಅನಗತ್ಯ ಶೂನ್ಯತೆ ಉಂಟುಮಾಡುವುದಿಲ್ಲವೇ? ಎಂದು ಅರ್ಜಿದಾರರ ಪರ ವಕೀಲ ಪ್ರಶಾಂತ್ ಭೂಷಣ್ ಅವರನ್ನು ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಅವರು ಪ್ರಶ್ನಿಸಿದರು.

ಭೇದಭಾವದ ವಿಚಾರದಲ್ಲಿ ನಿಮ್ಮ ಬಳಿ ಬಹಳ ಉತ್ತಮ ಪ್ರಕರಣ ಇದೆ. ಆದರೆ ಇದನ್ನು ಶಾಸಕಾಂಗದ ವಿವೇಕಕ್ಕೆ ಬಿಟ್ಟರೆ ಉತ್ತಮವಲ್ಲವೇ? ನಿರ್ದೇಶಕ ತತ್ವಗಳ ಪ್ರಕಾರ ಏಕರೂಪ ನಾಗರಿಕ ಸಂಹಿತೆ ಜಾರಿಗೆ ತರುವ ಅಧಿಕಾರ ಶಾಸನಸಭೆಗಿದೆ ಎಂದು ಸಿಜೆಐ ಹೇಳಿದರು.

ಒಬ್ಬ ಪುರುಷನಿಗೆ ಒಬ್ಬ ಹೆಂಡತಿ ಎಂಬ ನಿಯಮ ಎಲ್ಲ ಸಮುದಾಯಗಳಿಗೂ ಸಮಾನವಾಗಿ ಅನ್ವಯವಾಗುತ್ತಿಲ್ಲ, ಆದರೆ ಅದರಿಂದಲೇ ಎಲ್ಲಾ ದ್ವಿವಿವಾಹಗಳನ್ನು ಕೋರ್ಟ್ ಅಸಂವಿಧಾನಿಕ ಎಂದು ಘೋಷಿಸಬಹುದೇ? ನಿರ್ದೇಶಕ ತತ್ವಗಳನ್ನು ಜಾರಿಗೆ ತರುವುದು ಶಾಸಕಾಂಗದ ಅಧಿಕಾರ. ಆದ್ದರಿಂದ ಈ ವಿಷಯವನ್ನು ಶಾಸನಸಭೆಯ ವಿವೇಕಕ್ಕೆ ಬಿಡುವುದು ಉತ್ತಮ ಎಂದು ನ್ಯಾ. ಬಾಗ್ಚಿ ಮತ್ತಷ್ಟು ಹೇಳಿದರು. ಈ ನ್ಯಾಯಾಲಯವು ಹಲವು ಬಾರಿ ಶಾಸನಸಭೆಗೆ ಯುಸಿಸಿ ಜಾರಿಗೆ ತರಲು ಶಿಫಾರಸು ಮಾಡಿದೆ ಎಂದು ಕೂಡ ಅವರು ಹೇಳಿದರು.

ಇದಕ್ಕೂ ಮುನ್ನ ಭೂಷಣ್ ಅವರು, ಮುಸ್ಲಿಂ ಮಹಿಳೆಯರಿಗೆ ಪುರುಷರಂತೆ ಸಮಾನ ವಾರಸುದಾರಿಕೆ ಹಕ್ಕುಗಳಿವೆ ಎಂದು ಕೋರ್ಟ್ ಘೋಷಿಸಬಹುದು ಎಂದು ವಾದಿಸಿದರು. 1937ರ ಮುಸ್ಲಿಂ ವೈಯಕ್ತಿಕ ಕಾನೂನು(ಷರಿಯತ್‌ಯತ್) ಅಪ್ಲಿಕೇಷನ್ ಕಾಯ್ದೆ ರದ್ದುಪಡಿಸಿದರೆ ಭಾರತೀಯ ಉತ್ತರಾಧಿಕಾರ ಕಾಯ್ದೆ ಅನ್ವಯವಾಗಬಹುದು ಎಂದು ಅವರು ಹೇಳಿದರು.

ಈ ವೇಳೆ ಪೀಠವು, ಕೋರ್ಟ್ ವೈಯಕ್ತಿಕ ಧಾರ್ಮಿಕ ಕಾನೂನುಗಳ ಸಂವಿಧಾನಿಕ ಸಿಂಧುತ್ವವನ್ನು ಪರಿಶೀಲಿಸಬಹುದೇ ಎಂಬ ಪ್ರಶ್ನೆಯನ್ನು ಎತ್ತಿತು. 1951ರ ಬಾಂಬೆ ಹೈಕೋರ್ಟ್‌ನ ಪ್ರಸಿದ್ಧ ನರಸು ಅಪ್ಪಾ ಮಾಳಿ ಪ್ರಕರಣವನ್ನು ಉಲ್ಲೇಖಿಸಿ, ವೈಯಕ್ತಿಕ ಕಾನೂನುಗಳು ಸಂವಿಧಾನದ ಆರ್ಟಿಕಲ್ 13 ಅನ್ವಯ ಕಾನೂನು ಎಂದು ಪರಿಗಣಿಸಲಾಗುವುದಿಲ್ಲ, ಆದ್ದರಿಂದ ಅವುಗಳನ್ನು ಮೂಲಭೂತ ಹಕ್ಕುಗಳ ಉಲ್ಲಂಘನೆ ಎಂದು ಪ್ರಶ್ನಿಸಲು ಸಾಧ್ಯವಿಲ್ಲ ಎಂದು ಹೇಳಿತ್ತು. ಇದಕ್ಕೆ ಪ್ರತಿಯಾಗಿ ಭೂಷಣ್ ಅವರು 2017ರಲ್ಲಿ ಸುಪ್ರೀಂ ಕೋರ್ಟ್ ತ್ರಿವಳಿ ತಲಾಖ್ ಪದ್ಧತಿಯನ್ನು ಅಸಂವಿಧಾನಿಕ ಎಂದು ಘೋಷಿಸಿದ್ದನ್ನು ನೆನಪಿಸಿದರು.

ಇನ್ನಷ್ಟು ಅಧ್ಯಯನ ಮಾಡಿ, ಹೆಚ್ಚಿನ ಉಲ್ಲೇಖಗಳು ಮತ್ತು ಪರ್ಯಾಯ ಪರಿಹಾರಗಳನ್ನು ನೀಡಿ. 1937ರ ಕಾಯ್ದೆಯಿಂದ ಹೊರಬರಲು ಬಯಸುವ ಕೆಲವು ಮುಸ್ಲಿಂ ಮಹಿಳೆಯರು ಮುಂದೆ ಬಂದರೆ ನ್ಯಾಯಾಂಗದ ಹಸ್ತಕ್ಷೇಪ ಸೂಕ್ತವಾಗಬಹುದು ಎಂದು ಪೀಠವು ಅಭಿಪ್ರಾಯಪಟ್ಟಿತು. ಅರ್ಜಿಯನ್ನು ತಿದ್ದುಪಡಿ ಮಾಡಲು ಅನುಮತಿ ನೀಡಿ, ನಾಲ್ಕು ವಾರಗಳ ನಂತರ ಮುಂದಿನ ವಿಚಾರಣೆ ನಡೆಸಲಾಗುತ್ತದೆ ಎಂದು ನ್ಯಾಯಪೀಠ ಹೇಳಿದೆ.

ಕೆಪಿಸಿಸಿ ಅಧ್ಯಕ್ಷ ಡಿಕೆಶಿಗೆ ಶುಭ ಹಾರೈಸಿದ ಸಿಎಂ

ಪುಟ ೧➡ ವಿರೋಧ ಪಕ್ಷವಾದ ಬಿಜೆಪಿ ಸುಳ್ಳು ಪ್ರಕರಣಗಳನ್ನು ಹಾಕಿ ಹಲವು ಬಾರೀ ಕಿರುಕಳ ನೀಡಿದರೂ, ಶಿವಕುಮಾರ್ ಅವರು ಮಣಿಯದೆ ಪಕ್ಷಕ್ಕೆ ನಿಷ್ಠರಾಗಿ ಉಳಿದಿರುವುದು ಕಾಂಗ್ರೆಸ್ ಬಗ್ಗೆ ಅವರಲ್ಲಿರುವ ರಾಜಿಯಿಲ್ಲದ ನಿಷ್ಠೆಗೆ ಸಾಕ್ಷಿಯಾಗಿದೆ. ಇದು ಕಾಂಗ್ರೆಸ್‌ನ ಲಕ್ಷಾಂತರ ಕಾರ್ಯಕರ್ತರಿಗೆ ಸ್ಫೂರ್ತಿದಾಯಕ ನಡವಳಿಕೆ ಆಗಿದೆ ಎಂದು ಹೇಳಿದ್ದಾರೆ. ಕೋಮುವಾದಿ ಶಕ್ತಿಗಳನ್ನು ಸೋಲಿಸಿ ಕಾಂಗ್ರೆಸ್ ಅಧಿಕಾರಕ್ಕೆ ತರಲು ಪಕ್ಷದ ನಾಯಕರು ಮತ್ತು ಕಾರ್ಯಕರ್ತರ ಜತೆಯಲ್ಲಿ ಡಿ.ಕೆ.ಶಿವಕುಮಾರ್ ಹಗಲಿರುಳು ದುಡಿದಿದ್ದಾರೆ. ರಾಜ್ಯವನ್ನು ಸರ್ವಜನಾಂಗದ ಶಾಂತಿಯ ತೋಟವಾಗಿ ಮತ್ತೆ ಕಟ್ಟುವಲ್ಲಿ ಶಿವಕುಮಾರ್ ನನ್ನ ಹೆಗಲಿಗೆ ಹೆಗಲಾಗಿ ನಿಂತಿದ್ದಾರೆ. ನನಗಿಂತ ಕಿರಿಯರಾದ ಶಿವಕುಮಾರ್ ಅವರಿಗೆ ಉಜ್ವಲವಾದ ರಾಜಕೀಯ ಭವಿಷ್ಯವಿದೆ. 2028ರಲ್ಲಿ ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತರಬೇಕು ಎನ್ನುವುದು ನಮ್ಮೆಲ್ಲರ ಬಯಕೆಯಾಗಿದೆ. ಇದಕ್ಕಾಗಿ ನಡೆಯುವ ಪಕ್ಷದ ಸಂಘಟನೆ ಮತ್ತು ಹೋರಾಟದಲ್ಲಿ ನಾನು ಕೂಡಾ ಜತೆಯಿರುತ್ತೇನೆ ಎಂದು ಪೋಸ್ಟ್‌ನಲ್ಲಿ ಹಂಚಿಕೊಂಡಿದ್ದಾರೆ.

ವೈದ್ಯರ ಮುಷ್ಕರ ವಾಪಸ್

ಪುಟ ೧➡ ಮುಂದಿನ 3 ತಿಂಗಳಿನಲ್ಲಿ ಎಲ್ಲ ಬೇಡಿಕೆ ಈಡೇರಿಸುವುದಾಗಿ ತಿಳಿಸಿದೆ. ಸರ್ಕಾರದ ಈ ಭರವಸೆಗೆ ವೈದ್ಯಾಧಿಕಾರಿಗಳ ಸಂಘ ಕೂಡ ಸಮ್ಮತಿಸಿದ್ದು, ಮಾ.11ರಿಂದ ಕೈಗೊಳ್ಳಬೇಕಾದ ಮುಷ್ಕರವನ್ನು ಹಿಂಪಡೆದುಕೊಂಡಿದೆ. ಸಭೆ ಬಳಿಕ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ಮುಖ್ಯಮಂತ್ರಿಗಳ ಸೂಚನೆ ಮೇರೆಗೆ ವೈದ್ಯಾಧಿಕಾರಿಗಳ ಜತೆಗೆ ಸಭೆ ನಡೆಸಿದ್ದೇವೆ. ಸಿಎನ್‌ಆರ್ ಮಾಡುತ್ತೇವೆ ಎಂದು ಹೇಳಿದ್ದೇವೆ. ಜೇಷ್ಠತಾಪಟ್ಟಿಯೂ ಸಿದ್ಧವಾಗಿದೆ. ಪಿಜಿ ಕೋರ್ಸ್ ಮಾಡಿ ಎಂದು ಕೇಳಿದ್ದರು ಅದಕ್ಕೂ ಒಪ್ಪಿದ್ದೇವೆ. ಉಳಿದಂತೆ ಹಲವು ವಿಚಾರಗಳನ್ನು ಚರ್ಚಿಸಿ, ತೀರ್ಮಾನ ಮಾಡುತ್ತೇವೆ ಎಂದರು.

ಪಶ್ಚಿಮ ಬಂಗಾಳಕ್ಕೆ ತರಾಟೆ

ಪುಟ ೧➡ ನಿಮಗೆ ಭಾರತೀಯ ನ್ಯಾಯಾಂಗ ವ್ಯವಸ್ಥೆಯ ಮೇಲೆ ನಂಬಿಕೆ ಇಲ್ಲವೆಂದು ನಿಮ್ಮ ಅರ್ಜಿ ನೋಡಿದರೆ ತಿಳಿಯುತ್ತದೆ. ನ್ಯಾಯಾಂಗ ಅಧಿಕಾರಿಗಳನ್ನು ಯಾರೂ ಪ್ರಶ್ನಿಸುವಂತಿಲ್ಲ, ಭಾರತದ ಮುಖ್ಯ ನ್ಯಾಯಮೂರ್ತಿಯಾಗಿ ನಾನಿದನ್ನು ಸಹಿಸಲಾರೆ ಎಂದು ಎಚ್ಚರಿಕೆ ನೀಡಿದ್ದಾರೆ.

ಎಸ್‌ಐಆರ್ ಮೇಲುಸ್ತುವಾರಿ ನೋಡಿಕೊಳ್ಳುವುದಕ್ಕಾಗಿ ಸುಪ್ರೀಂ ಕೋರ್ಟ್ ನೇಮಿಸಿದ ಅಧಿಕಾರಿಗಳ ನಿಷ್ಠೆಯನ್ನು ಪ್ರಶ್ನಿಸುವ ಪ್ರಯತ್ನ ಮಾಡುವವರಿಗೆ ಸುಪ್ರೀಂ ಕೋರ್ಟ್ ನ್ಯಾಯಪೀಠ ಎಚ್ಚರಿಕೆ ನೀಡಿದೆ. ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್, ನ್ಯಾಯಮೂರ್ತಿ ಆರ್.ಮಹಾದೇವನ್ ಮತ್ತು ನ್ಯಾಯಮೂರ್ತಿ ಜೋಯ್‌ಮಲ್ಯ ಬಾಗ್ಚಿ ಅವರನ್ನು ಒಳಗೊಂಡ ಸುಪ್ರೀಂ ಕೋರ್ಟ್ ತ್ರಿಸದಸ್ಯ ಪೀಠವು ನ್ಯಾಯಾಂಗ ವ್ಯವಸ್ಥೆಯ ಪ್ರಾಮಾಣಿಕತೆ ಪ್ರಶ್ನಿಸುವ ಅರ್ಜಿಗಳಿಗೆ ಛೀಮಾರಿ ಹಾಕಿದ್ದಾರೆ. ಮತದಾರ ಪಟ್ಟಿಯಿಂದ ತಮ್ಮ ಹೆಸರನ್ನು ಅಳಿಸಿಹೋಗುವ ಭಯದಿಂದ ಸಲ್ಲಿಸಿದ ಅರ್ಜಿಗಳ ಮತ್ತು ಆಕ್ಷೇಪಗಳನ್ನು ನ್ಯಾಯಾಂಗ ಅಧಿಕಾರಿಗಳು ಪರಿಶೀಲಿಸಬಾರದು ಎಂದ ಕೋರಿ ಸಲ್ಲಿಸಲಾದ ಹೊಸ ಅರ್ಜಿಯೊಂದರ ಬಗ್ಗೆ ತ್ರಿಸದಸ್ಯ ಪೀಠವು ತೀವ್ರ ಅಸಮಾಧಾನ ವ್ಯಕ್ತಪಡಿಸಿದೆ.

10.16 ಲಕ್ಷ ಅರ್ಜಿ ಪರಿಶೀಲನೆ

ಮಾ.9ರ ಸಂಜೆಯವರೆಗೆ, ಮತದಾರ ಪಟ್ಟಿಯಿಂದ ಹೆಸರು ಅಳಿಸಿಹೋಗುವ ಆತಂಕ ವ್ಯಕ್ತಪಡಿಸಿ ಸಲ್ಲಿಸಿರುವ ಸುಮಾರು 10.16 ಲಕ್ಷ ಅರ್ಜಿ ಮತ್ತು ಆಕ್ಷೇಪಣೆಗಳನ್ನು ನ್ಯಾಯಾಂಗ ಅಧಿಕಾರಿಗಳು ಪರಿಶೀಲನೆ ನಡೆಸಿದ್ದಾರೆ ಎಂದು ಸುಪ್ರೀಂ ಕೋರ್ಟ್ ಮಂಗಳವಾರ ತಿಳಿಸಿದೆ. ಆನ್‌ಲೈನ್ ಪೋರ್ಟಲ್‌ನ ತಾಂತ್ರಿಕ ದೋಷಗಳನ್ನು ಶೀಘ್ರ ಪರಿಹರಿಸಲು ಸೂಚಿಸಿದೆ.

ಕಾಂಗ್ರೆಸ್ ಕಚೇರಿಗೆ ಭೂಮಿ ಮೇಲ್ಮನೆಯಲ್ಲಿ ಗದ್ದಲ

• **ವಿಧಾನ ಪರಿಷತ್:** ರಾಜ್ಯದಲ್ಲಿ ಹಲವು ಕಡೆಗಳಲ್ಲಿ ಕಾಂಗ್ರೆಸ್ ಕಚೇರಿ ನಿರ್ಮಾಣಕ್ಕೆ ಭೂಮಿ ಕೊಟ್ಟಿರುವ ವಿಚಾರ ಸಂಬಂಧ ಆಡಳಿತ ಮತ್ತು ಪ್ರತಿಪಕ್ಷ ಸದಸ್ಯರ ಮಧ್ಯೆ ಮೇಲ್ಮನೆಯಲ್ಲಿ ಕೆಲ ಕಾಲ ವಾಗ್ವಾದ ಉಂಟಾಯಿತು.

ಕಾಂಗ್ರೆಸ್ ಕಚೇರಿ ನಿರ್ಮಾಣಕ್ಕೆ ಭೂಮಿ ನೀಡಿದ ವಿಚಾರ

ಮಂಗಳವಾರ ಪ್ರಶ್ನೋತ್ತರ ಸಮಯದಲ್ಲಿ ಬಿಜೆಪಿಯ ಡಿ.ಎಸ್.ಅರುಣ್ ಅವರು, ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷದ ಕಚೇರಿಗಳ ನಿರ್ಮಾಣಕ್ಕಾಗಿ ಸುಮಾರು 40 ಕೋಟಿ ರೂ. ಮೌಲ್ಯದ ಸರ್ಕಾರಿ ಜಾಗವನ್ನು ಕೇವಲ 2 ಕೋಟಿ ರೂ. ಗಳ ರಿಯಾಯಿತಿ ದರದಲ್ಲಿ ಮಂಜೂರು ಮಾಡಲಾಗಿದೆ. ಆದೇಶದಲ್ಲಿ ಎಕರೆಗಳ ಅಂಕಿಗಳಲ್ಲಿ ವ್ಯತ್ಯಾಸವಿದ್ದು, ಇನ್ನೊಂದರಲ್ಲಿ ಒಂದೊಂದು ಎಕರೆ ಜಾಗದಲ್ಲಿ ಕಾಂಗ್ರೆಸ್ ಭವನ ನಿರ್ಮಾಣ ಮಾಡುವುದಕ್ಕೆ ರಾಜ್ಯ ಸರ್ಕಾರ ಮುಂದಾಗಿರುವುದು ಇದೊಂದು ರೀತಿ ಹಗಲು ದರೋಡೆಯಾಗಿದೆ ಎಂದು ಹೇಳಿದರು. ಇದಕ್ಕೆ ಉತ್ತರಿಸಿದ ಸಚಿವ ಬೈರತಿ ಸುರೇಶ್, ಸಚಿವ ಸಂಪುಟದ ತೀರ್ಮಾನದಂತೆ ಕಾಂಗ್ರೆಸ್ ಕಚೇರಿ ನಿರ್ಮಿಸಲು ನಿವೇಶನ ಮಂಜೂರು ಮಾಡಲಾಗಿದೆ. ಕಂದಾಯ ಇಲಾಖೆಯಿಂದ ಯಾವುದೇ ತಕರಾರುಗಳು ಸ್ವೀಕೃತವಾಗಿಲ್ಲ. ಈ ಹಿಂದೆ ಡಿ.ಎಸ್.ಅರುಣ್ ಅವರೂ ಸಾರ್ವಜನಿಕರ ಸದುಪಯೋಗಕ್ಕೆ 2 ನಿವೇಶನವನ್ನು ರಿಯಾಯಿತಿ ದರದಲ್ಲಿ ನೀಡಲಾಗಿದೆ. ಬಿಜೆಪಿ ಕಚೇರಿಗಳಿಗೂ ನಿವೇಶನ ಕೊಡಲಾಗಿದೆ ಎಂದು ತಿಳಿಸಿದರು.

ಮಧ್ಯೆ ಪ್ರವೇಶಿಸಿದ ಛಲವಾದಿ ನಾರಾಯಣಸ್ವಾಮಿ ಅವರು, ಸರ್ಕಾರ 100 ಕಾಂಗ್ರೆಸ್ ಭವನ ಮಾಡಲು ನಿರ್ಧರಿಸಿದ್ದರು. ರಾಜಕೀಯ ಪಕ್ಷಕ್ಕೆ ನೂರಾರು ನಿವೇಶನಗಳು ಕೊಡುವುದಕ್ಕೆ ಅವಕಾಶ ಇಲ್ಲ, ಸಚಿವ ಸಂಪುಟದಲ್ಲಿ ತೀರ್ಮಾನ ಮಾಡಿದ ಕೂಡಲೇ ಕಾನೂನು ಬಾಹಿರ ಇರುವುದು ಸರಿಯಾಗುತ್ತಾ, ಏನು ಬೇಕಾದರೂ ತೀರ್ಮಾನ ಕೈಗೊಳ್ಳಬಹುದೇ ಎಂದು ಪ್ರಶ್ನಿಸಿದರು.

ಉಪಾಹಾರ ಕೂಟ



ಮಂಗಳವಾರ ರಾಷ್ಟ್ರಪತಿ ಭವನದಲ್ಲಿ ಕರ್ನಾಟಕ, ಆಂಧ್ರಪ್ರದೇಶ ಹಾಗೂ ಕೇರಳದ ಸಂಸದರಿಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಉಪಾಹಾರ ಕೂಟ ಆಯೋಜಿಸಿದ್ದರು. ಈ ವೇಳೆ ಉಪ ರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್, ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ, ಕೇಂದ್ರ ಸಚಿವರಾದ ರಾಜನಾಥ್ ಸಿಂಗ್, ನಿರ್ಮಲಾ ಸೀತಾರಾಮನ್, ಜೆ.ಪಿ. ನಡ್ಡಾ, ಎಚ್.ಡಿ. ಕುಮಾರಸ್ವಾಮಿ ಸೇರಿದಂತೆ ರಾಜ್ಯದ ಸಂಸದರು ಉಪಸ್ಥಿತರಿದ್ದರು.

ಬಾಕಿ ಹಣ ವಾರದೊಳಗೆ ನೀಡಲು ಕ್ರಮ: ಖಂಡ್ರೆ

• **ವಿಧಾನ ಪರಿಷತ್:** ಇತ್ತೀಚೆಗೆ ಮಡಿಕೇರಿಯಲ್ಲಿ ಆನೆ ದಾಳಿಯಿಂದ 2 ಪ್ರಕರಣಗಳಲ್ಲಿ ಮೃತಪಟ್ಟ ಇಬ್ಬರೂ ಕುಟುಂಬಸ್ಥರಿಗೆ ಈಗಾಗಲೇ ತಲಾ 5 ಲಕ್ಷ ರೂ. ಪರಿಹಾರ ನೀಡಲಾಗಿದ್ದು, 15 ಲಕ್ಷ ರೂ. ಬಾಕಿ ಮೊತ್ತವನ್ನು ವಾರದೊಳಗೆ ನೀಡಲಾಗುವುದು ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ಮಾಹಿತಿ ನೀಡಿದರು.



ಆನೆ ದಾಳಿಯಿಂದ ಮೃತಪಟ್ಟ ಕುಟುಂಬಸ್ಥರಿಗೆ ತಲಾ 5 ಲಕ್ಷ ಪರಿಹಾರ

ಶೂನ್ಯವೇಳೆಯಲ್ಲಿ ಸುಜಾ ಕುಶಾಲಪ್ಪ ಅವರ ಪ್ರಸ್ತಾಪಕ್ಕೆ ಪ್ರತಿಕ್ರಿಯಿಸಿದ ಸಚಿವರು, ಫೆ.28 ರಂದು ಕಾಡಿನಂಚಿನ ನಿವಾಸಿ 17 ವರ್ಷದ ಬಾಲಕಿ ಆನೆ ದಾಳಿಯಿಂದ ಮೃತಪಟ್ಟಿದ್ದರೆ, ಮಾ.9 ರಂದು ಕಾಡಿನೊಳಗೆ ವಾಸಿಸುತ್ತಿದ್ದ 55 ವರ್ಷದ ಬುಡಕಟ್ಟು ಮಹಿಳೆ ಸಾವಿಗೀಡಾಗಿದ್ದಾರೆ ಇದು ಅತ್ಯಂತ ನೋವಿನ ಸಂಗತಿ ಎಂದರು. ಜೀವಕ್ಕೆ ಬೆಲೆ ಕಟ್ಟಲು ಸಾಧ್ಯವೇ ಇಲ್ಲ. ಅರಣ್ಯ ಇಲಾಖೆ ಮಾನವ-ವನ್ಯಜೀವಿ ಸಂಘರ್ಷ ತಡೆಯಲು ಎಲ್ಲ ಕ್ರಮಗಳನ್ನು ಕೈಗೊಳ್ಳುತ್ತಿದೆ. ಆನೆ ನಿಗ್ರಹ ಕಂದಕ, ಸೌರ ವಿದ್ಯುತ್ ಬೇಲಿ ನಿರ್ವಹಣೆ ಮಾಡಲಾಗುತ್ತಿದೆ. 2 ಆನೆ ಕಾರ್ಯಪಡೆ ಕಾರ್ಯನಿರ್ವಹಿಸುತ್ತಿದೆ. ಈಗ 2 ಪುಂಡಾನೆಗಳ ಸೆರೆಗೆ ಮುಖ್ಯ ವನ್ಯಜೀವಿ ಪರಿಪಾಲಕರು ಆದೇಶ ನೀಡಿದ್ದಾರೆ ಎಂದು ತಿಳಿಸಿದರು.

ಆನೆ-ಮಾನವ ಸಂಘರ್ಷ ನಿಯಂತ್ರಿಸಲು ಶಾಶ್ವತ ಪರಿಹಾರ ಕ್ರಮಗಳ ಬಗ್ಗೆಯೂ ಸರ್ಕಾರ ಪ್ರಾಮಾಣಿಕ ಪ್ರಯತ್ನ ಮಾಡುತ್ತಿದೆ ಎಂದು ಈಶ್ವರ ಖಂಡ್ರೆ ತಿಳಿಸಿದರು. ಆನೆ-ಮಾನವ ಸಂಘರ್ಷ ನಿಯಂತ್ರಿಸಲು 2025-26ನೇ ಸಾಲಿನಲ್ಲಿ ಮಡಿಕೇರಿ ವಿಭಾಗಕ್ಕೆ 7ಕಿ.ಮೀ. ಮತ್ತು ನಾಗರಹೊಳೆ ವಿಭಾಗಕ್ಕೆ 20 ಕಿ.ಮೀ. ರೈಲು ಹಳಿ ತಡೆಗೋಡೆ ಮಂಜೂರಾಗಿದ್ದು, ಶೀಘ್ರ ಕಾಮಗಾರಿ ಆರಂಭಿಸಲಾಗುವುದು ಎಂದು ವಿವರಿಸಿದರು.

ಕಿರುಸುದ್ದಿ

ಸಾವಯವ ಕೃಷಿಗೆ ಪ್ರೋತ್ಸಾಹ

• **ವಿಧಾನ ಪರಿಷತ್:** ತೆಂಗಿನ ತೋಟ ಸೇರಿದಂತೆ ತೋಟಗಾರಿಕೆ ಬೆಳೆಗಳನ್ನು ಪುನಶ್ಚೇತನಗೊಳಿಸಲು ವೈಜ್ಞಾನಿಕವಾಗಿ ಸಾವಯವ ಕೃಷಿಯನ್ನು ಪ್ರೋತ್ಸಾಹಿಸಲಾಗುತ್ತಿದೆ ಎಂದು ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ತಿಳಿಸಿದರು. ಸದಸ್ಯ ರಮೇಶ್ ಬಾಬು ಅವರ ಪ್ರಶ್ನೆಗೆ ಉತ್ತರ ನೀಡಿದ ಅವರು, ತೆಂಗಿನ ತೋಟಗಳಲ್ಲಿ ವೈಜ್ಞಾನಿಕವಾಗಿ ಸಾವಯವ ಕೃಷಿಯನ್ನು ಅಳವಡಿಸಲು ಮೊದಲನೇ ಹಂತದಲ್ಲಿ ತುಮಕೂರು ಹಾಗೂ ಮಂಡ್ಯ ಜಿಲ್ಲೆಗಳಲ್ಲಿ ಎರಡು ಗುಚ್ಛಗಳನ್ನು ಗುರುತಿಸಲಾಗಿದೆ.



ಎರಡನೇ ಹಂತದಲ್ಲಿ ತುಮಕೂರು, ಹಾಸನ, ಮಂಡ್ಯ, ಮೈಸೂರು, ಚಾಮರಾಜನಗರ, ಚಿತ್ರದುರ್ಗ ಜಿಲ್ಲೆಗಳಲ್ಲಿ 10 ಗುಚ್ಛಗಳನ್ನು ಗುರುತಿಸಲಾಗುವುದು ಎಂದರು. ತೋಟಗಾರಿಕೆಯಲ್ಲಿ ಸಾವಯವ ಕೃಷಿಯನ್ನು ಚಿಕ್ಕನಾಯಕನಹಳ್ಳಿ ತಾಲೂಕಿನಲ್ಲಿ ಗುಚ್ಛ ಮಾದರಿಯಲ್ಲಿ 640 ಹೆಕ್ಟೇರ್ ಪ್ರದೇಶದಲ್ಲಿ ಒಟ್ಟು 2 ಗ್ರಾಮ ಪಂಚಾಯಿತಿಯಲ್ಲಿ ಪರಂಪರಾಗತ ಕೃಷಿ ವಿಕಾಸ ಯೋಜನೆ ಅಡಿ ಅಳವಡಿಸಿಕೊಳ್ಳಲಾಗಿದೆ ಎಂದರು.

900 ಸಬ್ ಇನ್‌ಸ್ಪೆಕ್ಟರ್‌ಗಳ ನೇಮಕ: ಸಚಿವ

• **ವಿಧಾನಸಭೆ:** ಕಳೆದ ಒಂದೂವರೆ ವರ್ಷದಲ್ಲಿ 900 ಜನ ಸಬ್ ಇನ್‌ಸ್ಪೆಕ್ಟರ್‌ಗಳನ್ನು ನೇಮಕ ಮಾಡಿದ್ದೇವೆ. ಮೊದಲ ಹಂತದಲ್ಲಿ 545 ಜನ ಒಂದು ಅಥವಾ ಎರಡು ವಾರಗಳಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳುತ್ತಾರೆ ಎಂದು ಗೃಹ ಸಚಿವ ಡಾ. ಜಿ.ಪರಮೇಶ್ವರ ಹೇಳಿದರು. ಪ್ರಶ್ನೋತ್ತರ ಅವಧಿಯಲ್ಲಿ ಬಿಜೆಪಿ ಶಾಸಕ ಆರಗ ಜ್ಞಾನೇಂದ್ರ ಅವರ ಪ್ರಶ್ನೆಗೆ ಉತ್ತರಿಸಿದ ಅವರು, ರಾಜ್ಯದಲ್ಲಿ ನಾಲ್ಕೈದು ವರ್ಷಗಳಿಂದ ನೇಮಕಾತಿ ನಡೆದಿಲ್ಲ. ಕಳೆದ ಒಂದೂವರೆ ವರ್ಷದಲ್ಲಿ 900 ಜನ ಸಬ್ ಇನ್‌ಸ್ಪೆಕ್ಟರ್‌ಗಳ ನೇಮಕ ಮಾಡಿದ್ದೇವೆ. ಮೊದಲ ಹಂತದಲ್ಲಿ 545 ಜನ ಎರಡು ವಾರಗಳಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳುತ್ತಾರೆ. ಇನ್ನೂ 400 ಜನರಿಗೆ ತರಬೇತಿ ನಡೆಯುತ್ತಿದೆ. ಇನ್ನೂ ಎರಡು ತಿಂಗಳಲ್ಲಿ ತರಬೇತಿ ಪೂರ್ಣಗೊಳ್ಳಲಿದೆ ಎಂದರು. ಪ್ರಸಕ್ತ 8,000 ಜನ ಪೊಲೀಸ್ ಕಾನ್‌ಸ್ಟೇಬಲ್ ನೇಮಕಾತಿಗೆ ಆರ್ಥಿಕ ಇಲಾಖೆಯಿಂದ ಅನುಮತಿ ಸಿಕ್ಕಿದೆ. ಶೀಘ್ರದಲ್ಲೇ ಅವರ ನೇಮಕಕ್ಕೆ ಅಧಿಸೂಚನೆ ಹೊರಡಿಸಲಿದ್ದೇವೆ. ಒಳ ಮೀಸಲಾತಿ ವಿಷಯದಿಂದ ನೇಮಕಾತಿ ವಿಳಂಬವಾಗಿದೆ. ಈಗಾಗಲೇ ಸರ್ಕಾರ 56 ಸಾವಿರ ಹುದ್ದೆಗಳನ್ನು ಭರ್ತಿ ಮಾಡುವುದಾಗಿ ಘೋಷಿಸಿದೆ. ಅದರಲ್ಲಿ ಈ ಹುದ್ದೆಗಳೂ ಸೇರಿವೆ. ನೇಮಕಾತಿ ಆದ ತಕ್ಷಣ ಯಾವ ಠಾಣೆಯಲ್ಲಿ ತೀವ್ರ ಕೊರತೆ ಇದೆ, ಅಂತಹ ಕಡೆ ನಾವು ನಿಯುಕ್ತಿ ಮಾಡುತ್ತೇವೆ ಎಂದು ತಿಳಿಸಿದರು.

ಮಹಾಮಸ್ತಕಾಭಿಷೇಕ ಪೂರ್ವ ಸಿದ್ಧತೆಗಾಗಿ ಸಮಿತಿ

• **ವಿಧಾನಸಭೆ:** ಮುಂದಿನ ವರ್ಷದ ಫೆಬ್ರವರಿಯಲ್ಲಿ ಜರುಗಲಿರುವ ಶ್ರವಣಬೆಳಗೊಳದ ಬಾಹುಬಲಿ ಮಹಾಮಸ್ತಕಾಭಿಷೇಕ ಧಾರ್ಮಿಕ ಕಾರ್ಯಕ್ರಮಕ್ಕೆ ಸುಮಾರು 7 ಕೋಟಿ ರೂ. ಅನುದಾನ ಬೇಕಾಗಲಿದ್ದು, ಪೂರ್ವ ಸಿದ್ಧತೆ ಮಾಡಿಕೊಳ್ಳಲು ಸಮಿತಿ ರಚಿಸಲಿದ್ದು, ಮುಖ್ಯಮಂತ್ರಿಗಳ ಜತೆ ಸಭೆ ನಡೆಸಿ ತೀರ್ಮಾನಿಸಲಾಗುವುದು ಎಂದು ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು. ಮಹಾಮಸ್ತಕಾಭಿಷೇಕ ಪೂರ್ವ ಸಿದ್ಧತೆ ಬಗ್ಗೆ ಗಮನ ಸೆಳೆದ ಬಿಜೆಪಿ ಶಾಸಕ ಸುನೀಲ್ ಕುಮಾರ್ ಪ್ರಶ್ನೆಗೆ ಉತ್ತರಿಸಿದ ಸಚಿವರು, ಹನ್ನೆರಡು ವರ್ಷಗಳಿಗೆ ಒಮ್ಮೆ ಜರುಗುವ ಈ ಧಾರ್ಮಿಕ ಆಚರಣೆಯನ್ನು ನಡೆಸಲು ವ್ಯವಸ್ಥೆಯನ್ನು ಸರ್ಕಾರ ಮಾಡಿಕೊಳ್ಳಲಿದೆ ಎಂದರು.

ಆಯಕಟ್ಟಿನ ಜಾಗದಲ್ಲಿ ವಿಮಾನ ನಿಲ್ದಾಣ ನಿರ್ಮಾಣ: ಎಂಬಿಪಾ

ಸಿಎಂ ಜತೆ ಚರ್ಚಿಸಿ ಕ್ರಮ

• **ವಿಧಾನ ಪರಿಷತ್:** ಬಳ್ಳಾರಿ, ವಿಜಯನಗರ ಮತ್ತು ಕೊಪ್ಪಳ ಜಿಲ್ಲೆಗಳ ಜನರಿಗೆ ಅನುಕೂಲವಾಗುವಂತೆ ಆಯಕಟ್ಟಿನ ಜಾಗದಲ್ಲಿ ಹೊಸದಾಗಿ ವಿಮಾನ ನಿಲ್ದಾಣ ನಿರ್ಮಿಸುವ ಸಂಬಂಧ ಮೂರೂ ಜಿಲ್ಲೆಗಳ ಜನಪ್ರತಿನಿಧಿಗಳು ಜತೆಗೂಡಿ ಮುಖ್ಯಮಂತ್ರಿ ನೇತೃತ್ವದಲ್ಲಿ ಸಭೆ ನಡೆಸಿದ ನಂತರ ಅಂತಿಮ ತೀರ್ಮಾನ ಕೈಗೊಳ್ಳಲಾಗುವುದು ಎಂದು ಮೂಲಸೌಕರ್ಯ ಅಭಿವೃದ್ಧಿ ಸಚಿವ ಎಂ.ಬಿ.ಪಾಟೀಲ್ ತಿಳಿಸಿದರು.

ಪ್ರಶ್ನೋತ್ತರ ಕಲಾಪದಲ್ಲಿ ಬಿಜೆಪಿ ಸದಸ್ಯ ವೈ.ಎಂ.ಸತೀಶ್ ಅವರ ಚುಕ್ಕೆ ಗುರುತಿನ ಪ್ರಶ್ನೆಗೆ ಉತ್ತರಿಸಿದ ಅವರು, 2010 ರಲ್ಲಿ ಬಳ್ಳಾರಿಯಲ್ಲಿ ವಿಮಾನ ನಿಲ್ದಾಣಕ್ಕಾಗಿ 900 ಎಕರೆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲಾಗಿತ್ತು. ಯೋಜನೆಯ ಜವಾಬ್ದಾರಿ ಹೊತ್ತಿದ್ದ ಚೆನ್ನೈ ಮೂಲದ ಮೆ.ಮಾರ್ಗ್ ಶ್ರೀ ಕೃಷ್ಣದೇವರಾಯ ಏರ್ಪೋರ್ಟ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯು ಎರಡು ವರ್ಷ ಕಳೆದರೂ ಕಾಮಗಾರಿ ಆರಂಭಿಸದ ಕಾರಣ ಅದರೊಂದಿಗಿನ ಒಪ್ಪಂದವನ್ನು ರದ್ದುಗೊಳಿಸಲಾಗಿದೆ. ಪ್ರಸ್ತುತ ಹೊಸದಾಗಿ ಡಿಪಿಆರ್ ಸಿದ್ಧಪಡಿಸಲು ಸಲಹೆಗಾರರ ನೇಮಕಕ್ಕೆ ಟೆಂಡರ್ ಕರೆಯಲಾಗಿದೆ ಎಂದು ಮಾಹಿತಿ ನೀಡಿದರು.

ಈ ನಡುವೆ ವಿಜಯನಗರ ಮತ್ತು ಕೊಪ್ಪಳ ಭಾಗದವರೂ ವಿಮಾನ ನಿಲ್ದಾಣ ಬೇಕೆನ್ನುತ್ತಿದ್ದಾರೆ. ಹೀಗಾಗಿ ಜಿಲ್ಲೆಗೊಂದು ವಿಮಾನ ನಿಲ್ದಾಣ ಮಾಡುವುದು ಕಾರ್ಯಸಾಧುವಲ್ಲ ಎಂದು ಈ ರೀತಿಯ ಚಿಂತನೆ ಮಾಡಲಾಗುತ್ತಿದೆ. ಆದರೆ ಬಳ್ಳಾರಿಯಲ್ಲಿ ವಿಮಾನ ನಿಲ್ದಾಣಕ್ಕೆಂದು ಸ್ವಾಧೀನ ಪಡಿಸಿಕೊಂಡಿರುವ ಜಮೀನನ್ನು ವಾಪಸ್ ಕೊಡಲು ಬರುವುದಿಲ್ಲ ಎಂದು ಹೇಳಿದರು.



- ಡಿಪಿಆರ್ ಸಿದ್ಧಪಡಿಸಲು ಸಲಹೆಗಾರರ ನೇಮಕಕ್ಕೆ ಟೆಂಡರ್ ಕರೆಯಲಾಗಿದೆ
- ಜಿಲ್ಲೆಗೊಂದು ವಿಮಾನ ನಿಲ್ದಾಣ ಮಾಡುವುದು ಕಾರ್ಯ ಸಾಧುವಲ್ಲ

ಜಿಲ್ಲೆಗೊಂದು ನಿಲ್ದಾಣ ಅಪ್ರಾಯೋಗಿಕ

ಪ್ರತಿ ಜಿಲ್ಲೆಗೂ ಪ್ರತ್ಯೇಕ ವಿಮಾನ ನಿಲ್ದಾಣ ನಿರ್ಮಿಸುವುದು ಸಮಂಜಸವಲ್ಲ. ಉಡಾನ್ ಯೋಜನೆಯಡಿ ಆರಂಭವಾದ ಬೀದರ್ ಮತ್ತು ಕಲಬುರಗಿ ನಿಲ್ದಾಣಗಳು ಆರಂಭದಲ್ಲಿ ಉತ್ತಮವಾಗಿದ್ದರೂ ನಂತರ ವಿಮಾನ ಸೇವೆ ಸ್ಥಗಿತಗೊಂಡ ಉದಾಹರಣೆಗಳು ನಮ್ಮ ಎದುರಿದೆ. ಬಳ್ಳಾರಿ ವಿಮಾನ ನಿಲ್ದಾಣಕ್ಕೂ ಅಂತಹ ಸ್ಥಿತಿ ಬರಬಾರದು. ಹೀಗಾಗಿ ಮೂರು ಜಿಲ್ಲೆಗಳಿಗೂ ಹತ್ತಿರವಾಗುವ ಸೂಕ್ತ ಸ್ಥಳದ ಬಗ್ಗೆ ಚಿಂತನೆ ನಡೆದಿದೆ. ಆದರೆ ಬಳ್ಳಾರಿಯಲ್ಲಿ ಈಗಾಗಲೇ ಸ್ವಾಧೀನಪಡಿಸಿಕೊಂಡ ಭೂಮಿಯನ್ನು ವಾಪಸ್ ನೀಡಲು ಸಾಧ್ಯವಿಲ್ಲ ಎಂದು ಸಚಿವರು ಸ್ಪಷ್ಟಪಡಿಸಿದರು.

ಹೊಸ ಕೈಗಾರಿಕಾ ನೀತಿ ಜಾರಿಗೆ ಚಿಂತನೆ: ಸಚಿವ

• **ವಿಧಾನ ಪರಿಷತ್:** ರಾಜ್ಯದಲ್ಲಿ ಹೊಸ ಕೈಗಾರಿಕಾ ನೀತಿ ಸ್ಥಾಪನೆಗೆ ಬಂಡವಾಳ ಹೂಡಿಕೆ ಆಕರ್ಷಿಸಲು ನಮ್ಮ ಸರ್ಕಾರ, ಹೊಸ ಕೈಗಾರಿಕಾ ನೀತಿಗಳನ್ನು ಜಾರಿಗೆ ತರುತ್ತಿದೆ. ಬಾಗಲಕೋಟೆ ಮತ್ತು ವಿಜಯಪುರದಲ್ಲಿ 8 ರಿಂದ 9 ಕಂಪನಿಗಳು ಬಂಡವಾಳ ಹೂಡಿಕೆ ಮಾಡುತ್ತಿವೆ ಎಂದು ಸಚಿವ ಎಂ.ಬಿ. ಪಾಟೀಲ್ ಹೇಳಿದರು. ಪ್ರಶ್ನೋತ್ತರ ಕಲಾಪದಲ್ಲಿ ಬಿಜೆಪಿಯ ಪಿ.ಎಚ್.ಪೂಜಾರ್ ಪ್ರಶ್ನೆಗೆ ಉತ್ತರಿಸಿದ ಅವರು, ಕೃಷ್ಣಾ ಮೇಲ್ದಂಡೆ ಯೋಜನೆಯ ನಿರಾಶ್ರಿತರಿಗೆ ಉದ್ಯೋಗ ನೀಡಬೇಕು. ಇದಕ್ಕೆ ಕ್ರಮ ಕೈಗೊಳ್ಳಲಾಗುತ್ತಿದೆ. ಬಿಜೆಪಿಯವರು ಕೇಂದ್ರ ಸರ್ಕಾರವನ್ನು ಒಪ್ಪಿಸುವ ಮೂಲಕ ರಾಜ್ಯದಲ್ಲಿ ದೊಡ್ಡ ಕಂಪನಿಗಳನ್ನು ತರುವ ಕೆಲಸ ಮಾಡಬೇಕು ಎಂದರು.

ಜ್ಞಾನಭಂಡಾರ ಹಸ್ತಪ್ರತಿ, ಡಿಜಿಟಲ್ ಬಿಲ್ ಮಂಡನೆ

• **ವಿಧಾನಸಭೆ:** ಕರ್ನಾಟಕ ರಾಜ್ಯದಲ್ಲಿರುವ ಹಸ್ತಪ್ರತಿಗಳ ಸಮೀಕ್ಷೆ, ದಾಖಲೀಕರಣ, ಸಂರಕ್ಷಣೆ, ಡಿಜಿಟಲೀಕರಣ, ಸಂಶೋಧನೆ, ಪ್ರಕಟಣೆ ಮತ್ತು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಲು ಕರ್ನಾಟಕ ಹಸ್ತಪ್ರತಿಗಳ ಪ್ರಾಧಿಕಾರ ಸ್ಥಾಪಿಸಲು ಕರ್ನಾಟಕ ಜ್ಞಾನಭಂಡಾರ ಹಸ್ತಪ್ರತಿಗಳು ಮತ್ತು ಡಿಜಿಟಲೀಕರಣ ವಿಧೇಯಕ, 2026ನ್ನು ಮಂಡಿಸಲಾಯಿತು. ಮಂಗಳವಾರ ಸದನದಲ್ಲಿ ಎಚ್.ಕೆ.ಪಾಟೀಲ್ ಈ ವಿಧೇಯಕವನ್ನು ಮಂಡಿಸಿದರು. ಪುರಾತತ್ತ್ವ ಇಲಾಖೆಯ ಪ್ರಭಾರದಲ್ಲಿರುವ ಸಚಿವರು ಈ ಪ್ರಾಧಿಕಾರಕ್ಕೆ ಅಧ್ಯಕ್ಷರಾಗಿರಲಿದ್ದಾರೆ. ಪ್ರವಾಸೋದ್ಯಮ ಇಲಾಖೆಯ ಸರ್ಕಾರದ ಕಾರ್ಯದರ್ಶಿ ಪದನಿಮಿತ್ತ ಸದಸ್ಯ ಕಾರ್ಯದರ್ಶಿ, ಐವರು ಪದನಿಮಿತ್ತ ಸದಸ್ಯರು, ಭಾರತಾಧ್ಯಯನ ಶಾಸ್ತ್ರ, ಕನ್ನಡ ಸಾಹಿತ್ಯ ಅಥವಾ ಹಸ್ತಪ್ರತಿ ಶಾಸ್ತ್ರದಲ್ಲಿ ಮೂವರು ವಿದ್ವಾಂಸರು ಸದಸ್ಯರು, ಖಾಸಗಿ ಹಸ್ತಪ್ರತಿಧಾರಕರು ಅಥವಾ ಮಠಗಳ ಇಬ್ಬರು ಪ್ರತಿನಿಧಿಗಳು ಸದಸ್ಯರು, ಡಿಜಿಟಲ್ ಮಾನವಿಕಗಳಲ್ಲಿನ ಒಬ್ಬ ತಜ್ಞ ಸದಸ್ಯರಾಗಿರಲಿದ್ದಾರೆ ಎಂದು ವಿಧೇಯಕದಲ್ಲಿ ತಿಳಿಸಲಾಗಿದೆ.

ಪೊಲೀಸ್, ಲೋಕಾಯುಕ್ತ ಕಾಯ್ದೆ ತಿದ್ದುಪಡಿ ವಿಧೇಯಕಗಳು

ಪೊಲೀಸ್ ಠಾಣೆಗಳು, ವೃತ್ತ, ಉಪ ವಿಭಾಗ, ಜಿಲ್ಲೆ ಮತ್ತು ವಲಯಗಳ ಪ್ರಭಾರದಲ್ಲಿರುವ ಅಧಿಕಾರಿಗಳ ಅಧಿಕಾರಾವಧಿ ವಯೋನಿವೃತ್ತಿಗೊಳಪಟ್ಟು, ಕಾಲಕಾಲಕ್ಕೆ ಸರ್ಕಾರದಿಂದ ಅಧಿಸೂಚಿಸಬಹುದಾದಂಥ ಕಾರ್ಯಾಚರಣೆ ಕರ್ತವ್ಯಗಳು ಅಥವಾ ಅಂಥ ಇತರೆ ಕರ್ತವ್ಯಗಳನ್ನು ನಿರ್ವಹಿಸುತ್ತಿರುವ ಅಧಿಕಾರಿಗಳು ಕನಿಷ್ಠ ಒಂದು ವರ್ಷದ ಅಧಿಕಾರಾವಧಿ ಹೊಂದಿರಬೇಕು ಎಂಬ ತಿದ್ದುಪಡಿಯೊಂದಿಗೆ ಕರ್ನಾಟಕ ಪೊಲೀಸ್ (ತಿದ್ದುಪಡಿ) ವಿಧೇಯಕ, 2026 ವಿಧೇಯಕ ಮಂಡಿಸಲಾಯಿತು. ಅಲ್ಲದೇ ಲೋಕಾಯುಕ್ತರ ಭತ್ಯೆಗಳು ಮತ್ತು ಸೇವಾ ಷರತ್ತುಗಳನ್ನು ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರು ಅಥವಾ ಸಂದರ್ಭಾನುಸಾರ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಗಳಿಗೆ ಸಂದಾಯವಾಗಬಹುದಾದ ಭತ್ಯೆಗಳು ಮತ್ತು ಇತರ ಸೇವಾ ಷರತ್ತುಗಳಿಗೆ ಸರಿಸಮನಾಗಿರುವಂತೆ ಉಪಬಂಧ ಕಲ್ಪಿಸಲು ಕರ್ನಾಟಕ ಲೋಕಾಯುಕ್ತ (ತಿದ್ದುಪಡಿ) ವಿಧೇಯಕ 2026 ನ್ನು ಮಂಡಿಸಲಾಯಿತು.

443 ಅಗ್ನಿಶಾಮಕ ವಾಹನ ಚಾಲನೆ ಸ್ಥಗಿತ: ಪರಮೇಶ್ವರ

• **ವಿಧಾನಸಭೆ:** ಕೇಂದ್ರ ಗೃಹ ಮಂತ್ರಾಲಯದ ಗುಜರಿ ನೀತಿಯನ್ವಯ ಕಾರ್ಯಾಚರಣೆಗೆ ಯೋಗ್ಯವಾಗಿದ್ದರೂ 15 ವರ್ಷ ಮೇಲ್ಪಟ್ಟ 443 ಅಗ್ನಿಶಾಮಕ ವಾಹನಗಳನ್ನು ರಸ್ತೆ ಚಾಲನೆಯಿಂದ ಸ್ಥಗಿತಗೊಳಿಸಲಾಗಿದೆ ಎಂದು ಗೃಹ ಸಚಿವ ಡಾ. ಜಿ.ಪರಮೇಶ್ವರ ಹೇಳಿದರು.



ಪ್ರಶ್ನೋತ್ತರ ಕಲಾಪದಲ್ಲಿ ಬಿಜೆಪಿ ಶಾಸಕ ಕಿರಣ್ ಕುಮಾರ್ ಕೊಡ್ಗಿ ಅವರ ಪ್ರಶ್ನೆಗೆ ಉತ್ತರಿಸಿದ ಅವರು, ಈ ಪೈಕಿ 155 ವಾಹನಗಳನ್ನು ಈಗಾಗಲೇ ವಿಲೇವಾರಿ ಮಾಡಲಾಗಿದೆ. ಪ್ರಸ್ತುತ 261 ವಾಹನಗಳ ವಿಲೇವಾರಿಗೆ ಕ್ರಮ ಕೈಗೊಳ್ಳಲಾಗಿದೆ ಎಂದರು. ಈ ವಾಹನಗಳ ಬದಲಿಗೆ 15ನೇ ಹಣಕಾಸು ಆಯೋಗದ ಯೋಜನೆಯಲ್ಲಿ ಹಾಗೂ ಕೆ-ಸೇಫ್-2 ಯೋಜನೆಯಲ್ಲಿ ಒಟ್ಟು 270 ವಾಹನಗಳನ್ನು ಖರೀದಿಸಲು ಸರಬರಾಜು ಆದೇಶವನ್ನು ನೀಡಲಾಗಿದೆ. ಇದರಲ್ಲಿ 100 ವಾಹನಗಳು ಸರಬರಾಜು ಮಾಡಿದ್ದು, ಬಾಕಿ ಉಳಿದ 170 ವಾಹನಗಳ ಕವಚ ನಿರ್ಮಾಣ ಕಾರ್ಯವು ಪ್ರಗತಿಯಲ್ಲಿದೆ. ವಾಹನಗಳು ಇಲಾಖೆಗೆ ಸರಬರಾಜು ಆದ ನಂತರ ಆದ್ಯತೆಯ ಮೇರೆಗೆ ವಾಹನಗಳನ್ನು ಮಂಜೂರು ಮಾಡಲಾಗುತ್ತದೆ ಎಂದು ವಿವರಿಸಿದರು. ಅಗ್ನಿಶಾಮಕ ದಳಕ್ಕೆ ಒಟ್ಟು 547 ವಾಹನಗಳನ್ನು ಖರೀದಿಸುತ್ತೇವೆ ಡಾ. ಪರಮೇಶ್ವರ ತಿಳಿಸಿದರು.

ಒಂದೇ ಅಗ್ನಿಶಾಮಕ ಠಾಣೆಯ ಎರಡು-ಮೂರು ಕಡೆ ಅಗ್ನಿ ಅವಘಡ ನಡೆದರೆ ಅಥವಾ ಬೃಹತ್ ಪ್ರಮಾಣದಲ್ಲಿ ಅಗ್ನಿ ಅನಾಹುತ ಸಂಭವಿಸಿದರೆ ಅಗ್ನಿಶಾಮಕ ವಾಹನಗಳ ನಿಯೋಜನೆಗೆ ಸಮಸ್ಯೆಯಾಗುತ್ತದೆ. ಇಂತಹ ಸಂದರ್ಭದಲ್ಲಿ 20 ಕಿ.ಮೀ. ವ್ಯಾಪ್ತಿಯಲ್ಲಿರುವ ಬೇರೆ ಠಾಣೆಗಳ ವಾಹನಗಳನ್ನು ನಿಯೋಜಿಸಲಾಗುತ್ತದೆ ಎಂದು ಸಚಿವರು ಹೇಳಿದರು.

ಜವಳಿ ಪಾರ್ಕ್ ಜಮೀನಿಗೆ ಕೇಂದ್ರಕ್ಕೆ ಪತ್ರ

• **ವಿಧಾನ ಪರಿಷತ್:** ಸಿಂಧನೂರು ತಾಲೂಕಿನಲ್ಲಿ ಜವಳಿ ಪಾರ್ಕ್ ಸ್ಥಾಪಿಸಲು 15 ಎಕರೆ ಜಮೀನನ್ನು ನೀಡುವಂತೆ ಕೇಂದ್ರ ಸರ್ಕಾರಕ್ಕೆ ಪತ್ರ ಬರೆಯಲಾಗಿದೆ ಎಂದು ಜವಳಿ ಸಚಿವ ಶಿವಾನಂದ ಪಾಟೀಲ್ ತಿಳಿಸಿದರು.



ಚುಕ್ಕೆ ಗುರುತಿನ ಪ್ರಶ್ನೋತ್ತರ ಕಲಾಪದಲ್ಲಿ ಉತ್ತರಿಸಿದ ಸಚಿವರು, ಜವಳಿ ಪಾರ್ಕ್ ಸ್ಥಾಪನೆಯ ಸಂಬಂಧ ಅಗತ್ಯವಿರುವ ಕನಿಷ್ಠ 15 ಎಕರೆ ಜಮೀನನ್ನು ಗುರುತು ಮಾಡಿ, ಜವಳಿ ಇಲಾಖೆಯ ಹೆಸರಿಗೆ ಹಸ್ತಾಂತರಿಸಲು ಸಿಂಧನೂರು ತಾಲೂಕಿನ ತಹಸೀಲ್ದಾರರು, ಕಂದಾಯ ಇಲಾಖೆಗೆ ಪತ್ರ ಬರೆಯಲಾಗಿದೆ. ಜಮೀನಿನ ಮಂಜೂರಾತಿಯನ್ನು ನಿರೀಕ್ಷಿಸಲಾಗಿದೆ ಎಂದರು.

ಸಿಂಧನೂರು ತಾಲೂಕಿನಲ್ಲಿ ಒಂದೇ ಕಡೆ 15 ಎಕರೆಯಷ್ಟು ಸರ್ಕಾರಿ ಜಮೀನು ಲಭ್ಯವಿರುವುದಿಲ್ಲ. ಆದರೆ, ಸಿಂಧನೂರು ತಾಲೂಕಿನಲ್ಲಿ ಕೇಂದ್ರ ಸರ್ಕಾರದ ಅಧೀನದಲ್ಲಿರುವ ಸೆಂಟ್ರಲ್ ಸೀಡ್ ಫಾರಂ(ಸಿಎಸ್‌ಎಫ್) ನಲ್ಲಿ ಸುಮಾರು 7,500 ಎಕರೆಯಷ್ಟು ಭೂಮಿ ಲಭ್ಯವಿದ್ದು, ಈ ಜಮೀನನ್ನು ಇಲಾಖೆಗೆ ಮಂಜೂರು ಮಾಡಿದ್ದಲ್ಲಿ ಜವಳಿ ಪಾರ್ಕ್ ಸ್ಥಾಪಿಸಲು ಪರಿಶೀಲಿಸಲಾಗುವುದು ಎಂದು ಹೇಳಿದರು.

ಎಪಿಎಂಸಿಗಳಲ್ಲಿ ₹476 ಕೋಟಿ ಮಾರುಕಟ್ಟೆ ಶುಲ್ಕ ಸಂಗ್ರಹ

• **ವಿಧಾನ ಪರಿಷತ್:** ಪ್ರಸಕ್ತ ಹಣಕಾಸು ವರ್ಷದ ಜನವರಿ ಅಂತ್ಯಕ್ಕೆ ರಾಜ್ಯದ ಎಪಿಎಂಸಿಗಳಲ್ಲಿ ಒಟ್ಟು 71 ಸಾವಿರ ಕೋಟಿ ರೂ. ವಹಿವಾಟು ನಡೆದಿದೆ. 476.65 ಕೋಟಿ ರೂ. ಮಾರುಕಟ್ಟೆ ಶುಲ್ಕ ಸಂಗ್ರಹವಾಗಿದೆ ಎಂದು ಸಕ್ಕರೆ, ಕಬ್ಬು ಅಭಿವೃದ್ಧಿ, ಜವಳಿ ಹಾಗೂ ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ ತಿಳಿಸಿದರು. ಸದಸ್ಯ ಟಿ. ಶರವಣ ಅವರ ಪ್ರಶ್ನೆಗೆ ಲಿಖಿತ ಉತ್ತರ ನೀಡಿರುವ ಸಚಿವರು, ಕಳೆದ ಹಣಕಾಸು ವರ್ಷದಲ್ಲಿ 82 ಸಾವಿರ ಕೋಟಿ ರೂ. ವಹಿವಾಟು ನಡೆದಿತ್ತು. ಈ ಅವಧಿಯಲ್ಲಿ 498 ಕೋಟಿ ರೂ. ಮಾರುಕಟ್ಟೆ ಶುಲ್ಕ ಸಂಗ್ರಹವಾಗಿದ್ದು, ಕಳೆದ ವರ್ಷಕ್ಕೆ ಹೋಲಿಕೆ ಮಾಡಿದರೆ ಈ ಪ್ರಮಾಣ ಮತ್ತಷ್ಟು ಹೆಚ್ಚಾಗಲಿದೆ ಎಂದು ಹೇಳಿದರು.

ರಾಜ್ಯದಲ್ಲಿ 170 ಎಪಿಎಂಸಿಗಳಿದ್ದು, ಅಂಗಡಿಗಳ ಹಂಚಿಕೆ ಪ್ರಕ್ರಿಯೆ ನಿರಂತರವಾಗಿರುತ್ತದೆ. 141 ಎಪಿಎಂಸಿಗಳಲ್ಲಿ ಅಂಗಡಿ ಹರಾಜು ಬಾಕಿ ಇದ್ದು, ಕ್ರಮ ಕೈಗೊಳ್ಳಲು ಸಮಿತಿಗಳಿಗೆ ಸೂಚನೆ ನೀಡಲಾಗಿದೆ ಎಂದು ವಿವರಿಸಿದರು. ವಾಣಿಜ್ಯ ಸ್ವರೂಪದ ಚಿಕ್ಕ ಮಳಿಗೆಗಳನ್ನು 55 ತಿಂಗಳ ಹಂಚಿಕೆ ಅವಧಿ ಮುಕ್ತಾಯವಾದ ನಂತರ ಮತ್ತೆ ಮುಂದುವರಿಸಲು ಅವಕಾಶವಿಲ್ಲ. ಅಂತಹ ಅಂಗಡಿಗಳನ್ನು ಹೊಸದಾಗಿ ಟೆಂಡರ್ ಕರೆದು ಬೇಡಿಕೆಗೆ ಅನುಗುಣವಾಗಿ ಕ್ರಮ ಕೈಗೊಳ್ಳಲಿದ್ದು, ಬಾಕಿ ಉಳಿಯುವುದಿಲ್ಲ ಎಂದು ತಿಳಿಸಿದರು.

ಕ್ಯಾಂಟೀನ್‌ನಲ್ಲಿ ಡಿಜಿಟಲ್ ಪಾವತಿ ವ್ಯವಸ್ಥೆಗೆ ಕ್ರಮ





• **ವಿಧಾನ ಪರಿಷತ್:** ರಾಜ್ಯದ ಇಂದಿರಾ ಕ್ಯಾಂಟೀನ್‌ಗಳಲ್ಲಿ ಶೀಘ್ರದಲ್ಲೇ ಡಿಜಿಟಲ್ ಪಾವತಿ ವ್ಯವಸ್ಥೆ ಜಾರಿಗೆ ಕ್ರಮ ಕೈಗೊಳ್ಳಲಾಗುವುದು ಎಂದು ಸಚಿವ ಬೈರತಿ ಸುರೇಶ್ ಭರವಸೆ ನೀಡಿದರು.

ಪ್ರಶ್ನೋತ್ತರ ಕಲಾಪದಲ್ಲಿ ಕಾಂಗ್ರೆಸ್ ಸದಸ್ಯ ಜಗದೇವ್ ಗುತ್ತೇದಾರ್ ಪ್ರಸ್ತಾಪಿಸಿದ ವಿಷಯ ಪ್ರಸ್ತಾಪಿಸಿದರು. ಕಲಬುರಗಿಯ ಇಂದಿರಾ ಕ್ಯಾಂಟೀನ್‌ನಲ್ಲಿ ಮೆನು ಪ್ರಕಾರ ತಿಂಡಿ ನೀಡಲಾಗುತ್ತಿಲ್ಲ. ಜತೆಗೆ ಆಹಾರದ ಗುಣಮಟ್ಟವೂ ಸರಿಯಿಲ್ಲ ಎಂಬ ಅನೇಕ ದೂರುಗಳು ಬರುತ್ತಿವೆ. ಈ ವ್ಯವಸ್ಥೆಯನ್ನು ಸರಿಪಡಿಸುವುದರ ಜತೆಗೆ ಕ್ಯಾಂಟೀನ್‌ಗಳನ್ನು ಡಿಜಿಟಲ್ ಪಾವತಿ ವ್ಯವಸ್ಥೆ ಜಾರಿಗೆ ತರಬೇಕು ಎಂದು ಒತ್ತಾಯಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಸಚಿವ ಬೈರತಿ ಸುರೇಶ್, ನಮಗೆ ದೊರೆತ ಮಾಹಿತಿ ಪ್ರಕಾರ ಇಂದಿರಾ ಕ್ಯಾಂಟೀನ್‌ಗಳಲ್ಲಿ ಮೆನು ಪ್ರಕಾರವೇ ಆಹಾರ ನೀಡಲಾಗುತ್ತಿದೆ. ಪ್ರಾದೇಶಿಕತೆಗೆ ಅನುಗುಣವಾಗಿ ತಿಂಡಿ ಮತ್ತು ಊಟವನ್ನು ನೀಡಲಾಗುತ್ತಿದೆ. ಈ ಬಗ್ಗೆ ನನಗೆ ಯಾವುದೇ ಗಂಭೀರ ದೂರುಗಳು ಬಂದಿಲ್ಲ ಎಂದು ಹೇಳಿದರು. ರಾಜ್ಯದ ಎಲ್ಲ ಇಂದಿರಾ ಕ್ಯಾಂಟೀನ್‌ಗಳಲ್ಲಿ ಡಿಜಿಟಲ್ ಪಾವತಿ ವ್ಯವಸ್ಥೆ ಜಾರಿಗೆ ತರಲು ಆಯಾ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಲಾಗುವುದು ಎಂದು ಬೈರತಿ ತಿಳಿಸಿದರು.

ಮತಪತ್ರ ಬಳಕೆ: ವಿಧೇಯಕ ಮಂಡನೆ

• **ವಿಧಾನಸಭೆ:** ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಮತಯಂತ್ರಗಳ ಬದಲಿಗೆ ಮತ ಪತ್ರವನ್ನು ಬಳಸಲು ಅನುವು ಮಾಡುವ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕವನ್ನು ಮಂಗಳವಾರ ಮಂಡನೆ ಮಾಡಲಾಯಿತು.



ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಪರವಾಗಿ ಕಾನೂನು, ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ.ಪಾಟೀಲ್ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕ-2026 ಮಂಡಿಸಿದರು.

ಗ್ರಾಮ ಪಂಚಾಯತ್ ಸೇರಿದಂತೆ ಇತರೆ ಚುನಾವಣೆ ಸಂದರ್ಭದಲ್ಲಿ ಮತದಾರ ಮೇಲಿನ ದಬ್ಬಾಳಿಕೆ, ಬೆದರಿಕೆ ಹಾಗೂ ಅನಗತ್ಯ ಪ್ರಭಾವ ಹಾಕುವವರ ವಿರುದ್ಧ ಕ್ರಮ ಕೈಗೊಳ್ಳುವ ಅಂಶವನ್ನು ಈ ವಿಧೇಯಕದಲ್ಲಿ ಸೇರ್ಪಡೆಗೊಳಿಸಲಾಗಿದೆ. ಸಂವಿಧಾನದ 326ನೇ ಅನುಚ್ಛೇದದಡಿ ಜನರ ಪ್ರಜಾಸತ್ತಾತ್ಮಕ ಇಚ್ಛೆಯನ್ನು ಪ್ರತಿಬಿಂಬಿಸುವ ಮುಕ್ತ, ನ್ಯಾಯಸಮ್ಮತ ಮತ್ತು ಪಾರದರ್ಶಕ ರೀತಿಯಲ್ಲಿ ಚುನಾವಣೆ ನಡೆಸುವ ಸಲುವಾಗಿ ಈ ವಿಧೇಯಕ ಅಗತ್ಯತೆವಿದೆ. ಅದರಲ್ಲೂ ಮುಖ್ಯವಾಗಿ ಮತದಾರರ ಮತಪತ್ರದ ಗೌಪ್ಯತೆ ಖಚಿತಪಡಿಸಿಕೊಳ್ಳಲು ಮತ್ತು ಮತದಾರರನ್ನು ದಬ್ಬಾಳಿಕೆ, ಬೆದರಿಕೆ ಮತ್ತು ಅನಗತ್ಯ ಪ್ರಭಾವದಿಂದ ರಕ್ಷಿಸಿ, ಆ ಮೂಲಕ ಪ್ರಜಾಪ್ರಭುತ್ವ ಪ್ರಕ್ರಿಯೆಯ ಪಾವಿತ್ರ್ಯ ಸುರಕ್ಷಿತಗೊಳಿಸಲು ಈ ವಿಧೇಯಕ ತರಲಾಗಿದೆ. ಇವಿಎಂ ಕಾರ್ಯನಿರ್ವಹಣೆಯ ಕುರಿತು ಕಳವಳ ವ್ಯಕ್ತವಾಗಿದ್ದು, ಸಾರ್ವಜನಿಕ ನಂಬಿಕೆಯನ್ನು ಮರುಸ್ಥಾಪಿಸಲು ಸದೃಢ ರಹಸ್ಯ ಮತದಾನ ಪದ್ಧತಿಗೆ ಮರಳುವುದು ಅವಶ್ಯಕ ಎಂದು ವಿವರಿಸಲಾಗಿದೆ. ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ರಹಸ್ಯ ಮತದಾನ ವ್ಯವಸ್ಥೆಯ ಬಳಕೆ ಕಡ್ಡಾಯಗೊಳಿಸಲು ಶಾಸನ ರೂಪಿಸುವುದು ಅಗತ್ಯವಾಗಿದೆ. ರಾಜ್ಯ ಕಾಗದ ಪತ್ರಗಳನ್ನು ಬಳಸಿಕೊಂಡು ರಹಸ್ಯ ಮತದಾನ ವ್ಯವಸ್ಥೆ ಅಳವಡಿಸಿಕೊಳ್ಳುವುದನ್ನು ಕಡ್ಡಾಯಗೊಳಿಸಲು ಸ್ಥಳೀಯ ಸಂಸ್ಥೆಗಳನ್ನು ನಿಯಂತ್ರಿಸುವ ಸಂಬಂಧ ಕಾನೂನು ತಿದ್ದುಪಡಿ ಮಾಡಲು ಈ ತಿದ್ದುಪಡಿ ವಿಧೇಯಕ ಮಂಡಿಸಲಾಗಿದೆ.

ಜಿಲ್ಲಾ ಪಂಚಾಯತ್‌ನ ಪ್ರತಿಯೊಂದು ಮತಕ್ಷೇತ್ರಗಳಲ್ಲಿ, ರಾಜ್ಯ ಚುನಾವಣಾ ಆಯೋಗದ ಮೇಲ್ವಿಚಾರಣೆ, ನಿರ್ದೇಶನ ಮತ್ತು ನಿಯಂತ್ರಣಕ್ಕೆ ಒಳಪಟ್ಟು ಉಪವಿಭಾಗಾಧಿಕಾರಿ ಮತದಾರರ ಪಟ್ಟಿ ಸಿದ್ಧಪಡಿಸಬೇಕು. ಈ ಸಂಬಂಧ ಮೂಲ ಅಧಿನಿಯಮದ 165ನೇ ಪ್ರಕರಣಕ್ಕೆ ತಿದ್ದುಪಡಿ ಮಾಡಲಾಗಿದೆ. ಜಿ.ಪಂ. ಮತಕ್ಷೇತ್ರದ ಮತದಾರರ ಪಟ್ಟಿಯಲ್ಲಿ ಹೆಸರನ್ನು ಸೇರಿಸಲಾಗಿರುವ ಯಾರೇ ವ್ಯಕ್ತಿ, ಆ ಮತಕ್ಷೇತ್ರದ ಚುನಾವಣೆಯಲ್ಲಿ ಮತದಾನಕ್ಕೆ ಹಕ್ಕುಳ್ಳವನಾಗಿರಲಿದ್ದಾನೆ. ಮೂಲ ಅಧಿನಿಯಮದಲ್ಲಿದ್ದ ಜಿಲ್ಲಾ ಪಂಚಾಯತ್‌ನ ಯಾವುದೇ ಚುನಾವಣಾ ಕ್ಷೇತ್ರದಲ್ಲಿ ತತ್ಕಾಲದಲ್ಲಿ ಜಾರಿಯಲ್ಲಿರುವ ಕರ್ನಾಟಕ ವಿಧಾನಸಭೆಯ ಮತದಾರರ ಪಟ್ಟಿಯನ್ನು ಜಿಲ್ಲಾ ಪಂಚಾಯತ್‌ನ ಮತದಾರರ ಪಟ್ಟಿಯ ಸಿದ್ಧತೆಯ ಉದ್ದೇಶಕ್ಕಾಗಿ ಅಳವಡಿಸಿಕೊಳ್ಳುವ ಅಂಶವನ್ನು ಕೈಬಿಡಲಾಗಿದೆ.

ಕೋವಿಗಳ ಪರವಾನಗಿ ನವೀಕರಣಕ್ಕೆ ರೈ ಮನವಿ

• **ವಿಧಾನಸಭೆ:** ಕೃಷಿ ಬೆಳೆ ರಕ್ಷಣೆ ಸಂಬಂಧಿಸಿ ಕೋವಿ ಪರವಾನಗಿ ನವೀಕರಿಸಲು ಜಮೀನಿಗೆ ಕಾಡುಪ್ರಾಣಿ ಬಂದಿರಬೇಕು, ಅದು ಬೆಳೆಗೆ ಹಾನಿಮಾಡಿರಬೇಕು ಮತ್ತು ಅದಕ್ಕೆ ಅರಣ್ಯ ಇಲಾಖೆಯಿಂದ ಪರಿಹಾರ ಸಿಕ್ಕಿರಬೇಕು ಎಂದು ಪೊಲೀಸರು ಹೇಳುತ್ತಿರುವಾಗಿ ಕಾಂಗ್ರೆಸ್ ಶಾಸಕ ಅಶೋಕ್ ಕುಮಾರ್ ರೈ ಗಮನ ಸೆಳೆದರು.

ಪ್ರಶ್ನೋತ್ತರ ಕಲಾಪದಲ್ಲಿ ಪ್ರಸ್ತಾಪಿಸಿದ ಅವರು, ಈಗ ಕೃತಕ ಕೋವಿಗಳನ್ನು ಇಟ್ಟುಕೊಂಡು ಮಂಗಗಳು, ಕಾಡುಹಂದಿಗಳನ್ನು ಓಡಿಸಲು ಸಾಧ್ಯವಿಲ್ಲ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಾಡಾನೆ ದಾಳಿಗೆ ಮೂವರು ಬಲಿಯಾಗಿದ್ದಾರೆ. ಆದರೆ, ದ.ಕ. ಮತ್ತು ಉಡುಪಿ ಜಿಲ್ಲೆಯಲ್ಲಿ ಕೋವಿಗಳ ಪರವಾನಗಿ ನವೀಕರಿಸುತ್ತಿಲ್ಲ ಎಂದು ಅಲವತ್ತುಗೊಂಡರು.

ಇದಕ್ಕೆ ಉತ್ತರಿಸಿದ ಡಾ.ಜಿ.ಪರಮೇಶ್ವರ, ಕೋವಿ ಪರವಾನಗಿ ನವೀಕರಣ ಪೊಲೀಸರು ಮಾಡುವುದಿಲ್ಲ, ಪೊಲೀಸರು ನಿರಾಕ್ಷೇಪಣಾ ಪತ್ರ (ಎನ್‌ಒಸಿ) ಮಾತ್ರ ನೀಡುತ್ತಾರೆ. ನವೀಕರಣಕ್ಕಾಗಿ ಮಾನದಂಡಗಳನ್ನು ನಿಗದಿಪಡಿಸಲಾಗಿದೆ. ಅದನ್ನು ಉಪಯೋಗಿಸಲು ದೈಹಿಕ ಶಕ್ತಿ ಇರಬೇಕು, ಮಾನಸಿಕವಾಗಿ ಸದೃಢವಾಗಿರಬೇಕು, ಕ್ರಿಮಿನಲ್ ಚಟುವಟಿಕೆಗಳಲ್ಲಿ ಭಾಗವಹಿಸಿರಬಾರದು ಮೊದಲಾದ ಮಾನದಂಡಗಳಿವೆ. ಕೆಲವು ಸಂದರ್ಭದಲ್ಲಿ ಪರವಾನಗಿ ಒಂದು ಊರಿನಲ್ಲಿ ಇರುತ್ತದೆ. ಅವರು ಬೇರೆ ಕಡೆ ವಾಸವಿರುತ್ತಾರೆ. ಅಂತಹ ಸಂದರ್ಭದಲ್ಲಿ ಅವರಿಗೆ ಯಾಕೆ ಪರವಾನಗಿ ನೀಡಬೇಕೆಂಬ ಉದ್ದೇಶದಿಂದ ತಿರಸ್ಕರಿಸಲಾಗುತ್ತದೆ ಎಂದು ಹೇಳಿದರು.

ಪರಿಶೀಲಿಸಿ ಕ್ರಮ

ಕೋವಿಗಳ ನವೀಕರಣ ನಿಯಮಾವಳಿಗೆ ಸಂಬಂಧಿಸಿದ ವಿಚಾರವಾಗಿರುವುದರಿಂದ ಈ ಬಗ್ಗೆ ಪರಿಶೀಲನೆ ನಡೆಸುತ್ತೇವೆ. ರಾಜ್ಯದಲ್ಲಿಯೂ ತಾಲೂಕು ಕೇಂದ್ರದಲ್ಲೇ ಕೋವಿ ಪರವಾನಗಿ ನವೀಕರಿಸಲು ಅವಕಾಶ ನೀಡಬೇಕೆಂಬ ಬೇಡಿಕೆಯಿದೆ. ಈ ಬಗ್ಗೆ ಪರಿಶೀಲನೆ ನಡೆಸುವುದಾಗಿ ಗೃಹ ಸಚಿವರು ಭರವಸೆ ನೀಡಿದರು.



ವಯಸ್ಸಾದರೆ ಮಗನಿಗೆ ಪರವಾನಗಿ ಕೊಡಿ

ಈ ವೇಳೆ ಅಶೋಕ್ ಕುಮಾರ್ ರೈ ಮಾತನಾಡಿ, ನನ್ನ ಕ್ಷೇತ್ರದಲ್ಲಿ ಗ್ರಾಮದಲ್ಲೇ ವಾಸವಿರುವ 250-300 ಜನರ ಅರ್ಜಿಗಳನ್ನು ತಿರಸ್ಕರಿಸಲಾಗಿದೆ. ವಯಸ್ಸಾದವರಿದ್ದರೆ ಅವರ ಮಗನ ಹೆಸರಿಗೆ ಕೋವಿಯನ್ನು ನವೀಕರಿಸಿ ಕೊಡಬೇಕು. ಹೊಸ ಕೋವಿ ಪರವಾನಗಿ ಕೇಳುತ್ತಿಲ್ಲ, ಈಗಿರುವ ಪರವಾನಗಿಯನ್ನೇ ನವೀಕರಿಸಲು ಮನವಿ ಮಾಡುತ್ತಿದ್ದೇವೆ. ಆದರೆ, ಅರ್ಜಿ ಸಲ್ಲಿಸಿದ ಕೂಡಲೇ ಅದನ್ನು ತಿರಸ್ಕರಿಸಲಾಗುತ್ತಿದೆ ಎಂದರು. ಇದಕ್ಕೆ ಪ್ರತಿಕ್ರಿಯಿಸಿದ ಗೃಹ ಸಚಿವರು, ತಿರಸ್ಕೃತಗೊಂಡ ಪಟ್ಟಿ ನೀಡಿ ಅರ್ಹತೆ ಇದ್ದರೆ ನವೀಕರಿಸಿ ನೀಡಲಾಗುತ್ತದೆ ಎಂದರು. ಕಳೆದ ನಾಲ್ಕು ವರ್ಷಗಳಲ್ಲಿ ದ.ಕ. ಮತ್ತು ಉಡುಪಿ ಜಿಲ್ಲೆಗಳಲ್ಲಿ ಸಂಬಂಧಪಟ್ಟ ಜಿಲ್ಲಾಧಿಕಾರಿಗಳು ಕೋವಿ ಪರವಾನಗಿ ನವೀಕರಣ ಅರ್ಜಿಗಳನ್ನು ತಮ್ಮ ಕಚೇರಿಯಲ್ಲಿ ಸ್ವೀಕರಿಸಿ, ಕೋವಿ ಪರವಾನಗಿ ನವೀಕರಿಸಿ ಕೊಟ್ಟಿದ್ದಾರೆ. ಕ್ರಿಮಿನಲ್ ಪ್ರಕರಣಗಳು ದಾಖಲಾದ ಕೋವಿ ಪರವಾನಗಿದಾರರ ಪ್ರಕರಣಗಳನ್ನು ಹೊರತುಪಡಿಸಿದಂತೆ ಯಾವುದೇ ಪ್ರಕರಣಗಳು ಬಾಕಿಯಿಲ್ಲ ಎಂದು ಮಾಹಿತಿ ನೀಡಿದರು. ಮಧ್ಯೆ ಪ್ರವೇಶಿಸಿದ ಬಿಜೆಪಿ ಶಾಸಕ ಸಿಮೆಂಟ್ ಮಂಜು, ಕೋವಿಯನ್ನು ಬಸ್ಸಿನಲ್ಲಿ ದೂರದ ಜಿಲ್ಲಾ ಕೇಂದ್ರಕ್ಕೆ ತಂದು ಪರವಾನಗಿ ನವೀಕರಿಸುವುದು ಕಷ್ಟದ ಕೆಲಸ. ಆದ್ದರಿಂದ ತಾಲೂಕು ಕೇಂದ್ರಗಳಲ್ಲಿಯೇ ಪರವಾನಗಿ ನವೀಕರಣಕ್ಕೆ ಅವಕಾಶ ಮಾಡಿಕೊಡಬೇಕು ಎಂದು ಮನವಿ ಮಾಡಿದರು.

ಸಂಪಾದಕೀಯ

ನೇಪಾಳ: ಹೊಸ ರಾಜಕೀಯ ಯುಗ

ನೆರೆಯ ನೇಪಾಳದಲ್ಲಿ ನಡೆದ ಸಂಸದೀಯ ಚುನಾವಣೆಯ ಫಲಿತಾಂಶವು ಅಲ್ಲಿ ನೂತನ ರಾಜಕೀಯ ಯುಗವೊಂದು ಆರಂಭವಾಗಿರುವುದನ್ನು ಸಂಕೇತಿಸಿದೆ. ಕಳೆದ ವರ್ಷ ಯುವ ಜನಾಂಗದಿಂದ ನಡೆದ ಭಾರೀ ಜನಾಂದೋಲನವು ಸರಕಾರದ ಪತನಕ್ಕೆ ಕಾರಣವಾಗಿದ್ದರೆ, ಈಗ ಅದೇ ಯುವ ಜನಾಂಗವು ಹೊಸ ಸರಕಾರವನ್ನು ಅಧಿಕಾರಕ್ಕೆ ತಂದಿದೆ. ಇದು ಕೇವಲ ಸರಕಾರದ ಬದಲಾವಣೆಯಷ್ಟೇ ಅಲ್ಲ, ಬದಲಾಗಿ ಇದು ನೇಪಾಳದ ಇಡೀ ರಾಜಕೀಯ ವ್ಯವಸ್ಥೆಯ ಕ್ರಾಂತಿಕಾರಿ ಸ್ಥಿತ್ಯಂತರಕ್ಕೆ ನಾಂದಿ ಹಾಡಿದೆ ಎನ್ನಬಹುದು. ಹೊಸ ಪೀಳಿಗೆಯ ರಾಜಕೀಯ ಕ್ರಾಂತಿಯು ತಂದಿರುವ ಬದಲಾವಣೆಯು ಕಣ್ಣಿಗೆ ರಾಚುವಂತಿದೆ. ಈವರೆಗೆ ನೇಪಾಳದ ರಾಜಕೀಯದಲ್ಲಿ ಪ್ರಧಾನ ಪಾತ್ರ ವಹಿಸಿಕೊಂಡು ಬಂದ ನೇಪಾಳಿ ಕಾಂಗ್ರೆಸ್, ಕಮ್ಯುನಿಸ್ಟ್ ಪಕ್ಷ ಮೊದಲಾದ ರಾಜಕೀಯ ಪಕ್ಷಗಳೆಲ್ಲ ಮೂಲೆಗುಂಪಾಗಿವೆ. ಮಾಜಿ ಪ್ರಧಾನಿ ಕೆ.ಪಿ. ಶರ್ಮಾ ಒಲಿ ಕೂಡಾ ಸೋಲು ಕಂಡಿದ್ದಾರೆ. ಹೊಸದಾದ ಸುಧಾರಣಾವಾದಿ ನಿಲುವಿನ ರಾಷ್ಟ್ರೀಯ ಸ್ವತಂತ್ರ ಪಾರ್ಟಿ (ಆರ್‌ಎಸ್‌ಪಿ) ಭಾರೀ ಬಹುಮತ ಪಡೆದು ಅಧಿಕಾರಕ್ಕೇರಿದೆ. 35ರ ಹರಯದ ಬಾಲೇಂದ್ರ ಶಾ ನೂತನ ಪ್ರಧಾನಿಯಾಗಲಿದ್ದಾರೆ.



ನೇಪಾಳದ ಪ್ರತಿಯೊಂದು ಬೆಳವಣಿಗೆ ಕೂಡಾ ಭಾರತದ ಪಾಲಿಗೆ ಮಹತ್ವದ್ದಾಗುತ್ತದೆ. ನೇಪಾಳದೊಂದಿಗೆ 1,800 ಕಿ.ಮೀ.ಗಳ ಮುಕ್ತ ಗಡಿಯನ್ನು ಭಾರತವು ಹೊಂದಿದ್ದು, ಉಭಯದೇಶಗಳ ಮಧ್ಯೆ ಸಾಂಸ್ಕೃತಿಕ ಮತ್ತು ಧಾರ್ಮಿಕ ಬಂಧವು ನಿಕಟವಾಗಿದೆ. ಉಭಯತ್ರರ ಆರ್ಥಿಕತೆಯೂ ಒಂದನ್ನೊಂದು ಆಧರಿಸಿದ್ದು, ಲಕ್ಷಾಂತರ ನೇಪಾಳಿಗಳು ಭಾರತದಲ್ಲಿ ವಾಸಿಸುತ್ತಿದ್ದಾರೆ. ಇದರ ಜತೆಗೇ ನೇಪಾಳವು ಭಾರತ ಮತ್ತು ಚೀನಾಗಳ ನಡುವೆ ಆಯಕಟ್ಟಿನ ಜಾಗದಲ್ಲಿ ಇರುವುದರಿಂದ ಭಾರತವು ಅಲ್ಲಿನ ಬೆಳವಣಿಗೆಯನ್ನು ಸದಾ ಗಮನಿಸುತ್ತಿರಬೇಕಾಗುತ್ತದೆ.

ಈ ಹಿಂದೆಲ್ಲ ನೇಪಾಳದ ರಾಜಕೀಯವನ್ನು ನಿರ್ದೇಶಿಸುವಲ್ಲಿ ಭಾರತದ ಪಾತ್ರವೂ ಇತ್ತು. ಆದರೆ ಬಳಿಕ ಚೀನಾವು ಅಲ್ಲಿನ ಕಮ್ಯುನಿಸ್ಟ್ ಪಕ್ಷದ ಮುಖಾಂತರವಾಗಿ ತನ್ನ ಪ್ರಭಾವ ಹೇರುವಲ್ಲಿ ಸಫಲವಾಗಿತ್ತು. ಕೆಲವು ಸಂದರ್ಭದಲ್ಲಿ ಭಾರತ ವಿರೋಧಿ ಭಾವನೆಯನ್ನು ಬಿತ್ತುವಲ್ಲೂ ಚೀನಾ ಹಾಗೂ ಕಮ್ಯುನಿಸ್ಟ್ ಪಕ್ಷಗಳು ಸಫಲವಾಗಿದ್ದವು. ಇನ್ನೀಗ ಭಾರತವು ನೇಪಾಳದ ರಾಜಕೀಯವನ್ನು ನಿರ್ದೇಶಿಸುವ ಪ್ರಯತ್ನದ ಬದಲು ಅಲ್ಲಿನ ಬದಲಾದ ಪರಿಸ್ಥಿತಿಯನ್ನು ಹೊಂದಿಕೊಂಡು ಅದನ್ನು ತನ್ನ ಅನುಕೂಲಕ್ಕೆ ತಕ್ಕಂತೆ ಬದಲಿಸಿಕೊಳ್ಳುವ ರಾಜತಾಂತ್ರಿಕ ಜಾಣ್ಮೆಯನ್ನು ಪ್ರದರ್ಶಿಸಬೇಕಾಗಿದೆ. ತಮಗೆ ಅಮೆರಿಕ, ಚೀನಾ, ಭಾರತ, ರಷ್ಯಾ ಯಾರದೇ ಜತೆ, ತಮ್ಮ ಸ್ವತಂತ್ರ ನಡೆ ಎಂಬುದಾಗಿ ಪ್ರಧಾನಿಯಾಗಲಿರುವ ಬಾಲೇಂದ್ರ ಶಾ ಈ ಮೊದಲು ಹೇಳಿದ್ದರಾದರೂ, ಇನ್ನೀಗ ಅಧಿಕಾರಕ್ಕೇರಿದ ಬಳಿಕ ಅವರ ಸರಕಾರವು ಯಾವ ಧೋರಣೆಯನ್ನು ಪ್ರದರ್ಶಿಸುತ್ತದೆ ಎಂದು ಕಾದು ನೋಡಬೇಕು. ನೇಪಾಳಿ ಜನರ ಆದ್ಯತೆಯು ಈಗ ದೇಶದಲ್ಲಿ ತಾಂಡವವಾಡುತ್ತಿರುವ ಭ್ರಷ್ಟಾಚಾರವನ್ನು ನಿಗ್ರಹಿಸಿ, ಉತ್ತಮ ಮೂಲಸೌಕರ್ಯಗಳನ್ನು ಪಡೆದುಕೊಳ್ಳುವ ನಿಟ್ಟಿನಲ್ಲಿದೆ. ಆ ನಿಟ್ಟಿನಲ್ಲಿ ಹೊಸ ಸರಕಾರದ ಮುಂದೆ ದೊಡ್ಡ ಸವಾಲು ಇರುವುದೂ ನಿಜ.

ತತ್ವಾರದ ಸಮಯದಲ್ಲಿ ತತ್ತ್ವಾದರ್ಶ ಪಾಲಿಸೋಣ



ನಮ್ಮ ದೇಶದ ತೈಲದ ವಿಷಯದಲ್ಲಿ ಬೇರೆ ಬೇರೆ ದೇಶಗಳನ್ನು ಅವಲಂಬಿಸಿರುವುದು ಗೊತ್ತೇ ಇದೆ. ದಿನಕ್ಕೆ 60 ಲಕ್ಷ ಬ್ಯಾರಲ್ ತೈಲ ಬಳಸುವ ನಾವು, ಹೆಚ್ಚಿನ ಪ್ರಮಾಣದ ತೈಲಕ್ಕಾಗಿ ವಿದೇಶಗಳನ್ನೇ ಅವಲಂಬಿಸಿದ್ದೇವೆ. ಇತ್ತೀಚೆಗೆ ರಷ್ಯಾದಿಂದ ಹೆಚ್ಚು ತೈಲ ಖರೀದಿಸುತ್ತಿದ್ದೇವಾದರೂ, ನಾವು ಇರಾನ್ ಹಾಗೂ ಅರಬ್ ದೇಶಗಳಿಂದಲೂ ತೈಲ ಆಮದು ಮಾಡಿಕೊಳ್ಳುತ್ತಿದ್ದೇವೆ. ಇರಾನ್ ಹಾಗೂ ಅರಬ್ ದೇಶಗಳಲ್ಲಿ ತೈಲ ಉತ್ಪಾದನೆ ಕುಸಿತಗೊಂಡಿದೆ. ಜತೆಗೆ ತೈಲ ಸಾಗಾಟ ಸಮಸ್ಯೆಯೂ ಉದ್ಭವಿಸಿದೆ. ಹರ್ಮೋಜ್ ಜಲಸಂಧಿಯಲ್ಲಿ ಚೀನಾ ಮತ್ತು ಭಾರತಕ್ಕೆ ಹೋಗುವ ಹಡಗುಗಳಿಗೆ ಅವಕಾಶ ನೀಡುವುದಾಗಿ ಇರಾನ್ ಈಗಾಗಲೇ ಹೇಳಿದೆಯಾದರೂ, ಅಲ್ಲಿ ಹಡಗುಗಳ ಟ್ರಾಫಿಕ್ ಜಾಂ ಆಗಿರುವುದರಿಂದ ಪೂರೈಕೆಯಲ್ಲಿ ವ್ಯತ್ಯಯವಾಗಿದೆ. ಇದರ ಅಲ್ಪ-ಸ್ವಲ್ಪ ಪರಿಣಾಮ ನಮ್ಮ ಮೇಲೆ ಆದರೂ ಆಗಬಹುದು. ಸಮಸ್ಯೆ ಆಗಬಹುದು ಎಂದು ಆತಂಕಪಡುತ್ತ ಇರುವ ಬದಲು ಸಮಸ್ಯೆ ಆಗದಂತೆ ನಾವೇ ಪ್ರಯತ್ನಿಸಲು ಸಾಧ್ಯವಿದೆಯಾ ಎಂದು ಯೋಚಿಸಬಹುದು.

ಎಲ್ಲವನ್ನೂ ಸರ್ಕಾರವೇ ಮಾಡಲಿ ಎಂದು ಯೋಚಿಸುವ ಬದಲು ನಾವಾಗೇ ಕೆಲವು ಪ್ರಯತ್ನಗಳ ಮೂಲಕ ಬಳಕೆ ಕಡಿಮೆ ಮಾಡಲು ಸಾಧ್ಯವಿದೆ. ಉದಾಹರಣೆಗೆ ಕಾರು ಬಳಸುವವರು ಸಾಧ್ಯವಾದಲ್ಲೆಲ್ಲ ಸ್ಕೂಟರ್ ಅಥವಾ ಬೈಕ್ ಬಳಸಬಹುದು. ಬೈಕ್‌ಗಳನ್ನು ಬಳಸುವವರು ಸಾಧ್ಯವಾದಷ್ಟು ಮೆಟ್ರೊ ಅಥವಾ ಬಸ್ ಬಳಸಬಹುದು. ತೀರಾ ಅಗತ್ಯವಿರುವ ಓಡಾಟಗಳನ್ನು ಮಾತ್ರ ಮಾಡಬಹುದು. ಎರಡು-ಮೂರು ಓಡಾಟಗಳ ಬದಲು ಒಂದೇ ಓಡಾಟದಲ್ಲಿ ಕೆಲಸ ಮುಗಿಸಲು ಸಾಧ್ಯವಿದೆಯೇ ಎಂದು ಯೋಚಿಸಬಹುದು.

ಇವೆಲ್ಲವೂ ತುಂಬಾ ಚಿಕ್ಕ ಚಿಕ್ಕ ಪ್ರಯತ್ನಗಳು. ನಾವು ಮಾಡಲಾಗದ ಪ್ರಯತ್ನಗಳೇನಲ್ಲ. ಈ ರೀತಿಯ ಪ್ರಯತ್ನಗಳನ್ನು ಸ್ವಲ್ಪ ಜನ ಅನುಸರಿಸಿದರೂ ದೇಶದ ತೈಲ ಬಳಕೆಯ ಮೇಲಿನ ಒತ್ತಡ ಗಣನೀಯವಾಗಿ ಕಡಿಮೆಯಾಗುತ್ತದೆ. ನಾವೊಬ್ಬರು ಹೀಗೆ ಮಾಡುವುದರಿಂದ ಏನುಪಯೋಗ ಎಂದು ಯೋಚಿಸುವ ಬದಲು, ಉಳಿದವರು ಮಾಡುತ್ತಾರೊ ಇಲ್ಲವೊ ನಾವು ಮಾಡೋಣ ಎಂದು ಯೋಚಿಸಿದರೆ ಹೆಚ್ಚು ಪರಿಣಾಮಕಾರಿಯಾಗಬಹುದು. ಇದ್ಯಾವುದೂ ಕಷ್ಟವಲ್ಲ. ಯಾಕೆಂದರೆ ಕೊರೋನಾ ಸಂದರ್ಭದಲ್ಲಿ ನಾವೆಲ್ಲ ಎಂತಹ ಸ್ಥಿತಿ ಎದುರಿಸಿದ್ದೇವೆ ಎಂಬುದನ್ನು ಒಮ್ಮೆ ನೆನಪಿಸಿಕೊಳ್ಳಿ. ವಾರಗಟ್ಟಲೆ ಮನೆಯಿಂದ ಹೊರಗೆ ಹೋಗದೆಯೂ ಜೀವನ ಸಾಗಿಸಿದ್ದೇವೆ. ಕಾರು-ಬೈಕು, ಪೆಟ್ರೋಲ್ ಇತ್ಯಾದರೂ ಓಡಾಡುವ ಹಾಗೆ ಇರಲಿಲ್ಲ. ಈಗ ಪರಿಸ್ಥಿತಿ ಹಾಗಿಲ್ಲ. ಸ್ವಲ್ಪ ನಮ್ಮನ್ನು ನಾವು ನಿಯಂತ್ರಿಸಿಕೊಳ್ಳಬೇಕಿದೆ ಅಷ್ಟೇ.

ಈಗ ಅಂತಹ ಅನಿವಾರ್ಯ ಸ್ಥಿತಿ ಏನಿದೆ ಈಗ ಎಂದು ಕೆಲವರು ಪ್ರಶ್ನಿಸಬಹುದು. ಖಂಡಿತ ಅನಿವಾರ್ಯ ಸ್ಥಿತಿ ಇಲ್ಲ, ಭಾರತಕ್ಕೆ ತೈಲದ ಕೊರತೆ ಆಗದ ಹಾಗೆ ಕಚ್ಚಾ ತೈಲ ನೀಡುವುದಾಗಿ ರಷ್ಯಾ ಈಗಾಗಲೇ ಹೇಳಿಕೆ ನೀಡಿದೆ. ದೇಶದಲ್ಲಿ ತೈಲ ಸಂಗ್ರಹವೂ ಇದೆ. ಆದರೆ ಯುದ್ಧ ಸ್ಥಿತಿ ಯಾವಾಗ



ತಿಳಿಯಾಗುತ್ತದೆ ಎಂಬ ಸ್ಪಷ್ಟತೆ ಈಗ ಸದ್ಯಕ್ಕಿಲ್ಲ. ಆಕಸ್ಮಾತ್ ಯುದ್ಧ ಒಂದು ಅಥವಾ ಎರಡು ತಿಂಗಳು ಮುಂದುವರಿದರೆ ಆಗೇನು ಕತೆ? ನಮ್ಮ ಸರ್ಕಾರ ಅದಕ್ಕೊಂದು ದಾರಿ ಖಂಡಿತ ಕಂಡುಕೊಳ್ಳುತ್ತದೆ ಎಂಬುದರಲ್ಲಿಯೂ ಅನುಮಾನವಿಲ್ಲ. ಆದರೆ ನಾವು ನಮ್ಮದೊಂದು ಕಿರುಪ್ರಯತ್ನದ ಮೂಲಕ ಸರ್ಕಾರದ ಮೇಲಿನ ಒತ್ತಡ ಕಡಿಮೆ ಮಾಡಬಹುದೆ? ದೇಶದ ಹಿತದೃಷ್ಟಿಯಿಂದ ನಾವು ಪ್ರಯತ್ನಿಸಬಹುದೆ ಎಂಬ ಯೋಚನೆ ಅಷ್ಟೆ. ಯಾಕೆಂದರೆ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ಬೆಲೆ ವಿಪರೀತ ಏರಿಕೆಯಾಗಿದೆ. ಈ ಸಮಯದಲ್ಲಿ ನಾವು ತೈಲ ಖರೀದಿ ಮಾಡಿದರೆ ಸಹಜವಾಗಿ ಹೆಚ್ಚು ಹಣ ನೀಡಿ ಖರೀದಿ ಮಾಡಬೇಕಾಗುತ್ತದೆ. ಆಗ ದೇಶದ ಆರ್ಥಿಕತೆಯ ಮೇಲೆ ಒತ್ತಡ ಬೀಳುತ್ತದೆ. ಸರ್ಕಾರ ಜನರ ಹಿತದೃಷ್ಟಿಯಿಂದ ಪೆಟ್ರೋಲ್- ಡೀಸೆಲ್ ಬೆಲೆ ಏರಿಕೆ ಮಾಡದೆ ಇರಬಹುದು ಅಥವಾ ಸ್ವಲ್ಪ ಮಾತ್ರ ಏರಿಕೆ ಮಾಡುವ ನಿರ್ಧಾರ ಕೈಗೊಳ್ಳಬಹುದು. ನಿರ್ಧಾರ ಯಾವುದೇ ಆದರೂ ನಮಗೆ ನಷ್ಟವೇ ಎಂಬುದರಲ್ಲಿ ಅನುಮಾನವಿಲ್ಲ. ಕೇಂದ್ರ ಸರ್ಕಾರ ಸುಮಾರು ವರ್ಷಗಳಿಂದ ಪೆಟ್ರೋಲ್ ಬೆಲೆ ಏರಿಕೆಯಾಗದಂತೆ ತನ್ನ ತೈಲ ಖರೀದಿ ನೀತಿಯನ್ನು ನಿಭಾಯಿಸಿದೆ. ಪರಿಸ್ಥಿತಿಯ ಅನಿವಾರ್ಯದಿಂದ ದರ ಹೆಚ್ಚಳ ಮಾಡುವಂತಾದರೆ ಅದರ ಪರಿಣಾಮ ನಮ್ಮೆಲ್ಲರ ಮೇಲೂ ಆಗುತ್ತದೆ. ಆ ಪರಿಣಾಮಗಳನ್ನು ಕಡಿಮೆ ಮಾಡುವ ದೃಷ್ಟಿಯಿಂದ ನಾವು ಈಗಲೇ ಮುಂದಡಿ ಇಡಬಹುದೆ ಎಂಬದಷ್ಟೇ ಚಿಂತನೆ.

ಸದ್ಯಕ್ಕೆ ಪೆಟ್ರೋಲಿಯಂ ಉತ್ಪನ್ನಗಳ ಬಳಕೆ ಕಡಿಮೆ ಮಾಡುವಂತೆ ಸರ್ಕಾರವೇನೂ ಮನವಿ ಮಾಡಿಲ್ಲ. ಅಂತಹ ಸ್ಥಿತಿ ನಿರ್ಮಾಣವಾಗಲಿಕ್ಕೂ ಇಲ್ಲ. ಆದರೆ ದೇಶದ ಪ್ರಜೆಗಳಾಗಿ ನಾವೇನಾದರೂ ಕೊಡುಗೆ ನೀಡಬಹುದಾ? ಸರ್ಕಾರ ಅಥವಾ ಪ್ರಧಾನಿ ಕರೆ ನೀಡುವ ಮೊದಲೇ ನಾವು ಅಳಿಲುಸೇವೆ ಸಲ್ಲಿಸಬಹುದಾ? ಒಳ್ಳೆಯ ಪ್ರಜೆಗಳಾಗಿ ನಮ್ಮ ಕೆಲಸ ಮಾಡಬಹುದಾ? ಎಂಬುದಷ್ಟೇ ಇಲ್ಲಿನ ಚಿಂತನೆ.

ಇಬ್ಬರ ಜಗಳ ಮೂರನೆಯವರಿಗೆ ಲಾಭ ಎಂಬುದು ಹಳೆಯ ಮಾತು. ಕೆಲವೊಮ್ಮೆ ಇಬ್ಬರ ಜಗಳದಲ್ಲಿ ಸಂಬಂಧವೇ ಇಲ್ಲದ ಮೂರನೆಯವರಿಗೆ ನಷ್ಟವೂ ಆಗಬಹುದು. ಈ ಯುದ್ಧದಲ್ಲಿ ಭಾರತ ಯಾವ ರೀತಿಯಲ್ಲೂ ಭಾಗೀದಾರನಲ್ಲ. ಆದರೆ ಎಲ್ಲೋ ದೂರದಲ್ಲಿ ಯುದ್ಧ ನಡೆಯುತ್ತಿದೆ ಎಂದು ನಾವು ಹಾಯಾಗಿರುವುದು ಸಾಧ್ಯವಿಲ್ಲ. ಯಾಕೆಂದರೆ ಯುದ್ಧ ತುಂಬಾ ದೂರದಲ್ಲೇನೂ ನಡೆಯುತ್ತಿಲ್ಲ. ಯುದ್ಧ ನಡೆಯುತ್ತಿರುವ ದೇಶಗಳೂ ಸೇರಿದಂತೆ ಮಧ್ಯಪ್ರಾಚ್ಯದ ಎಲ್ಲ ದೇಶಗಳ ಜತೆ ಭಾರತ ಒಂದಲ್ಲ ಒಂದು ರೀತಿಯಲ್ಲಿ ಬಾಂಧವ್ಯ ಹೊಂದಿದೆ. ಅವರೆಲ್ಲ ಯುದ್ಧ ಪರಿಸ್ಥಿತಿಯಲ್ಲಿರುವಾಗ ಅದರ ಪರಿಣಾಮಗಳು ನಮ್ಮ ದೇಶದ ಮೇಲೂ ಆಗುವುದು ಸಹಜ. ವ್ಯಾಪಾರ, ರಫ್ತು- ಆಮದು ಎಲ್ಲವೂ ವ್ಯತ್ಯಯವಾಗಿದೆ. ಹಾಗಾಗಿ ನಾವೂ ಸ್ವಲ್ಪ ಜೀವನಶೈಲಿಯ ವ್ಯತ್ಯಾಸದ ಮೂಲಕ ಆ ನಿಟ್ಟಿನಲ್ಲಿ ಪ್ರಯತ್ನಿಸಬಹುದೇನೊ. ಎಲ್ಲದಕ್ಕೂ ಸರ್ಕಾರವನ್ನೇ ದೂಷಿಸುವವರು, ಸರ್ಕಾರವೇ ಎಲ್ಲವನ್ನೂ ಮಾಡಲಿ ಬಿಡಿ ಎನ್ನುವವರ, ನಮ್ಮೆಲ್ಲ ಸಮಸ್ಯೆಗೂ ಪರಿಹಾರ ನೀಡಬೇಕಾದ್ದು ಸರ್ಕಾರದ ಕೆಲಸ ಎನ್ನುವವರ ಬಗ್ಗೆ ಚರ್ಚೆ ಅನಗತ್ಯ. ಅವರು ಸಿಕ್ಕ ಅವಕಾಶವನ್ನು ಟೀಕೆಗೆ, ಜನರನ್ನು ಸರ್ಕಾರದ ವಿರುದ್ಧ ರೊಚ್ಚಿಗೆಬ್ಬಿಸಲು ಪ್ರಯತ್ನ ಮಾಡಬಹುದು. ಆದರೆ ಒಳ್ಳೆಯ ಯೋಚನೆಯ ಒಂದಷ್ಟು ಜನ ನಾವೇನು ಮಾಡಬಹುದು ಎಂದು ಯೋಚಿಸಲು ಇದು ಸಕಾಲ.

ನರಕಕ್ಕೆ ಕಾರಣವಾಗುವ ಆಸುರೀ ಸಂಪತ್ತು



ಹಿಂದಿನ ಲೇಖನದಲ್ಲಿ ಗರುಡಪುರಾಣದಲ್ಲಿ ವಿವರಿಸಿರುವಂತೆ ನರಕಗಳ ವರ್ಣನೆಯನ್ನು ನೋಡಿದೆವು. ಭಾಗವತದಲ್ಲಿಯೂ ಇದೇ ರೀತಿಯಲ್ಲಿ ನರಕಗಳ ವರ್ಣನೆಯನ್ನು ಮತ್ತು ಅಂಥ ನರಕಗಳಿಗೆ ಹೋಗಲು ಕಾರಣವಾಗುವ ಅಕಾರ್ಯಗಳ ವಿವರಣೆಯನ್ನು ಕೊಡಲಾಗಿದೆ. ಶ್ರೀಮದ್ಭಗವದ್ಗೀತೆಯಲ್ಲಿ ನರಕದ ದ್ವಾರವನ್ನಾಗಿ ನಮ್ಮ ಕೆಲವು ಗುಣಗಳನ್ನು ತಿಳಿಸಲಾಗಿದೆ. **ತ್ರಿವಿಧಂ ನರಕಸ್ಯೇದಂ ದ್ವಾರಂ ನಾಶನಮಾತ್ಮನಃ । ಕಾಮಃ ಕ್ರೋಧಸ್ತಥಾ ಲೋಭಸ್ತಸ್ಮಾದೇತತ್ತ್ರಯಂ ತ್ಯಜೇತ್ ॥** ಎಂಬುದಾಗಿ. ದೈವೀಸಂಪತ್ತು ಮತ್ತು ಆಸುರೀಸಂಪತ್ತೆಂಬುದಾಗಿ ಎರಡುವಿಧದವ್ಯಕ್ತಿತ್ವವನ್ನು ತಿಳಿಸಿ, ಆಸುರೀಸಂಪತ್ತನ್ನು ಅತ್ಯಂತವಿಸ್ತೃತವಾಗಿ ವರ್ಣಿಸಲಾಗಿದೆ. ಇದರ ಸಂಕ್ಷೇಪವಾಗಿ ಈ ಮೇಲಿನ ಶ್ಲೋಕವನ್ನು ಹೇಳುತ್ತಾ, ಕಾಮ, ಕ್ರೋಧ ಮತ್ತು ಲೋಭಗಳೇ ನಮ್ಮನ್ನು ನರಕಕ್ಕೆ ದೂಡುವ ಕೆಟ್ಟಸ್ವಭಾವಗಳಾಗಿವೆ ಎಂಬುದಾಗಿ ಪರಮಾತ್ಮನು ತಿಳಿಸುತ್ತಾನೆ.

ದೈವೀಸಂಪತ್ತು ಮೋಕ್ಷಕ್ಕೆ ಕಾರಣವಾದರೆ, ಆಸುರೀಸಂಪತ್ತು ನಮ್ಮ ಅಧಃಪತನಕ್ಕೆ ಕಾರಣವಾಗುತ್ತವೆ. ವ್ಯಕ್ತಿಯ ಅಧೋಗತಿಗೆ ಕಾರಣವಾಗುವ ಗುಣಗಳು ಯಾವುವು ಎಂಬುದನ್ನು ಹದಿನಾರನೆಯ ದೈವಾಸುರ ಸಂಪದ್ವಿಭಾಗಯೋಗದಲ್ಲಿ ಪರಮಾತ್ಮನು ವಿಸ್ತೃತವಾಗಿ ತಿಳಿಸಿದ್ದಾನೆ. ಅಲ್ಲಿ ಮೊದಲು ದೈವೀಸಂಪತ್ತುಳ್ಳವರ ಗುಣಗಳನ್ನು ಪಟ್ಟಿಮಾಡುತ್ತಾನೆ. ಅಭಯ, ಮನಶ್ಶುದ್ಧಿ, ಆತ್ಮಜ್ಞಾನೋಪಾಯದಲ್ಲಿಯೇ ಸರ್ವದಾ ಆಸಕ್ತನಾಗಿರುವಿಕೆ, ದಾನ, ಬಾಹ್ಯೇಂದ್ರಿಯನಿಗ್ರಹ, ದ್ರವ್ಯಾದಿಯಜ್ಞಗಳು, ಸ್ವಾಧ್ಯಾಯ, ತಪಸ್ಸು, ಅಹಿಂಸೆ, ಸತ್ಯವಚನ, ಕ್ರೋಧರಾಹಿತ್ಯ, ತ್ಯಾಗಬುದ್ಧಿ, ಮನೋನಿಗ್ರಹ, ಚಾಡಿ ಹೇಳದಿರುವಿಕೆ, ಭೂತದಯೆ, ಲೋಲುಪತೆ ಇಲ್ಲದೇ ಇರುವಿಕೆ, ಮೃದುತ್ವ, ಲಜ್ಜಾ, ಕರ್ಮೇಂದ್ರಿಯಗಳನಿಗ್ರಹ, ಬಲ, ಕ್ಷಮಾಗುಣ, ಧೈರ್ಯ, ಹೊರಗಿನ ಮತ್ತು ಒಳಗಿನ ಶುಚಿತ್ವ, ತನ್ನ ಬಗ್ಗೆಯೇ ತನಗೆ ಅತಿಯಾದ ಪೂಜ್ಯಭಾವ ಇಲ್ಲದೇ ಇರುವಿಕೆ, ಇವೆಲ್ಲ ದೈವೀಸಂಪತ್ತಾಗಿವೆ. ಇಂಥ ಗುಣಗಳು ನಮ್ಮ ಅಭ್ಯುದಯಮತ್ತುನಿಃಶ್ರೇಯಸ್ಸಿಗೆಕಾರಣವಾಗುತ್ತವೆ. ಆಮೂಲಕ ಮರಣದ ಅನಂತರ ಉತ್ತಮಜನ್ಮಕ್ಕೆ ಕಾರಣವಾಗಿ ಕ್ರಮೇಣ ಮೋಕ್ಷಮಾರ್ಗದಲ್ಲಿ ಮುನ್ನಡೆಯುವ ಇಚ್ಛೆಯನ್ನೂ, ಸಾಮರ್ಥ್ಯವನ್ನೂ ಉಂಟುಮಾಡುತ್ತವೆ.

ಇದಕ್ಕೆ ವಿರುದ್ಧವಾಗಿ ಆಸುರೀಸಂಪತ್ತು ನಮ್ಮ ನಮ್ಮ ಅಧೋಗತಿಗೆ ಕಾರಣವಾಗುತ್ತವೆ. ಅವು ಇಹದಲ್ಲೂ, ಪರದಲ್ಲೂ ಶ್ರೇಯಸ್ಸಿಗೆ ಪ್ರತಿಬಂಧಕವೇ ಆಗಿರುವುದರಿಂದ ಎಲ್ಲೂ ಸುಖಕ್ಕೆ ಕಾರಣವಾಗುವುದಿಲ್ಲ. ಅಂಥ ಗುಣಗಳು ನಮ್ಮಲ್ಲಿವೆಯೇ ಎಂದು ಪರಾಮರ್ಶಿಸಿಕೊಳ್ಳುವ ಸಲುವಾಗಿಯೇ ಭಗವದ್ಗೀತೆಯಲ್ಲಿ ಇವುಗಳ ವಿವರಣೆಯನ್ನು ಮಾಡಲಾಗಿದೆ. ಅವು ಯಾವುವು ಎಂದರೆ, ದಂಭ. ದಂಭವನ್ನು ಧರ್ಮಧ್ವಜಿತ್ವ ಎಂಬುದಾಗಿ ಶಂಕರರು ತಮ್ಮ ಭಾಷ್ಯದಲ್ಲಿ ತಿಳಿಸಿದ್ದಾರೆ. ಅರ್ಥಾತ್ ತಾನು ಪರಮ ಧಾರ್ಮಿಕ ಎಂಬುದಾಗಿ ತಿಳಿಸಲು ಬೇಕಾದ ಬಾಹ್ಯವೇಷಗಳು. ಆತ ನಿಜವಾಗಿ ಎಷ್ಟು ಧರ್ಮಾಚರಣೆಯನ್ನು ಮಾಡುತ್ತಾನೋ ಇಲ್ಲವೋ, ಆದರೆ ಅದಕ್ಕಿಂತ ಹೆಚ್ಚು ತೋರಿಸಿಕೊಳ್ಳಲು ಬಯಸುತ್ತಾನೆ. ಎರಡನೆಯದು, ದರ್ಪ. ವಿದ್ಯೆ, ಧನ, ಯಶಸ್ಸು ಮೊದಲಾದ ನಿಮಿತ್ತದಿಂದ ಉಂಟಾಗುವ ಮದವಿದು. ಇವುಗಳ ಜೊತೆಗೆ ಕ್ರೋಧ, ಮತ್ತೊಬ್ಬರನ್ನು ನೋಯಿಸುವಂಥ ಕಠಿಣ ಮಾತುಗಳು, ಕರ್ತವ್ಯಾಕರ್ತವ್ಯ ಅವಿವೇಕ ಇವೆಲ್ಲ ಆಸುರೀಸಂಪತ್ತನ್ನುಳ್ಳವರಲ್ಲಿ ಕಾಣಬರುವ ದೋಷಗಳಾಗಿವೆ. ಹೀಗೆ ಈ ದೋಷಗಳು ವ್ಯಕ್ತಿಯನ್ನು ಕಟ್ಟಿಹಾಕಿ ನರಕಪ್ರಾಪ್ತಿಗೆ ಕಾರಣವಾಗುತ್ತವೆ. ಯಾಕೆ ಪರಮಾತ್ಮನು ಈ ಅಧ್ಯಾಯದಲ್ಲಿ ಈ ರೀತಿಯಲ್ಲಿ ವ್ಯಕ್ತಿತ್ವದ ವಿಭಾಗವನ್ನು ಮಾಡಿಕೊಟ್ಟಿದ್ದಾನೆಂದರೆ, ದೈವೀಸಂಪತ್ತು ನನ್ನಲ್ಲಿದೆಯೇ? ಎಂದು ನೋಡಿಕೊಂಡು, ಇಲ್ಲದಿದ್ದರೆ ಅದನ್ನು ಹೊಂದಲು ಪ್ರಯತ್ನಿಸಬೇಕು. ಒಂದು ವೇಳೆ ಆಸುರೀಸಂಪತ್ತು ಇದ್ದರೆ ಅದನ್ನು ನಿವಾರಿಸಿಕೊಳ್ಳಬೇಕು ಎಂಬ ಕಾರಣಕ್ಕೆ.

ಆಸುರೀಸಂಪತ್ತಿನವರು ಹೇಗೆಲ್ಲ ಯೋಚಿಸುತ್ತಾರೆ, ಹೇಗೆಲ್ಲ ವರ್ತಿಸುತ್ತಾರೆ ಎಂಬಿತ್ಯಾದಿಗಳನ್ನು ವಿಶದವಾಗಿ ತಿಳಿಸಿಕೊಡಬೇಕೆಂಬ ಕಾರಣಕ್ಕೆ ಇನ್ನೂ ವಿಸ್ತೃತವಾಗಿ ಪರಮಾತ್ಮನು ಆಸುರೀಸಂಪತ್ತಿನವರ ವರ್ಣನೆಯನ್ನೇ ಮುಂದುವರೆಸುತ್ತಾನೆ. ಆಸುರಸ್ವಭಾವದವರು ಹೇಗೆ ಯೋಚಿಸುತ್ತಾರೆಂದರೆ, ಈ ಜಗತ್ತೆಲ್ಲವೂ ಅಶಾಶ್ವತ ಮತ್ತು ಇದಕ್ಕೆ ಧರ್ಮವೆಂಬುದು ಈ ಜಗತ್ತಿಗೆ ಆಧಾರವಲ್ಲ. ಈ ಜಗತ್ತು ಸ್ವಭಾವತಃ ನಡೆದುಕೊಂಡು ಹೋಗುತ್ತಿದೆ. ಅದಕ್ಕೋಸ್ಕರ ಒಬ್ಬ ಈಶ್ವರನಾಗಲೀ, ಧರ್ಮವಾಗಲೀ ಬೇಕಾಗಿಲ್ಲ. ಗಂಡು-ಹೆಣ್ಣಿನ ಮೈಥುನ ಮಾತ್ರದಿಂದಲೇ ಈ ಜಗತ್ತು ಹುಟ್ಟಿದೆ ಮತ್ತು ಮುಂದುವರೆ ಯುತ್ತಿದೆ. ಹಾಗಾಗಿ ಧರ್ಮಕ್ಕಿಂತಲೂ ಕಾಮವೇ ಈ ಜಗತ್ತಿನ ಕೀಲಿಕೈ ಆಗಿದೆ ಎಂಬಿತ್ಯಾದಿಯಾಗಿ ರಮಣೀಯವಾದ ಮಾತಿನ ಮೂಲಕ ಜಗತ್ತನ್ನು ಮರುಳುಗೊಳಿಸುತ್ತಾರೆ. ಈ ದೃಷ್ಟಿಯನ್ನೇ ನಂಬಿಕೊಂಡ ಅಂಥವರೂ ಮತ್ತು ಅವರನ್ನು ನಂಬಿದ ಇತರರೂ ಸೇರಿ, ಪರಲೋಕವೆಂಬುದೇ ಇಲ್ಲವೆಂಬುದಾಗಿ ಭಾವಿಸಿ ಸ್ವೇಚ್ಛಾಚಾರದಲ್ಲಿ ತೊಡಗಿಕೊಂಡು ಕ್ರೂರಕರ್ಮಗಳನ್ನು ಮಾಡುತ್ತಾ ಜಗತ್ತಿಗೆ ಕಂಟಕರಾಗುತ್ತಾರೆ. ಆ ಮೂಲಕ ಜಗತ್ತಿಗೆ ಕಂಟಕರಾಗುತ್ತಾರೆ.

ಅಷ್ಟೇ ಅಲ್ಲ, ಅವರು ತಮ್ಮ ಇಚ್ಛೆಯನ್ನೆಲ್ಲ ತೀರಿಸಿಕೊಳ್ಳುವುದಕ್ಕಾಗಿಯೇ ತಮ್ಮ ಇಡೀ ಜೀವನವನ್ನು ಮುಡಿಪಾಗಿಡುತ್ತಾರೆ. ಅಂಥವರು ದಂಭ, ಅಭಿಮಾನ, ಮದವೇ ಮೊದಲಾದ ಎಲ್ಲ ದುರ್ಗುಣಗಳನ್ನೂ ತಮ್ಮೊಳಗೆ ಬಿಟ್ಟುಕೊಳ್ಳುವುದರಲ್ಲಿ ಆಶ್ಚರ್ಯವಿಲ್ಲ. ಹೀಗೆ ಅವಿವೇಕದಿಂದ ಯಾವತ್ತೂ ನಕಾರಾತ್ಮಕ ಚಿಂತನೆಯಲ್ಲೇ ತಮ್ಮ ಸಮಯ ಕಳೆಯುತ್ತಾರೆ. ಅಷ್ಟೇ ಅಲ್ಲ, ಕಾಮೋಪಭೋಗವೇ ಶ್ರೇಷ್ಠವಾದದ್ದು ಎಂಬ ನಿಶ್ಚಯ ಅವರದ್ದು. ಹಾಗಾಗಿ ಯಾವ ಒಳ್ಳೆಯ ಗುಣಗಳಿಗೂ ಅವರ ವ್ಯಕ್ತಿತ್ವದಲ್ಲಿ ಜಾಗ ದೊರೆಯುವುದಿಲ್ಲ. ಆಶಾಪಾಶಕ್ಕೆ ಒಳಗಾಗಿ, ಕಾಮಕ್ರೋಧವನ್ನೇ ತಮ್ಮ ಸ್ವಭಾವವನ್ನಾಗಿಸಿಕೊಂಡು, ಅದನ್ನು ಪೂರೈಸಿಕೊಳ್ಳುವ ಸಲುವಾಗಿ ನಿಧಾನವಾಗಿ ಅವರು ಅನ್ಯಾಯದ ಮಾರ್ಗವನ್ನು ಹಿಡಿಯುತ್ತಾರೆ. ಒಮ್ಮೆ ಈ ಮಾರ್ಗಕ್ಕೆ ಇಳಿದರೆ ಮತ್ತೆ ಎದ್ದು ಬರುವುದು ಕಷ್ಟ. ಇದನ್ನೇ **ಆಶಾಪಾಶಶತೈರ್ಬದ್ಧಾಃ ಕಾಮಕ್ರೋಧಪರಾಯಣಾಃ । ಈಹಂತೇ ಕಾಮಭೋಗಾರ್ಥಮನ್ಯಾಯೇನಾರ್ಥಸಞ್ಚಯಾನ್ ॥** ಎಂಬುದಾಗಿ ಹೇಳಲಾಗಿದೆ.

ಈ ರೀತಿಯ ಸ್ವಭಾವದವರು ನಿತ್ಯವೂ ಕೂಡ ತಾನಿಷ್ಟು ದುಡಿದೆ, ಇದರಿಂದ ಇಷ್ಟು ದೊರೆಯಿತು, ನಾಳೆ ಇಷ್ಟನ್ನು ಪಡೆದುಕೊಳ್ಳಬೇಕು, ಆಮೇಲೆ ಇಷ್ಟಿಷ್ಟನ್ನು ನನ್ನದಾಗಿಸಿಕೊಳ್ಳಬೇಕು ಎಂಬಿತ್ಯಾದಿ ಚಿಂತನೆಯಲ್ಲಿಯೇ ತಮ್ಮ ಇಡೀ ಜೀವನವನ್ನು ಕಳೆದು, ಜೀವನವನ್ನು ಲೌಕಿಕಚಿಂತನೆಗಾಗಿಯೇ ಮೀಸಲಾಗಿಸಿ ಹೊರಡುತ್ತಾರೆ. ಅಷ್ಟೇ ಅಲ್ಲ, ಈತನನ್ನ ಶತ್ರು, ಇವನನ್ನು ನಾನು ನಾಶಮಾಡಬೇಕು, ಅಷ್ಟೇ ಅಲ್ಲ, ಇಂತಿಂಥವರು ನನ್ನ ಶತ್ರುಗಳಿದ್ದಾರೆ, ಅವರನ್ನೆಲ್ಲ ನಾಶ ಮಾಡುತ್ತೇನೆ ಎಂಬಿತ್ಯಾದಿಯಾಗಿಯೇ ಅವರ ಆಲೋಚನೆಯು ಸಾಗುತ್ತದೆ. ಇದು ನಿಧಾನಕ್ಕೆ ಆತನಲ್ಲಿ ಅಹಂಕಾರವನ್ನು ವರ್ಧಿಸುತ್ತಾ, ತಾನೇ ಸರ್ವಶಕ್ತನೆಂಬ ಭ್ರಮೆಯನ್ನು ಉಂಟುಮಾಡುತ್ತದೆ. ಹಾಗಾಗಿ ಆತ ನಿಧಾನಕ್ಕೆ ಎಲ್ಲ ಮೌಲ್ಯವನ್ನೂ ಬಿಟ್ಟುಬಿಡುತ್ತಾನೆ. ತನ್ನಂಥ ಇನ್ನೊಬ್ಬರಿಲ್ಲ ಎಂಬ ಭಾವ ಬೆಳೆಯುತ್ತಿದ್ದಂತೆಯೇ ಆತ ಲೋಕಕಂಟಕನಾಗುತ್ತಾನೆ. ನನ್ನಷ್ಟು ಸುಖಿಗಳೂ, ಶ್ರೀಮಂತರೂ, ಬುದ್ಧಿವಂತರೂ, ನನ್ನಷ್ಟು ಪರಿಣತರೂ ಯಾರಿದ್ದಾರೆ ಎಂಬಿತ್ಯಾದಿಯಾಗಿಯೇ ಅವರ ಭಾವವಿರುತ್ತದೆಯೇ ಹೊರತೂ, ಯಶಸ್ಸು ಬಂದಾಗ ಇನ್ನಷ್ಟು ಬಾಗಬೇಕು, ವಿಧೇಯನಾಗಬೇಕು ಎಂದು ಅವರಿಗೆ ಅನ್ನಿಸುವುದೇ ಇಲ್ಲ. ಹಣ, ಅಧಿಕಾರ ಇತ್ಯಾದಿಗಳು ಒದಗಿದಾಗ ಸಹಜವಾಗಿಯೇ ಲೋಕವು ಅತನ ಹಿಂದೆ ಬರುತ್ತದೆ. ಅದನ್ನು ನೋಡಿ ಆತ ಒಂದು ರೀತಿಯ ಉನ್ಮತ್ತತೆಗೆ ಒಳಗಾಗುತ್ತಾನೆ. ಹಿತವಚನವನ್ನು ಕಡೆಗಣಿಸುತ್ತಾನೆ. ಎಚ್ಚರವನ್ನು ತಪ್ಪುತ್ತಾನೆ. ಪ್ರಮಾದವು ವ್ಯಕ್ತಿಯ ಶ್ರೇಯಸ್ಸಿಗೆ ಅತಿ ದೊಡ್ಡ ಶತ್ರು. ಆದರೆ ಅದನ್ನೆಲ್ಲ ಆತ ಉಪೇಕ್ಷಿಸುತ್ತಾನೆ.

ನನ್ನದೇ ಪರಿಶ್ರಮ, ನನ್ನದೇ ದುಡ್ಡು, ನಾನು ಅದನ್ನು ಹೇಗೆ ಬೇಕಾದರೂ ಬಳಸಿಕೊಳ್ಳುತ್ತೇನೆ, ಏನು ಬೇಕಾದರೂ ಮಾಡುತ್ತೇನೆ ಎಂಬಿತ್ಯಾದಿಯಾಗಿ ಆತನೊಳಗೆ ಮದವು ಹೆಚ್ಚುತ್ತಾ ಬರುತ್ತದೆ. ಹೊರಗೆ ಒಳ್ಳೆಯ ವ್ಯಕ್ತಿಯಂತೆ ನಟನೆಯನ್ನು ಮಾಡಿದರೂ ಆತನ ನಡತೆಯಲ್ಲಿ ಇವೆಲ್ಲ ಸೂಕ್ಷ್ಮವಾಗಿ ಕಾಣಲು ತೊಡಗುತ್ತವೆ. ಕೊನೆಗೊಮ್ಮೆ ಬಾಹ್ಯದಲ್ಲಿಯೂ ಇದು ಅಭಿವ್ಯಕ್ತಿಸಲು ತೊಡಗಿ ನಿಧಾನವಾಗಿ ಆತ ಎಲ್ಲ ಕಲ್ಯಾಣಗುಣಗಳಿಂದ, ಶಿಷ್ಟರಿಂದ, ಸಮಾಜದಿಂದ ದೂರವಾಗುತ್ತಾನೆ, ಪುಣ್ಯದಿಂದಲೂ ದೂರವಾಗುತ್ತಾ, ಪಾಪವನ್ನೇ ಆಶ್ರಯಿಸುತ್ತಾನೆ. ಈ ಮೂಲಕ ನರಕಕ್ಕೆ ಬೀಳುತ್ತಾನೆ. ಅದನ್ನೇ ಗೀತೆಯಲ್ಲಿ ಹೀಗೆ ಹೇಳಿದೆ:

ಅನೇಕಚಿತ್ತವಿಭ್ರಾಂತಾ ಮೋಹಜಾಲಸಮಾವೃತಾಃ ।
ಪ್ರಸಕ್ತಾಃ ಕಾಮಭೋಗೇಷು ಪತಂತಿ ನರಕೇಽಶುಚೌ ॥ ಎಂಬುದಾಗಿ.

ಅವರ ದುರಾಚಾರದ ವರ್ಣನೆ ಇಷ್ಟಕ್ಕೇ ನಿಲ್ಲುವುದಿಲ್ಲ. ತಮ್ಮನ್ನು ತಾವೇ ಸಂಭಾವಿತರೆಂದು ಭಾವಿಸುವ ಈ 'ಆತ್ಮಸಂಭಾವಿತರು', ಅವಿಧೇಯತೆಯನ್ನೇ ತುಂಬಿಕೊಂಡು, ಧನ-ಮಾನ-ಮದಗಳಿಂದ ಕೂಡಿದವರಾಗಿ ತೋರಿಕೆಗಾಗಿ ಒಳ್ಳೆಯ ಕೆಲಸಗಳನ್ನು ಮಾಡುತ್ತಾರೆ. ಅವರಿಗೆ ಬೇಕಿರುವುದು ನಾಲ್ಕು ಜನರ ಹೊಗಳಿಕೆಯೇ ಹೊರತೂ ವಿಧಿ-ವಿಧಾನಗಳಲ್ಲಾಗಲೀ, ಪಾಪ-ಪುಣ್ಯದಲ್ಲಾಗಲೀ, ಹಿರಿಯರ ಮಾತಿನಲ್ಲಾಗಲೀ, ಶಾಸ್ತ್ರವಾಕ್ಯದಲ್ಲಾಗಲೀ ಅವರು ಶ್ರದ್ಧೆ ಉಳ್ಳವರಲ್ಲ. ಈ ರೀತಿಯಲ್ಲಿ ವ್ಯಕ್ತಿತ್ವದ ರಂಧ್ರದಂತಿರುವ ಎಲ್ಲ ದೋಷಗಳನ್ನೂ ತನ್ನಲ್ಲಿ ತುಂಬಿಕೊಂಡು ತನ್ನೊಳಗಿರುವ ಆ ಪರಮಾತ್ಮನನ್ನೇ ಉಪೇಕ್ಷಿಸುತ್ತಾರೆ. ಜೊತೆಗೆ ಒಳ್ಳೆಯವರನ್ನೂ, ಒಳ್ಳೆತನವನ್ನೂ ದ್ವೇಷಿಸಲು ತೊಡಗುತ್ತಾರೆ. ಕೊನೆಗೆ ಅಧರ್ಮವೇ ಧರ್ಮದಂತೆಯೂ, ಅವಿವೇಕವೇ ವಿವೇಕವೆಂಬುದಾಗಿಯೂ, ತಾನು ಮಾಡುವ ಕೆಟ್ಟ ಕೆಲಸಗಳನ್ನೆಲ್ಲ ಒಳ್ಳೆಯದೆಂಬುದಾಗಿಯೂ ಸಮರ್ಥಿಸಿಕೊಳ್ಳುತ್ತಾ ತನ್ನ ಅಧೋಗತಿಗೆ ತಾನೇ ಕಾರಣರಾಗಿಬಿಡುತ್ತಾರೆ. ಹಾಗಾಗಿ ಇಂಥವ್ಯಕ್ತಿಗಳನ್ನು ಒಬ್ಬ ವಿವೇಕಿಯಾದವನು ಸರ್ವಥಾ ದೂರ ಇಡಬೇಕು. ಇಂಥ 'ನರಾಧಮ'ರನ್ನು ಅನೇಕ ನರಕಗಳ ಮಾರ್ಗದಲ್ಲಿ ಎಸೆಯುತ್ತೇನೆ ಎಂಬುದಾಗಿ ಗೀತೆಯಲ್ಲಿ ಕೃಷ್ಣ ಎಚ್ಚರಿಸಿದ್ದಾನೆ.


ತಾನಹಂ ದ್ವಿಷತಃ ಕ್ರೂರಾನ್ ಸಂಸಾರೇಷು ನರಾಧಮಾನ್ ।
ಕ್ಷಿಪಾಮ್ಯಜಸ್ರಮಶುಭಾನಾಸುರೀಷ್ವೇವ ಯೋನಿಷು ॥ ಎಂಬುದಾಗಿ.

ಒಮ್ಮೆ ಆಸುರೀಯೋನಿಗಳಲ್ಲಿ ಹುಟ್ಟಿದರೆ ಮತ್ತಷ್ಟು ಮತ್ತಷ್ಟು ಕೆಳಮುಖವಾಗಿಯೇ ಅವರ ಪ್ರಯಾಣ ಸಾಗುತ್ತದೆ. ಈ ರೀತಿಯಲ್ಲಿ ಪರಮಾತ್ಮನಿಂದ ದೂರವಾಗಿ, ಜನ್ಮಜನ್ಮಗಳಲ್ಲಿಯೂ ಮೂಢಯೋನಿಗಳಲ್ಲೇ ಜನ್ಮವನ್ನು ಪಡೆಯುತ್ತಾರೆ. ಇದಕ್ಕೆ ವಿರುದ್ಧವಾಗಿ ಯಾರು ದೈವೀಸಂಪತ್ತನ್ನು ಉಳ್ಳವರೋ ಅಥವಾ ಅದನ್ನು ಪಡೆಯಲು ನಿರಂತರ ಯತ್ನಿಸುತ್ತಾರೋ ಅಂಥವರು ನಿಧಾನವಾಗಿಯಾದರೂ ಶ್ರೇಯಸ್ಸನ್ನು ಹೊಂದುತ್ತಾರೆ ಎಂಬುದಾಗಿ ಪರಮಾತ್ಮನು ತಿಳಿಸಿದ್ದಾನೆ. ಈ ರೀತಿಯಲ್ಲಿ ಪುರಾಣಗಳಲ್ಲಿ ಬರುವ ನರಕಗಳ ವರ್ಣನೆಯು ಈ ನಿಟ್ಟಿನಲ್ಲಿ ನಮಗೆ ಒಳ್ಳೆಯ ಗುಣಗಳನ್ನು ಬೆಳೆಸಿಕೊಳ್ಳದಿದ್ದರೆ ಆಗುವ ಪರಿಣಾಮವನ್ನು ತಿಳಿಸಲೋಸುಗವೇ ಬಂದಿವೆ ಎನ್ನಬಹುದು.

ಪರಶಿವನನ್ನು ನಿತ್ಯ ಧ್ಯಾನಿಸಬೇಕು

ಶ್ರೋತವ್ಯಃ ಸೌಗತೋ ಧರ್ಮಃ ಕರ್ತವ್ಯಃ ಪುನರಾರ್ಹತಃ ।
ವೈದಿಕೋ ವ್ಯವಹರ್ತವ್ಯಃ ಧ್ಯಾತವ್ಯಃ ಪರಮಃ ಶಿವಃ ॥

ಬೌದ್ಧ ಧರ್ಮವನ್ನು ಕೇಳಬೇಕು. ಜೈನಧರ್ಮವನ್ನು ನಡವಳಿಕೆಯಲ್ಲಿ ಇರಿಸಿಕೊಳ್ಳಬೇಕು. ವ್ಯವಹಾರದಲ್ಲಿ ವೈದಿಕ ಧರ್ಮವನ್ನು ಚಾಲ್ತಿಗೆ ತರಬೇಕು. ಪರಶಿವನನ್ನು ಧ್ಯಾನ ಮಾಡುತ್ತಿರಬೇಕು -ಎಂಬುದು ಶ್ಲೋಕಾರ್ಥ.



ಪ್ರಕೃತ ಶ್ಲೋಕ ನಮ್ಮ ದಿನನಿತ್ಯದ ಬದುಕು ಹೇಗಿರಬೇಕು ಎಂಬುದನ್ನು ತಿಳಿಸಿಕೊಡುತ್ತದೆ. ಬೌದ್ಧ ಎಂಬುದು ಧರ್ಮವಲ್ಲ, ಅದೊಂದು ಮತ. ಜೈನ ಧರ್ಮವಲ್ಲ; ಅದೊಂದು ಮತ. ವೈದಿಕ ಧರ್ಮವೆಂದರೆ ಸನಾತನ ಧರ್ಮ, ಹಿಂದೂ ಧರ್ಮ ಎಂದರ್ಥ. ಇದು ಮಾತ್ರ ಧರ್ಮ. ಉಳಿದವುಗಳು ಮತಗಳು. ಹೀಗೆ ಹೇಳುವುದಕ್ಕೆ ಜ್ಞಾನಿಗಳು ಕಾರಣವನ್ನೂ ನೀಡುತ್ತಾರೆ. ಯಾವುದೋ ಒಬ್ಬನ ಮತಿಯಿಂದ ಮೂಡಿ ಬಂದು ನಿರ್ದಿಷ್ಟ ಒಂದು ಗ್ರಂಥವನ್ನು ಮತಗಳು ಆಶ್ರಯಿಸುತ್ತೇವೆ.

ಆದರೆ ಧರ್ಮ ಹಾಗಲ್ಲ, ಧರ್ಮ ಯಾವಾಗ ಹುಟ್ಟಿದೆ ಎಂಬುದು ಗೊತ್ತಿಲ್ಲ, ಯಾವುದೋ ಒಬ್ಬ ಮತಿಯ ಪಡಿಯಚ್ಚಲ್ಲ, ಯಾವುದೇ ಒಂದು ಗ್ರಂಥ ಎಂಬುದಿಲ್ಲ, ವೇದದಿಂದ ಆರಂಭಿಸಿ ವಚನ, ದಾಸವಾಣಿ, ಕಾವ್ಯವಾಣಿ ಎಲ್ಲವೂ ಧರ್ಮಕ್ಕೆ ಪೂರಕ ಹಾಗೂ ಪ್ರೇರಕ. ಕಾಲಬಾಹಿರವಾದುದನ್ನು ಬಿಟ್ಟು ಮನುಕುಲದ ಏಳ್ಗೆಗೆ ಬೇಕಾದುದೆಲ್ಲವನ್ನೂ ಜತೆಗಿರಿಸಿಕೊಂಡು ಮುಂದುವರಿಯುತ್ತದೆ. ವೈದಿಕಧರ್ಮ ಎಂದು ಕರೆಯುವ ಸನಾತನ ಹಿಂದೂ ಧರ್ಮ ಇವನ್ನು ಅಳವಡಿಸಿಕೊಂಡು ಸಾಗುತ್ತಿರುವುದರಿಂದ ಇದನ್ನು ಮಾತ್ರ ಜ್ಞಾನಿಗಳು ಧರ್ಮವೆಂದಿದ್ದಾರೆ.

ಹೀಗೆಂದ ಮಾತ್ರಕ್ಕೆ ಮತಗಳು ತ್ಯಾಜ್ಯವಲ್ಲ, ಅವುಗಳು ಬೋಧಿಸುವ ದಿವ್ಯ ತತ್ತ್ವಗಳ ಅನುಷ್ಠಾನವು ಮನುಕುಲವನ್ನು ಮೇಲೆತ್ತುತ್ತದೆ. ಬೌದ್ಧ ವಿಚಾರ ಬುದ್ಧನ ಅನುಭವಗಳ ಹಾಗೂ ಅವನು ಕಂಡುಕೊಂಡ ಶಾಶ್ವತ ಸತ್ಯದ ಪ್ರಕಟ ಸ್ವರೂಪ. ಬೌದ್ಧ ಧರ್ಮವನ್ನು ಕೇಳಬೇಕು. ಅದರಲ್ಲಿ ಕೇಳಲೇಬೇಕಾದ ಅಪೂರ್ವ ವಿಷಯಗಳಿವೆ. ಬೌದ್ಧಮತವು ದೇಹ ಅಶಾಶ್ವತ, ಭೋಗಭಾಗ್ಯಗಳು ಕ್ಷಣಿಕ, ಎಲ್ಲವೂ ನಶ್ವರ ಎಂಬುದನ್ನು ಸವಿಸ್ತಾರವಾಗಿ ತಿಳಿಸಿ, ಮತ್ತೆ ಮತ್ತೆ ಚಿಂತಿಸಿ, ಜೀವನದಲ್ಲಿ ಅಳವಡಿಸಿಕೊಂಡು ಶ್ರೇಷ್ಠಮಟ್ಟದ ಜೀವನ ನಡೆಸಬೇಕು ಎಂಬುದನ್ನು ಸಾರುತ್ತದೆ. ಆದ್ದರಿಂದ ಬೌದ್ಧ ಉಪದೇಶವನ್ನು ಕೇಳಿ ಅಳವಡಿಸಿಕೊಳ್ಳಬೇಕು. ಜೈನ ಮತದ ಬೋಧನೆ ನಮ್ಮ ನಡೆ-ನುಡಿಗಳಲ್ಲಿ ಅಭಿವ್ಯಕ್ತವಾಗಬೇಕು. ಹಸಿದವರಿಗೆ ಆಹಾರ ನೀಡುವುದು, ರೋಗಿಗಳ ಉಪಚಾರ, ಅಜ್ಞಾನಿಗಳಿಗೆ ಸಮ್ಯಕ್ ಜ್ಞಾನದ ಅರಿವು ಇವೆಲ್ಲ ಜೈನಮತ ತಿಳಿಸಿಕೊಡುವ ಶಾಶ್ವತವಾಗಿ ಅನುಷ್ಠಾನಿಸಬೇಕಾದ ತತ್ತ್ವಗಳು. ದೇವತಾ ಪೂಜೆ, ಮಾತಾ-ಪಿತೃ, ಅತಿಥಿಗಳ ಪೂಜೆ, ಜೀವನೋನ್ನತಿಗೆ ಬೇಕಾದ ಸಂಸ್ಕಾರಗಳನ್ನು ನಡೆಸುವುದು ಇವೆಲ್ಲವನ್ನೂ ವೈದಿಕಧರ್ಮ ಹೇಳುತ್ತದೆ.

ಹೀಗೆ ಕೇಳುವಿಕೆ, ನಡವಳಿಕೆ, ಅನುಷ್ಠಾನಗಳು ಮನುಷ್ಯನ ಬದುಕನ್ನು ಶ್ರೇಷ್ಠತೆಯತ್ತ ಕೊಂಡೊಯ್ಯುತ್ತದೆ. ಇವೆಲ್ಲವೂ ಹೇಗೇ ಇರಲಿ, ಬೋಧಿಸಲಿ, ಪರಶಿವನ ಧ್ಯಾನವನ್ನು ಮಾತ್ರ ಮರೆಯಬಾರದು. ಧ್ಯಾನವೇ ಬದುಕನ್ನು ಸುಂದರ ಹಾಗೂ ಸಮೃದ್ಧಿಗೊಳಿಸುತ್ತದೆ. ಜೀವನದಲ್ಲಿ ಭಗವಂತನನ್ನು ಆಧಾರವಾಗಿರಿಸಿ, ಧರ್ಮದ ಮಾರ್ಗದಲ್ಲಿ ಮುಂದುವರಿಯೋಣ.

'ಭಾರತದ ಟ್ರಂಪ್' ರಾಹುಲ್ ಗಾಂಧಿ!

ರಾಹುಲ್‌ಗಾಂಧಿ ತಮ್ಮ ನಡೆನುಡಿಗಳಿಂದ 'ಟ್ರಂಪ್'ರಂತೆಯೇ ವರ್ತಿಸುತ್ತಿದ್ದಾರೆ.

ಭಾವದೀಪ್

ರಾಹುಲ್ ಗಾಂಧಿಯವರ ಅಪಾಪ್ರಬುದ್ಧತನವು ಡೊನಾಲ್ಡ್ ಟ್ರಂಪ್‌ರನ್ನೇ ಹೆಚ್ಚೆಚ್ಚು ಹೋಲುವಂತಿದೆ. ಟ್ರಂಪ್‌ರಂತೆ ರಾಹುಲ್ ಗಾಂಧಿ ಕೂಡಾ ಮಾತಿನ ಬಾಟಲ್ ಬಾಂಬುಗಳನ್ನು ಎತ್ತಿ ಎತ್ತಿ ಒಗೆಯುವುದರಲ್ಲಿ ನಿಷ್ಣಾತರು. ಇಂತಹ ಬಾಂಬುಗಳು ದೊಡ್ಡ ತಲೆಬರಹದ ಸುದ್ದಿಗಳಾಗಿ ಕಿಡಿ ಹಚ್ಚಲಿ ಎಂಬುದು ಅವರ ನಿರೀಕ್ಷೆ.

ಅವರ ಆರೋಪಗಳು ಹೆಚ್ಚು ವಿಚಿತ್ರಗೊಂಡಷ್ಟೂ ಅವರು ಬಳಸುವ ಭಾಷೆ ಹೆಚ್ಚೆಚ್ಚು ಘೋರವಾಗುತ್ತದೆ. ಆ ಮೂಲಕ ಜನರ ಗಮನವನ್ನು ಹೆಚ್ಚು ಸೆಳೆಯುವಂತಿರುತ್ತದೆ. ನಿಮ್ಮಲ್ಲಿ ಮಾತಿಗೆ ವಸ್ತುವಿಲ್ಲವಾದರೆ ನೀವೇ ಮಾತಿನ ವಸ್ತುವಾಗಿ ಎಂಬುದು ಅವರ ನಿಲುವು. ಎಲ್ಲೋ ಮೂಲೆ(ಡಂಪ್)ಗೆಸೆಯಲ್ಪಡುವ ಬದಲಾಗಿ ಟ್ರಂಪ್‌ರಂತಾಗುವ ಬಯಕೆ.

ರಾಹುಲ್ ಗಾಂಧಿಯ ಉದ್ದೇಶಪೂರ್ವಕ ಜಗಳಗಂಟತನ, ಸದಾ ಕಾರುವ ದ್ವೇಷ, ಹಠಾತ್ತನೆ ಎಗರಿಬೀಳುವ ಸ್ವಭಾವ ಎಲ್ಲವೂ 'ಟ್ರಂಪ್‌ತನ'ವನ್ನು ಸೂಚಿಸುತ್ತದೆ. ಟ್ರಂಪ್‌ರಂತೆಯೇ ಅವರು ವಾಸ್ತವಾಂಶಗಳನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ. ಹಾಗಾಗಿಯೇ ಅವರು 'ಭಾರತದ್ದು ಮೃತ ಆರ್ಥಿಕತೆ' ಎಂಬ ಟ್ರಂಪ್‌ರ ಮಾತನ್ನು ಅನಾಮತ್ತು ಎತ್ತಿ ಬಿಡುತ್ತಾರೆ. ಪ್ರಗತಿಯ ನೈಜ ಅಂಕಿಅಂಶಗಳನ್ನು ಕಡೆಗಣಿಸುತ್ತಾರೆ.

ಆಪರೇಶನ್ ಸಿಂದೂರ್ ನಿಲ್ಲಿಸುವಲ್ಲಿ ಟ್ರಂಪ್‌ರ ಒತ್ತಡವಿತ್ತು ಎಂಬುದನ್ನು ಭಾರತವು ನಿರಾಕರಿಸಿದಾಗ, ರಾಹುಲ್ 'ಪಾಕಿಸ್ತಾನದಲ್ಲಿ ಭಯೋತ್ಪಾದಕ ಕೇಂದ್ರಗಳ ವಿರುದ್ಧ ಭಾರತದ ದಾಳಿಯು ಟ್ರಂಪ್ ಸೂಚನೆಯ ಮೇರೆಗೆ ನಿಂತಿತು' ಎನ್ನುತ್ತಾರೆ. ಟ್ರಂಪ್‌ರನ್ನು ಪ್ರಾಮಾಣಿಕತೆಗೆ ಮಾದರಿಯಾಗಿ ತೆಗೆದುಕೊಳ್ಳುವಂತೆಯೇ ಇಲ್ಲ ಎಂಬುದು ಅವರಿಗೆ ಗಣನೆಯಿಲ್ಲ. ಕೇಂದ್ರ ಸರಕಾರವು ಯಾವುದೇ ಬಿಕ್ಕಟ್ಟನ್ನು ಸಮರ್ಥವಾಗಿ ನಿಭಾಯಿಸಿದ್ದನ್ನು ಕಾಂಗ್ರೆಸಿಗರು ಎಂದೂ ಹೊಗಳಿದ್ದಿಲ್ಲ.

ಮೋದಿಯವರು 2017ರಲ್ಲಿ ಇಸ್ರೇಲಿಗೆ ನೀಡಿದ ಭೇಟಿಯನ್ನು ಆಯೋಜಿಸಿದ್ದು ಜೆಫ್ರಿ ಎಪ್‌ಸ್ಟೀನ್ ಎನ್ನುತ್ತಾರೆ ರಾಹುಲ್. ಆದರೆ ಎಪ್‌ಸ್ಟೀನ್‌ನ ಇಡೀ ವ್ಯವಹಾರವೇ ವಂಚನೆಯದ್ದು, ಅವನೊಂದಿಗೆ ಮೋದಿ ಸಖ್ಯ ಕಲ್ಪಿಸಿಕೊಳ್ಳಲೂ ಅಸಾಧ್ಯ. ಆದರೂ ರಾಹುಲ್ ತಮ್ಮ ಆರೋಪವನ್ನು ಜನರು ನಂಬಬೇಕೆಂದು ಬಯಸುತ್ತಾರೆ.

ಪ್ರತಿಯೊಂದು ಚುನಾವಣೆಯ ಸೋಲಿನ ಬಳಿಕವೂ ರಾಹುಲ್ ಹೆಚ್ಚೆಚ್ಚು ಹತಾಶರಾಗುತ್ತಿದ್ದಾರೆ. ಕಾಂಗ್ರೆಸ್ ಪಕ್ಷವು ಚುನಾವಣಾ ವಿಜಯದಿಂದ ಈಗ ಸುದ್ದಿಯಾಗುವುದಿಲ್ಲ. ರಾಹುಲ್ ಮಾಧ್ಯಮಗಳ ಮುಂದೆ ಹಾಜರಾಗಿ ಏನಾದರೂ ಹೇಳಿದಾಗ ಮಾತ್ರ ಸುದ್ದಿಯಾಗುತ್ತದೆ. ಈಗಂತೂ ಅವರು ಮುಖಪುಟದ ಸುದ್ದಿಯಾಗುವುದು ಪಿತೂರಿ ಸಿದ್ಧಾಂತ ಮತ್ತು ಪ್ರಚೋದನಕಾರಿ ಹೇಳಿಕೆಗಳನ್ನು ನೀಡುವಾಗ ಮಾತ್ರ.



ಒಂದು ಸುಳ್ಳನ್ನು ನೂರು ಬಾರಿ ಹೇಳಿದರೆ ಅದೇ ಸತ್ಯವಾಗುತ್ತದೆ ಎಂಬ ಗೊಬೆಲ್ಸ್ ಸಿದ್ಧಾಂತವನ್ನು ರಾಜಕೀಯದಲ್ಲಿ ಎಲ್ಲರೂ ಅನುಸರಿಸುತ್ತಾರೆ. ರಾಹುಲ್ ಅದನ್ನು ಎಲ್ಲರಿಗಿಂತ ಹೆಚ್ಚೇ ಪಾಲಿಸುತ್ತಾರೆ. ಆದರೆ ನಿಮ್ಮ ವಿರೋಧಿಗಳು ಹೆಚ್ಚು ವಿಶ್ವಾಸಭರಿತರಾಗಿದ್ದಾಗ ಈ ಸಿದ್ಧಾಂತ ಕೆಲಸ ಮಾಡುವುದಿಲ್ಲ. ಹಾಗಾಗಿ ಮೋದಿ ಬ್ರ್ಯಾಂಡ್‌ನ್ನು ಹಳಿಯುವುದು ಕಾಂಗ್ರೆಸಿಗೆ ಅನಿವಾರ್ಯ ಕರ್ಮವಾಗಿದೆ.

ಟ್ರಂಪ್ ಪ್ರೇರಿತ 'ವೋಟ್ ಚೋರಿ' ಆರೋಪ ಇದೇ ಉದ್ದೇಶ ಹೊಂದಿರುವಂತದ್ದು. 2024ರಲ್ಲಿ ಚುನಾವಣಾ ಪ್ರಚಾರದ ವೇಳೆ ಟ್ರಂಪ್ ''ಡೆಮಾಕ್ರಾಟರು ನಾಯಿ ತರಹ ವಂಚನೆ ಮಾಡುತ್ತಾರೆ'' ಎಂದು ವಿರೋಧ ಪಕ್ಷವನ್ನು ತೆಗಳಿದ್ದರು. ಕೆಲವು ತಿಂಗಳ ಬಳಿಕ ರಾಹುಲ್ ಅದೇ ವಿಷಯವನ್ನು ಹಿಡಿದುಕೊಂಡರು. ಆದರೆ ಚೌಕಿದಾರ್ ಚೋರ್ ಹೈ ಆರೋಪದಂತೆಯೆ ಅವರ ವೋಟ್ ಚೋರಿಯ ಹೈಡ್ರೋಜನ್ ಬಾಂಬ್ ಕೂಡ ಠುಸ್ಸೆಂದಿತು. ಏಕೆಂದರೆ ಅವರಲ್ಲಿ ವೋಟ್ ಚೋರಿ ಸಾಬೀತುಪಡಿಸುವ ಪುರಾವೆಯೆ ಇರಲಿಲ್ಲ.

ರಿಯಾಲಿಟಿ ಟಿವಿಯಲ್ಲಿ ಟ್ರಂಪ್ ವರ್ತನಾ ಶೈಲಿಯನ್ನು ಅನುಕರಿಸಿದ ರಾಹುಲ್ ಸಂಸತ್ತಿನಲ್ಲಿ ಅಂತಹ ಗಿಮಿಕ್‌ಗಳನ್ನು ಪ್ರದರ್ಶಿಸಲೆತ್ನಿಸುತ್ತಾರೆ. ನರವಣೆಯವರ ಪುಸ್ತಕವನ್ನು ಓದುವ ಪ್ರಹಸನ, ಆಳುವ ಪಕ್ಷದವರತ್ತ ಫ್ಲೈಯಿಂಗ್ ಕಿಸ್ ತೂರಿದ್ದು, ಕೇಂದ್ರ ಸಚಿವ ರವನೀತ್ ಸಿಂಗ್ ಬಿಟ್ಟುರನ್ನು 'ದ್ರೋಹಿ' ಎಂದು ಕರೆದುದು ಇಂತಹುದೇ ಗಿಮಿಕ್‌ಗಳು. ತಮ್ಮ ನಾಯಕನನ್ನೇ ಅನುಕರಿಸಿದ ಯುವ ಕಾಂಗ್ರೆಸ್‌ನ ಕೆಲವು ಸದಸ್ಯರು ಎಐ ಜಾಗತಿಕ ಸಮ್ಮೇಳನದಲ್ಲಿ ಶರ್ಟ್ ಬನಿಯನ್ ಬಿಚ್ಚಿ ಬೆತ್ತಲೆ ಪ್ರದರ್ಶನ ನಡೆಸಿದರು. ಅವರನ್ನು ರಾಹುಲ್ 'ಬಬ್ಬರ್ ಶೇರ್' ಎಂದು ಬಣ್ಣಿಸಿದ್ದು ಅವರ ನಡತೆಗೆ ಸೂಕ್ತವಾಗಿಯೇ ಇತ್ತು.

ಇವೆಲ್ಲ ನೋಡುವಾಗ, ರಾಹುಲ್ ಗಾಂಧಿ ಮತ್ತು ಟ್ರಂಪ್‌ರ ಎಡಬಿಡಂಗಿತನವನ್ನು ತುಲನೆ ಮಾಡುವ ಪೋಸ್ಟ್‌ಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವುದರಲ್ಲಿ ಆಶ್ಚರ್ಯವಿದೆಯೆ?! ಸಮಸ್ಯೆಯೇನೆಂದರೆ ಕಾಂಗ್ರೆಸ್‌ನಲ್ಲಿ ಈಗ ಸಂಘಟನಾತ್ಮಕ ಬಲವಿಲ್ಲ, ದೊಡ್ಡ ಚಿಂತನೆಗೂ ಬರವಿದೆ. ಎನ್‌ಡಿಎ ರಕ್ಷಣಾ ಕವಚದಲ್ಲಿ ಬಿರುಕು ಕಂಡುಕೊಳ್ಳಲು ಕಾಂಗ್ರೆಸಿಗಿನ್ನೂ ಸಾಧ್ಯವಾಗಿಲ್ಲ, ಸರಕಾರದ ಅಭಿವೃದ್ಧಿಶೀಲ ಮತ್ತು ಕಲ್ಯಾಣ ಕಾರ್ಯಗಳಿಂದಾಗಿ ಕಾಂಗ್ರೆಸಿಗೆ ಎನ್‌ಡಿಎಯನ್ನು ಸೋಲಿಸಲು ಸಾಧ್ಯವಾಗದಿರುವುದು ಒಂದು ಕಡೆಯಾದರೆ, ಮತ್ತೊಂದೆಡೆಯಿಂದ ಸರಿಯಾದ ವಿಷಯವನ್ನು ಪ್ರಚಾರತಂತ್ರವಾಗಿ ಆರಿಸಲೂ ಅದಕ್ಕೆ ಸಾಧ್ಯವಾಗಿಲ್ಲ. ಅದು ಎತ್ತಿಕೊಂಡ ವಿಷಯಗಳಾವುವೂ ಜನರ ವಿಶ್ವಾಸ ಗಳಿಸಲಿಲ್ಲ. ರಾಹುಲ್ ಬಿಜೆಪಿ ಸರಕಾರದ ಮೇಲೆ ಹೊರಿಸಿದ ಬಹಳಷ್ಟು ಆರೋಪಗಳಿಗೆ ಪುರಾವೆಗಳೇ ಇರಲಿಲ್ಲ.

ಭಾರತೀಯ ಮತದಾರರು ವಿರೋಧ ಪಕ್ಷ ನಾಯಕನಿಂದ ಇದಕ್ಕಿಂತ ಹೆಚ್ಚು ಪ್ರಬುದ್ಧ ನಡೆಯನ್ನು ಅಪೇಕ್ಷಿಸುತ್ತಾರೆ. ಕೇವಲ ಪೊಳ್ಳು ಘೋಷಣೆಗಳಿಗೆ ಜನರು ಮರುಳಾಗುವ ಕಾಲ ಸಂದುಹೋಯಿತು. ರಾಹುಲ್‌ರವರು ತಮ್ಮ ನಡೆನುಡಿಯಿಂದ 'ಭಾರತದ ಟ್ರಂಪ್'ರಂತಾಡುತ್ತಿದ್ದಾರೆ.

ಇರಾನ್‌ಗೆ ನೌಕಾಬಲ, ಸಂಪರ್ಕ ವ್ಯವಸ್ಥೆ, ವಾಯುಪಡೆ ಸೌಲಭ್ಯ ಕೂಡ ಇಲ್ಲ ಎಂದ ಟ್ರಂಪ್

ಜಲಸಂಧಿಯನ್ನೇ ವಶಪಡಿಸಿಕೊಳ್ಳುವುದಾಗಿ ಎಚ್ಚರಿಕೆ!

• ಟೆಹ್ರಾನ್: ಇರಾನ್ ಅತಿ ಬುದ್ಧಿವಂತಿಕೆ ಮೆರೆದು ಮಧ್ಯಪ್ರಾಚ್ಯದಲ್ಲಿನ ಅಮೆರಿಕದ ಹಾಗೂ ಇಸ್ರೇಲಿ ನೆಲೆಗಳ ಮೇಲೆ ಇನ್ನಷ್ಟು ದಾಳಿ ನಡೆಸಿದಲ್ಲಿ, ನಿರ್ಣಾಯಕ ಹೊರ್ಮುಜ್ ಜಲಸಂಧಿ ಮೇಲೆ ತಾನು ನಿಯಂತ್ರಣ ಸಾಧಿಸುವುದಾಗಿ ಅಮೆರಿಕ ಅಧ್ಯಕ್ಷ ಟ್ರಂಪ್ ಗುಡುಗಿದ್ದಾರೆ.

ಇರಾನ್ ಖಮೇನಿಪುತ್ರ ಆಯತೊಲ್ಲಾ ಮೊಜ್ತಾಬಾ ಖಮೇನಿಯನ್ನು ಇರಾನ್‌ನ ಸರ್ವೋಚ್ಚ ನಾಯಕನಾಗಿ ಆರಿಸಿದ ಬೆನ್ನಲ್ಲೇ ತೈಲ ಬೆಲೆಗಳು 2022ರ ನಂತರ ಅಂತರದಲ್ಲಿ ಗರಿಷ್ಠಕ್ಕೆ ಏರಿದ್ದು, ಗಗನಕ್ಕೇರಿದ್ದು, ಈ ಹಿನ್ನೆಲೆಯಲ್ಲಿ ಟ್ರಂಪ್ ಪ್ರಸ್ತುತ ಎಚ್ಚರಿಕೆ ನೀಡಿದ್ದಾರೆ.

ಸುಮಾರು ಶೇ. 20 ಜಾಗತಿಕ ತೈಲ ಸಂಚಾರಜಾಗುವುದು ಹೊರ್ಮುಜ್ ಜಲಸಂಧಿಯಿಂದಾಗಿ. ಇರಾನ್ ನಿರ್ಬಂಧದಿಂದಾಗಿ ಈ ಜಲಸಂಧಿ ಮುಖೇನ ವಾಣಿಜ್ಯಿಕ ನೌಕೆಗಳ ಓಡಾಟ ಮತ್ತಷ್ಟು ದುಸ್ತರವಾಗಿದೆ. ನನ್ನ ಪ್ರಕಾರ ಯುದ್ಧ ಪೂರ್ತಿಯಾಗಿದೆ ಎಂದು ಟ್ರಂಪ್ ಸಿಬಿಎಸ್ ನ್ಯೂಸ್‌ಗೆ ಫೋನ್ ಸಂದರ್ಶನದಲ್ಲಿ ತಿಳಿಸಿದ್ದಾರೆ. ಇರಾನ್‌ಗೆ ನೌಕಾಬಲ ಇಲ್ಲ, ಸಂಪರ್ಕ ವ್ಯವಸ್ಥೆ ಇಲ್ಲ, ವಾಯುಪಡೆ ಕೂಡ ಇಲ್ಲ, ಅವರ ಕ್ಷಿಪಣಿಗಳು ಧ್ವಂಸಗೊಂಡಿವೆ. ಅವರ ಡ್ರೋನ್ ತಯಾರಿ ಘಟಕಗಳ ಸಹಿತ ಅವರ ಡ್ರೋನ್‌ಗಳು ಎಲ್ಲಾ ಕಡೆ ಹೊಡೆದುರುಳಿದವೆ ಎಂದು ಟ್ರಂಪ್ ಸಂದರ್ಶನದಲ್ಲಿ ಹೇಳಿದ್ದಾರೆ. ಮಿಲಿಟರಿ ದೃಷ್ಟಿಯಿಂದ ಇರಾನ್ ಬಳಿ ಏನೂ ಉಳಿದಿಲ್ಲ ಎಂದಿದ್ದಾರೆ. ಜಲಮಾರ್ಗವನ್ನು ನಿರ್ಬಂಧಿಸಿದಲ್ಲಿ, ಹೊರ್ಮುಜ್ ಜಲಸಂಧಿ ಮೇಲೆ ನಿಯಂತ್ರಣ ಸಾಧಿಸುವುದಾಗಿಯೂ ಟ್ರಂಪ್ ಗುಡುಗಿದ್ದಾರೆ. ಇರಾನ್ ವಿನೆಲ್ಲಾ ದಾಳಿ ಮಾಡ್ಬೇಕೋ ಎಲ್ಲವನ್ನು ಮಾಡಿದೆ. ಇನ್ನೂ ಜಾಣತನ ಪ್ರದರ್ಶಿಸಿದಲ್ಲಿ ಅ ರಾಷ್ಟ್ರದ ಅಂತ್ಯವಾಗಲಿದೆ. ಅವರೇನಾದರು ಕೆಡುಕು ಮಾಡಿದಲ್ಲಿ ಅದು ಇರಾನ್ ಅಂತ್ಯಕ್ಕೆ ದಾರಿಯಾಗಲಿದೆ. ಇರಾನ್ ಹೆಸರನ್ನು ಮತ್ತೆ ನೀವು ಕೇಳಲಿಕ್ಕೂ ಎಂದಿರುವ ಟ್ರಂಪ್, ಇದೀಗ ಜಲಸಂಧಿ ತೆರೆದುಕೊಂಡಿದೆ ಮತ್ತು ಹಡಗುಗಳು ಜಲಸಂಧಿ ಪ್ರವೇಶಿಸಲು ಶುರುವಿಟ್ಟಿವೆ ಎಂದಿದ್ದಾರೆ. ಸಂಘರ್ಷದ ಮೊದಲ ವಾರದಲ್ಲೇ ನಾವು ಇರಾನಿನ 5000 ನೆಲೆಗಳ ಮೇಲೆ ದಾಳಿ ಮಾಡಿದ್ದೇವೆಂದು ಅಮೆರಿಕನ್ ಮಿಲಿಟರಿ ಪಡೆ ಹೇಳಿಕೊಂಡಿದೆ.



ಪಾಕ್‌ನಲ್ಲಿ ಸೋಮವಾರದಿಂದ ಶಾಲೆಗೆ ರಜೆ ನಾಲ್ಕೇ ದಿನ ಕೆಲಸ

ಮಧ್ಯಪ್ರಾಚ್ಯ ಬಿಕ್ಕಟ್ಟು ತೀವ್ರಗೊಳ್ಳುತ್ತಿದ್ದು, ಇದು ಜಗತ್ತನ್ನೆ ತಲ್ಲಣಗೊಳಿಸುತ್ತಿದೆ. ಇಂಧನ ಕೊರತೆ ಇಡೀ ಜಗತ್ತನ್ನೇ ತತ್ತರಿಸುತ್ತಿದೆ. ಜಾಗತಿಕ ತೈಲ ಪೂರೈಕೆಯು ಹೆಚ್ಚುತ್ತಿರುವ ಒತ್ತಡ ಎದುರಿಸುತ್ತಿದೆ. ಹಲವಾರು ಪ್ರದೇಶಗಳಲ್ಲಿ ಅಡೆತಡೆ ಎದುರಾಗುತ್ತಿದೆ. ಈ ತೈಲ ಬಿಸಿಯು ಪಾಕಿಸ್ತಾನವನ್ನೂ ತಲುಪಿದೆ. ಹೊರೆಯನ್ನು ಕಡಿಮೆ ಮಾಡುವ ಪ್ರಯತ್ನದಲ್ಲಿ, ಪಾಕಿಸ್ತಾನದ ಪ್ರಧಾನಿ ಶಹಬಾಜ್ ಷರೀಫ್ ಇರಾನ್ ಯುದ್ಧದಿಂದಾಗಿ ನಡೆಯುತ್ತಿರುವ ಪೂರೈಕೆ ಅಡೆತಡೆಗಳ ನಡುವೆ ಇಂಧನವನ್ನು ಉಳಿಸುವ ಗುರಿ ಹೊಂದಿರುವ ಸರ್ಕಾರಿ ವೆಚ್ಚ ಕಡಿತ, ಮನೆಯಿಂದ ಕೆಲಸ ಮಾಡುವ ಮಾರ್ಗಸೂಚಿಗಳಿಂದ ಹಿಡಿದು ಇತರ ಹೊಸ ಕ್ರಮಗಳನ್ನು ಕೈಗೊಂಡಿದ್ದಾರೆ. ದೇಶವನ್ನು ಉದ್ದೇಶಿಸಿ ಮಾತನಾಡಿದ ಷರೀಫ್, ಫೆಡರಲ್ ಮತ್ತು ಪ್ರಾಂತೀಯ ಅಧಿಕಾರಿಗಳೊಂದಿಗೆ ನಡೆದ ಸಭೆಯಲ್ಲಿ ಈ ಕ್ರಮಗಳನ್ನು ಚರ್ಚಿಸಲಾಗಿದೆ ಎಂದು ಹೇಳಿದ್ದಾರೆ. ಕಠಿಣ ಪರಿಸ್ಥಿತಿ ಹಿನ್ನೆಲೆ ಸರ್ಕಾರವು ಕಠಿಣ ನಿರ್ಧಾರಗಳನ್ನು ತೆಗೆದುಕೊಳ್ಳಬೇಕಾಯಿತು ಎಂದು ಹೇಳಿದರು. ಇಂಧನ ಉಳಿತಾಯ ಪ್ರಮುಖ ಕ್ರಮಗಳ ಪೈಕಿ, ಸರ್ಕಾರವು ಮುಂದಿನ ಎರಡು ತಿಂಗಳುಗಳ ಕಾಲ ಅಧಿಕೃತ ವಾಹನಗಳ ಇಂಧನ ಭತ್ಯೆಯನ್ನು ಶೇ.50ರಷ್ಟು ಕಡಿತಗೊಳಿಸಲಿದೆ.

ಯುದ್ಧ ಇನ್ನೂ ಮುಗಿದಿಲ್ಲ: ನೆತನ್ಯಾಹು

ಇಸ್ರೇಲ್ ಸೇನೆ ಇರಾನ್ ಬೆನ್ನೆಲುಬು ಮುರಿದಿದೆ. ಆದರೆ ಯುದ್ಧ ಇನ್ನೂ ಮುಗಿದಿಲ್ಲ, ಇರಾನ್‌ನಲ್ಲಿ ಇಸ್ಲಾಮಿಕ್ ಆಡಳಿತವನ್ನು ಅಂತ್ಯಗೊಳಿಸುವವರೆಗೂ ನಾವು ಯುದ್ಧವನ್ನು ನಿಲ್ಲಿಸುವುದಿಲ್ಲ, ದಬ್ಬಾಳಿಕೆಯಿಂದ ಇರಾನ್ ಜನರಿಗೆ ಸ್ವಾತಂತ್ರ್ಯ ನೀಡುವುದು ನಮ್ಮ ಪ್ರಮುಖ ಗುರಿಗಳಲ್ಲಿ ಒಂದಾಗಿದೆ. ಇಲ್ಲಿಯವರೆಗಿನ ಯುದ್ಧದಲ್ಲಿ ನಾವು ಇರಾನ್ ಬೆನ್ನೆಲುಬು ಮುರಿದಿದ್ದೇವೆ. ಇದು ಇನ್ನೂ ಮುಗಿದಿಲ್ಲ ಎಂದು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಎಚ್ಚರಿಕೆ ನೀಡಿದ್ದಾರೆ. ಇತ್ತೀಚೆಗೆ ಕ್ಷಿಪಣಿ ದಾಳಿಗೆ ನೆತನ್ಯಾಹು ಗಾಯಗೊಂಡಿದ್ದಾರೆ. ಇದರಿಂದ ನೆತನ್ಯಾಹು ಸಾರ್ವಜನಿಕವಾಗಿ ಕಾಣಿಸಿಕೊಳ್ಳುತ್ತಿಲ್ಲ ಎಂಬ ವದಂತಿಯನ್ನು ಇರಾನ್ ಹಬ್ಬಿಸಿತ್ತು. ಮಂಗಳವಾರ ನೆತನ್ಯಾಹು ರಾಷ್ಟ್ರೀಯ ಆರೋಗ್ಯ ಕೇಂದ್ರಕ್ಕೆ ಸಾರ್ವಜನಿಕ ಭೇಟಿ ನೀಡಿದ್ದಾರೆ.

ಕದನವಿರಾಮ ಬಯಸಲ್ಲ: ಇರಾನ್ ಸ್ಪೀಕರ್!

ಅಮೆರಿಕ ಮತ್ತು ಇಸ್ರೇಲ್‌ನೊಂದಿಗಿನ ಯುದ್ಧದಲ್ಲಿ ಇರಾನ್ ಕದನವಿರಾಮ ಮಾಡಿಕೊಳ್ಳಲು ಬಯಸುವುದಿಲ್ಲ, ಆಕ್ರಮಣಕಾರರಿಗೆ ಶಿಕ್ಷೆಗೆ ಒಳಪಡಿಸುವುದೇ ನಮ್ಮ ಗುರಿ ಎಂದು ಇರಾನ್ ಸಂಸತ್ತಿನ ಸ್ಪೀಕರ್ ಮೊಹಮ್ಮದ್ ಬಘರ್ ಖಾಲಿಬಾಫ್ ಹೇಳಿದ್ದಾರೆ. ಸೋಮವಾರ ತಡರಾತ್ರಿ ಸಂದರ್ಶನದಲ್ಲಿ ಮಾತನಾಡಿದ ಬಘರ್, ಶತ್ರುಗಳು ಯಾವುದೇ(ಸರಿಯ) ರಾಷ್ಟ್ರಗಳಿಂದ ದಾಳಿ ನಡೆಸಿದರೂ, ನಾವು ಪ್ರತಿ ಪ್ರತಿದಾಳಿ ನಡೆಸುತ್ತೇವೆ ಎಂದು ಬಘರ್ ಎಚ್ಚರಿಸಿದ್ದಾರೆ. ಸ್ಪೀಕರ್ ಎಚ್ಚರಿಕೆಯ ನಂತರ ಇರಾನ್ ದಾಳಿ ಇನ್ನಷ್ಟು ಹೆಚ್ಚಿದೆ.

ಭಾರತದಿಂದ ಹೆಚ್ಚುವರಿ ಡೀಸೆಲ್‌ಗೆ ಬಾಂಗ್ಲಾ ಮನವಿ

• ಹೊಸದಿಲ್ಲಿ: ಇಂಧನ ಸಂಗ್ರಹವನ್ನು ಸುಧಾರಿಸಲು ಮತ್ತು ಕೊರತೆಯನ್ನು ತಡೆಗಟ್ಟಲು, ಬಾಂಗ್ಲಾದೇಶವು ಮುಂದಿನ ನಾಲ್ಕು ತಿಂಗಳಲ್ಲಿ ಮಾರ್ಚ್-ಜೂನ್ ಅವಧಿಯಲ್ಲಿ ಭಾರತದಿಂದ ಹೆಚ್ಚುವರಿ 50,000 ಮೆಟ್ರಿಕ್ ಟನ್ ಡೀಸೆಲ್ ಅನ್ನು ನೀಡುವಂತೆ ಔಪಚಾರಿಕವಾಗಿ ವಿನಂತಿಸಿದೆ. ಈ ಕೊರತೆಯನ್ನು ಹಣಕಾಸು ಸಚಿವ ಅಮೀರ್ ಖಸ್ರು ಮಹಮೂದ್ ಚೌಧರಿ ಅವರು ಭಾರತೀಯ ಹೈಕಮಿಷನರ್ ಪ್ರಣಯ್ ವರ್ಮಾ ಅವರಿಗೆ ತಿಳಿಸಿದರು. ಬಾಂಗ್ಲಾದೇಶವು ವಿದ್ಯುತ್ ಉತ್ಪಾದನೆ ಮತ್ತು ಇತರ ಅಗತ್ಯಗಳಿಗಾಗಿ ಆಮದು ಮಾಡಿಕೊಂಡ ಇಂಧನಗಳಾದ ತೈಲ, ಅನಿಲ, ಕಲ್ಲಿದ್ದಲನ್ನು ಹೆಚ್ಚು ಅವಲಂಬಿಸಿದೆ. ಇತ್ತೀಚಿನ ಜಾಗತಿಕ ಅಡೆತಡೆಗಳು ಮಧ್ಯಪ್ರಾಚ್ಯದಲ್ಲಿ ನಡೆಯುತ್ತಿರುವ ಸಂಘರ್ಷಕ್ಕೆ ಸಂಬಂಧಿಸಿವೆ.

ಇನ್ನು 1 ಟನ್ ಬಾಂಬ್ ಅಷ್ಟೇ ಬಳಸುತ್ತೆ ಇರಾನ್!

ಮಧ್ಯಪ್ರಾಚ್ಯ ಯುದ್ಧದಲ್ಲಿ ಇಸ್ರೇಲ್ ಮತ್ತು ಅಮೆರಿಕ ಸೇನಾ ನೆಲೆಗಳ ಮೇಲೆ ದಾಳಿ ತೀವ್ರತೆ ಹೆಚ್ಚಿಸಲು ಇರಾನ್ ಹೊಸ ಕಾರ್ಯತಂತ್ರವನ್ನು ರೂಪಿಸಿದೆ. ಯುದ್ಧದಲ್ಲಿನ್ನು 1,000 ಕೆ.ಜಿ. (1 ಟನ್) ಅಥವಾ ಅದಕ್ಕಿಂತ ಹೆಚ್ಚು ಭಾರದ ವಾರ್‌ಹೆಡ್ ಹೊರಲ್ಲ ಕ್ಷಿಪಣಿಗಳನ್ನು ಮಾತ್ರ ಉಡಾಯಿಸುವುದಾಗಿ ಇರಾನ್ ಸೇನಾ ಕಮಾಂಡರ್ ನಿಲುವು ತೆಗೆದುಕೊಂಡಿದ್ದಾರೆ. ಇದರಿಂದ ಯುದ್ಧ ಇನ್ನಷ್ಟು ಉಲ್ಬಣಿಸುವುದು ಖಚಿತ. ಶತ್ರುಗಳಿಗೆ ಹೆಚ್ಚಿನ ಹಾನಿಯಾಗಬೇಕು ಎಂಬ ಉದ್ದೇಶದಿಂದ ಇರಾನ್ 1,000 ಕೆ.ಜಿ. ಅಥವಾ ಅದಕ್ಕಿಂತ ಹೆಚ್ಚಿನ ಭಾರದ ಸ್ಫೋಟಕಗಳನ್ನು ಬಳಸಲು ಆರಂಭಿಸಿದೆ. ಭಾರದ ಸ್ಫೋಟಕಗಳನ್ನು ಕ್ಷಿಪಣಿಗಳಲ್ಲಿ ಬಳಸಿದಾಗ ಕ್ಷಿಪಣಿಯೊಂದರ ದಾಳಿ ವ್ಯಾಪ್ತಿ ಮತ್ತು ಹಾನಿ ಮಾಡಬಲ್ಲ ಶಕ್ತಿ ದ್ವಿಗುಣಗೊಳ್ಳುತ್ತದೆ. ಈವರೆಗೆ ಇರಾನ್ 300ರಿಂದ 500 ಕೆಜಿ. ಭಾರದ ಸ್ಫೋಟಕಗಳನ್ನು ಇರಾನ್ ಕ್ಷಿಪಣಿಗಳು ಹೊತ್ತೊಯ್ಯುತ್ತಿದ್ದವು. ಆದರೆ ಇನ್ನು ಕನಿಷ್ಠ 1000 ಕೆಜಿ ಭಾರದ ಸ್ಫೋಟಕಗಳನ್ನು ಬಳಸಲು ಇರಾನ್ ನಿರ್ಧರಿಸಿದೆ.



ಇರಾನ್ ಕ್ಷಿಪಣಿ ಬತ್ತಳಿಕೆ ಹೀಗಿದೆ: ಮಧ್ಯಪ್ರಾಚ್ಯದಲ್ಲಿ ಇರಾನ್ ಅತಿ ದೊಡ್ಡ ಮತ್ತು ವಿವಿಧ ರೀತಿಯ ಕ್ಷಿಪಣಿಗಳನ್ನು ಹೊಂದಿದೆ. ಅಣ್ವಸ್ತ್ರ ಸಾಮರ್ಥ್ಯದ 3,000 ಕಿ.ಮೀ. ವ್ಯಾಪ್ತಿಯ ಸೌಮಾರ್, 2,000 ಕಿ.ಮೀ. ವ್ಯಾಪ್ತಿಯ ಸೆಜ್ಜಿಲ್ ಎಂಬ ಖಂಡಾಂತರ ಕ್ಷಿಪಣಿಯನ್ನು ಇರಾನ್ ಬಳಸಿದೆ. ಉತ್ತರ ಕೊರಿಯಾದ ಹ್ವಾಸೊಂಗ್-10 ಕ್ಷಿಪಣಿ ಹೋಲುವ 2,000ದಿಂದ 3,000 ವ್ಯಾಪ್ತಿಯ ಖೋರಮ್‌ಶಹರ್ ಕ್ಷಿಪಣಿ ಇರಾನ್ ಬತ್ತಳಿಕೆಯಲ್ಲಿದ್ದು ಇದರ ಪೇಲೋಡ್ ಸಾಮರ್ಥ್ಯ 1,800 ಕೆ.ಜಿ. ಆಗಿದೆ.

ಐಇಎ ಯೋಜನೆಗೆ ಭಾರತ ಸೇರಲ್ಲ

ತೈಲ ಬೆಲೆಗಳನ್ನು ತಗ್ಗಿಸುವ ಪ್ರಯತ್ನದ ಭಾಗವಾಗಿ ಕಾರ್ಯತಂತ್ರದ ತೈಲ ನಿಕ್ಷೇಪಗಳನ್ನು ಬಿಡುಗಡೆ ಮಾಡುವ ಅಂತಾರಾಷ್ಟ್ರೀಯ ಇಂಧನ ಸಂಸ್ಥೆ (ಐಇಎ)ಯೋಜನೆಗೆ ಭಾರತ ಸೇರುವುದಿಲ್ಲ ಎಂದು ಸರ್ಕಾರದ ಉನ್ನತ ಮೂಲಗಳು ತಿಳಿಸಿವೆ. ವಿಶ್ವದ ಮೂರನೇ ಅತಿದೊಡ್ಡ ತೈಲ ಆಮದು ಮತ್ತು ಬಳಕೆದಾರ ರಾಷ್ಟ್ರವಾದ ಭಾರತವು 53.3 ಲಕ್ಷ ಟನ್ ಭೂಗತ ವ್ಯೂಹಾತ್ಮಕ ನಿಕ್ಷೇಪಗಳನ್ನು ಹೊಂದಿದೆ. ಆದರೆ, ಸದ್ಯ ಶೇ.80ರಷ್ಟು ಮಾತ್ರ ಭರ್ತಿಯಾಗಿವೆ. ಹೆಚ್ಚುತ್ತಿರುವ ಪಶ್ಚಿಮ ಏಷ್ಯಾ ಸಂಘರ್ಷದ ಹಿನ್ನೆಲೆಯಲ್ಲಿ ಕಚ್ಚಾ ತೈಲದ ಬೆಲೆಗಳು ಪ್ರತಿ ಬ್ಯಾರೆಲ್‌ಗೆ 120 ಡಾಲರ್‌ಗೆ ಹತ್ತಿರವಾಗುತ್ತಿರುವ ಹಿನ್ನೆಲೆ ಜಿ7 ರಾಷ್ಟ್ರಗಳು ತೈಲ ನಿಕ್ಷೇಪಗಳನ್ನು ಬಿಡುಗಡೆ ಮಾಡುವ ಸಾಧ್ಯತೆಯ ಬಗ್ಗೆ ಚರ್ಚಿಸಲಿವೆ. ಬಿಕ್ಕಟ್ಟು ನಮ್ಮ ಸೃಷ್ಟಿಯಲ್ಲ, ಇದಕ್ಕೆ ಕಾರಣರಾದವರು ಅದನ್ನು ನಿಭಾಯಿಸಬೇಕು ಮತ್ತು ಸರಾಗಗೊಳಿಸುವ ಪರಿಸ್ಥಿತಿಗಳನ್ನು ಸೃಷ್ಟಿಸಬೇಕು ಎಂದು ಭಾರತೀಯ ಮೀಸಲುಗಳನ್ನು ಬಿಡುಗಡೆ ಮಾಡುವುದನ್ನು ತಳ್ಳಿಹಾಕಿದ ಮೂಲಗಳು ಹೇಳಿವೆ.

ರಫ್ತುದಾರರಿಗೆ ಸಹಾಯ ಮಾಡಲು ಕೇಂದ್ರ ಸಿದ್ಧತೆ

• ಹೊಸದಿಲ್ಲಿ: ಪಶ್ಚಿಮ ಏಷ್ಯಾದ ಬಿಕ್ಕಟ್ಟನ್ನು ಎದುರಿಸಲು ಸಹಾಯ ಮಾಡಲು ವಿಮಾ ಕ್ಷೇತ್ರದಲ್ಲಿ ರಫ್ತುದಾರರಿಗೆ ಸಹಾಯ ಮಾಡಲು ಸರ್ಕಾರ ಚಿಂತಿಸುತ್ತಿದೆ ಎಂದು ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪಿಯೂಷ್ ಗೋಯಲ್ ಮಂಗಳವಾರ ಹೇಳಿದ್ದಾರೆ. ಅಂತರ-ಸಚಿವಾಲಯದ ಗುಂಪು ಪ್ರತಿದಿನ ಬೆಳವಣಿಗೆಗಳ ಮೇಲೆ ನಿಗಾ ಇಡುತ್ತಿದೆ. ರಫ್ತುದಾರರೊಂದಿಗೆ ಸಂವಹನ ನಡೆಸುತ್ತಿದೆ ಎಂದು ಹೇಳಿದರು. ಪಶ್ಚಿಮ ಏಷ್ಯಾ ಬಿಕ್ಕಟ್ಟಿನ ಮಧ್ಯೆ ಹಾರ್ಮುಜ್ ಜಲಸಂಧಿಯ ಮುಚ್ಚುವಿಕೆ ಮತ್ತು ಕಡಲ ಮಾರ್ಗಗಳಲ್ಲಿನ ಅಡೆತಡೆಗಳಿಂದಾಗಿ ಭಾರತೀಯ ಬಂದರುಗಳಿಗೆ ಹಿಂದಿರುಗುವ ರಫ್ತು ಸರಕುಗಳನ್ನು ಎದುರಿಸಲು ಕಸ್ಟಮ್ಸ್ ಇಲಾಖೆಯು ಮಾನದಂಡಗಳನ್ನು ಹೊರತಂದಿದೆ.



ಕಪ್ಪು ಮಳೆಗೆ ತತ್ತರಿಸಿದ ಇರಾನ್ ಜನ

ಟೆಹ್ರಾನ್ ನಗರಕ್ಕೆ ಕಪ್ಪು ಮಳೆ ಸುರಿದಂತೆ ವಿಚಿತ್ರ ವಿದ್ಯಮಾನವನ್ನು ಅನುಭವಿಸಿದೆ. ಇರಾನ್‌ನ ರಾಜಧಾನಿ ನಗರದ ನಿವಾಸಿಗಳು ಈ ಮಳೆಯಿಂದ ಉಳಿದ ತೈಲ ಅವಶೇಷವು ಕಟ್ಟಡಗಳು, ಕಾರುಗಳು ಮತ್ತು ರಸ್ತೆಗಳನ್ನು ಆವರಿಸಿದೆ. ಸುಟ್ಟ ಪೆಟ್ರೋಲ್‌ನಂತಹ ಗಾಳಿಯ ವಾಸನೆಯ ಬರುತ್ತಿದೆ ಎಂದು ನಿವಾಸಿಗಳು ಆತಂಕಪಡುತ್ತಿದ್ದಾರೆ. ಅನೇಕರು ಉಸಿರಾಟದ ತೊಂದರೆ ಮತ್ತು ಮೈಗ್ರೇನ್ ಸಮಸ್ಯೆಯಿಂದ ಬಳಲುತ್ತಿದ್ದಾರೆ. ಈ ಹಿನ್ನಲ್ಲೇ ಪ್ರತಿಯೊಬ್ಬರೂ ತಮ್ಮ ಮನೆಗಳಿಂದ ಹೊರಹೋಗುವಾಗ ಮಾಸ್ಕ್ ಧರಿಸುವಂತೆ ಟೆಹ್ರಾನ್‌ನ ರಾಜ್ಯಪಾಲರು ಹೇಳಿಕೆ ನೀಡಿದ್ದಾರೆ. ಹಲವಾರು ಗಂಟೆಗಳ ಕಾಲ ನಗರವನ್ನು ಸುಟ್ಟುಹಾಕಿದ ನಗರದ ಹಲವಾರು ಇಂಧನ ಸಂಗ್ರಹಣೆ ಮತ್ತು ತೈಲ ಸೌಲಭ್ಯಗಳ ಮೇಲೆ ಇಸ್ರೇಲ್ ದಾಳಿ ನಡೆಸಿದ ಹಿನ್ನೆಲೆಯಲ್ಲಿ ಈ ಘಟನೆ ಸಂಭವಿಸಿದೆ.

ಕಿರುಸುದ್ದಿ

ಒಳನುಸುಳುವಿಕೆ ಯತ್ನ ವಿಫಲ: ಉಗ್ರನ ವಧೆ

• ಶ್ರೀನಗರ: ಜಮ್ಮು-ಕಾಶ್ಮೀರದ ರಜೌರಿ ಜಿಲ್ಲೆಯ ಗಡಿ ನಿಯಂತ್ರಣ ರೇಖೆಯಲ್ಲಿ (ಎಲ್‌ಒಸಿ) ಸೇನಾ ಪಡೆಗಳು ಮಂಗಳವಾರ ಒಳನುಸುಳುವಿಕೆ ಯತ್ನ ವಿಫಲಗೊಳಿಸಿದ್ದು, ಎನ್‌ಕೌಂಟರ್‌ನಲ್ಲಿ ಓರ್ವ ಭಯೋತ್ಪಾದಕನನ್ನು ಹೊಡೆದುರುಳಿಸಿದ್ದಾರೆ. ಗುಪ್ತಚರ ಮಾಹಿತಿ ಆಧಾರದ ಮೇಲೆ, ಭದ್ರತಾ ಪಡೆಗಳು ಎಲ್‌ಒಸಿ ನೌಶೆರಾ ಸೆಕ್ಟರ್‌ಲ್ಲಿರುವ ಝಂಗರ್‌ನ ಸಾಮಾನ್ಯ ಪ್ರದೇಶದಲ್ಲಿ ಮಧ್ಯಾಹ್ನ 3 ಗಂಟೆಗೆ ಇಬ್ಬರು ಭಯೋತ್ಪಾದಕರ ಚಲನವಲನವನ್ನು ಪತ್ತೆಹಚ್ಚಿವೆ ಎಂದು ವೈಟ್ ನೈಟ್ ಕಾರ್ಪ್ಸ್ ಎಕ್ಸ್‌ನಲ್ಲಿ ತಿಳಿಸಿದೆ. ಅನಂತರ ನಡೆದ ಗುಂಡಿನ ಚಕಮಕಿಯಲ್ಲಿ, ಪಾಕಿಸ್ತಾನ ಪ್ರಾಯೋಜಿತ ಭಯೋತ್ಪಾದಕನೊಬ್ಬನನ್ನು ವಧೆ ಮಾಡಲಾಗಿದೆ ಎಂದು ಹೇಳಿದೆ.

ಗೋಡೆ ಕುಸಿದು ಏಳು ಕಾರ್ಮಿಕರು ಸಾವು

• ಗುರುಗ್ರಾಮ: ನಿರ್ಮಾಣ ಹಂತದಲ್ಲಿದ್ದ ಕಟ್ಟಡದ ಗೋಡೆ ಕುಸಿದು ಏಳು ಕಾರ್ಮಿಕರು ಮೃತಪಟ್ಟಿದ್ದು, ನಾಲ್ವರು ಗಾಯಗೊಂಡಿದ್ದಾರೆ. ಗುರುಗ್ರಾಮ್‌ನ ಸಿದ್ರಾವಳಿ ಪ್ರದೇಶದ ಸಿಗ್ನೇಚರ್ ಗ್ಲೋಬಲ್ ಸೊಸೈಟಿಯಲ್ಲಿ ಸೋಮವಾರ ಸಂಜೆ ಈ ಘಟನೆ ನಡೆದಿದೆ. ಪೊಲೀಸರ ಪ್ರಕಾರ, ದೊಡ್ಡ ಶಬ್ದದಿಂದ ಗೋಡೆ ಕುಸಿದು ಸುಮಾರು 12ರಿಂದ 15 ಕಾರ್ಮಿಕರು ಅವಶೇಷಗಳ ಅಡಿಯಲ್ಲಿ ಸಿಲುಕಿಕೊಂಡಿದ್ದರು. ಸ್ಥಳೀಯ ಪೊಲೀಸರು, ಆಡಳಿತ ಮತ್ತು ಎಸ್‌ಡಿಆರ್‌ಎಫ್ ತಂಡಗಳು ಸ್ಥಳಕ್ಕೆ ಆಗಮಿಸಿ ರಕ್ಷಣಾ ಕಾರ್ಯಾಚರಣೆಯನ್ನು ಪ್ರಾರಂಭಿಸಿದವು. ಅಧಿಕಾರಿಗಳು ಭಾರೀ ಯಂತ್ರೋಪಕರಣಗಳನ್ನು ಬಳಸಿ ಅವಶೇಷಗಳನ್ನು ತೆಗೆದುಹಾಕಿದ್ದಾರೆ.

ಹೊಸೂರು ವಿಮಾನ ನಿಲ್ದಾಣ ನಿರ್ಮಾಣಕ್ಕೆ ಮತ್ತೊಂದು ವಿಘ್ನ

• ಚೆನ್ನೈ: ಹೊಸೂರು ವಿಮಾನ ನಿಲ್ದಾಣ ನಿರ್ಮಾಣಕ್ಕೆ ಮತ್ತೊಂದು ತಡೆ ಎದುರಾಗಿದ್ದು, ಸರ್ಕಾರದ ನಿರ್ಧಾರದ ವಿರುದ್ಧ ರೈತರು ಭಾರೀ ಆಕ್ರೋಶ ವ್ಯಕ್ತಪಡಿಸಿ ಪ್ರತಿಭಟನೆ ನಡೆಸಿದ್ದಾರೆ. ಹೊಸೂರಿನಲ್ಲಿ ಗ್ರೀನ್ ಫೀಲ್ಡ್ ವಿಮಾನ ನಿಲ್ದಾಣವನ್ನು ನಿರ್ಮಿಸುವುದು ಸೇರಿದಂತೆ ಮೂಲಸೌಕರ್ಯ ಯೋಜನೆಗಳಿಗಾಗಿ ಸಾವಿರಾರು ಎಕರೆ ಕೃಷಿ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವ ಕ್ರಮವನ್ನು ವಿರೋಧಿಸಿ ರೈತರು ಮೆರವಣಿಗೆ ನಡೆಸಿದ್ದಾರೆ. ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ (ಎಚ್‌ಎಎಲ್) ವಿಮಾನ ನಿಲ್ದಾಣವು ಕಾರ್ಯಗತಗೊಳಿಸಿದ ರಾಷ್ಟ್ರೀಯ ಪ್ರಾಮುಖ್ಯತೆಯ ರಕ್ಷಣಾ ಯೋಜನೆಗಳಿಗೆ ಆದ್ಯತೆ ನೀಡುವ ಸಲುವಾಗಿ ತಮಿಳುನಾಡು ಮಂಡಿಸಿದ ಹೊಸೂರು ವಿಮಾನ ನಿಲ್ದಾಣ ಯೋಜನೆಯ ಪ್ರಸ್ತಾಪವನ್ನು ಶಿಫಾರಸು ಮಾಡಿರಲಿಲ್ಲ, ಈ ಬೆನ್ನಲ್ಲೇ ರೈತರು ಕೂಡ ಈ ನಿಲ್ದಾಣ ನಿರ್ಮಿಸುವುದನ್ನು ವಿರೋಧಿಸಿದ್ದಾರೆ.

ಅರ್ಹ ಮತದಾರರನ್ನು ಪಟ್ಟಿಯಿಂದ ಹೊರಗಿಡಲ್ಲ

• ಕೋಲ್ಕತ್ತಾ: ಯಾರೇ ಅರ್ಹ ಮತದಾರರ ಹೆಸರನ್ನು ಮತದಾರರ ಯಾದಿಯಿಂದ ಕಿತ್ತುಹಾಕುವುದಿಲ್ಲ, ರಾಜ್ಯದಲ್ಲಿ ಮುಕ್ತ, ನ್ಯಾಯೋಚಿತ ಹಾಗೂ ಶಾಂತಿಯುತ ಚುನಾವಣೆ ನಡೆಯಬೇಕೆಂಬುದು ಚುನಾವಣಾ ಆಯೋಗದ ಆಶಯ ಮತ್ತು ಇದಕ್ಕೇ ಪ್ರಾಧಾನ್ಯತೆ ನೀಡುತ್ತದೆ ಎಂದು ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಮಂಗಳವಾರ ಹೇಳಿದ್ದಾರೆ.

ಚುನಾವಣಾ ಹೊಸ್ತಿನಲ್ಲಿರುವ ಪಶ್ಚಿಮ ಬಂಗಾಳದಲ್ಲಿ ಚುನಾವಣಾ ಸಿದ್ಧತೆ ಕುರಿತು ವಿವಿಧ ರಾಜಕೀಯ ಪಕ್ಷಗಳು, ಹಿರಿಯ ಆಡಳಿತಾತ್ಮಕ ಅಧಿಕಾರಿಗಳ ಜತೆ, ಆಯೋಗದ ಎಲ್ಲಾ ಅಧಿಕಾರಿಗಳ ಸಹಿತ ಸರಣಿ ಸಭೆ ನಡೆಸಿದ ನಂತರ ಸುದ್ದಿಗೋಷ್ಠಿಯಲ್ಲಿ ಅವರು ಆಯೋಗದ ಆಶಯವನ್ನು ಸ್ಪಷ್ಟಪಡಿಸಿದರು. ಚುನಾವಣಾ ಆಯೋಗದ ಅಧಿಕಾರಿಗಳ ತಂಡ ದಿಲ್ಲಿಗೆ ಮರಳಿದ ಬಳಿಕ ರಾಜ್ಯದ ಚುನಾವಣಾ ದಿನಾಂಕ ಮತ್ತು ಎಷ್ಟು ಹಂತಗಳಲ್ಲಿ ಚುನಾವಣೆ ನಡೆಸಬೇಕೆಂಬುದನ್ನು ನಿರ್ಧರಿಸುವುದು ಎಂದು ಹೇಳಿದರು.

ರಾಜ್ಯದಲ್ಲಿ ನಿರ್ಭೀತಿಯಿಂದ ಮತ್ತು ಕಟ್ಟುನಿಟ್ಟಾಗಿ ಕಾನೂನು ಸುವ್ಯವಸ್ಥೆ ಅನುಷ್ಠಾನಿಸಲು ಆಯೋಗವು ಅಧಿಕಾರಿಗಳಿಗೆ ನಿರ್ದೇಶವಿತ್ತಿದೆ. ರಾಜ್ಯದ ಕಾನೂನು ಸ್ಥಿತಿಗತಿಗಳನ್ನು ನಾವು ಪರಾಮರ್ಶಿಸಿದ್ದೇವೆ. ಚುನಾವಣೆ ಹಿಂಸಾಚಾರಮುಕ್ತವಾಗಿ ಮತ್ತು ಯಾವುದೇ ಪ್ರಚೋದನೆ ರಹಿತ ನಡೆಯುವುದೆಂದು ಪ.ಬಂಗಾಳ ಸರಕಾರದ ಮುಖ್ಯ ಕಾರ್ಯದರ್ಶಿಗಳು, ಡಿಜಿಪಿ, ಸಿಪಿಗಳು, ಎಸ್‌ಪಿಗಳು ಆಯೋಗಕ್ಕೆ ಆಶ್ವಾಸನೆ ನೀಡಿರುವುದಾಗಿ ಹೇಳಿದರು. ಚುನಾವಣಾ ಪ್ರಕ್ರಿಯೆಗಳ ಸಂದರ್ಭ ರಾಜ್ಯದ ಅಧಿಕಾರಿಗಳು ನಿರ್ದಿಷ್ಟ ಪರಿಮಿತಿಯೊಳಗೆ ಕಾರ್ಯ ನಿರ್ವಹಿಸಬೇಕೆಂದು ಆಯೋಗಕ್ಕೆ ನಿರೀಕ್ಷೆಯಿರುತ್ತದೆ.

ಸ್ವದೇಶಿ ಏರ್ ಡ್ರಾಪೆಬಲ್ ಕಂಟೇನರ್ ಪರೀಕ್ಷೆ ಯಶ

• ಹೊಸದಿಲ್ಲಿ: ಡಿಆರ್‌ಡಿಒ ಮತ್ತು ಭಾರತೀಯ ನೌಕಾಪಡೆಯು ಸ್ಥಳೀಯವಾಗಿ ವಿನ್ಯಾಸಗೊಳಿಸಿ, ಅಭಿವೃದ್ಧಿಪಡಿಸಿದ ಏರ್ ಡ್ರಾಪೆಬಲ್ ಕಂಟೇನರ್ ವ್ಯವಸ್ಥೆಯ ನಾಲ್ಕು ಯಶಸ್ವಿ ಇನ್-ಫ್ಲೈಟ್ ಬಿಡುಗಡೆ ಪ್ರಯೋಗಗಳನ್ನು ನಡೆಸಿದೆ. ಇದು ನೌಕಾ ಹಡಗಿಗೆ 150 ಕೆಜಿ ತೂಕದ ಪೇಲೋಡ್ ಅನ್ನು ತಲುಪಿಸಬಲ್ಲದು. ಎಲ್ಲಾ ಅಭಿವೃದ್ಧಿ ವಿಮಾನ ಪ್ರಯೋಗಗಳು ಯಶಸ್ವಿಯಾಗಿ ಪೂರ್ಣಗೊಂಡಿರುವುದರಿಂದ, ಈ ವ್ಯವಸ್ಥೆಯನ್ನು ಶೀಘ್ರದಲ್ಲೇ ನೌಕಾಪಡೆಗೆ ಸೇರಿಸುವ ನಿರೀಕ್ಷೆಯಿದೆ ಎಂದು ರಕ್ಷಣಾ ಸಚಿವಾಲಯ ಮಂಗಳವಾರ ತಿಳಿಸಿದೆ. ನೌಕಾಪಡೆಯ ಅಗತ್ಯವನ್ನು ಪೂರೈಸಲು, ಪಿ8ಐ ವಿಮಾನಕ್ಕಾಗಿ ಎಡಿಸಿ-150 ವ್ಯವಸ್ಥೆಯನ್ನು ಅಲ್ಪಾವಧಿಯಲ್ಲಿಯೇ ಅಭಿವೃದ್ಧಿಪಡಿಸಲಾಯಿತು ಮತ್ತು ಅರ್ಹತೆ ಪಡೆಯಲಾಯಿತು. ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (ಡಿಆರ್‌ಡಿಒ) ಮತ್ತು ನೌಕಾಪಡೆ ಜಂಟಿಯಾಗಿ ಫೆಬ್ರವರಿ 21 ರಿಂದ ಮಾರ್ಚ್ 1ರನಡುವೆ ಗೋವಾ ಕರಾವಳಿಯಲ್ಲಿ ಪಿ8ಐ ವಿಮಾನದಿಂದ ಸ್ಥಳೀಯ ಏರ್ ಡ್ರಾಪೆಬಲ್ ಕಂಟೇನರ್ ಎಡಿಸಿ-150ನ ನಾಲ್ಕು ಯಶಸ್ವಿ ಇನ್-ಫ್ಲೈಟ್ ಬಿಡುಗಡೆ ಪ್ರಯೋಗಗಳನ್ನು ನಡೆಸಿದವು ಎಂದು ಸಚಿವಾಲಯ ತಿಳಿಸಿದೆ. 150 ಕೆಜಿ ಪೇಲೋಡ್ ಅನ್ನು ತಲುಪಿಸಲು ಸ್ಥಳೀಯವಾಗಿ ವಿನ್ಯಾಸಗೊಳಿಸಲಾಗಿರುವ ಮತ್ತು ಅಭಿವೃದ್ಧಿಪಡಿಸಲಾಗಿರುವ 'ಏರ್ ಡ್ರಾಪೆಬಲ್ ಕಂಟೇನರ್' ಕರಾವಳಿಯಿಂದ ದೂರದಲ್ಲಿ ನಿಯೋಜಿಸಲಾಗಿರುವ ಸಮುದ್ರದಲ್ಲಿ ಸಂಕಷ್ಟದಲ್ಲಿರುವ ನೌಕಾ ಹಡಗುಗಳಿಗೆ ತ್ವರಿತ ಪ್ರತಿಕ್ರಿಯೆ ನೀಡಲು, ನಿರ್ಣಾಯಕ ಮಳಿಗೆಗಳು ಅಥವಾ ಉಪಕರಣಗಳು, ವೈದ್ಯಕೀಯ ನೆರವು ಇತ್ಯಾದಿಗಳಿಗೆ ನೌಕಾ ಕಾರ್ಯಾಚರಣೆಯ ಲಾಜಿಸ್ಟಿಕ್ಸ್ ಸಾಮರ್ಥ್ಯಗಳನ್ನು ಹೆಚ್ಚಿಸುತ್ತದೆ ಎಂದು ಹೇಳಿದೆ.

ಭಾರತ-ನೇಪಾಳ ಸಂಬಂಧ ಗಾಢವಾಗುವುದು ಖಚಿತ

• ಕಠ್ಮಂಡು: ಐತಿಹಾಸಿಕ ನೇಪಾಳ-ಭಾರತ ಸಂಬಂಧಗಳನ್ನು ಮತ್ತಷ್ಟು ಗಾಢವಾಗಿಸುವ ವಿಶ್ವಾಸವನ್ನು ರಾಷ್ಟ್ರೀಯ ಸ್ವತಂತ್ರ ಪಕ್ಷದ (ಆರ್‌ಎಸ್‌ಪಿ) ಪ್ರಧಾನಿ ಅಭ್ಯರ್ಥಿ ಬಲೇಂದ್ರ ಷಾ ಅವರು ಮಂಗಳವಾರ ವ್ಯಕ್ತಪಡಿಸಿದ್ದಾರೆ. ಇವರು ನೇಪಾಳದ ಮೊದಲ ಮಧೇಶಿ ಪ್ರಧಾನಿಯಾಗಲು ಸಿದ್ಧರಾಗಿದ್ದಾರೆ. ಪಕ್ಷದ



ಚುನಾವಣಾ ಯಶಸ್ಸಿಗೆ ಶುಭ ಹಾರೈಸಿದ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಧನ್ಯವಾದಗಳನ್ನು ಸಲ್ಲಿಸಿದ್ದಾರೆ. ಪ್ರಧಾನಿ ನರೇಂದ್ರ ಮೋದಿಯವರ ಶುಭಾಶಯಗಳಿಗೆ ಧನ್ಯವಾದಗಳು ಎಂದು ಅವರು ಪೋಸ್ಟ್‌ನಲ್ಲಿ ಬರೆದಿದ್ದಾರೆ. ಮುಂಬರುವ ದಿನಗಳಲ್ಲಿ ನೇಪಾಳ ಮತ್ತು ಭಾರತದ ನಡುವೆ ಇರುವ ಐತಿಹಾಸಿಕ, ನಿಕಟ ಮತ್ತು ಬಹು ಆಯಾಮದ ಸಂಬಂಧಗಳನ್ನು ಮತ್ತಷ್ಟು ಬಲಪಡಿಸಲು, ಗಾಢವಾಗಿಸಲು ಮತ್ತು ಹೆಚ್ಚು ಫಲಿತಾಂಶ ಆಧಾರಿತವಾಗಿಸಲು ನಾವು ಒಟ್ಟಾಗಿ ಕೆಲಸ ಮಾಡುತ್ತೇವೆ ಎಂದು ನಾನು ನನ್ನ ವಿಶ್ವಾಸವನ್ನು ವ್ಯಕ್ತಪಡಿಸುತ್ತೇನೆ ಎಂದು ಹೇಳಿದರು. ಸತತವಾಗಿ ಎರಡು ಬಾರಿ ವಿಶ್ವಕಪ್ ಪ್ರಶಸ್ತಿಯನ್ನು ಯಶಸ್ವಿಯಾಗಿ ಗೆದ್ದ ಭಾರತ ಸರ್ಕಾರ ಮತ್ತು ಭಾರತೀಯ ಜನರಿಗೆ ಷಾ ತಮ್ಮ ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ಅಭಿನಂದನೆಗಳನ್ನು ತಿಳಿಸಿದ್ದಾರೆ. ಮೋದಿ ಅವರು ಸೋಮವಾರ ಆರ್‌ಎಸ್‌ಪಿ ಮುಖ್ಯಸ್ಥ ರಬಿ ಲಮಿಚಾನೆ ಮತ್ತು ಪಕ್ಷದ ಹಿರಿಯ ನಾಯಕ ಷಾ ಅವರನ್ನು ಅವರ ಚುನಾವಣಾ ವಿಜಯಕ್ಕಾಗಿ ಅಭಿನಂದಿಸಿದ್ದರು. ಉಭಯ ದೇಶಗಳ ಪರಸ್ಪರ ಸಮೃದ್ಧಿ, ಪ್ರಗತಿ ಮತ್ತು ಯೋಗಕ್ಷೇಮಕ್ಕಾಗಿ ಅವರೊಂದಿಗೆ ಕೆಲಸ ಮಾಡುವ ಭಾರತದ ಬದ್ಧತೆಯನ್ನು ತಿಳಿಸಿದ್ದರು.

ಮಹಿಳಾ ಮೀಸಲಾತಿ ಶೀಘ್ರ ಕಾಯ್ದೆ ಜಾರಿ?

• ಹೊಸದಿಲ್ಲಿ: ಲೋಕಸಭಾ ಮತ್ತು ವಿಧಾನಸಭಾ ಕ್ಷೇತ್ರಗಳಿಗೆ ಜನಗಣತಿಯ ನಂತರದ ಡಿಲಿಮಿಟೇಶನ್ ಪ್ರಕ್ರಿಯೆ ಪೂರ್ಣಗೊಳ್ಳುವ ಮೊದಲೇ ಮಹಿಳಾ ಮೀಸಲಾತಿ ಕಾಯ್ದೆ ಜಾರಿಗೆ ತರುವ ಸಾಧ್ಯತೆಯನ್ನು ಸರ್ಕಾರ ಪರಿಶೀಲಿಸುತ್ತಿದೆ. ಕೇಂದ್ರ ಸಚಿವ ಸಂಪುಟಕ್ಕೆ ಔಪಚಾರಿಕ ಪ್ರಸ್ತಾಪವನ್ನು ಸಿದ್ಧಪಡಿಸಲು ಇನ್ನೂ ಯಾವುದೇ ಸೂಚನೆಗಳನ್ನು ನೀಡಲಾಗಿಲ್ಲವಾದರೂ, 2023ರಲ್ಲಿ ಸಂಸತ್ತು ಅಂಗೀಕರಿಸಿದ ಕಾನೂನನ್ನು ತಿದ್ದುಪಡಿ ಮಾಡುವ ಸಾಧ್ಯತೆಯನ್ನು ಅನ್ವೇಷಿಸಲು ಯೋಜನೆಗಳು ನಡೆಯುತ್ತಿವೆ ಎಂದು ಮೂಲಗಳು ತಿಳಿಸಿವೆ. ಸಂವಿಧಾನವನ್ನು ತಿದ್ದುಪಡಿ ಮಾಡುವ ಮೂಲಕ ಲೋಕಸಭಾ ಮತ್ತು ರಾಜ್ಯ ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಶೇ.33ರಷ್ಟು ಮೀಸಲಾತಿ ಒದಗಿಸುವ ನಿಬಂಧನೆ ತರಲಾಯಿತು. ಆದರೆ ಇದು ಡಿಲಿಮಿಟೇಶನ್ ಪ್ರಕ್ರಿಯೆಯು ಪೂರ್ಣಗೊಂಡ ನಂತರ ಜಾರಿಗೆ ಬರುತ್ತದೆ. ಡಿಲಿಮಿಟೇಶನ್ ಆಯೋಗವು ಲೋಕ ಸಭಾ, ವಿಧಾನಸಭಾ ಕ್ಷೇತ್ರಗಳನ್ನು ಮರುಹೊಂದಿಸಲು ಕಡ್ಡಾಯವಾದ ಸಂಸ್ಥೆಯಾಗಿದೆ. ಅದರ ನಿರ್ಧಾರಗಳನ್ನು ಸುಪ್ರೀಂ ಕೋರ್ಟ್‌ನಲ್ಲಿ ಸಹ ಪ್ರಶ್ನಿಸಲು ಸಾಧ್ಯವಿಲ್ಲ.

100 ಕೋಟಿ ರೂ. ವೆಚ್ಚದಲ್ಲಿ ಸ್ವದೇಶಿ ಉತ್ಪನ್ನಗಳ ಅಪರೂಪದ ವೇದಿಕೆ

ಬರಲಿದೆ ಪಿಎಂ ಏಕತಾ ಮಾಲ್

• ಹೊಸದಿಲ್ಲಿ: ದೇಶಾದ್ಯಂತ ತಯಾರಾದ ಸ್ವದೇಶಿ ಉತ್ಪನ್ನಗಳು, ಸ್ಥಳೀಯ ಕರಕುಶಲ ವಸ್ತುಗಳು ಮತ್ತು ವೈವಿಧ್ಯಮಯ ಅಡುಗೆಗಳ ಪ್ರದರ್ಶನ- ವಿಕ್ರಯಕ್ಕೆ ಉತ್ತೇಜಕ ವೇದಿಕೆ ರೂಪದ ಪಿಎಂ ಏಕತಾ ಮಾಲ್ ಶೀಘ್ರದಲ್ಲೇ ದಿಲ್ಲಿಯಲ್ಲಿ ಮೈದಳೆಯಲಿದೆ. ಸುಮಾರು 100 ಕೋಟಿ ರೂ.ವೆಚ್ಚದಲ್ಲಿ ಪಿಎಂ ಏಕತಾ ಮಾಲ್ ನಿರ್ಮಾಣವಾಗಲಿದೆ.



ಪ್ರತೀ ರಾಜ್ಯಕ್ಕೆ ತಲಾ100 ಕೋಟಿ ರೂ.ಬೆಂಬಲ: ದಿಲ್ಲಿ ಪ್ರವಾಸೋದ್ಯಮ ಮತ್ತು ಸಾರಿಗೆ ಅಭಿವೃದ್ಧಿ ನಿಗಮ ಪ್ರಸ್ತಾವಿಸಿರುವ ಪ್ರಸ್ತುತ ಯೋಜನೆಯು, ರಾಜ್ಯಗಳಿಗೆ ಬಂಡವಾಳ ಹೂಡಿಕೆಗಾಗಿ ಕೇಂದ್ರದ ವಿಶೇಷ ನೆರವಿನ ಯೋಜನೆಯಲ್ಲಿ ಸಾಕಾರಗೊಳ್ಳಲಿದೆ. ಕೇಂದ್ರ ವಿಶೇಷ ನೆರವಿನ ಯೋಜನೆಯಲ್ಲಿ ರಾಜ್ಯಗಳಿಗೆ ಸುಮಾರು 50 ವರ್ಷಗಳ ಸುದೀರ್ಘಾವಧಿಯಲ್ಲಿ ಮರುಪಾವತಿಸಬಹುದಾದ ಬಡ್ಡಿಮುಕ್ತ ಸಾಲಸೌಲಭ್ಯ ಕಲ್ಪಿಸಲಾಗುತ್ತದೆ. ಅಂದರೆ ಪ್ರತೀ ರಾಜ್ಯಗಳಿಗೆ ಕನಿಷ್ಠ 100 ಕೋಟಿ ರೂ.ಹಣಕಾಸು ಬೆಂಬಲ ನೀಡಲಾಗುತ್ತದೆ. ದೇಶಾದ್ಯಂತ ಏಕತಾ ಮಾಲ್‌ಗಳ ನಿರ್ಮಾಣಕ್ಕಾಗಿ ಕೇಂದ್ರ ಸರಕಾರ 5ಸಾವಿರ ಕೋಟಿ ರೂ.ಮೀಸಲಿರಿಸಿದೆ.

ದೇಶದ ಕರಕುಶಲ ಕರ್ಮಿಗಳು ಗ್ರಾಹಕರೊಂದಿಗೆ ಸುಲಭವಾಗಿ ವ್ಯವಹರಿಸಲು ಅವಕಾಶವಿರುವ ಪಿಎಂ ಏಕತಾಮಾಲ್ , ಕಾಯಂ ಮಾರುಕಟ್ಟೆ ಕೇಂದ್ರವಾಗಿ ಕಾರ್ಯ ನಿರ್ವಹಿಸಲಿದೆ. ವಾಣಿಜ್ಯಿಕವಾಗಿ ಲಾಭದಾಯಕವಾಗಬಲ್ಲ ಮತ್ತು ಜನರನ್ನು ಸೂಜಿಗಲ್ಲಂತೆ ಸೆಳೆಯಬಲ್ಲ ಹಣಕಾಸು ಕೇಂದ್ರ ಅಥವಾ ಪ್ರಮುಖ ಪ್ರವಾಸೀ ಕೇಂದ್ರದಲ್ಲಿ ಮಾಲ್ ತೆರೆಯಲಾಗುವುದು. ಐಎನ್‌ಎ ದಿಲ್ಲಿ ಹಾತ್‌ಗೆ ಸಮೀಪ ಪೀತಂಪುರದ ನೇತಾಜಿ ಸುಭಾಷ್ ಸ್ಥಳ ಅಥವಾ ಪುರಸಭೆಯ ಆಡಳಿತಾತ್ಮಕ ಸೌಕರ್ಯಗಳು ಈಗಾಗಲೆ ಇರುವ ಮಂಜು ಕಾ ತಿಲ್ಲಾದಲ್ಲಿ ಮಾಲ್ ತಲೆಯೆತ್ತೋ ಸಾಧ್ಯತೆಗಳಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸ್ಥಳೀಯ ಉತ್ಪಾದಕರಿಗೆ ರಾಷ್ಟ್ರೀಯ ವೇದಿಕೆಯಿದು: ವಿವಿಧ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳ ಪ್ರತಿನಿಧಿಸುವ 36 ಸ್ಟಾಲ್‌ಗಳು ಮಾಲ್‌ನಲ್ಲಿರಲಿವೆ. ತನ್ಮೂಲಕ ಒಂದು ಜಿಲ್ಲೆ, ಒಂದು ಉತ್ಪನ್ನ ಉಪಕ್ರಮದಡಿ, ತಮ್ಮ ವಿಶಿಷ್ಟ ಉತ್ಪನ್ನಗಳ ಜನರಿಗೆ ಪರಿಚಯಿಸಲು ದೇಶದ ಪ್ರತಿಯೊಂದು ಜಿಲ್ಲೆಗೂ ಮಾಲ್‌ಅತ್ಯುತ್ತಮ ವೇದಿಕೆಯಾಗಲಿದೆ. ಭಾರತದ ಪ್ರತಿಯೊಂದು ಜಿಲ್ಲೆಯ ವಿಶಿಷ್ಟ ಕರಕೌಶಲಗಳು ಹಾಗೂ ವಿಶೇಷತೆಗಳ ಎತ್ತಿ ಹಿಡಿಯೋದು, ತನ್ಮೂಲಕ ಸ್ಥಳೀಯ ಉತ್ಪಾದಕರಿಗೆ ರಾಷ್ಟ್ರೀಯ ವೇದಿಕೆಯನ್ನು ಸೃಜಿಸೋದು ಮಾಲ್‌ನ ಆಶಯವಾಗಿದೆ.

ಗಡಿ ರಾಷ್ಟ್ರಗಳಿಂದ ಹೂಡಿಕೆ ಹರಿದುಬರಲು ಪ್ರೋತ್ಸಾಹ

ನೆರೆರಾಷ್ಟ್ರಗಳಿಗೆ ಎಫ್‌ಡಿಐ ನಿರ್ಬಂಧ ಸಡಿಲ?

• ಹೊಸದಿಲ್ಲಿ: ಭಾರತದೊಂದಿಗೆ ಗಡಿ ರೇಖೆ ಹಂಚಿಕೊಳ್ಳುವ ಚೀನಾ ಸಹಿತ ನೆರೆಯ ರಾಷ್ಟ್ರಗಳಿಂದ ಹರಿದುಬರುವ ವಿದೇಶಿ ನೇರ ಹೂಡಿಕೆ (ಎಫ್‌ಡಿಐ) ಮೇಲಿನ ನಿರ್ಬಂಧಗಳನ್ನು ಕೇಂದ್ರ ಸರ್ಕಾರ ಸಡಿಲಗೊಳಿಸಿದೆ ಎಂದು ಸರ್ಕಾರಿ ಮೂಲಗಳು ಮಂಗಳವಾರ ತಿಳಿಸಿವೆ.

ಇವುಗಳಲ್ಲಿ ಬಾಂಗ್ಲಾದೇಶ, ಪಾಕಿಸ್ತಾನ, ಭೂತಾನ್, ನೇಪಾಳ, ಮ್ಯಾನ್ಮಾರ್ ಮತ್ತು ಅಫ್ಘಾನಿಸ್ತಾನವೂ ಒಳಗೊಂಡಿವೆ. ಚೀನಾದಿಂದ ಬರುವ ಎಫ್‌ಡಿಐ ಕಡಿಮೆಯಿದ್ದರೂ, ದ್ವಿಪಕ್ಷೀಯ ವ್ಯಾಪಾರ ಹಲವು ಪಟ್ಟು ಹೆಚ್ಚಾಗಿದೆ.

ಚೀನಾ ಈಗ ಭಾರತದ ಎರಡನೇ ಅತಿ ದೊಡ್ಡ ವ್ಯಾಪಾರ ಪಾಲುದಾರ ದೇಶವಾಗಿ ಹೊರಹೊಮ್ಮಿದೆ. ಆದರೆ ಈ ಬಗ್ಗೆ ಕೇಂದ್ರ ಮಾಹಿತಿ ಮತ್ತು ಪ್ರಸಾರ ಸಚಿವ ಅಶ್ವಿನಿ ವೈಷ್ಣವ್ ಯಾವುದೇ ಘೋಷಣೆಗಳನ್ನು ಮಾಡಿಲ್ಲ.

ಜೇವರ್ ವಿ.ನಿಲ್ದಾಣದ ರಸ್ತೆ ಅಭಿವೃದ್ಧಿಗೆ 3,630 ಕೋಟಿ: ಉತ್ತರಪ್ರದೇಶದ ನೂತನ ಜೇವರ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ರಸ್ತೆ ಅಭಿವೃದ್ಧಿಗೊಳಿಸಲು 3,630.77 ಕೋಟಿ ರೂ. ವೆಚ್ಚವನ್ನು ಕೇಂದ್ರ ಸಚಿವ ಸಂಪುಟವು ಮಂಜೂರು ಮಾಡಿದೆ. ದಕ್ಷಿಣ ದಿಲ್ಲಿ, ಫರೀದಾಬಾದ್ ಮತ್ತು ಗುರುಗ್ರಾಮದಿಂದ ವಿಮಾನ ನಿಲ್ದಾಣವನ್ನು ನೇರ ಸಂಪರ್ಕಗೊಳಿಸುವ ಅತಿ ವೇಗದ 31.42 ಕಿ.ಮೀ. ರಸ್ತೆ ಯೋಜನೆ ಇದಾಗಿದೆ.

- ಮಧುರೈ ವಿಮಾನ ನಿಲ್ದಾಣವನ್ನು ಅಂತಾರಾಷ್ಟ್ರೀಯ ನಿಲ್ದಾಣವನ್ನಾಗಿ ಘೋಷಿಸಲು ಕೇಂದ್ರ ಸಂಪುಟ ಅನುಮತಿ. ಇದರಿಂದ ಮಧುರೈ ಮೀನಾಕ್ಷಿ, ಕೂಡಲ್ ಅಳಗರ್, ತಿರುಪ್ಪಾರನ್‌ಕೂಂಡ್ರಂ ಮುರುಗನ್, ಪಲಮುದಿರ್‌ಚೋಲೈ ಮುರುಗನ್ ಮತ್ತು ರಾಮೇಶ್ವರಂ ತೀರ್ಥಯಾತ್ರೆ ಇನ್ನಷ್ಟು ಸುಧಾರಣೆ
- ಪಶ್ಚಿಮ ಬಂಗಾಳ-ಜಾರ್ಖಂಡ್ ಸಂಪರ್ಕಿಸುವ 4,474 ಕೋಟಿ ರೂ. ವೆಚ್ಚದ 2 ರೈಲ್ವೆ ಯೋಜನೆಗಳಿಗೆ ಕೇಂದ್ರ ಗ್ರೀನ್ ಸಿಗ್ನಲ್

ದಿವಾಳಿ ಕಾನೂನು ತಿದ್ದುಪಡಿಗೆ ಒಪ್ಪಿಗೆ: ದಿವಾಳಿ ಕಾನೂನು ಮತ್ತು ಕಂಪನಿಗಳ ಕಾಯ್ದೆ 2013ರಲ್ಲಿನ ತಿದ್ದುಪಡಿಗಳಿಗೆ ಕೇಂದ್ರ ಸಂಪುಟ ಅನುಮೋದನೆ ನೀಡಿದೆ.

ಜಲ್ ಜೀವನ್ ಮಿಷನ್ ವಿಸ್ತರಣೆ: ಜಲ್ ಜೀವನ್ ಮಿಷನ್ ಯೋಜನೆಯನ್ನು 8.7 ಲಕ್ಷ ಕೋಟಿ ರೂ. ವೆಚ್ಚದಲ್ಲಿ ಡಿಸೆಂಬರ್ 2028ರವರೆಗೆ ವಿಸ್ತರಿಸಲು ಕೇಂದ್ರ ಸಂಪುಟ ಅನುಮೋದನೆ ನೀಡಿದ್ದಾಗಿ ಕೇಂದ್ರ ಸಚಿವ ಅಶ್ವಿನಿ ವೈಷ್ಣವ್ ತಿಳಿಸಿದ್ದಾರೆ.



ಎನ್‌ಆರ್‌ಪುರದ ಭದ್ರಾ ಹಿನ್ನೀರಿನ ಮೇಲೆ ನಿರ್ಮಿಸಲಾಗಿರುವ ನೂತನ ಸೇತುವೆ ಉದ್ಘಾಟನೆಗೆ ಮುಖ್ಯಮಂತ್ರಿಗಳು ಆಗಮಿಸುತ್ತಿರುವ ಹಿನ್ನೆಲೆಯಲ್ಲಿ ಶಾಸಕ ಟಿ.ಡಿ.ರಾಜೇಗೌಡ, ಜಿ.ಪಂ. ಸಿಇಒ ಎಚ್.ಎಸ್.ಕೀರ್ತನಾ, ಎಸ್ಪಿ ಜಿತೇಂದ್ರ ಕುಮಾರ್ ದಯಾಮ ಮತ್ತಿತರೆ ಅಧಿಕಾರಿಗಳು ಸ್ಥಳ ಪರಿಶೀಲಿಸಿದರು.

ಕೆಆರ್‌ಇಡಿಎಲ್‌ನ ಲಾಭಾಂಶದಲ್ಲಿ ಸಾಮಾಜಿಕ ಕಾರ್ಯ

ಬಾಳೆಹೊನ್ನೂರು: ಕರ್ನಾಟಕ ನವೀಕರಿಸಬಹುದಾದ ಇಂಧನ ನಿಗಮದ (ಕೆಆರ್‌ಇಡಿಎಲ್) ಪ್ರಸಕ್ತ ಸಾಲಿನ ಲಾಭಾಂಶದಲ್ಲಿ ರೂ. 4.5 ಕೋಟಿ ಹಣವನ್ನು ಸಾಮಾಜಿಕ ಕಾರ್ಯಗಳಿಗೆ ವಿವಿಧ ಸಂಘ, ಸಂಸ್ಥೆಗಳಿಗೆ ನೀಡಲಾಗುತ್ತಿದೆ ಎಂದು ನಿಗಮದ ಅಧ್ಯಕ್ಷ, ಶಾಸಕ ಟಿ.ಡಿ. ರಾಜೇಗೌಡ ತಿಳಿಸಿದರು.

ಕರ್ನಾಟಕ ನವೀಕರಿಸಬಹುದಾದ ಇಂಧನ ನಿಗಮದ ಲಾಭಾಂಶದ ಹಣವನ್ನು ವಿವಿಧ ಸಂಘ ಸಂಸ್ಥೆಗಳಿಗೆ ಚೆಕ್ ಮೂಲಕ ಹಸ್ತಾಂತರಿಸಿ ಅವರು ಮಾತನಾಡಿದರು.

ಕೆಆರ್‌ಇಡಿಎಲ್ ಕಳೆದ ಎರಡು ವರ್ಷಗಳಿಂದ ನಿರಂತರವಾಗಿ ಸೋಲಾರ್ ವಿದ್ಯುತ್ ಉತ್ಪಾದನೆಯಲ್ಲಿ ದೇಶಕ್ಕೆ ಮೊದಲ ಸ್ಥಾನವನ್ನು ಪಡೆದಿದೆ. ಕಳೆದ ವರ್ಷ ನಿಗಮವು ತನ್ನ ಲಾಭಾಂಶದಲ್ಲಿ ಶೇ.2ರಷ್ಟು ಅಂದರೆ ರೂ. 2 ಕೋಟಿ ಹಣವನ್ನು ಸಾಮಾಜಿಕ ಕಾರ್ಯಗಳಿಗೆ ವಿನಿಯೋಗಿಸಿತ್ತು. ಈ ವರ್ಷ ರೂ. 4.5 ಕೋಟಿ ಲಾಭಾಂಶ ಹಣವನ್ನು ವಿವಿಧ ಕ್ಷೇತ್ರಕ್ಕೆ ನೀಡಲಾಗಿದೆ ಎಂದರು.

ಪ್ರಮುಖವಾಗಿ ಶಾಲೆ, ಕಾಲೇಜು ಅಭಿವೃದ್ಧಿ, ವಿವಿಧ ಸಂಘ ಸಂಸ್ಥೆಗಳ ಕಾರ್ಯಗಳಿಗೆ, ಶೌಚಾಲಯ, ಆಟದ ಮೈದಾನ ನಿರ್ಮಾಣ, ಅರಣ್ಯ ಇಲಾಖೆಯ ಕಾಡಾನೆ ಹಾವಳಿ ನಿಯಂತ್ರಣಕ್ಕೆ ವಾಹನ ಖರೀದಿಗೆ, ವಿವಿಧ ಸಾಂಸ್ಕೃತಿಕ ಚಟುವಟಿಕೆಗಳಿಗೆ, ಮೂಲಭೂತ ಸೌಕರ್ಯಗಳಿಗೆ ನೀಡಲಾಗಿದೆ. ಸಂಸ್ಥೆಯ ಲಾಭಾಂಶದಲ್ಲಿ ಕಳೆದ ವರ್ಷ ರೂ. 72 ಕೋಟಿ ಹಣವನ್ನು ಸರ್ಕಾರಕ್ಕೆ



ನೀಡಲಾಗಿದೆ. ರೂ. 5 ಕೋಟಿ ಹಣವನ್ನು ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ಕೊಡಲಾಗಿದೆ. ಪ್ರಸಕ್ತ ವರ್ಷ ರೂ. 64 ಕೋಟಿ ಲಾಭಾಂಶವನ್ನು ಸರ್ಕಾರಕ್ಕೆ, ರೂ. 5 ಕೋಟಿ ಹಣವನ್ನು ಮುಖ್ಯಮಂತ್ರಿ ಪರಿಹಾರ ನಿಧಿಗೆ ನೀಡಲಾಗಿದೆ ಎಂದು ತಿಳಿಸಿದರು.

ನವೀಕರಿಸಬಹುದಾದ ಇಂಧನ ನಿಗಮದ ಅಧಿಕಾರಿಗಳು, ಕಾಂಗ್ರೆಸ್ ಮುಖಂಡರು ಹಾಗೂ ವಿವಿಧ ಸಂಘ ಸಂಸ್ಥೆಗಳ ಪದಾಧಿಕಾರಿಗಳು ಹಾಜರಿದ್ದರು.

ಕಿರುಸುದ್ದಿ

ಆಲ್ ಇಂಡಿಯಾ ಬಂಜಾರ ಸೇವಾ ಸಂಘದ ಜಿಲ್ಲಾ ಅಧ್ಯಕ್ಷರಾಗಿ ಲಕ್ಷ್ಮಣ್ ನಾಯಕ್

ಕಡೂರು: ಆಲ್ ಇಂಡಿಯಾ ಬಂಜಾರ ಸೇವಾ ಸಂಘದ ರಾಜ್ಯ ಅಧ್ಯಕ್ಷ ವಿಜಯ್ ಜಾದವ್ ಅವರ ಅಧ್ಯಕ್ಷತೆಯಲ್ಲಿ ಪಟ್ಟಣದ ಅರಿವಿನ ಮನೆ ಸಭಾಂಗಣದಲ್ಲಿ ಮಂಗಳವಾರ ಸಭೆ ಸೇರಿ ಆಲ್ ಇಂಡಿಯಾ ಬಂಜಾರ ಸೇವಾ ಸಂಘದ ಚಿಕ್ಕಮಗಳೂರು ಜಿಲ್ಲಾ ಅಧ್ಯಕ್ಷರಾಗಿ ಲಕ್ಷ್ಮಣ್ ನಾಯಕ್ ಅವರನ್ನು ನೇಮಕ ಮಾಡಲಾಯಿತು. ಗೌರವ ಅಧ್ಯಕ್ಷರಾಗಿ ಬಿ.ಟಿ. ಗಂಗಾಧರ ನಾಯಕ್, ಜಿಲ್ಲಾ ಯುವ ಘಟಕದ ಅಧ್ಯಕ್ಷರಾಗಿ ಆನಂದ ನಾಯಕ್, ಜಿಲ್ಲಾ ಮಹಿಳಾ ಘಟಕ ಅಧ್ಯಕ್ಷರಾಗಿ ಕವಿತಾ ರಾಹುಲ್ ನಾಯಕ್, ಕಡೂರು ತಾಲೂಕು ಅಧ್ಯಕ್ಷರಾಗಿ ಶ್ರೀನಿವಾಸ್ ನಾಯಕ್, ಪ್ರಧಾನ ಕಾರ್ಯದರ್ಶಿಯಾಗಿ ಜಯಂತ ನಾಯಕ್ ನೇಮಕರಾದರು.

ನಂತರ ನಡೆದ ಪದಗ್ರಹಣ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿ ಆಲ್ ಇಂಡಿಯಾ ಬಂಜಾರ ಸೇವಾ ಸಂಘದ ರಾಜ್ಯಾಧ್ಯಕ್ಷ ವಿಜಯ್ ಜಾದವ್ ಮಾತನಾಡಿ, ರಾಷ್ಟ್ರೀಯ ಕಾರ್ಯಾಧ್ಯಕ್ಷ ಡಿ.ರಾಮ ನಾಯಕ್ ಅವರ ಮಾರ್ಗದರ್ಶನದಲ್ಲಿ ರಾಜ್ಯದ 31 ಜಿಲ್ಲೆಗಳ 224 ವಿಧಾನಸಭಾ ಕ್ಷೇತ್ರಗಳ 3390 ತಾಂಡಾಗಳಿಗೆ ಸಂಘಟನೆಯನ್ನು ತೆಗೆದುಕೊಂಡು ಹೋಗಬೇಕು ಎಂಬ ಬಹುದೊಡ್ಡ ಅಭಿಲಾಷೆಯಿಂದ ಸಂಘವನ್ನು ಪ್ರಾರಂಭಿಸಲಾಗಿದೆ. ಈಗಾಗಲೇ ಹಲವಾರು ಜಿಲ್ಲೆಗಳಲ್ಲಿ ಸಂಘಟನೆ ಮಾಡಲಾಗಿದೆ. ಚಿಕ್ಕಮಗಳೂರು ಜಿಲ್ಲೆ ಹಾಗೂ ಎಲ್ಲಾ ತಾಲೂಕುಗಳಿಗೆ ಪದಾಧಿಕಾರಿಗಳನ್ನು ಹಾಗೂ ನೂತನ ಸಮಿತಿಗಳನ್ನು ರಚನೆ ಮಾಡಲು ಜಿಲ್ಲಾ ಅಧ್ಯಕ್ಷರಾದ ಲಕ್ಷ್ಮಣ್ ನಾಯಕ್ ಅವರಿಗೆ ಜವಾಬ್ದಾರಿಯನ್ನು ನೀಡಲಾಗಿದೆ ಎಂದರು.

ಆಲ್ ಇಂಡಿಯಾ ಬಂಜಾರ ಸೇವಾ ಸಂಘದ ನೂತನ ಅಧ್ಯಕ್ಷರಾಗಿ ಅಧಿಕಾರವನ್ನು ಸ್ವೀಕರಿಸಿ ಮಾತನಾಡಿದ ಲಕ್ಷ್ಮಣ್ ನಾಯಕ್, ಜಿಲ್ಲೆಯ ಎಲ್ಲಾ ತಾಲೂಕುಗಳ ಭೇಟಿ ಮಾಡಿ ತಾಲೂಕುಗಳ ಅಧ್ಯಕ್ಷರನ್ನು ನೇಮಕ ಮಾಡುವುದರ ಮೂಲಕ ಜಿಲ್ಲೆಯಲ್ಲಿ ಸಂಘಟನೆ ಮಾಡಲಾಗುವುದು. ಕಳೆದ ಮೂರು ವರ್ಷಗಳ ಅವಧಿಯಲ್ಲಿ ಜಿಲ್ಲೆಯಲ್ಲಿ ತಾಂಡಗಳ ಅಭಿವೃದ್ಧಿ ಕುಂಠಿತಗೊಂಡಿದೆ. ತಾಂಡಾ ರಸ್ತೆಗಳ ಅಭಿವೃದ್ಧಿ ಆಗಿರುವುದಿಲ್ಲ, ಸಮುದಾಯ ಭವನಗಳಿಗೆ ಅನುದಾನ ನೀಡಿಲ್ಲ, ಗಂಗಾ ಕಲ್ಯಾಣ ಯೋಜನೆಯಡಿ ಬಂಜಾರ ಸಮುದಾಯಕ್ಕೆ ಅನ್ಯಾಯವಾಗಿದೆ ಎಂದರು.

ಈ ಸಂದರ್ಭದಲ್ಲಿ ಬಂಜಾರ ಸೇವಾ ಸಂಘದ ರಾಜ್ಯ ಕಾರ್ಯದರ್ಶಿ ಬಾಸು ನಾಯಕ್, ರಾಜ್ಯ ಮಹಿಳಾ ಘಟಕ ಅಧ್ಯಕ್ಷ ಶೈಲಾಬಾಯಿ, ರಾಜ್ಯ ಯುವ ಘಟಕ ಅಧ್ಯಕ್ಷ ಸುನಿಲ್ ನಾಯಕ್, ರಾಜ್ಯ ಕಾರ್ಯದರ್ಶಿ ಪುಟ್ಟ ನಾಯಕ್, ರಾಜ ನಾಯಕ್, ಮಂಜುನಾಥ್ ನಾಯಕ್, ರಘು ನಾಯಕ್, ಕಡೂರು ತಾಲೂಕ್ ನೂತನ ಅಧ್ಯಕ್ಷ ಶ್ರೀನಿವಾಸ್ ನಾಯಕ್, ಕಾರ್ಯದರ್ಶಿ ಜಯಂತ್ ನಾಯಕ್ ಮತ್ತಿತರರಿದ್ದರು.



ಟೈಲರ್ ವೃತ್ತಿ ಮಾಡುವವರ ಬದುಕು ಸಂಕಷ್ಟದಲ್ಲಿ

ಮೂಡಿಗೆರೆ : ಆಧುನಿಕ ಕಾಲಘಟ್ಟದಲ್ಲಿ ಟೈಲರ್ ವೃತ್ತಿ ಮಾಡುವವರ ಬದುಕು ಬಹಳ ಸಂಕಷ್ಟದಲ್ಲಿದೆ ಎಂದು ವಿಧಾನಸಭಾ ಉಪ ಸಭಾಪತಿ ಪ್ರಾಣೇಶ್ ಹೇಳಿದರು.

ಅವರು ಇತ್ತೀಚಿಗೆ ಬೆಳೆಗಾರರ ಸಂಘದ ಸಭಾಂಗಣದಲ್ಲಿ ನಡೆದ ತಾಲೂಕು ಟೈಲರ್ ಸಂಘದಿಂದ ಆಯೋಜಿಸಲಾಗಿದ್ದ ಟೈಲರ್ ದಿನ ಕಾರ್ಯಕ್ರಮದಲ್ಲಿ ಮಾತನಾಡಿ, ಇತ್ತೀಚಿಗೆ ಜನ ಸಾಮಾನ್ಯರು ಹೊಲಿಗೆ ಬಟ್ಟೆಯ ಕಡೆ ಆಸಕ್ತಿ ಕಡಿಮೆ ಮಾಡಿ ರೆಡಿಮೆಡ್ ಬಟ್ಟೆಗಳ ಆಕರ್ಷಣೆಯಿಂದ ಆನ್ ಲೈನ್ ಮೂಲಕ ಖರೀದಿಸುತಿರುವುದರಿಂದ ಟೈಲರ್ ವೃತ್ತಿ ಮಾಡುವರಿಗೆ ಸಮಸ್ಯೆ ಆಗುತ್ತಿದೆ. ಇದರಿಂದ ಬಡ ಕುಟುಂಬಗಳು ಸಂಕಷ್ಟವನ್ನು ಎದುರಿಸುವಂತಾಗಿದೆ. ಹೀಗೆ ಮುಂದುವರೆದರೆ ವೃತ್ತಿ ಬದುಕಿಗೆ ಸಮಸ್ಯೆ ಆಗಬಹುದು. ಆದ್ದರಿಂದ ಎಲ್ಲರೂ ಒಗ್ಗಟ್ಟಾಗಿ ಮುಂದುವರೆದು ವೃತ್ತಿಯನ್ನು ಕಾಪಾಡಿಕೊಂಡು ಹೋಗಬೇಕಾದ ಅನಿವಾರ್ಯತೆ ಇದೆ ಎಂದು ತಿಳಿಸಿದರು.

ಕಾರ್ಯಕ್ರಮದ ಉದ್ಘಾಟನೆಯನ್ನು ಬೆಳೆಗಾರರ ಸಂಘದ ಅಧ್ಯಕ್ಷರಾದ ಬಾಲಕೃಷ್ಣ ಬಾಳೂರು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಹಿರಿಯ ಟೈಲರ್ ವೃತ್ತಿಬಾಂಧವರಿಗೆ ಸನ್ಮಾನಿ ಗೌರವಿಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ನಗರ ಸಮಿತಿ ಅಧ್ಯಕ್ಷೆ ಉಮಾ ಶಂಕರು ವಹಿಸಿದ್ದರು. ಜಿಲ್ಲಾ ಸಮಿತಿ ಪ್ರಧಾನ ಕಾರ್ಯದರ್ಶಿ, ಪೂರ್ಣೇಶ್, ಕ್ಷೇತ್ರ ಸಮಿತಿ ಅಧ್ಯಕ್ಷರಾದ ಶಿವಗೌಡ್ರು ಸತೀಶ್, ಗಿರೀಶ್ , ಗೋಪಾಲ ಶೆಟ್ಟಿ , ಷಣ್ಮುಖನಂದ , ಪ್ರಕಾಶ್ ಮಂಜುಳಾ ಮಂಜು , ಎಂಎಸ್ ನಾಗರಾಜ್, ಸುರೇಶ್ ಉಪಸ್ಥಿತರಿದ್ದರು.

ವಿಧಾನ ಪರಿಷತ್ ಸದಸ್ಯ ಎಸ್.ಎಲ್. ಭೋಜೇಗೌಡ

ಮಾನ್ಯತೆ ನವೀಕರಣ ಬಗ್ಗೆ ವಾರದಲ್ಲಿ ಪರಿಹಾರ



ಚಿಕ್ಕಮಗಳೂರು: ಅನುದಾನಿತ ಮತ್ತು ಅನುದಾನ ರಹಿತ ಶಾಲೆಗಳ ಮುಖ್ಯ ಸಮಸ್ಯೆ ಯಾದ ಮಾನ್ಯತೆ ನವೀಕರಣ ವಿಚಾರವನ್ನು ಚರ್ಚಿಸಿ, ಒಂದು ವಾರದಲ್ಲಿ ರಾಜ್ಯಮಟ್ಟದಲ್ಲಿ ಪರಿಹಾರ ಕ್ರಮ ಕೈಗೊಳ್ಳಲಾಗುವುದು ಎಂದು ವಿಧಾನ ಪರಿಷತ್ ಸದಸ್ಯ ಎಸ್.ಎಲ್. ಭೋಜೇಗೌಡ ಹೇಳಿದರು.

ನಗರದ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಮಂಗಳವಾರ ಜಿಲ್ಲೆಯ ಶಿಕ್ಷಕರ ಸಭೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ನಾಡಿಗೆ ಜ್ಞಾನ ದಾಸೋಹವನ್ನು ಉಣಬಡಿಸುವ ಶಿಕ್ಷಕರು ಯಾವುದೇ ಸಮಸ್ಯೆಗಳಿಂದ ಬಳಲದಂತೆ ಸೂಕ್ತ ಕ್ರಮ ವಹಿಸಲಾಗುವುದು ಎಂದರು.

ನಗರ ಹಾಗೂ ಗ್ರಾಮೀಣ ಭಾಗದ ಶಾಲಾ ಶಿಕ್ಷಕರು 10ರಿಂದ 20 ವರ್ಷದ ಬಾಂಡ್‌ಗಳಿಗೆ ಕ್ಷೇತ್ರ ಶಿಕ್ಷಣಾಧಿಕಾರಿ ಹಾಗೂ ಡಿಡಿಪಿಐ ಕಚೇರಿಗೆ ಅಲೆಯುವುದನ್ನು ತಪ್ಪಿಸಲು ನೆರೆದಿದ್ದ ಅಧಿಕಾರಿಗಳಿಗೆ ಖಡಕ್ ಸೂಚನೆ ನೀಡುವ ಮೂಲಕ ಶಿಕ್ಷಕರಿಗೆ ತೊಂದರೆಯಾಗದಂತೆ ಕ್ರಮ ವಹಿಸಬೇಕು ಎಂದು ತಿಳಿಸಿದರು.

ಸರ್ಕಾರಿ ಕಚೇರಿಗಳಲ್ಲಿ ಶಿಕ್ಷಕರಿಗೆ ಗೌರವ ಸೂಚಿಸುವುದು ಅಧಿಕಾರಿಗಳ ಕರ್ತವ್ಯ. ಆ ನಿಟ್ಟಿನಲ್ಲಿ ಶಿಕ್ಷಕರಿಗೆ ಅಗೌರವ ತೋರುವ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುವುದು ಎಂದ ಅವರು, ಕೆಲವೊಂದು ಶಾಲೆಗಳ ಸಮಸ್ಯೆಗಳಿಗೆ ಸ್ಥಳೀಯವಾಗೇ ಸಂಬಂಧಿಸಿದ ಅಧಿಕಾರಿಗಳೊಂದಿಗೆ ಚರ್ಚಿಸಿ ಬಗೆಹರಿಸಿದರು.

> **ಸರ್ಕಾರಿ ಶಾಲೆಗಳಲ್ಲಿ ಸಿಸಿ ಕ್ಯಾಮರಾ ಅಳವಡಿಸುವ ಸಂಬಂಧ ಕೆಲ ಶಿಕ್ಷಕರ ಆಗ್ರಹದ ಮೇರೆಗೆ ಸಿಇಒ ಉತ್ತರಿಸಿ ಶಾಲಾವರಣದಲ್ಲಿ ಸಿಸಿ ಕ್ಯಾಮರಾ ಅವಶ್ಯವಾಗಿದೆ. ಇದು ಅನೈತಿಕ ಚಟುವಟಿಕೆಗಳನ್ನು ಮಟ್ಟಹಾಕಲು ಸಹಕಾರಿ. ಆದ್ದರಿಂದ ಮುಂದೆ ಈ ನಿರ್ಧಾರವನ್ನು ಕೈಗೊಂಡು ಶಾಲಾವರಣ ಸ್ವಚ್ಛತೆ ಕಾಪಾಡಲು ಶ್ರಮಿಸಲಾಗುವುದು.**
> ■ **ಹೆಚ್.ಎಸ್. ಕೀರ್ತನಾ, ಜಿಪಂ ಮುಖ್ಯ ಕಾರ್ಯನಿರ್ವಹಣಾಧಿಕಾರಿ**

ಜಿಲ್ಲಾಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹೆಚ್.ಎಸ್. ಕೀರ್ತನಾ ಮಾತನಾಡಿ ಗ್ರಾಮೀಣ ಭಾಗದಲ್ಲಿ ಕೆಲವು ಸರ್ಕಾರಿ ಶಾಲೆಗಳಲ್ಲಿ ಸ್ಥಳೀಯ ಕೆಲ ಪುಂಡರ ಮದ್ಯ ಬಾಟಲಿಗಳನ್ನು ಶಾಲಾವರಣದಲ್ಲೇ ಬಿಸಾಡಿ ಹೋಗುತ್ತಿದ್ದಾರೆ. ಈ ಬಗ್ಗೆ ಸ್ಥಳೀಯವಾಗಿ ಕ್ರಮ ಕೈಗೊಳ್ಳಲು ತೀರ್ಮಾನಿಸಲಾಗಿದೆ ಎಂದರು.

ಈ ಸಂದರ್ಭದಲ್ಲಿ ಡಿಡಿಪಿಐ ಅಭಿವೃದ್ಧಿ ವೈ.ಬಿ. ಸುಂದ್ರೇಶ್, ಆಡಳಿತ ತಿಮ್ಮರಾಜು, ಶಿಕ್ಷಣಾಧಿಕಾರಿ ನಾಗರಾಜ್, ವಿವಿಧ ಇಲಾಖೆ ಅಧಿಕಾರಿಗಳು ಹಾಗೂ ಅನುದಾನಿತ, ಅನುದಾನ ರಹಿತ ಶಾಲಾ ಮುಖ್ಯಶಿಕ್ಷಕರು ಉಪಸ್ಥಿತರಿದ್ದರು.

ಆಯುಕ್ತೆ ಡಾ. ಅರುಂಧತಿ ಚಂದ್ರಶೇಖರ್

ಪ್ರತಿದಿನವೂ ಮಹಿಳೆಯರ ಸಾಧನೆ ಗುರುತಿಸಿ

ಶಿವಮೊಗ್ಗ: ಪ್ರತಿಯೊಂದು ದಿನವೂ ಮಹಿಳೆಯರ ಸಾಧನೆಯನ್ನು ಗುರುತಿಸುವಂತಹ ದಿನವಾಗಬೇಕು ಎಂದು ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಆಯುಕ್ತೆ ಡಾ. ಅರುಂಧತಿ ಚಂದ್ರಶೇಖರ್ ಹೇಳಿದರು.

ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಹಿನ್ನೆಲೆಯಲ್ಲಿ ಭಾರತೀಯ ವೈದ್ಯಕೀಯ ಸಂಘದ ಶಿವಮೊಗ್ಗ ಮಹಿಳಾ ಘಟಕದ ವತಿಯಿಂದ ಆಯೋಜಿಸಿದ್ದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಮಾತನಾಡಿ, ಕೊಟ್ಟು ಪಡೆದುಕೊಳ್ಳೋಣ ಎಂಬ ಘೋಷ ವಾಕ್ಯದೊಂದಿಗೆ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಆಚರಿಸುತ್ತಿದ್ದೇವೆ. ಮಹಿಳೆಯರಿಗೆ ಗೌರವ, ಅವಕಾಶ, ಧ್ವನಿ ಮತ್ತು ಸುರಕ್ಷತೆ ಕೊಡಬೇಕಿದೆ. ಜಾಸ್ತಿ ಕೊಟ್ಟಷ್ಟು ನಮ್ಮ ಸಮಾಜ ಪಡೆದುಕೊಳ್ಳುವುದು ಹೆಚ್ಚುತ್ತದೆ ಎಂದು ತಿಳಿಸಿದರು.

ಭಾರತೀಯ ವೈದ್ಯಕೀಯ ಸಂಘದಂತಹ ಸಂಸ್ಥೆಗಳು ಮತ್ತು ಎಲ್ಲ ವೈದ್ಯರು, ಮಹಿಳೆಯರ ಆರೋಗ್ಯದ ವಿಷಯಕ್ಕೆ ಮತ್ತಷ್ಟು ಕೊಡುಗೆ ನೀಡಲು ಸಾಧ್ಯವಿದೆ. ಕೌಟುಂಬಿಕ ದೌರ್ಜನ್ಯ ಅನುಭವಿಸುವ ಮಹಿಳೆಯರು ಸಹಾಯಕ್ಕಾಗಿ ಮೊದಲು ಧಾವಿಸುವುದೇ ವೈದ್ಯರ ಬಳಿಗೆ. ಇವರಿಗೆ ನೆರವನ್ನು ಸಕಾಲಕ್ಕೆ ನೀಡುವುದು ವೈದ್ಯರಾದ ಎಲ್ಲರ ಕರ್ತವ್ಯ ಎಂದರು.

ಭಾರತದಲ್ಲಿ ಮಹಿಳೆಯರು ಗ್ರಾಮೀಣ ಮಟ್ಟದಲ್ಲಿ ಸಮಾಜದ ಅಭಿವೃದ್ಧಿಯಲ್ಲಿ ಮಹತ್ವದ ಪಾತ್ರ ವಹಿಸುತ್ತಿದ್ದಾರೆ. ಅದರ ಅತ್ಯುತ್ತಮ



ಉದಾಹರಣೆ ಆಶಾ ಕಾರ್ಯಕರ್ತೆಯರು. ಇವರು ಗ್ರಾಮ ಮತ್ತು ಆರೋಗ್ಯ ವ್ಯವಸ್ಥೆಯ ನಡುವಿನ ಸೇತುವೆಯಾಗಿ ಕಾರ್ಯನಿರ್ವಹಿಸುತ್ತಾರೆ. ಆಶಾ ಕಾರ್ಯಕರ್ತೆಯರು ಗ್ರಾಮೀಣ ಸಮುದಾಯದಲ್ಲಿ ಆರೋಗ್ಯ ಸುಧಾರಣೆಗೆ ಮಾತ್ರವಲ್ಲದೆ ಮಹಿಳಾ ಸಬಲೀಕರಣಕ್ಕೂ ಸಹಕಾರಿಯಾಗಿದ್ದಾರೆ. ಅವರ ಪರಿಶ್ರಮದಿಂದ ಗ್ರಾಮಗಳಲ್ಲಿ ಆರೋಗ್ಯ ಜಾಗೃತಿ ಮತ್ತು ಸಮುದಾಯದ ಭಾಗವಹಿಸುವಿಕೆ ಹೆಚ್ಚಾಗಿದೆ ಎಂದು ತಿಳಿಸಿದರು.

ವೈದ್ಯರಾಗಿದ್ದ ನನ್ನ ಪಾಲಕರು ಮೆಗ್ಗಾನ್ ಆಸ್ಪತ್ರೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದರು ಎಂಬುದು ಹೆಮ್ಮೆಯ ಸಂಗತಿ. ಭಾರತೀಯ ಆಡಳಿತ ಸೇವೆಯಲ್ಲಿ ಮಹಿಳೆಯರ ಸಮಾನತೆಗೆ ಯಶಸ್ವಿಯಾಗಿ ಹೋರಾಡಿದ ಯುಪಿಎಸ್‌ಸಿ ಪರೀಕ್ಷೆಯಲ್ಲಿ ತೇರ್ಗಡೆಯಾದ ಪ್ರಥಮ ಮಹಿಳೆ ಸಿ.ಬಿ.ಮುತ್ತಮ್ಮ ಅವರ ಕೊಡುಗೆ ಸ್ಮರಿಸಿದರು.

ಐಎಂಎ ಮಹಿಳಾ ಸದಸ್ಯರಾದ ಡಾ.ರಕ್ಷಾ ರಾವ್, ಡಾ.ವಿದ್ಯಾ ರಮೇಶ್ ಮತ್ತು ಡಾ.ಅಖಿಲಾ ಅವರಿಂದ ಚಾರಣ, ಕ್ರೀಡೆ, ಹಣಕಾಸು ವಿಷಯಗಳ ಬಗ್ಗೆ ಪ್ರಸ್ತುತಿ, ಕನ್ನಡ, ಹಿಂದಿ ಸಿನಿ ತಾರೆಯರ ಶೈಲಿ ಅನುಕರಿಸಿ ಅವರನ್ನು ವೇದಿಕೆಯ ಮೇಲೆ ಮರುಕಲ್ಪಿಸಲಾಯಿತು.

ಐನಬೈಲು ಪರಮೇಶ್ವರ ಹೆಗಡೆ ಅವರ ನಿರ್ದೇಶನದಲ್ಲಿ ಶತಗಜಾತ್ರಾಣಿ ಯಕ್ಷಗಾನ ಪ್ರಸಂಗವನ್ನು ಮಹಿಳಾ ಸದಸ್ಯೆಯರು ಅಭಿನಯಿಸಿದರು.

ಐಎಂಎ ಶಿವಮೊಗ್ಗ ಶಾಖೆ ಅಧ್ಯಕ್ಷ ಡಾ ಕೆ.ಆರ್.ರವೀಶ್, ಕಾರ್ಯದರ್ಶಿ ಡಾ. ಕೆ.ಎಸ್.ಶುಭ್ರತಾ, ಖಜಾಂಚಿ ಡಾ. ಎಚ್.ಎಲ್.ಶಶಿಧರ್, ಮಹಿಳಾ ಘಟಕದ ಅಧ್ಯಕ್ಷೆ ಡಾ.ಕೌಸ್ತುಭಾ ಅರುಣ್, ಕಾರ್ಯದರ್ಶಿ ಡಾ. ಶ್ವೇತಾ ಬಾದಾಮಿ, ಕುಟುಂಬ ವರ್ಗದವರು ಉಪಸ್ಥಿತರಿದ್ದರು.

ಸಾಹಿತ್ಯ ಹುಣ್ಣಿಮೆ ಕಾರ್ಯಕ್ರಮ

ಶಿವಮೊಗ್ಗ: ಸಾಹಿತ್ಯ ಹುಣ್ಣಿಮೆ ಕಾರ್ಯಕ್ರಮದ ಮೂಲಕ ಮನಸ್ಸುಗಳನ್ನು ಕಟ್ಟುವ ಕೆಲಸ ಮಾಡಲಾಗುತ್ತಿದೆ. ಪ್ರತಿಭಾನ್ವೇಷಣೆಗೆ ಸದಾ ಒತ್ತು ನೀಡಲಿದೆ ಎಂದು ಜಿಲ್ಲಾ ಕನ್ನಡ ಸಾಹಿತ್ಯ ಸಾಂಸ್ಕೃತಿಕ ವೇದಿಕೆ ಅಧ್ಯಕ್ಷ ಡಿ.ಮಂಜುನಾಥ ಹೇಳಿದರು.

ಜಿಲ್ಲಾ ಕನ್ನಡ ಸಾಹಿತ್ಯ ಸಾಂಸ್ಕೃತಿಕ ವೇದಿಕೆ ವತಿಯಿಂದ ಪೋಲಿಸ್ ಲೇಔಟ್ ನಿವಾಸಿಗಳ ಸಂಘದ ಸಹಯೋಗದಲ್ಲಿ ಏರ್ಪಡಿಸಿದ್ದ ಸಾಹಿತ್ಯ ಹುಣ್ಣಿಮೆ 247 ನೇ ತಿಂಗಳ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಸಾವಿರಾರು ಪ್ರತಿಭೆಗಳನ್ನು ಗುರುತಿಸಿ ಪ್ರೋತ್ಸಾಹ ನೀಡುತ್ತಿ ದ್ದೇವೆ. ಹೊಸ ತಲೆಮಾರಿಗೆ ಸಾಹಿತ್ಯ, ಸಂಸ್ಕೃತಿಯ ಆವರಣದಲ್ಲಿ ತರುವ ಪ್ರಯತ್ನ ಮಾಡುತ್ತಿದ್ದೇವೆ. ಬೇಡವಾ ದ ವಿಚಾರಗಳಲ್ಲಿ ತೋರುವ ಆಸಕ್ತಿ ಯಿಂದ ಹೊರತರಲು ಸಮಾಜದ ಜವಾಬ್ದಾರಿ ಬಹಳವಿದೆ ಎಂದರು.

ಯುವ ಸಮೂಹದ ಆಸಕ್ತಿ ಸಾಮಾಜಿಕ ಬದುಕಿನ ನೈತಿಕ ಪ್ರಜ್ಞೆಗೆ ಸವಾಲಾಗಿ ರೂಪಗೊಳ್ಳುವುದು ಸರಿಯಲ್ಲ. ಅಪಾಯದ ಅರಿವನ್ನು ನಿಷ್ಠೂರ ಕ್ರಮಗಳಿಂದ ಹತ್ತಿಕ್ಕುವ ವ್ಯವಸ್ಥೆ ಆಚೆ ನಿಂತು ಯೋಚಿಸುವ ಅಗತ್ಯವನ್ನು ವಿವರಿಸಿದರು.

ಪೋಲಿಸ್ ಲೇಔಟ್ ನಿವಾಸಿಗಳ ಸಂಘದ ಅಧ್ಯಕ್ಷ ಕುಪ್ಪಯ್ಯ ಮಾತನಾಡಿ, ಕನ್ನಡದ ಕಾರ್ಯ ಕ್ರಮಗಳು, ನಮ್ಮ ಮನೆಯ ಕಾರ್ಯಕ್ರಮ. ನಮ್ಮ ಮಕ್ಕಳಿಗೆ ನಾವು ಸರಿಯಾದ ಸೃಜನಶೀಲ ಅಡಿಪಾಯ ಹಾಕುತ್ತಿಲ್ಲ. ಸರಿಯಾಗಿ ಬೆಳೆಸುತ್ತಿಲ್ಲ . ನಾವೆಲ್ಲ ಓದುತ್ತಿದ್ದ ಸ್ಥಿತಿ ಇವತ್ತಿಲ್ಲ. ಆದರೆ ಎಲ್ಲಾ ಅನುಕೂಲಗಳ ನಡುವೆ ಸರಿಯಾದ ವ್ಯಕ್ತಿತ್ವ ರೂಪಿಸು ವಲ್ಲಿ ಸೋಲುತ್ತಿರುವುದನ್ನು ವಿವರಿಸಿದರು.

ಸುಜಾತಾ ತಂಡದವರು ಭಜನೆ ಹಾಡಿದರು. ಗಾಯಕಿ ಪ್ರಿಯಾಂಕಾ ನಿವೃತ್ತ ಅರಣ್ಯಾಧಿಕಾರಿ ಅಣ್ಣಪ್ಪ, ರೋಹಿತ್ ಗಾಯನ ಕಾರ್ಯಕ್ರಮ ನಡೆಸಿಕೊಟ್ಟರು. ತೀರ್ಥಹಳ್ಳಿಯ ನಿಶ್ಚಲ್ ಜಾದೂಗಾರ್ ಜಾದೂ ಕಾರ್ಯಕ್ರಮ ನಡೆಸಿದರು. ಖಾಕಿ ಮಂಜುನಾಥ, ಭಾರತಿ ಎಚ್.ಡಿ, ಮಂಜುಳಾ ಕವನ ವಾಚಿಸಿದರು. ವೇದಿಕೆ ಪ್ರಧಾನ ಕಾರ್ಯದರ್ಶಿ ಮಂಜಪ್ಪ ನಿರೂಪಿಸಿ, ಬೈರಾಪುರ ಶಿವಪ್ಪಗೌಡ ಸ್ವಾಗತಿಸಿದರು.



ಪ್ರವೇಶ ಪರೀಕ್ಷೆ

ಚಿಕ್ಕಮಗಳೂರು: ಸಮಾಜ ಕಲ್ಯಾಣ ಇಲಾಖಾ ವತಿಯಿಂದ ಶಿಫಾರಸ್ಸು ಮಾಡಲ್ಪಡುವ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದವರ ಹಾಗೂ ಅನೈರ್ಮಲ್ಯಕರ ವೃತ್ತಿಗಳಲ್ಲಿ ತೊಡಗಿರುವ ಪೋಷಕರ ಪ್ರತಿಭಾವಂತ ಗಂಡು ಮಕ್ಕಳನ್ನು 2026-27ರ ಸಾಲಿನಲ್ಲಿ 8ನೇ ತರಗತಿಗೆ ಸೇರಿಸಲು ಆಯ್ಕೆಯ ಪ್ರವೇಶ ಪರೀಕ್ಷೆಯನ್ನು ಏಪ್ರಿಲ್ 15 ರಂದು ಬೆಳಗ್ಗೆ 10 ಗಂಟೆಗೆ ಮೈಸೂರು ಯಾದವಗಿರಿಯ ಶ್ರೀ ರಾಮಕೃಷ್ಣ ವಿದ್ಯಾಶಾಲಾದಲ್ಲಿ ನಡೆಸಲಾಗುವುದು.

ಪರಿಶಿಷ್ಟ ಜಾತಿ (ಅನೈರ್ಮಲ್ಯಕರ ವೃತ್ತಿಗಳಲ್ಲಿ ತೊಡಗಿರುವ ಪೋಷಕರ ವರ್ಗವೂ ಸೇರಿದಂತೆ) ಮೂವರು ಹಾಗೂ ಪರಿಶಿಷ್ಟ ವರ್ಗದವರ (ಅಲೆಮಾರಿ, ಅರೆ ಅಲೆಮಾರಿ, ಸೂಕ್ಷ್ಮ ಹಾಗೂ ಅತಿ ಸೂಕ್ಷ್ಮ ಸಮುದಾಯದವೂ ಸೇರಿದಂತೆ) ಮೂವರು ಆಸಕ್ತ ಪ್ರತಿಭಾವಂತ ವಿದ್ಯಾರ್ಥಿಗಳು ಅಗತ್ಯ ದಾಖಲಾತಿಗಳೊಂದಿಗೆ ಮಾರ್ಚ್ 25ರ ಸಂಜೆ 5 ಗಂಟೆಯೊಳಗೆ ಸಹಾಯಕ ನಿರ್ದೇಶಕರು ಗ್ರೇಡ್-1 2, ತಾಲ್ಲೂಕು ಸಮಾಜ ಕಲ್ಯಾಣ ಇಲಾಖೆ, ಚಿಕ್ಕಮಗಳೂರು. ಈ ಕಚೇರಿಗೆ ನೀಡುವಂತೆ ಸೂಚಿಸಿದೆ. ಅರ್ಜಿ ಹಾಗೂ ಹೆಚ್ಚಿನ ಮಾಹಿತಿಗೆ ತಾಲ್ಲೂಕು ಸಮಾಜ ಕಲ್ಯಾಣ ಇಲಾಖೆ (ಗ್ರೇಡ್-1 2)ಯ ಸಹಾಯಕ ನಿರ್ದೇಶಕರನ್ನು ಸಂಪರ್ಕಿಸಬಹುದು.

ಸೀರೆ ನೀಡುವ ಬದಲು ಗೌರವ ಧನ ಹೆಚ್ಚಿಸಿ

ಚಿಕ್ಕಮಗಳೂರು: ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರಿಗೆ ಸೀರೆ ನೀಡುವ ಬದಲು, 15000 ರೂ.ಗಳ ಗೌರವಧನ ಹೆಚ್ಚಿಸಬೇಕು ಎಂದು ಒತ್ತಾಯಿಸಿ ಎಐಟಿಯುಸಿ ಪದಾಧಿಕಾರಿಗಳು ಮಂಗಳವಾರ ಜಿಲ್ಲಾಡಳಿತ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿದರು.

ಈ ವೇಳೆ ಎಐಟಿಯುಸಿ ಜಿಲ್ಲಾಧ್ಯಕ್ಷೆ ಗ್ರೇಟ್ಟಾ ಫರ್ನಾಂಡೀಸ್ ಮಾತನಾಡಿ, ರಾಜ್ಯ ಸರ್ಕಾರ ಮಂಡಿಸಿರುವ ಬಜೆಟ್‌ನಲ್ಲಿ ಅಂಗನವಾಡಿ ಕಾರ್ಯಕರ್ತೆಯರು, ಸಹಾಯಕಿಯರ ಗೌರವಧನ ಹೆಚ್ಚಿಸದೇ ನಿರಾಸೆಯುನ್ನುಂಟು ಮಾಡಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ರಾಜ್ಯ ಸರ್ಕಾರ ಅಧಿಕಾರಕ್ಕೆ ಬರುವ ಪೂರ್ವದಲ್ಲಿ ಚುನಾವಣಾ ಪ್ರಣಾಳಿಕೆಯ ಭರವಸೆಯಂತೆ ಆರನೇ ಗ್ಯಾರಂಟಿಯಾಗಿ ಪ್ರಿಯಾಂಕಾ ಗಾಂಧಿ ಘೋಷಿಸಿರುವಂತೆ ಅಂಗನವಾಡಿ, ಬಿಸಿಯೂಟ, ಆಶಾ ಕಾರ್ಯಕರ್ತೆ ಅವರಿಗೆ ಗೌರವಧನ ಹೆಚ್ಚಿಸುವ ಪ್ರಸ್ತಾವನೆ ಮಾಡಿದ್ದರು ಎಂದರು.

ಸರ್ಕಾರ ಬಂದು ಮೂರು ವರ್ಷಗಳು ಕಳೆದರೂ ಕಾರ್ಯಕರ್ತೆಯರ ಗೌರವಧನ ಹೆಚ್ಚಿಸುವ ಮತ್ತು ಇಡುಗಂಟು ನೀಡುವ ಭರವಸೆ ಈಡೇರಿಸಿಲ್ಲ. ಹಿಂದಿನ ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ ನೇತೃತ್ವದ ಬಿಜೆಪಿ ಸರ್ಕಾರ ತನ್ನ ಕೊನೆಯ ಬಜೆಟ್‌ನಲ್ಲಿ ಸಾವಿರ ರೂ. ಹೆಚ್ಚಿಸುವುದಾಗಿ ಘೋಷಿಸಿತು. ಆದರೆ ಈ ಘೋಷಣೆ ಅನುಷ್ಠಾನಕ್ಕೆ ಬಂದಿಲ್ಲ. ಈಗಿನ ಸರ್ಕಾರವು ಬಜೆಟ್‌ನಲ್ಲಿ ಒಂದು ರೂ. ಗೌರವ ಹೆಚ್ಚಿಸಿಲ್ಲ ಎಂದು ತಿಳಿಸಿದರು.

ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪುಷ್ಪ ಬಸವರಾಜ್ ಮಾತನಾಡಿ, 2011ನೇ ಸಾಲಿನಿಂದ ಅಂಗನವಾಡಿಗಳಲ್ಲಿ ದುಡಿದು ನಿವೃತ್ತರಾಗಿರುವ ವಯೋವೃದ್ಧ



ಕಾರ್ಯಕರ್ತೆಯರು ಮತ್ತು ಸಹಾಯಕಿಯರಿಗೆ ಗ್ರಾಚ್ಯುಟಿ ಸೌಲಭ್ಯ ಜಾರಿ ಮಾಡಿಲ್ಲ, ಆನಂತರ ನಿವೃತ್ತಿಯಾದವರಿಗೆ ಅನ್ವಯವಾಗುವಂತೆ ಗ್ರಾಚ್ಯುಟಿ ಜಾರಿಗೊಳಿಸುತ್ತೀರಿ. ಇದರಿಂದಾಗಿ ಸುಮಾರು 15ರಿಂದ 20 ಸಾವಿರದಷ್ಟು ನಿವೃತ್ತ ವಯೋವೃದ್ಧ ಕಾರ್ಯಕರ್ತೆಯರು, ಸಹಾಯಕರಿಗೆ ಬದ್ಧ ಗ್ರಾಚ್ಯುಟಿ ಸೌಲಭ್ಯ ಒದಗಿಸಬೇಕು ಎಂದರು.

ಎಐಟಿಯುಸಿ ಕಾರ್ಯಕರ್ತೆಯರ ಶ್ರಮಕ್ಕೆ ತಕ್ಕ ಪ್ರತಿಫಲ ನೀಡುವ ಸಂಭಾವನೆಯನ್ನು ಹೆಚ್ಚಳ ಮಾಡದೇ ಸೀರೆಯನ್ನು ನೀಡುವುದಾಗಿ ಘೋಷಿಸುವ ಮೂಲಕ ನಮ್ಮ ದುಡಿಮೆಗೆ ತಕ್ಕ ಪ್ರತಿಫಲ ನೀಡುತ್ತಿಲ್ಲ. ಮಹಿಳಾ ಕಾರ್ಮಿಕರಿಗೆ ಕನಿಷ್ಟ ವೇತನದ ನಿರಾಕರಣೆ ಮಾಡಿದಂತಾಗಿದೆ. ಕೂಡಲೇ ಮುಖ್ಯಮಂತ್ರಿಗಳು ಸೀರೆ ನೀಡುವ ಬದಲು, ಅನುದಾನದಲ್ಲಿ ಗೌರವಧನವಾಗಿ ಹೆಚ್ಚಿಸಬೇಕು ಎಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಎಐಟಿಯುಸಿ ತಾಲೂಕು ಅಧ್ಯಕ್ಷೆ ಶೈಲಾ ಬಸವರಾಜ್, ಕಡೂರು ಅಧ್ಯಕ್ಷೆ ಪಾರ್ವತಿ, ಮೂಡಿಗೆರೆ ಅಧ್ಯಕ್ಷೆ ಕೆ.ಆರ್. ಶೈಲಾ, ಸದಸ್ಯರಾದ ವಸಂತ ಧರ್ಮೇಗೌಡ, ವನಜಾಕ್ಷಿ, ದೀಪಿಕಾ, ಸುಖನ್ಯ ಮತ್ತಿತರರು ಹಾಜರಿದ್ದರು.

ಅಕ್ಕಮಹಾದೇವಿ ಮಹಿಳಾ ವಿವಿ ಎಮಿರೇಟ್ಸ್ ಪ್ರಾಧ್ಯಾಪಕಿ ಡಾ. ವಿಜಯದೇವಿ

ಆಧುನಿಕತೆಯಲ್ಲಿ ಕಥೆಗಳ ಕಣ್ಮರೆಯಾಗುವುದು ದುರಂತ

ಶಿವಮೊಗ್ಗ: ಆಧುನಿಕತೆಯಲ್ಲಿ ಕಥೆಗಳು ಕಣ್ಮರೆಯಾಗುತ್ತಿರುವುದು ದುರಂತಕ್ಕೆ ಕಾರಣವಾಗುತ್ತಿದೆ ಎಂದು ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ಎಮಿರೇಟ್ಸ್ ಪ್ರಾಧ್ಯಾಪಕಿ ಡಾ. ವಿಜಯ ದೇವಿ ಹೇಳಿದರು.

ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಆವರಣದಲ್ಲಿ ಭದ್ರಾವತಿ ಆಕಾಶವಾಣಿ ಕೇಂದ್ರದ ಕೇಳುಗರ ಬಳಗ, ರೇಣುಕಪ್ಪ ಗೌಡ ಪ್ರತಿಷ್ಠಾನ, ಜಿಲ್ಲಾ ಸರ್ವೋದಯ ಮಂಡಲ, ಕಾಲೇಜಿನ ಕನ್ನಡ ವಿಭಾಗ, ಸಾಂಸ್ಕೃತಿಕ ವೇದಿಕೆ ಸಹಯೋಗದಲ್ಲಿ ಆರ್‌ಜೆ ಗಣೇಶ್ ಕೆಂಚನಾಲ್ ಅವರ ಬಾನುಲಿಯಿಂದ ಕಥೆ ನಿಮ್ಮ ಜೊತೆ ಪುಸ್ತಕವನ್ನು ಆಕಾಶವಾಣಿ ಕೇಳುಗರೊಂದಿಗೆ ಬಿಡುಗಡೆ ಮಾಡಿ ಮಾತನಾಡಿದರು.

ಜಗತ್ತಿನಲ್ಲಿ ಜೀವಂತಿಕೆ ಉಳಿದುಕೊಂಡಿರುವುದು ಸೃಜನಶೀಲತೆಯ ಕಾರಣದಿಂದ. ಸಾಹಿತ್ಯದ ಮೂಲ ದ್ರವ್ಯ ಗ್ರಾಮೀಣ ಬದುಕಿನಲ್ಲಿದೆ. ಅಂತಹ ಗ್ರಾಮೀಣ ಬದುಕಿನ ಸತ್ವವು ಈ ಕತೆ ಪುಸ್ತಕದಲ್ಲಿದೆ. ನೈತಿಕ ಮೌಲ್ಯಗಳ ಅಂತಃ ಸತ್ವವವನ್ನು ಕತೆಗಳ ಮೂಲಕ ಬಿತ್ತರಿಸುವುದು ಅಗತ್ಯವಾಗಿದೆ ಎಂದರು.

ಬರಹ ಕೇವಲ ಸಂತಸ ನೀಡುವುದಲ್ಲ, ಬದಲಿಗೆ ವೈಯಕ್ತಿಕ ಜವಾಬ್ದಾರಿ ಮತ್ತು ಸಾಮಾಜಿಕ ಹೊಣೆಗಾರಿಕೆಯನ್ನು ಕಲಿಸುತ್ತದೆ. ವೃತ್ತಿ ಮೂಲಕ ಸಮಾಜದ ಆರೋಗ್ಯವನ್ನು ಬಯಸುವ ಆಶಯ ಬಹಳ ಮುಖ್ಯ. ಕೃತಿಯೊಂದು ಸಮಾಜದ ಮಾನವೀಯ ಮೌಲ್ಯಗಳನ್ನು ಬೆಳೆಸಿದರೆ ಅದಕ್ಕಿಂತಲೂ ಬೇರೆ ಯಾವುದೂ ಇಲ್ಲ. ಓದುವ ಜಗತ್ತಿನಲ್ಲಿ ಬುದ್ದಿವಂತಿಕೆ ಮತ್ತು ಮಾನವೀಯತೆಗಳು ಮುಖ್ಯವಾಗುತ್ತವೆ ಎಂದರು.

ಖ್ಯಾತ ಮನೋವೈದ್ಯೆ ಕೆ.ಎಸ್ ಪವಿತ್ರ ಮಾತನಾಡಿ, ಜನಪದರ ಕತೆಗಳು ಮಾನಸಿಕ ಮತ್ತು ಸಾಮಾಜಿಕ ಆರೋಗ್ಯಕ್ಕೆ ಪೂರಕವಾದುದು. ಕೇಳುವ ಮೂಲಕ ಹೊಸದೊಂದು ಸನ್ನಿವೇಶ ತಂದು ಹೇಳಬಹುದು. ಆದರೆ ಬರಹ ಸವಾಲಿನದು. ಅದನ್ನು ಗಣೇಶ ಕೆಂಚನಾಲ ಕೇಳುಗರ ಮೂಲಕ ಸಾಧ್ಯವಾಗಿಸಿದ್ದಾರೆ ಎಂದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಡಾ. ಗಣೇಶ ಕೆಂಚನಾಲ, ಕಥೆ ಕಟ್ಟುವ ಕಾರ್ಯಕ್ರಮ ಆಕಾಶವಾಣಿ ಕೇಂದ್ರದಿಂದ 2023 ರಿಂದ ಆರಂಭವಾಯಿತು. ಈವರೆಗೆ ಸುಮಾರು ನೂರು ಕತೆಗಳು ಬಿತ್ತರಗೊಂಡಿವೆ. ಎಲ್ಲವೂ ಪುಸ್ತಕ ರೂಪದಲ್ಲಿ ತರಲಾಗುವುದು. ಕಥೆಗಳು ಸ್ವಾಸ್ಥ್ಯ ಸಮಾಜವನ್ನು ನಿರ್ಮಿಸುತ್ತವೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪ್ರಾಂಶುಪಾಲ ಶಶಿಧರ.ಎಸ್ ವಹಿಸಿದ್ದರು. ಕುವೆಂಪು ವಿಶ್ವವಿದ್ಯಾಲಯದ ವಿಶ್ರಾಂತ ಪ್ರಾಧ್ಯಾಪಕ ಬಸವರಾಜ ನೆಲ್ಲಿಸರ, ಕೇಳುಗ ಬಳಗದ ಸಂಚಾಲಕ ವಿಜಯಕುಮಾರ, ಆರ್ ಮನೋಹರ, ಕನ್ನಡ ವಿಭಾಗದ ಮುಖ್ಯಸ್ಥ ರವಿ ಎನ್., ಪ್ರಾಧ್ಯಾಪಕರಾದ ಕೆ.ಪಿ.ಪವಿತ್ರ, ಡಾ.ಚಿಕ್ಕ ಹೆಗಡೆ, ಮಂಜುಳ, ಶ್ವೇತ ಉಪಸ್ಥಿತಿ ಇದ್ದರು. ನಂದಿನಿ ನಿರೂಪಿಸಿ, ಡಾ.ಮಂಜುನಾಥ ಪ್ರಾರ್ಥಿಸಿ, ಡಾ.ಅಣ್ಣಪ್ಪ ಎನ್. ಮಳೀಮಠ್ ವಂದಿಸಿದರು.

ಒಳಮೀಸಲಾತಿ ಜಾರಿಯಾಗದೆ ಹುದ್ದೆ ಭರ್ತಿ ಬೇಡ

ಶಿವಮೊಗ್ಗ : ಒಳಮೀಸಲಾತಿ ಜಾರಿ ಮಾಡದೆ ಸರ್ಕಾರಿ ಹುದ್ದೆಗಳ ಭರ್ತಿ ಮಾಡಬಾರದು ಎಂದು ಆಗ್ರಹಿಸಿ ಒಳಮೀಸಲಾತಿ ಹೋರಾಟ ಸಮಿತಿ ವತಿಯಿಂದ ಮಹಾವೀರ ವೃತ್ತದ ಬಳಿ ಮಂಗಳವಾರ ರಸ್ತೆ ತಡೆ ನಡೆಸಿ, ಮಾನವ ಸರಪಳಿ ನಿರ್ಮಿಸಿ ನಂತರ ಜಿಲ್ಲಾಧಿಕಾರಿಗಳ ಕಛೇರಿಗೆ ತೆರಳಿ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿದರು.

ಮಾ.16ರಂದು ನಡೆದ ಸಚಿವ ಸಂಪುಟ ತೀರ್ಮಾನದಂತೆ ಒಳಮೀಸಲಾತಿ ಅನ್ವಯವಾಗದಂತೆ 56 ಸಾವಿರಕ್ಕೂ ಹೆಚ್ಚು ಸರ್ಕಾರಿ ಹುದ್ದೆಗಳನ್ನು ಭರ್ತಿ ಮಾಡುತ್ತೇವೆ ಎಂಬುದು ಸಾಮಾಜಿಕ ನ್ಯಾಯಕ್ಕೆ ಬಗೆದ ಘೋರ ಅನ್ಯಾಯವಾಗಿದೆ. ಒಳಮೀಸಲಾತಿ ವಿಧೇಯಕವು ರಾಜ್ಯಪಾಲರ ಸಹಿ ಪಡೆದು, ಅನುಮೋದನೆಗೊಂಡಿರುವ ಈ ಸಂದರ್ಭದಲ್ಲಿ ಸಚಿವ ಸಂಪುಟದ ತೀರ್ಮಾನ ಸರಿಯಲ್ಲ. ಅಲ್ಲದೇ ಚುನಾವಣಾ ಪೂರ್ವದಲ್ಲಿಯೇ ಕಾಂಗ್ರೆಸ್ ಸರ್ಕಾರ ಒಳ ಮೀಸಲಾತಿ ಜಾರಿಗೊಳಿಸುತ್ತೇವೆ ಎಂದು ಪ್ರಣಾಳಿಕೆಯಲ್ಲೇ ಹೇಳಿತ್ತು. ಈಗ ಮಾತಿಗೆ ತಪ್ಪಿ 56 ಸಾವಿರ ಹುದ್ದೆಗಳನ್ನು ಒಳ ಮೀಸಲಾತಿ ಕಲ್ಪಿಸದೇ ಭರ್ತಿಮಾಡಲು ಹೊರಟಿರುವುದು ಸರಿಯಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಒಳಮೀಸಲಾತಿ ತಪ್ಪಿಸುವ ಹುನ್ನಾರದಿಂದ ತರಾತುರಿಯಲ್ಲಿ ಹೊರಡಿಸಿರುವ ನೇಮಕಾತಿ ಆದೇಶವನ್ನು ತಕ್ಷಣ ಹಿಂಪಡೆಯಬೇಕು. ಅಲ್ಲದೆ ಮೀಸಲಾತಿ ಹೆಚ್ಚಿಸಲು ಮತ್ತು ನ್ಯಾಯಾಂಗದ ಸವಾಲುಗಳಿಂದ ರಕ್ಷಿಸಲು ರಾಜ್ಯದ ಶೇ.56ರಷ್ಟು ಮೀಸಲಾತಿ ಸಂರಕ್ಷಣೆಗಾಗಿ ಕೇಂದ್ರ ಸರ್ಕಾರಕ್ಕೆ ಸರ್ವಪಕ್ಷಗಳ ನಿಯೋಗದ ಮೂಲಕ ಮನವರಿಕೆ ಮಾಡಿಕೊಡಬೇಕು ಎಂದು ಒತ್ತಾಯಿಸಿದರು.

ಅಲೆಮಾರಿ ಸಮುದಾಯಗಳಿಗೆ ಶೇ.1ರಷ್ಟು ಪ್ರತ್ಯೇಕ ಮೀಸಲಾತಿ ನೀಡಬೇಕು. ಪಕ್ಷಪಾತಿಯಾಗಿ ನಡೆದುಕೊಳ್ಳುತ್ತಿರುವ ಸಮಾಜ ಕಲ್ಯಾಣ ಇಲಾಖೆ ಸಚಿವರನ್ನು ಬದಲಾವಣೆ ಮಾಡಬೇಕು. ಮಹಾನಗರ ಪಾಲಿಕೆಗಳಲ್ಲಿ ಇರುವ ಗುತ್ತಿಗೆ ಪದ್ಧತಿಯನ್ನು ರದ್ದು ಮಾಡಬೇಕು ಮತ್ತು ಅಲ್ಲಿರುವ ಹೊರಗುತ್ತಿಗೆ ಕಾರ್ಮಿಕರನ್ನು ಖಾಯಂಗೊಳಿಸಬೇಕು ಎಂದು ಆಗ್ರಹಿಸಿದರು.

ಪ್ರಮುಖರಾದ ಭಾನುಪ್ರಸಾದ್, ಮೂರ್ತಿ ಸಿ., ರವಿಪ್ರಸಾದ್, ಮಧುಸೂದನ್, ಕಿರಣ್ ಕುಮಾರ್, ರಂಗನಾಥ್, ಶಿವಲಿಂಗಪ್ಪ, ಕನ್ನೇಶಪ್ಪ, ಅಣ್ಣಪ್ಪ, ಸುರೇಶ್, ಮಲ್ಲೇಶ್, ಮೋಹನ್, ಸೇರಿದಂತೆ ಹಲವರಿದ್ದರು.



ಐಟಿಎಫ್ ಟೆನಿಸ್ ಟೂರ್ನಿ ಸಿಂಗಲ್ಸ್, ಡಬಲ್ಸ್ ಫೈನಲ್ ಗೆದ್ದ ಬಳಿಕ ಹೊಸ ದಿಗಂತದೊಂದಿಗೆ ವೈಷ್ಣವಿ ಅಡ್ಕರ್ ಮಾತು

ವೈಷ್ಣವಿ ಅಡ್ಕರ್‌ಗೆ ಜೋಡಿ ಕಿರೀಟದ ಖುಷಿ

▸ ರಾಚಪ್ಪಾ ಜಂಬಗಿ

ಕಲಬುರಗಿ: ಬಿಸಿಲು ನಾಡು ಕಲಬುರಗಿಯಲ್ಲಿ ಆಯೋಜಿಸಿದ್ದ ಐಟಿಎಫ್ ಡಬ್ಲ್ಯು 35 ಮಹಿಳಾ ಓಪನ್ ಟೆನಿಸ್ ಟೂರ್ನಿಯ ಸಿಂಗಲ್ಸ್ ಹಾಗೂ ಡಬಲ್ಸ್ ವಿಭಾಗಗಳಲ್ಲಿ ಚಾಂಪಿಯನ್ ಪಟ್ಟ ಗೆದ್ದು ಗಮನ ಸೆಳೆದ ಭಾರತದ ಉದಯೋನ್ಮುಖ ಆಟಗಾರ್ತಿ ವೈಷ್ಣವಿ ಅಡ್ಕರ್, ಅನುಭವಿ ಭಾರತೀಯ ಆಟಗಾರ್ತಿ ಅಂಕಿತಾ ವಿರುದ್ಧದ ಜಯವನ್ನು ಹೆಮ್ಮೆಯ ಕ್ಷಣವೆಂದು ಬಣ್ಣಿಸಿದರು. ತಮ್ಮ ಗೆಲುವಿನ ಯಶಸ್ಸಿನ ಹಿಂದಿನ ಪರಿಶ್ರಮ, ಪಂದ್ಯಕ್ಕಾಗಿ ನಡೆಸಿದ ಸಿದ್ಧತೆ ಸೇರಿದಂತೆ ಹಲವು ಸಂಗತಿಗಳನ್ನು ಗೆಲುವಿನ ಬಳಿಕ ಹೊಸದಿಂಗತದೊಂದಿಗೆ ಮಾತುಕತೆ ಮೂಲಕ ಹಂಚಿಕೊಂಡಿದ್ದಾರೆ.

★ ಇದು ನಿಮ್ಮ ಎರಡನೇ ಐಟಿಎಫ್ ಟೈಟಲ್. ಈ ಗೆಲುವಿನ ಅನುಭವ ನೀವು ಹೇಗೆ ವಿವರಿಸುತ್ತೀರಿ?

ಈ ಗೆಲುವು ನನಗೆ ತುಂಬಾ ಸಂತೋಷ ತಂದಿದೆ. ಕಳೆದ ವಾರವೇ ಫೈನಲ್‌ಗೆ ತಲುಪಿದ್ದರೂ ಆಗ ಜಯ ಸಾಧಿಸಲು ಸಾಧ್ಯವಾಗಿರಲಿಲ್ಲ, ಆದರೆ, ಆ ಅನುಭವದಿಂದ ಪಾಠ ಕಲಿತು, ನನ್ನ ಆಟದಲ್ಲಿ ಕೆಲವು ಬದಲಾವಣೆಗಳನ್ನು ಮಾಡಿಕೊಂಡೆ. ಈ ಬಾರಿ ಕೋರ್ಟ್‌ನಲ್ಲಿ ಆತ್ಮವಿಶ್ವಾಸದಿಂದ ಆಟ ಆಡಲು ಸಾಧ್ಯವಾಯಿತು. ಜೊತೆಗೆ ಅಂಕಿತಾ ರೈನಾ ಅವರೊಂದಿಗೆ ಡಬಲ್ಸ್‌ನಲ್ಲಿ ಆಡಿದ ಅನುಭವವೂ ಫೈನಲ್ ಪಂದ್ಯದಲ್ಲಿ ನನಗೆ ಸಹಾಯವಾಯಿತು ಎಂದು ಅನಿಸುತ್ತದೆ.



> **2009 ಬಳಿಕ ಸಾನಿಯಾ ಮಿರ್ಜಾ ನಂತರ ಡಬ್ಲ್ಯು 100 ಅಥವಾ ಅದಕ್ಕಿಂತ ಮೇಲಿನ ಮಟ್ಟದ ಟೂರ್ನಿಯಲ್ಲಿ ಫೈನಲ್ ತಲುಪಿದ ಮೊದಲ ಭಾರತೀಯ ಮಹಿಳೆಯಾಗಿದ್ದು ನನಗೆ ಹೆಮ್ಮೆ. ಈ ಸಾಧನೆಯಿಂದ ರ‍್ಯಾಂಕಿಂಗ್ 690ರಿಂದ ಏರಿಕೆ ಕಂಡು 466ಕ್ಕೆ ತಲುಪಿದ್ದು ಮತ್ತೊಂದು ಮೈಲಿಗಲ್ಲು. ನನಗೆ ವೈಲ್ಡ್‌ಕಾರ್ಡ್ ಅವಕಾಶ ನೀಡಿದ ಕೆ.ಎಸ್.ಎಲ್.ಟಿ.ಎ.ಗೆ ತುಂಬಾ ಕೃತಜ್ಞೆ.**
> ■ ವೈಷ್ಣವಿ ಅಡ್ಕರ್, ಭಾರತದ ಟೆನಿಸ್ ಆಟಗಾರ್ತಿ

★ ಅನುಭವಿ,ಹಿರಿಯ ಆಟಗಾರ್ತಿ ಅಂಕಿತಾಗೆ ಎದುರಿಸುವಾಗ ನಿಮ್ಮ ಪ್ಲಾನ್ ಏನಿತ್ತು?

ಅಂಕಿತಾ ರೈನಾ ಭಾರತೀಯ ಟೆನಿಸ್‌ನ ಪ್ರಮುಖ ಆಟಗಾರ್ತಿಯರಲ್ಲಿ ಒಬ್ಬರು. ಅವರ ಆಟ ನೋಡುತ್ತಲೇ ನಾನು ಬೆಳೆದಿದ್ದೇವೆ. ತುಂಬಾ ಹೋರಾಟ ಮನೋಭಾವದ ಆಟಗಾರ್ತಿ. ಕೊನೆಯ ಕ್ಷಣದವರೆಗೂ ಪಂದ್ಯ ಬಿಡುವುದಿಲ್ಲ, ಆದ್ದರಿಂದ ಪಂದ್ಯಕ್ಕೆ ಇಳಿಯುವ ಮೊದಲು ಫಲಿತಾಂಶದ ಬಗ್ಗೆ ಹೆಚ್ಚು ಯೋಚಿಸದೆ, ನನ್ನ ಆಟದ ಮೇಲೆ ಗಮನ ಕೇಂದ್ರೀಕರಿಸಬೇಕೆಂದು ತೀರ್ಮಾನಿಸಿದ್ದೆ. ಪ್ರತಿಯೊಂದು ಪಾಯಿಂಟ್‌ಗಾಗಿ ಹೋರಾಟ ನಡೆಸಿ, ಅವಕಾಶ ಸಿಕ್ಕಾಗ ಅದನ್ನು ಬಳಸಿಕೊಳ್ಳಲು ಪ್ರಯತ್ನಿಸಿದೆ.

ದಿಗಂತ ಸಂದರ್ಶನ

★ ಮೊಣಕಾಲಿನ ಶಸ್ತ್ರಚಿಕಿತ್ಸೆಯ ನಂತರ ಕೋರ್ಟ್‌ಗೆ ಹೇಗೆ ಕಂಬ್ಯಾಕ್ ಸಾಧಿಸಿದ್ದೀರಿ?

ಸುಮಾರು ನಾಲ್ಕು ವರ್ಷಗಳ ಹಿಂದೆ ನನಗೆ ಮೊಣಕಾಲಿನ ಶಸ್ತ್ರಚಿಕಿತ್ಸೆ ಆಗಿತ್ತು. ಅದರ ನಂತರ ಸುಮಾರು ಎಂಟು ತಿಂಗಳು ಕೋರ್ಟ್‌ನಿಂದ ದೂರ ಉಳಿಯಬೇಕಾಯಿತು. ಅದು ನನ್ನ ಕರಿಯರ್‌ನಲ್ಲಿ ಸವಾಲಿನ ಸಮಯವಾಗಿತ್ತು. ಆದರೆ, ಪುನಃಶ್ರಮಪಟ್ಟು ತರಬೇತಿ ಮುಂದುವರಿಸಿ, ಜೂನಿಯರ್ ಮಟ್ಟದಲ್ಲಿ ಮತ್ತೆ ಉತ್ತಮ ಪ್ರದರ್ಶನ ನೀಡುವ ಮೂಲಕ ಟೆನಿಸ್‌ಗೆ ಮರಳಿ ಬಂದೆ. ಈಗ ಶಾರೀರಿಕವಾಗಿ ಸಂಪೂರ್ಣವಾಗಿ ಫಿಟ್ ಆಗಿದ್ದೇನೆ.

★ ಒಂದೇ ಟೂರ್ನಿಯಲ್ಲಿ 2 ಟೈಟಲ್ ಗೆದ್ದಿರುವುದು ಎಂತಹ ಭಾವನೆ ನೀಡುತ್ತಿದೆ?

ಕಲಬುರಗಿಯಲ್ಲಿ ಈ ಸಮಯದಲ್ಲಿ ಬಿಸಿಲಿನ ತಾಪಮಾನ ಹೆಚ್ಚು ಇರುವುದರಿಂದ ಅದಕ್ಕೆ ಹೊಂದಿಕೊಳ್ಳುವುದು ಸ್ವಲ್ಪ ಕಷ್ಟವಾಗಿತ್ತು. ಒಂದೇ ದಿನದಲ್ಲಿ ಎರಡು ಪಂದ್ಯಗಳನ್ನು ಆಡಬೇಕಾಗಿದ್ದುದರಿಂದ ಅದು ಇನ್ನಷ್ಟು ಸವಾಲಾಗಿತ್ತು.ಆದರೂ ಕೋರ್ಟ್‌ನಲ್ಲಿ ಕೊನೆಯವರೆಗೂ ಗಮನ ಕೇಂದ್ರೀಕರಿಸಿ ಆಡಲು ಸಾಧ್ಯವಾಯಿತು. ಪ್ರತಿಯೊಂದು ಎದುರಾಳಿಯ ವಿರುದ್ಧವೂ ಪರಿಸ್ಥಿತಿಗೆ ತಕ್ಕಂತೆ ಗೇಮ್ ಪ್ಲಾನ್ ಬದಲಾಯಿಸುತ್ತಾ ಮುಂದೆ ಬಂದೆ. ಈ ಟೂರ್ನಿಯನ್ನು ಅತ್ಯುತ್ತಮವಾಗಿ ಆಯೋಜಿಸಿದ್ದು, ಆಟಗಾರರಿಗೆ ಬೇಕಾದ ಎಲ್ಲ ವ್ಯವಸ್ಥೆಗಳನ್ನೂ ಚೆನ್ನಾಗಿ ಮಾಡಲಾಗಿತ್ತು.

★ ಮುಂದಿನ ಟೂರ್ನಿಗಳಿಗಾಗಿ ನಿಮ್ಮ ತಯಾರಿ ಮತ್ತು ಗುರಿ ಏನು?

ಮುಂದಿನ ದಿನಗಳಲ್ಲಿ ಹಲವಾರು ಪ್ರಮುಖ ಟೂರ್ನಿಗಳಿವೆ. ಅದರಲ್ಲೂ ಬಿಲ್ಲಿ ಜೀನ್ ಕಿಂಗ್ ಕಪ್ ಸೇರಿದಂತೆ ಹಲವು ಸ್ಪರ್ಧೆಗಳಿದ್ದು, ಅದಕ್ಕಾಗಿ ಈಗಿನಿಂದಲೇ ತಯಾರಿ ಆರಂಭವಾಗಿದೆ. ನಿರಂತರವಾಗಿ ಟೂರ್ನಿಗಳಲ್ಲಿ ಭಾಗವಹಿಸುವುದು ಮತ್ತು ನಿಯಮಿತ ತರಬೇತಿ ನಡೆಸುವುದು ನನ್ನ ಪ್ರಮುಖ ಗಮನ. ಮುಂದಿನ ದಿನಗಳಲ್ಲಿ ಭಾರತವನ್ನು ಪ್ರತಿನಿಧಿಸುವ ಉತ್ತಮ ಆಟಗಾರ್ತಿಯಾಗಿ ಹೊರಹೊಮ್ಮಿ, ಟೆನಿಸ್ ಕ್ಷೇತ್ರಕ್ಕೆ ನನ್ನಿಂದ ಸಾಧ್ಯವಾದಷ್ಟು ಕೊಡುಗೆ ನೀಡಲು ಪ್ರಯತ್ನಿಸುತ್ತೇನೆ.

ಕಿರುಸುದ್ದಿ

ಅರ್ಶದೀಪ್‌ಗೆ ಐಸಿಸಿ ದಂಡ

ಅಹಮದಾಬಾದ್ ಟಿ20 ವಿಶ್ವಕಪ್ ಫೈನಲ್ ಪಂದ್ಯದ ವೇಳೆ ಆಕ್ರಮಣಕಾರಿ ವರ್ತನೆಗೈದಿರುವ ಭಾರತದ ವೇಗಿ ಅರ್ಶದೀಪ್ ಸಿಂಗ್ ಅವರಿಗೆ ಅಂತಾರಾಷ್ಟ್ರೀಯ ಕ್ರಿಕೆಟ್ ಮಂಡಳಿ(ಐಸಿಸಿ) ದಂಡ ವಿಧಿಸಿದೆ. ವಿಶ್ವಕಪ್ ಮುಡಿಗೇರಿಸಿಕೊಂಡ ಭಾರತ ತಂಡದ ಭಾಗವಾಗಿದ್ದ ಅರ್ಶದೀಪ್ ಪಂದ್ಯದ ವೇಳೆ ನ್ಯೂಜಿಲೆಂಡ್‌ನ ಡ್ಯಾರೆಲ್ ಮಿಚೆಲ್ ಮೇಲೆ ಆಕ್ರಮಣಕಾರಿಯಾಗಿ ಚೆಂಡೆಸೆದಿದ್ದರು. ಪರಿಣಾಮ ಫೈನಲ್ ಪಂದ್ಯದ ಶೇಕಡಾ 15 ರಷ್ಟು ದಂಡ ವಿಧಿಸಲಾಗಿದೆ. ಜೊತೆಗೆ ಒಂದು ಡಿಮೆರಿಟ್ ಪಾಯಿಂಟ್ ನೀಡಲಾಗಿದೆ. ನ್ಯೂಜಿಲೆಂಡ್ ಇನ್ನಿಂಗ್ಸ್‌ನ 11 ನೇ ಓವರ್ ನಲ್ಲಿ ಮಿಚೆಲ್, ಅರ್ಶದೀಪ್ ಸಿಂಗ್ ಅವರ ಓವರ್‌ನಲ್ಲಿ ಎರಡು ಸಿಕ್ಸರ್‌ಗಳನ್ನು ಬಾರಿಸಿದರು. ಎರಡು ಸಿಕ್ಸರ್ ಗಳನ್ನು ಹೊಡೆಸಿಕೊಂಡ ನಂತರ ಅರ್ಶದೀಪ್ ಕೊಂಚ ತಾಳ್ಮೆ ಕಳೆದುಕೊಂಡವರಂತೆ ವರ್ತಿಸಿದರು. ಅರ್ಶದೀಪ್ ಅವರ ಐದನೇ ಎಸೆತದಲ್ಲಿ, ಡ್ಯಾರಿಲ್ ಮಿಚೆಲ್ ಶಾಟ್ ಆಡಲು ಪ್ರಯತ್ನಿಸಿದರು, ಆದರೆ ಚೆಂಡು ನೇರವಾಗಿ ಅರ್ಶದೀಪ್ ಕಡೆಗೆ ಹೋಯಿತು. ನಂತರ ಅರ್ಶದೀಪ್ ಚೆಂಡನ್ನು ಹಿಡಿದು ಡ್ಯಾರಿಲ್ ಮಿಚೆಲ್ ಕಡೆಗೆ ಎಸೆದರು.

ಭೂತಾನ್ ಫುಟ್ಬಾಲ್ ಹೈ ಪರ್ಫಾರ್ಮೆನ್ಸ್ ನಿರ್ದೇಶಕರಾಗಿ ಕೊಡಗಿನ ಜೀತ್

ಮಡಿಕೇರಿ: ಕೊಡಗು ಮೂಲದ ಕುಲ್ಲೇಟಿರ ಜೀತ್ ದೇವಯ್ಯ ಅವರನ್ನು ಭೂತಾನ್ ಫುಟ್ಬಾಲ್ ಫೆಡರೇಷನ್, ಹೈ ಪರ್ಫಾರ್ಮೆನ್ಸ್ ನಿರ್ದೇಶಕರನ್ನಾಗಿ ನೇಮಿಸಿದೆ. ದೇವಯ್ಯ ಅವರು ಗಣ್ಯ ಕ್ರೀಡಾ ಪ್ರದರ್ಶನದಲ್ಲಿ ಎರಡು ದಶಕಗಳಿಗೂ ಹೆಚ್ಚಿನ ಮತ್ತು ಕ್ರೀಡಾ ಆಡಳಿತದಲ್ಲಿ ಸುಮಾರು 29 ವರ್ಷಗಳ ಅನುಭವವನ್ನು ಹೊಂದಿದ್ದು, ಉನ್ನತ-ಕಾರ್ಯಕ್ಷಮತೆಯ ವ್ಯವಸ್ಥೆಗಳು, ಕ್ರೀಡಾಪಟುಗಳ ಅಭಿವೃದ್ಧಿ ಮತ್ತು ಕ್ರೀಡಾ ವಿಜ್ಞಾನದಲ್ಲಿ ವ್ಯಾಪಕ ಪರಿಣತಿಯನ್ನು ಹೊಂದಿದ್ದಾರೆ. ನಾನು ಸ್ಟ್ರೆಂತ್ ಮತ್ತು ಕಂಡೀಷನಿಂಗ್ ಸ್ಪೆಷಲಿಸ್ಟ್ ಮತ್ತು ಈ ಹಿಂದೆ ಫುಟ್‌ಬಾಲ್, ಕ್ರಿಕೆಟ್ ಮತ್ತು ಹಾಕಿ ಸೇರಿದಂತೆ ವಿವಿಧ ಕ್ರೀಡೆಗಳಲ್ಲಿ ಹಲವಾರು ವೃತ್ತಿಪರ ತಂಡಗಳು ಮತ್ತು ಸಂಸ್ಥೆಗಳೊಂದಿಗೆ ಕೆಲಸ ಮಾಡಿದ್ದೇನೆ. ಡೆನ್ಮಾರ್ಕ್‌ನಲ್ಲಿ ಎಸ್ಬ್ಜೆರ್ಗ್ ಎಫ್ ಸಿಯೊಂದಿಗೆ ಸ್ಟ್ರೆಂತ್ ಮತ್ತು ಕಂಡೀಷನಿಂಗ್ ಕೋಚ್ ಆಗಿ ಕೆಲಸ ಮಾಡಿದ ಅಂತಾರಾಷ್ಟ್ರೀಯ ಅನುಭವವನ್ನು ಹೊಂದಿದ್ದೇನೆ. ನಾನು ಇಂಡಿಯನ್ ಪ್ರೀಮಿಯರ್ ಲೀಗ್ ಫ್ರಾಂಚೈಸಿಗಳಾದ ರಾಜಸ್ಥಾನ್ ರಾಯಲ್ಸ್ ಮತ್ತು ದೆಹಲಿ ಡೇರ್‌ಡೆವಿಲ್ಸ್ (ಈಗ ದೆಹಲಿ ಕ್ಯಾಪಿಟಲ್ಸ್) ನೊಂದಿಗೆ ಸಹ ಕೆಲಸ ಮಾಡಿದ್ದೇನೆ ಎಂದು ಹೇಳಿದರು.



ಫುಟ್ಬಾಲ್: ಸೋಲಿನೊಂದಿಗೆ ಭಾರತ ಅಭಿಯಾನ ಅಂತ್ಯ

ಹೊಸದಿಲ್ಲಿ: ಗುಂಪು ಹಂತದ ಕೊನೆಯ ಪಂದ್ಯದಲ್ಲಿ ತೈವಾನ್ ತಂಡದೊಂದಿಗೆ ಸೋತ ಭಾರತ ಮಹಿಳಾ ತಂಡವು ಫುಟ್‌ಬಾಲ್ ಏಷ್ಯನ್‌ಕಪ್ ಪಂದ್ಯಾವಳಿಯಲ್ಲಿ ಲೀಗ್ ಹಂತದಲ್ಲೇ ಹೊರಬಿದ್ದಿತು. ಮಂಗಳವಾರ ನಡೆದ ತಮ್ಮ ಕೊನೆಯ ಪಂದ್ಯದಲ್ಲಿ ಬ್ಲ್ಯು ಟೈಗರ್ಸ್ ತೈವಾನ್ ನೊಂದಿಗೆ 1-3ರ ಸೋಲು ಕಂಡಿದೆ. ತೈವಾನ್ ಪರ ಯ ಸು 12ನೇ ನಿಮಿಷದಲ್ಲಿ, ಚೇನ್ 77ನೇ ನಿಮಿಷದಲ್ಲಿ ಗೋಲು ಗಳಿಸಿದರು. ಭಾರತ ಒಂದೇ ಗೋಲು ಗಳಿಸಿತು. ಈ ಸೋಲಿನೊಂದಿಗೆ ಭಾರತದ ವಿಶ್ವಕಪ್ ಅರ್ಹತೆ ಕನಸು ಭಗ್ನವಾಗಿದೆ. ವಿಶ್ವಕಪ್ ಪ್ರವೇಶಕ್ಕೆ ಈಗ ಅರ್ಹತಾ ಸುತ್ತು ಒಂದೇ ದಾರಿಯಾಗಿದೆ .

ಗುರುವಾರದಂದು ಮೊದಲ ಹಂತದ ವೇಳಾಪಟ್ಟಿ | ಮಾ.28 ರಿಂದ ಐಪಿಎಲ್ | ಪಂದ್ಯ ಸಂಖ್ಯೆ ಹೆಚ್ಚಳ ಸಾಧ್ಯತೆ

ಐಪಿಎಲ್‌ನಲ್ಲಿ ಈ ಬಾರಿ 84 ಪಂದ್ಯ?

ಮುಂಬೈ: ವಿಶ್ವ ಕ್ರಿಕೆಟ್‌ನ ಮದಗಜವಾಗಿ ಬೆಳೆದು ನಿಂತ ನಂತರ ಅತಿ ಶ್ರೀಮಂತ ಮತ್ತು ಅತಿ ದೊಡ್ಡ ಲೀಗ್ ಎಂಬ ಹೆಸರು ಪಡೆದ ಇಂಡಿಯನ್ ಪ್ರೀಮಿಯರ್ ಲೀಗ್(ಐಪಿಎಲ್) ಪಂದ್ಯಾವಳಿಯು ಈಗ ಇನ್ನಷ್ಟು ವಿಸ್ತಾರವಾಗಲಿದ್ದು, 19ನೇ ಆವೃತ್ತಿಯಲ್ಲಿ 84 ಪಂದ್ಯಗಳು ನಡೆಯುವ ಸಾಧ್ಯತೆ ಇದೆ.

ಸುಮಾರು 2 ತಿಂಗಳಿಗೂ ಹೆಚ್ಚು ಕಾಲ ನಡೆದು ಜನರನ್ನು ರಂಜಿಸುವ ಐಪಿಎಲ್ ಟೂರ್ನಿ ಈಗ ಇನ್ನಷ್ಟು ಹಿಗ್ಗಲಿದೆ. ಇದೇ ಮೊದಲ ಬಾರಿಗೆ ಪಂದ್ಯದ ಸಂಖ್ಯೆಯನ್ನು 84ಕ್ಕೇರಿಸಲು ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ ಮುಂದಾಗಿದೆ. ಎಲ್ಲಾ ಹತ್ತೂ ತಂಡಗಳಿಗೆ 8 ತವರು, 8 ಹೊರಪ್ರದೇಶ ಪಂದ್ಯಗಳು ಸಿಗಬೇಕೆಂಬ ಉದ್ದೇಶದಿಂದ ಈ ಕ್ರಮ ಕೈಗೊಳ್ಳಲಾಗಿದೆ.

2008ರಲ್ಲಿ ಪಂದ್ಯಾವಳಿ ಆರಂಭವಾಗಿತ್ತು. ಮೊದಲಿಗೆ 8 ತಂಡಗಳಿದ್ದವು, ಕೊಚ್ಚಿ ಅಂತಹ ತಂಡಗಳು ಐಪಿಎಲ್ ನಿಂದ ಹೊರನಡೆದವು. 2016-17ರಲ್ಲಿ ಎರಡು ತಂಡಗಳನ್ನು ನಿಷೇಧಿಸಲಾಗಿತ್ತು. ಆಗ ಎರಡು ಬೇರೆ ತಂಡಗಳನ್ನು ಸೇರಿಸಲಾಗಿತ್ತು. ಇಷ್ಟಾದರೂ ಬಿಸಿಸಿಐ ಹೆಚ್ಚು ಪಂದ್ಯಗಳನ್ನಾಡಿಸಲು ಮುಂದಾಗಿರಲಿಲ್ಲ, ಆದರೆ ಇದೇ ಮೊದಲ ಬಾರಿಗೆ 80ಕ್ಕೂ ಅಧಿಕ ಪಂದ್ಯಗಳನ್ನಾಡಿಸುವ ಉದ್ದೇಶ ಹೊಂದಿದೆ.

ಬರೋಬ್ಬರಿ 84 ಪಂದ್ಯಗಳು: ಕಳೆದ ಬಾರಿ ಅಂದರೆ 18ನೇ ಆವೃತ್ತಿಯ ಐಪಿಎಲ್‌ನಲ್ಲಿ 74 ಪಂದ್ಯಗಳನ್ನಾಡಿಸಲಾಗಿತ್ತು. ಒಂದು ತಂಡ 14ರಂತೆ ಲೀಗ್ ಪಂದ್ಯಗಳಲ್ಲಿ ಆಡುತ್ತಿತ್ತು. ಆದರೆ ಎಲ್ಲಾ 10 ತಂಡಗಳು ಎರಡು ಬಾರಿ ಎದುರಾಗುತ್ತಿರಲಿಲ್ಲ, ಎರಡು ತಂಡಗಳು ಒಂದೇ ಬಾರಿ ಎದುರಾಗಬೇಕಾದ ಅನಿವಾರ್ಯತೆ ಇತ್ತು. ಉದಾಹರಣೆಗೆ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ ಎಲ್ಲಾ 9 ಎದುರಾಳಿಗಳೊಂದಿಗೆ 2 ಪಂದ್ಯಗಳನ್ನಾಡುತ್ತಿರಲಿಲ್ಲ, 2 ತಂಡಗಳ ಎದುರಿಗೆ ಕೇವಲ ಒಂದು ಪಂದ್ಯ ಆಡಬೇಕಾಗಿತ್ತು. ಈ ಬಗ್ಗೆ ಕಾಳಜಿ ವಹಿಸಿರುವ ಬಿಸಿಸಿಐ ಪಂದ್ಯಾವಳಿಯನ್ನೇ ವಿಸ್ತರಿಸುವ ಯೋಜನೆ ಹಾಕಿಕೊಂಡಿದೆ. 80 ಲೀಗ್ ಪಂದ್ಯಗಳು ಇರಲಿದ್ದು, ನಾಲ್ಕು ಪ್ಲೇಆಫ್ ಪಂದ್ಯಗಳು ನಡೆಯಲಿವೆ.



ಎಷ್ಟು ತಂಡಗಳಿದ್ದಾಗ ಎಷ್ಟು ಪಂದ್ಯಗಳು?

8 ತಂಡಗಳು	60 ಪಂದ್ಯಗಳು
9 ತಂಡಗಳು	76 ಪಂದ್ಯಗಳು
10 ತಂಡಗಳು	74 ಪಂದ್ಯಗಳು (ಸಾಮಾನ್ಯ ಮಾದರಿ)
10 ತಂಡಗಳು	84 ಪಂದ್ಯಗಳು (ಈ ಬಾರಿಯ ವಿಸ್ತಾರ)

ಕಳೆದ ಬಾರಿ ಇದ್ದದ್ದು 74 ಪಂದ್ಯ: ಐಪಿಎಲ್ ಆರಂಭಿಕ ಆವೃತ್ತಿಯಲ್ಲಿ 59 ಪಂದ್ಯಗಳನ್ನು ಮಾತ್ರ ಆಡಿಸಲಾಗಿತ್ತು. ನಂತರ ಎರಡು ಬಾರಿ ಬದಲಾವಣೆಯಾಗಿ ಹಲವು ಬಾರಿ 60 ಮತ್ತು 76 ಪಂದ್ಯಗಳನ್ನಾಡಿಸಿತ್ತು. ಐಪಿಎಲ್‌ನಲ್ಲಿ ಹೆಚ್ಚು ಬಾರಿ 60 ಪಂದ್ಯಗಳನ್ನೇ ಆಡಿಸಲಾಗಿದೆ. 2021ರಲ್ಲಿ 60 ಪಂದ್ಯಗಳನ್ನೇ ಆಡಿಸಲಾಗಿತ್ತು. 2023ರಲ್ಲಿ ಎರಡು ಹೊಸ ತಂಡಗಳು ಸೇರ್ಪಡೆಯಾದವು. ಹೀಗಾಗಿ ಪಂದ್ಯದ ಸಂಖ್ಯೆ 74ಕ್ಕೆ ವಿಸ್ತಾರವಾಗಿತ್ತು. 2022ರಿಂದ 18ನೇ ಆವೃತ್ತಿವರೆಗೂ 74 ಪಂದ್ಯಗಳನ್ನೇ ಆಡಿಸಲಾಗಿತ್ತು.

ಬದಲಾಗಿದ್ದು ಏನು? ಐಪಿಎಲ್‌ನಲ್ಲಿ ಮೊದಲಿಗೆ 8 ತಂಡಗಳು ಮಾತ್ರ ಇದ್ದವು. ಹೀಗಾಗಿ ಎಲ್ಲಾ ತಂಡಗಳು ಎಲ್ಲಾ ತಂಡಗಳನ್ನು ತಲಾ ಎರಡು ಬಾರಿ ಎದುರಿಸುತ್ತಿದ್ದವು. ಆದರೆ 10 ತಂಡಗಳಿಗೆ ಕೂಟ ಬದಲಾಯಿತು. ಆದಾಗ್ಯೂ ಪಂದ್ಯಗಳ ಸಂಖ್ಯೆ ಏರಿಸಲಾಗಿರಲಿಲ್ಲ, ಅಂದರೆ ಒಂದು ತಂಡ 14 ಮಾತ್ರ ಲೀಗ್ ಪಂದ್ಯಗಳನ್ನಾಡುತ್ತಿತ್ತು. ಇದನ್ನು ಈಗ 16ಕ್ಕೇರಿಸಲಾಗುತ್ತದೆ. ಅಂದರೆ ಪ್ರತಿಯೊಂದು ತಂಡವೂ 8 ತವರು ಮತ್ತು 8 ಹೊರಪ್ರದೇಶದ ಪಂದ್ಯಗಳನ್ನಾಡಲಿವೆ. ವಾಸ್ತವವಾಗಿ ಎಲ್ಲಾ ತಂಡಗಳು ಎರಡು ಬಾರಿ ಎದುರಾದರೆ ಒಂದು ತಂಡ 18 ಪಂದ್ಯಗಳನ್ನಾಡಬೇಕಾಗುತ್ತದೆ. ಆದರೆ ಈ ಬಾರಿ ಅಂತಹ ಯೋಜನೆಗಳನ್ನು ಹಾಕಿಕೊಂಡಿಲ್ಲ ಎಂದು ಹೇಳಲಾಗುತ್ತಿದೆ.

2 ಹಂತದಲ್ಲಿ ವೇಳಾಪಟ್ಟಿ: ದೇವಜೀತ್ ಸೈಕಿಯಾ

ಮಾರ್ಚ್ 28ರಿಂದ ಶುರುವಾಗಲಿರುವ ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯ ವೇಳಾಪಟ್ಟಿ ಗುರುವಾರದಂದು ಬಿಡುಗಡೆಯಾಗಲಿದೆ ಎಂದು ಬಿಸಿಸಿಐ ಕಾರ್ಯದರ್ಶಿ ದೇವಜೀತ್ ಸೈಕಿಯಾ ತಿಳಿಸಿದ್ದಾರೆ. ಭಾನುವಾರದಂದು ಐಪಿಎಲ್ ಶುರುವಾಗುವ ದಿನಾಂಕಗಳನ್ನು ಘೋಷಿಸಲಾಗಿದೆ. ಮೊದಲ ಪಂದ್ಯ ಮಾರ್ಚ್ 28ಕ್ಕೆ ನಡೆಯಲಿದೆ. ಫೈನಲ್ ಪಂದ್ಯ ಮೇ 31ರಂದು ನಡೆಯಲಿದೆ. ಈ ಬಗ್ಗೆ ಮಾತನಾಡಿರುವ ಸೈಕಿಯಾ, ಹಲವು ರಾಜ್ಯಗಳಲ್ಲಿ ಚುನಾವಣೆಗಳಿರುವುದರಿಂದ ವೇಳಾಪಟ್ಟಿ ತಡವಾಗಿದೆ. 5 ರಾಜ್ಯಗಳಲ್ಲಿ ಚುನಾವಣೆ ನಡೆಯಲಿದೆ. ಈ ಬೆನ್ನಲ್ಲೇ ನಾವು ವೇಳಾಪಟ್ಟಿಯನ್ನು ಎರಡು ಹಂತದಲ್ಲಿ ಬಿಡುಗಡೆ ಮಾಡಲು ನಿರ್ಧರಿಸಿದ್ದೇವೆ. ಮೊದಲ ಹಂತದ ವೇಳಾಪಟ್ಟಿ ಗುರುವಾರದಂದು ಬಿಡುಗಡೆ ಮಾಡುತ್ತೇವೆ. ಎರಡನೇ ಹಂತದ ವೇಳಾಪಟ್ಟಿಯನ್ನು ಚುನಾವಣೆಯ ಆಧಾರದ ಮೇಲೆ ಬಿಡುಗಡೆ ಮಾಡುತ್ತೇವೆ ಎಂದಿದ್ದಾರೆ.

ವಿಶ್ವಕಪ್ ಅರ್ಹತಾ ಸುತ್ತು: ಭಾರತ ಪಂದ್ಯ ಡ್ರಾ

ಹೈದರಾಬಾದ್: ಎಫ್‌ಐಎಚ್ ಮಹಿಳಾ ವಿಶ್ವಕಪ್ ಅರ್ಹತಾ ಸ್ಪರ್ಧೆಯಲ್ಲಿ ಉರುಗ್ವೆಯನ್ನು ಸುಲಭವಾಗಿ ಸೋಲಿಸಿದ ನಂತರ ಭಾರತಕ್ಕೆ ಸ್ಕಾಟ್ಲೆಂಡ್ ವಿರುದ್ಧ ಕಠಿಣ ಸವಾಲು ಎದುರಾಯಿತು. ಎರಡೂ ತಂಡಗಳ ನಿರಂತರ ಪರಿಶ್ರಮ ಹಾಗೂ ಕರಾರುವಾಕ್ ಆಟದೊಂದಿಗೆ ಪಂದ್ಯ ಡ್ರಾದಲ್ಲಿ ಅಂತ್ಯವಾಗಿದೆ.

ಜಿ.ಎಂ.ಸಿ ಬಾಲಯೋಗಿ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಭಾರತ ಆರಂಭದಲ್ಲಿ ಹಿನ್ನಡೆ ಅನುಭವಿಸಿದರೂ ನಂತರ ಕಂಬ್ಯಾಕ್ ಮಾಡಿತ್ತು. ಡಿಫೆನ್ಸ್ ಮೂಲಕ ಭಾರತ ಮುನ್ನಡೆ ಕೂಡ ಪಡೆಯಿತು. ಆದರೆ ಸ್ಕಾಟ್ಲೆಂಡ್ ಹೋರಾಟದಿಂದ ಮರಳಿ ಬಂದು ಪಂದ್ಯವನ್ನು 2-2 ಸಮಬಲದಲ್ಲಿ ಮುಗಿಸಿತು.



ಆರಂಭದಲ್ಲೇ ಗೋಲು!: ಆರನೇ ನಿಮಿಷದಲ್ಲಿ ಸ್ಕಾಟ್ಲೆಂಡ್ ಪೆನಾಲ್ಟಿ ಕಾರ್ನರ್ ಗಳಿಸಿ ಮುನ್ನಡೆ ಪಡೆದಿತು. ಜೆನ್ನಿಫರ್ ಈಡಿ ಅವರ ಡ್ರ್ಯಾಗ್‌ಫ್ಲಿಕ್ ಅನ್ನು ಹೀದರ್ ಮೆಕ್‌ಇವನ್ ಡಿಫ್ಲೆಕ್ಷನ್ ಮೂಲಕ ಗೋಲಾಗಿ ಪರಿವರ್ತಿಸಿದರು. ಮೂರನೇ ಕ್ವಾರ್ಟರ್ ಆರಂಭವಾದ ಮೂರು ನಿಮಿಷಗಳಲ್ಲೇ ಭಾರತ ಸಮಬಲ ಸಾಧಿಸಿತು. ಪೆನಾಲ್ಟಿ ಕಾರ್ನರ್ ಅನ್ನು ನವ್ನೀತ್ ಕೌರ್-ಸುಶೀಲಾ ಚಾನು ಭಾರತಕ್ಕೆ ಮೊದಲ ಗೋಲು ತಂದುಕೊಟ್ಟರು. ಮೊದಲಾರ್ಧ ಮುಕ್ತಾಯಕ್ಕೂ ಮೊದಲು ಭಾರತ ಮುನ್ನಡೆ ಪಡೆದಿತು. ರುತುಜಾ ಪಿಸಾಲ್ ಗಳಿಸಿದ ಪೆನಾಲ್ಟಿ ಕಾರ್ನರ್ ಬಳಿಕ ಉಂಟಾದ ಗೊಂದಲದಲ್ಲಿ ಸುನೆಲಿತಾ ಟೊಪ್ಪೊ ಗೋಲು ಗಳಿಸಿದರು. ಆದರೆ ಮೂರನೇ ಕ್ವಾರ್ಟರ್‌ನಲ್ಲಿ ಫಿಯೋನಾ ಬರ್ನೆಟ್ ಗೋಲು ಬಾರಿಸಿ ಸ್ಕಾಟ್ಲೆಂಡ್ ಸಮಬಲ ಸಾಧಿಸಿತು. ನಂತರ ಎರಡೂ ತಂಡಗಳು ಅವಕಾಶಗಳನ್ನು ಸೃಷ್ಟಿಸಿದರೂ ಗೋಲು ಸಾಧ್ಯವಾಗದೆ ಪಂದ್ಯ 2-2 ಡ್ರಾ ಆಗಿ ಮುಕ್ತಾಯವಾಯಿತು.

24 ಕ್ರೀಡಾಪಟುಗಳಿಗೆ ನಿವೇಶನ ಭರವಸೆ

ಬೆಂಗಳೂರು: ಏಷ್ಯನ್ ಗೇಮ್ಸ್, ಒಲಿಂಪಿಕ್ಸ್ ಸೇರಿದಂತೆ ವಿವಿಧ ಕ್ರೀಡೆಗಳಲ್ಲಿ ರಾಷ್ಟ್ರವನು ಪ್ರತಿನಿಧಿಸಿ ಪದಕ ಪಡೆದಿರುವ ರಾಜ್ಯದ ಹಲವು ಕ್ರೀಡಾ ಪಟುಗಳಿಗೆ ನಿವೇಶನ ಹಂಚಿಕೆ ಮಾಡುವಂತೆ ರಾಜ್ಯ ಒಲಿಂಪಿಕ್ಸ್ ಸಂಸ್ಥೆಯ ಅಧ್ಯಕ್ಷ, ವಿಧಾನ ಪರಿಷತ್ ಸದಸ್ಯ ಡಾ. ಕೆ. ಗೋವಿಂದರಾಜು ಅವರು ರಾಜ್ಯ ಗೃಹ ಮಂಡಳಿಗೆ ಮನವಿ ಸಲ್ಲಿಸಿದ್ದಾರೆ. ಮನವಿ ಸ್ವೀಕರಿಸಿರುವ ಸಚಿವ ಜಮೀರ್ ಅಹ್ಮದ್, ಎಲ್ಲರಿಗೂ ನಿವೇಶನ ನೀಡುವುದಾಗಿ ಭರವಸೆ ನೀಡಿದ್ದು, ತಕ್ಷಣದಿಂದಲೇ ಕ್ರಮ ಕೈಗೊಳ್ಳುವಂತೆ ಸೂಚಿಸುವುದಾಗಿ ಹೇಳಿದ್ದಾರೆ. ಒಟ್ಟು 24 ಕ್ರೀಡಾಪಟುಗಳಿಗೆ ನಿವೇಶನ ಸಿಕ್ಕಿಲ್ಲ, ಈ ಬಗ್ಗೆ ಕ್ರಮ ಕೈಗೊಳ್ಳುವ ಬಗ್ಗೆ ಭರವಸೆ ನೀಡಲಾಗಿದೆ.



ವಿಶ್ವಕಪ್ ಗೆದ್ದ ಬೆನ್ನಲ್ಲೇ ಬಹುಮಾನ ಘೋಷಿಸಿದ ಬಿಸಿಸಿಐ

ಭಾರತ ತಂಡಕ್ಕೆ ₹131 ಕೋಟಿ!

ಮುಂಬೈ: ಭಾರತದ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ತನ್ನದೇ ದಾಖಲೆ ಮುರಿದು, 2026ರ ಟಿ20 ವಿಶ್ವಕಪ್ ಗೆದ್ದ ಭಾರತೀಯ ತಂಡಕ್ಕೆ ಭರ್ಜರಿ 131 ಕೋಟಿ ರೂ. ನಗದು ಬಹುಮಾನ ಘೋಷಿಸಿದೆ.

2024ರಲ್ಲಿ ರೋಹಿತ್ ಶರ್ಮ ನಾಯಕತ್ವದಲ್ಲಿ ಬಾರ್ಬಡೋಸ್‌ನಲ್ಲಿ ಭಾರತ ವಿಶ್ವಕಪ್ ಗೆದ್ದಾಗ ಬಿಸಿಸಿಐ 125 ಕೋಟಿ ರೂ. ಬಹುಮಾನ ನೀಡಿತ್ತು. ಇದೀಗ ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆದ ಫೈನಲ್‌ನಲ್ಲಿ ನ್ಯೂಜಿಲೆಂಡ್ ವಿರುದ್ಧ ಜಯ ಸಾಧಿಸಿದ ಸೂರ್ಯಕುಮಾರ್ ಯಾದವ್ ನಾಯಕತ್ವದ ತಂಡ ಕ್ಕೆ ಬಹುಮಾನ ನೀಡುವುದರಲ್ಲಿ ಇತಿಹಾಸ ನಿರ್ಮಿಸಿದೆ.

ಈ ಜಯದೊಂದಿಗೆ ಭಾರತ ಟಿ20 ವಿಶ್ವಕಪ್ ಅನ್ನು ಸರಿಯಾಗಿ ಎರಡನೇ ಬಾರಿ ಉಳಿಸಿಕೊಂಡ ಮೊದಲ ತಂಡವಾಗಿದ್ದು, ಒಟ್ಟಾರೆ ಮೂರು ಬಾರಿ ಈ ಪ್ರಶಸ್ತಿ ಗೆದ್ದ ಮೊದಲ ತಂಡ ಎಂಬ ದಾಖಲೆ ಕೂಡ ನಿರ್ಮಿಸಿದೆ. ಬಿಸಿಸಿಐ ಪ್ರಕಟಣೆಯಲ್ಲಿ ಆಟಗಾರರು, ತರಬೇತಿ ಸಿಬ್ಬಂದಿ ಹಾಗೂ ಆಯ್ಕೆ ಸಮಿತಿಗೆ ಅಭಿನಂದನೆ ತಿಳಿಸಿ, ಈ ಐತಿಹಾಸಿಕ ಸಾಧನೆ ಭಾರತೀಯ ಕ್ರಿಕೆಟ್‌ಗೆ ಹೆಮ್ಮೆ ತರುತ್ತದೆ ಎಂದು ಹೇಳಿದೆ.

ಐಸಿಸಿಯಿಂದಲೂ ಭರ್ಜರಿ ಬಹುಮಾನ: ಇದರ ಜೊತೆಗೆ ಅಂತರಾಷ್ಟ್ರೀಯ ಕ್ರಿಕೆಟ್ ಮಂಡಳಿಯು ಕೂಡ ಭಾರತಕ್ಕೆ 3



ಮಿಲಿಯನ್ ಅಮೆರಿಕನ್ ಡಾಲರ್ (ಸುಮಾರು 27.48 ಕೋಟಿ ರೂಪಾಯಿ) ಬಹುಮಾನ ನೀಡಿದೆ. ಈ ಬಾರಿ ವಿಶ್ವಕಪ್ ಟೂರ್ನಿಯ ಒಟ್ಟು ಬಹುಮಾನ ಮೊತ್ತ 13.5 ಮಿಲಿಯನ್ ಡಾಲರ್ ಆಗಿದ್ದು, ಹಿಂದಿನ ಆವೃತ್ತಿಗಿಂತ ಸುಮಾರು 20 ಶೇಕಡಾ ಹೆಚ್ಚಳ ಕಂಡಿದೆ. ಗುಂಪು ಹಂತ ಮತ್ತು ಸೂಪರ್ ಎಂಟು ಹಂತಗಳಲ್ಲಿ ಪ್ರತಿ ಪಂದ್ಯ ಜಯಿಸಿದಾಗಲೂ ತಂಡಕ್ಕೆ ಸುಮಾರು 31,154 ಡಾಲರ್ (ಸುಮಾರು 28.6 ಲಕ್ಷ ರೂಪಾಯಿ) ಹೆಚ್ಚುವರಿ ಬಹುಮಾನ ನೀಡಲಾಗಿದೆ.

ಯಾರ‍್ಯಾರಿಗೆ ಸೇರಲಿದೆ ಬಹುಮಾನ? ವಿಶ್ವಕಪ್ ತಂಡದ ಭಾಗವಾಗಿರುವ ಪ್ರತಿಯೊಬ್ಬ ಆಟಗಾರರಿಗೂ ಸಮಾನ ಬಹುಮಾನ ಸೇರಲಿದೆ. ಇದಲ್ಲದೆ, ಪ್ರಧಾನ ಕೋಚ್, ಬ್ಯಾಟಿಂಗ್, ಬೌಲಿಂಗ್, ಫೀಲ್ಡಿಂಗ್ ಕೋಚ್ ಸೇರಿದಂತೆ ಎಲ್ಲಾ ತರಬೇತಿ ಸಿಬ್ಬಂದಿ ಮತ್ತು ತಂಡದ ವೈದಕೀಯ ಹಾಗೂ ಬೆಂಬಲ ಸಿಬ್ಬಂದಿಗೂ ಹಂಚಿಕೆಯಾಗಲಿದೆ.

ದಾಖಲೆಯ ಬಹುಮಾನ

ಇಲ್ಲಿಯವರೆಗೂ ಯಾವುದೇ ತಂಡ ಯಾವುದೇ ವಿಶ್ವಕಪ್ ಗೆದ್ದರೂ ಇಷ್ಟೊಂದು ಬಹುಮಾನ ಈವರೆಗೂ ಯಾವುದೇ ಸಂಸ್ಥೆ ನೀಡಿರಲಿಲ್ಲ, 2024ರಲ್ಲೇ ಭಾರತ ಅತಿ ಹೆಚ್ಚು ಮೊತ್ತದ ನಗದು ಬಹುಮಾನ ನೀಡಿದ ಸಂಸ್ಥೆ ಅನಿಸಿಕೊಂಡಿತ್ತು. ಈ ದಾಖಲೆಯನ್ನೇ ಮುರಿದಿರುವ ಬಿಸಿಸಿಐ, 133 ಕೋಟಿ ರೂ. ಘೋಷಿಸಿದೆ.

3 ವರ್ಷದಲ್ಲಿ ಬಿಸಿಸಿಐ ಕೊಟ್ಟಿದ್ದು 335 ಕೋಟಿ

ಬಿಸಿಸಿಐ ಮೂರು ವರ್ಷಗಳಲ್ಲಿ ಬರೋಬ್ಬರಿ 335 ಕೋಟಿ ರೂ. ಬಹುಮಾನ ನೀಡಿದೆ. 2024ರಲ್ಲಿ ಭಾರತ ಟಿ20 ವಿಶ್ವಕಪ್, 2025ರಲ್ಲಿ ಚಾಂಪಿಯನ್ಸ್ ಟ್ರೋಫಿ ಹಾಗೂ ಈ ಬಾರಿ ಮತ್ತೊಮ್ಮೆ ಟಿ20 ವಿಶ್ವಕಪ್ ಗೆದ್ದಿರುವ ಭಾರತಕ್ಕೆ ಭಾರೀ ಬಹುಮಾನ ನೀಡಲಾಗಿದೆ. ಅಲ್ಲದೆ ಕಳೆದ ಬಾರಿ ವಿಶ್ವಾಕಪ್ ಕೂಡ ಭಾರತ ಗೆದ್ದುಕೊಂಡಿದೆ. ಆಗಲೂ ಬಿಸಿಸಿಐ ಭರ್ಜರಿ ಬಹುಮಾನ ನೀಡಿತ್ತು.

ರಾಷ್ಟ್ರೀಯ ಪ್ಯಾರಾ ಬ್ಯಾಡ್ಮಿಂಟ್

ಕನ್ನಡಗರಿಗೆ 11 ಪದಕ



ಬೆಂಗಳೂರು: 7ನೇ ರಾಷ್ಟ್ರೀಯ ಪ್ಯಾರಾ ಬ್ಯಾಡ್ಮಿಂಟನ್ ಚಾಂಪಿಯನ್‌ಶಿಪ್‌ನಲ್ಲಿ ಕರ್ನಾಟಕದ ಪ್ಯಾರಾ ಬ್ಯಾಡ್ಮಿಂಟನ್ ಆಟಗಾರರು ಅತ್ಯುತ್ತಮ ಪ್ರದರ್ಶನ ನೀಡಿ ಒಟ್ಟು 11 ಪದಕಗಳನ್ನು ಗೆದ್ದಿದ್ದಾರೆ. ರಾಜ್ಯದ ತಂಡವು 2 ಚಿನ್ನ, 4 ಬೆಳ್ಳಿ ಹಾಗೂ 5 ಕಂಚಿನ ಪದಕಗಳನ್ನು ಗಳಿಸಿ ಗಮನಾರ್ಹ ಸಾಧನೆ ಮಾಡಿದೆ. ಚಾಂಪಿಯನ್‌ಶಿಪ್‌ನಲ್ಲಿ ಕನ್ನಡತಿ ಪಲ್ಲವಿ ಕೆ.ಎಂ ಅವರ ಪ್ರದರ್ಶನ ವಿಶೇಷವಾಗಿತ್ತು. ಅವರು ಮಹಿಳಾ ಸಿಂಗಲ್ಸ್ ವಿಭಾಗ ಮತ್ತು ಮಹಿಳಾ ಡಬಲ್ಸ್ ವಿಭಾಗಗಳಲ್ಲಿ ಎರಡು ಚಿನ್ನದ ಪದಕಗಳನ್ನು ಗೆದ್ದರು. ಜೊತೆಗೆ ಮಿಶ್ರ ಡಬಲ್ಸ್ ವಿಭಾಗದಲ್ಲಿ ಒಂದು ಬೆಳ್ಳಿ ಪದಕ ಪಡೆದು ಶ್ರೇಷ್ಠ ಸಾಧನೆ ಮಾಡಿದ್ದಾರೆ.

ಯಾರ‍್ಯಾರಿಗೆ ಯಾವ್ಯಾವ ಪದಕ?

ಅಮ್ಮು ಮೋಹನ್ ಕೂಡ ಉತ್ತಮ ಪ್ರದರ್ಶನ ನೀಡಿದರು. ಅವರು ಮಹಿಳಾ ಡಬಲ್ಸ್ ವಿಭಾಗದಲ್ಲಿ ಒಂದು ಬೆಳ್ಳಿ ಪದಕ ಮತ್ತು ಮಹಿಳಾ ಸಿಂಗಲ್ಸ್ ಹಾಗೂ ಮಿಶ್ರ ಡಬಲ್ಸ್ ವಿಭಾಗಗಳಲ್ಲಿ ಎರಡು ಕಂಚಿನ ಪದಕಗಳನ್ನು ಗೆದ್ದರು. ಶಾರ್ಟ್ ಹೈಟ್ ವಿಭಾಗದಲ್ಲಿ ಧನೇಶ್ವರಿ ಅವರು ಮಹಿಳಾ ಡಬಲ್ಸ್‌ನಲ್ಲಿ ಬೆಳ್ಳಿ ಪದಕ ಮತ್ತು ಮಹಿಳಾ ಸಿಂಗಲ್ಸ್‌ನಲ್ಲಿ ಕಂಚಿನ ಪದಕ ಗಳಿಸಿದರು. ಇದೇ ವಿಭಾಗದಲ್ಲಿ ಜನನಿ ಆರ್ ಅವರು ಮಹಿಳಾ ಡಬಲ್ಸ್‌ನಲ್ಲಿ ಒಂದು ಬೆಳ್ಳಿ ಪದಕ ಪಡೆದರು. ಪುರುಷರ ವಿಭಾಗದಲ್ಲಿ ಸಿದ್ದಣ್ಣ ಸಾಹುಕಾರ್ ಅವರು ಪುರುಷರ ಸಿಂಗಲ್ಸ್‌ನಲ್ಲಿ ಬೆಳ್ಳಿ ಪದಕ ಗೆದ್ದರು. ಜಮಾದ್ ಎಂ ಇ ಅವರು ಪುರುಷರ ಡಬಲ್ಸ್‌ನಲ್ಲಿ ಕಂಚಿನ ಪದಕ, ಹಾಗೂ ಮಂಜುನಾಥ್ ಸಿ ಅವರು ಪುರುಷರ ಡಬಲ್ಸ್‌ನಲ್ಲಿ ಕಂಚಿನ ಪದಕ ಗಳಿಸಿದರು.

ರಾಷ್ಟ್ರೀಯ ಶೂಟಿಂಗ್: ಮನುಗೆ ಮೊದಲ ಸ್ಥಾನ

ಹೊಸದಿಲ್ಲಿ: ಒಲಿಂಪಿಯನ್ ಮನು ಭಾಕರ್ ರಾಷ್ಟ್ರೀಯ ಆಯ್ಕೆ ಪರೀಕ್ಷೆಗಳ ಟಿ3 (ಗುಂಪು ಎ) ಸ್ಪರ್ಧೆಯ ಮಹಿಳೆಯರ 10 ಮೀಟರ್ ಏರ್ ಪಿಸ್ತೂಲ್ ಫೈನಲ್‌ನಲ್ಲಿ ಮೊದಲ ಸ್ಥಾನ ಪಡೆದುಕೊಂಡಿದ್ದಾರೆ. ಇಲ್ಲಿನ ಡಾ. ಕರ್ಣಿ ಸಿಂಗ್ ಶೂಟಿಂಗ್ ರೇಂಜ್‌ನಲ್ಲಿ ಮಂಗಳವಾರ ಸ್ಪರ್ಧೆ ಮುಕ್ತಾಯಗೊಂಡಿತು.

ಫೈನಲ್‌ಗೆ ಕೊನೆಯ ಅರ್ಹತೆಯಾಗಿ ಪ್ರವೇಶಿಸಿದ್ದ ಮನು ಭಾಕರ್ ಎರಡನೇ ಸರಣಿಯ ಅಂತ್ಯದಿಂದಲೇ ಮುನ್ನಡೆ ಕಾಯ್ದುಕೊಂಡು 246.1 ಅಂಕಗಳೊಂದಿಗೆ ಪ್ರಶಸ್ತಿ ಗೆದ್ದರು. ವಿಶ್ವಕಪ್ ಫೈನಲ್ ಬೆಳ್ಳಿ ಪದಕ ವಿಜೇತೆ ಸೈನ್ಯಮ್ 241.9 ಅಂಕಗಳೊಂದಿಗೆ ದ್ವಿತೀಯ ಸ್ಥಾನ ಪಡೆದರು. ಏಷ್ಯನ್ ಚಾಂಪಿಯನ್‌ಶಿಪ್ ಚಿನ್ನ ಹಾಗೂ ವಿಶ್ವ ಚಾಂಪಿಯನ್‌ಶಿಪ್ ಕಂಚು ಪದಕ ವಿಜೇತೆ ಈಶಾ ಸಿಂಗ್ 220.6 ಅಂಕಗಳೊಂದಿಗೆ ಮೂರನೇ ಸ್ಥಾನಕ್ಕೆ ತೃಪ್ತಿಪಟ್ಟರು.

ಏಷ್ಯನ್ ಗೇಮ್ಸ್ ಚಾಂಪಿಯನ್ ಪಾಲಕ್ ಗುಲಿಯಾ 200.2 ಅಂಕಗಳೊಂದಿಗೆ ನಾಲ್ಕನೇ ಸ್ಥಾನ ಪಡೆದರು. ನಂತರ ಅಂಜಲಿ ಚೌಧರಿ 179.8, ಸುರ್ಬಿ ರಾವ್ 158.2 ಅಂಕಗಳೊಂದಿಗೆ ಕ್ರಮವಾಗಿ ಐದನೇ ಹಾಗೂ ಆರನೇ ಸ್ಥಾನ ಪಡೆದರು. ಪ್ರಾಂಜಲಿ ಪ್ರಶಾಂತ್ ಧುಮಾಲ್ 138.7 ಮತ್ತು ಮುಸ್ಕಾನ್ 117.0 ಅಂಕಗಳೊಂದಿಗೆ ಮೊದಲ ಎಂಟು ಸ್ಥಾನಗಳನ್ನು ಪೂರ್ಣಗೊಳಿಸಿದರು.



ಇತರ ಫಲಿತಾಂಶಗಳು


ಪುರುಷರ 50 ಮೀಟರ್ ರೈಫಲ್ ಪ್ರೋನ್
1. ಐಶ್ವರ್ಯ ಪ್ರತಾಪ್ ಸಿಂಗ್ ತೋಮರ್ 628.3
2. ನಿರಾಜ್ ಕುಮಾರ್ 622.6
3. ಗೋಲ್ಡಿ ಗುರ್ಜರ್ 622.2

ಮಹಿಳೆಯರ 50 ಮೀಟರ್ ರೈಫಲ್ ಪ್ರೋನ್
1. ಸಿಫ್ಟ್ ಕೌರ್ ಸಮ್ರಾ 628.3
2. ಆಕೃತಿ ದಹಿಯಾ 627.0
3. ಮನಿನಿ ಕೌಶಿಕ್ 626.6

ಅರ್ಹತಾ ಸುತ್ತಿನಲ್ಲಿ ಈಶಾ ಸಿಂಗ್ 58021 ಎಕ್ಸ್ ಅಂಕಗಳೊಂದಿಗೆ ಅಗ್ರಸ್ಥಾನ ಪಡೆದಿದ್ದರು. ಸುರ್ಬಿ ರಾವ್ 578-12 ಎಕ್ಸ್ ಅಂಕಗಳೊಂದಿಗೆ ಎರಡನೇ ಸ್ಥಾನದಲ್ಲಿದ್ದರು. ಈ ಶೂಟರ್‌ಗಳು ಮಾರ್ಚ್ 11 ರಿಂದ ಮಾರ್ಚ್ 21ರವರೆಗೆ ನವದೆಹಲಿಯಲ್ಲಿ ನಡೆಯುವ ತರಬೇತಿ ಶಿಬಿರದಲ್ಲಿ ಭಾಗವಹಿಸಲಿದ್ದಾರೆ.

ಪದಬಂಧ

▸ ರಾಜಾ ಸಂಗಮೇಶ ಹಿರೇಮಠ



5920

ಎಡದಿಂದ ಬಲಕ್ಕೆ
1.ಈ ಸಲ ಬರುವೆನೆಂದ ಶಕ್ತಿವಂತ (3)
4.ಪೂರ್ಣವಾಗಿ ಬಲಿತ ಬಣ್ಣಗೆಟ್ಟ ಪತ್ರ (3)
5.ಆಗಸದಲ್ಲಿ ಮೂಡುವ ಬಣ್ಣದ ಕಮಾನು (5)
6.ಕರ್ನಾಟಕ-ತಮಿಳುನಾಡಿನ ಸಾಂಪ್ರದಾಯಿಕ ಸಿಹಿತಿಂಡಿ (4)
8.ಮನದ ನಡುವೆ ಅಡಗಿದ ವಂಶ (4)
10.ಜಪ-ದನ ಸೇರಿ ಮಾನವ ಜನಾಂಗವಾಯ್ತು (4)
12.ಹೊಳೆಯುವಿಕೆ ದ್ವಿರುಕ್ತಿಯಲ್ಲಿದೆ (4)
15.ಅಭ್ರಕವನ್ನು ಹೀಗೂ ಹೇಳುತ್ತೇವೆ (5)
16.ಸರ ಧರಿಸಿದರೂ ಉಂಟಾದ ಬೇಜಾರು (3)
17.ವನದ ನಡುವೆ ಸಿಕ್ಕ ಜಹಗೀರು (3)

ಮೇಲಿನಿಂದ ಕೆಳಕ್ಕೆ
2.ಸೂಟಿಯ ದಿನಗಳು ತಲೆಕೆಳಗಾಗಿವೆ (4)
3.ಅನ್ಯವಲ್ಲದ, ಅದ್ವಿತೀಯ (3)
4.ದಂತಕ್ಕೆ ಬಂದ ನೋವು (4)
6.ಅಗ್ರಜನೊಂದಿಗೆ ಇರುವ ತಮ್ಮ (3)
7.ಕಾಳು-ಕಡ್ಡಿಗಳು ತಲೆಕೆಳಗಾಗಿವೆ (3)
8.ಆ ಕೂಡಲೆ ಎಂಬರ್ಥದ ಶಬ್ದ (3)
9.ಭೂಮಿಯ ಒಡೆಯನಾಗಿ ರಾಜ (3)
11.ಇದು ಪುಟ್ಟ ಹುಡುಗಿಯ ಲಂಗ (4)
13.ಕರವನ್ನು ಹಿಡಿದವಗೆ ಕೇಳಿದ ಮಧುರ ಧ್ವನಿ (4)
14.ಕೂಷ್ಮಾಂಡ-ತರಕಾರಿ ಕಾಯಿಯಿದು (3)

5919 ಉತ್ತರ

ಎಡದಿಂದ ಬಲಕ್ಕೆ:
1.ಬಯಲುಸೀಮೆ
3.ಹಂಬಲ 4.ಹಗಲು
5.ವಾಣಿ 6.ತನು
7.ಭಾಜನ 8.ಆರಡಿ
10.ಜಟಿಲ 12.ಆದಾಯ
13.ಲಿಪಿ 14.ರಾಮ
15.ತಾಂಡವ 16.ಶಂಕಿಸು
17.ಗಿಡಮೂಲಿಕೆ

ಮೇಲಿನಿಂದ ಕೆಳಕ್ಕೆ
: 1.ಬಲವಾನ
2.ಮೆಲುನುಡಿ 7.ಭಾವಜ
9.ಆಶಯ 11.ಲಲಿತಾಂಗಿ
12.ಆಮಶಂಕೆ

ವಿದ್ಯಾರ್ಥಿಗಳು ತಾಳ್ಮೆಯಿಂದ ಅಭ್ಯಾಸ ಮಾಡಬೇಕು



ಶಿಕಾರಿಪುರ : ವಿದ್ಯಾರ್ಥಿಗಳು ತಾಳ್ಮೆ, ಸಹನೆ ರೂಢಿಸಿಕೊಂಡು ಪರಿಶ್ರಮದಿಂದ ಅಭ್ಯಾಸ ಮಾಡಬೇಕು. ಕೇವಲ ಪಡೆಯುವ ಅಂಕದ ಬಗ್ಗೆ ಮಾತ್ರ ಅತಿಯಾಗಿ ಚಿಂತಿಸುವ ಅವಶ್ಯಕತೆ ಇರುವುದಿಲ್ಲ ಎಂದು ಸ್ವಾಮಿ ವಿವೇಕಾನಂದ ವಿದ್ಯಾ ಸಂಸ್ಥೆ ಅಧ್ಯಕ್ಷ ಎಂ.ಬಿ.ಶಿವಕುಮಾರ್ ಸಲಹೆ ನೀಡಿದರು.

ಪಟ್ಟಣದ ಭವಾನಿರಾವ್ ಕೇರಿಯಲ್ಲಿನ ಸ್ವಾಮಿ ವಿವೇಕಾನಂದ ವಿದ್ಯಾಸಂಸ್ಥೆಯ ಮೈತ್ರಿ ಪ್ರಾಥಮಿಕ ಶಾಲೆ ಮತ್ತು ಕುಮದ್ವತಿ ಪ್ರೌಢಶಾಲೆಯಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಸರಸ್ವತಿ ಪೂಜೆ ಮತ್ತು ಹತ್ತನೇ ತರಗತಿಯ ವಿದ್ಯಾರ್ಥಿಗಳ ಬೀಳ್ಕೊಡಿಗೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಪ್ರತಿಯೊಬ್ಬರಿಗೂ ಶ್ರಮದ ಜತೆ ಯಶಸ್ಸು ಸಹಜವಾಗಿ ಬರಲಿದೆ. ವಿದ್ಯಾರ್ಥಿಗಳು ಪರಿಶ್ರಮದಿಂದ ಸ್ವಂತ ಕಾಲ ಮೇಲೆ ನಿಂತಾಗ ತಾವು ಕಲಿತ ಶಾಲೆ ಹಾಗೂ ಸಮಾಜಕ್ಕೆ ತಮ್ಮಿಂದಾದ ಋಣವನ್ನು ತೀರಿಸಬೇಕೆಂದು ಹೇಳಿದರು.

ಮುಖ್ಯ ಅತಿಥಿ ಕುಮದ್ವತಿ ಪ್ರಥಮ ದರ್ಜೆ ಕಾಲೇಜಿನ ಪ್ರಾಚಾರ್ಯ ಡಾ.ರವೀಂದ್ರ ಕೆ.ಸಿ ಮಾತನಾಡಿ, ವಿದ್ಯಾರ್ಥಿಗಳು ನಿರ್ದಿಷ್ಟವಾದ ಗುರಿ ಹೊಂದಿ ಅದರ ಸಾಧನೆಗೆ ನಿರಂತರವಾಗಿ ಪರಿಶ್ರಮ ವಹಿಸಿದರೆ ಉನ್ನತ ಸ್ಥಾನ ಪಡೆಯಬಹುದಾಗಿದೆ. ಪೋಷಕರು ಹಲವು ಕಷ್ಟದ ಮಧ್ಯೆ ಮಕ್ಕಳ ವಿದ್ಯಾಭ್ಯಾಸಕ್ಕೆ ಯಾವುದೇ ರೀತಿಯ ತೊಂದರೆಯಾಗದಂತೆ ನೋಡಿಕೊಳ್ಳುತ್ತಾರೆ. ವಿದ್ಯಾರ್ಥಿಗಳು ಪೋಷಕರ ಮತ್ತು ಶಿಕ್ಷಕರ ಕನಸನ್ನು ನನಸು ಮಾಡುವ ನಿಟ್ಟಿನಲ್ಲಿ ಅಭ್ಯಾಸ ಮಾಡಬೇಕು. ಜನ್ಮ ನೀಡಿದ ಪೋಷಕರಿಗೂ ಮತ್ತು ವಿದ್ಯೆ ಕಲಿಸಿದ ಗುರುಗಳನ್ನು ಗೌರವದಿಂದ ಕಾಣಬೇಕು ಎಂದು ತಿಳಿಸಿದರು.

ಕಾರ್ಯಕ್ರಮ ಉದ್ಘಾಟಿಸಿದ ಶಾಲಾ ಪ್ರಾಚಾರ್ಯ ವಿಶ್ವನಾಥ. ಪಿ ಮಾತನಾಡಿ, ವಿದ್ಯಾರ್ಥಿಗಳು ಅಂಕ ಗಳಿಕೆಗೆ ಸೀಮಿತವಾಗದೇ ಉತ್ತಮವಾದ ನಡವಳಿಕೆ ಹಾಗೂ ಅಭ್ಯಾಸಗಳನ್ನು ಬೆಳೆಸಿಕೊಂಡು ಸುಸಂಸ್ಕೃತರಾಗಿ ರೂಪುಗೊಳ್ಳಬೇಕು. ಪ್ರತಿ ವಿದ್ಯಾರ್ಥಿಗೂ ಎಸ್‌ಎಸ್‌ಎಲ್‌ಸಿ ಹಂತ ಬಹುಮುಖ್ಯವಾಗಿದೆ. ಪರೀಕ್ಷಾ ಸಮಯ ಸಮೀಪಿಸುತ್ತಿರುವುದರಿಂದ ಪೌಷ್ಟಿಕ ಆಹಾರ ಸೇವಿಸಿ ಮಾನಸಿಕ ಹಾಗೂ ದೈಹಿಕ ಆರೋಗ್ಯವನ್ನು ಕಾಪಾಡಿಕೊಳ್ಳಬೇಕು. ಶಿಕ್ಷಕರ ಮಾರ್ಗದರ್ಶನದಲ್ಲಿ ಪರೀಕ್ಷೆಯನ್ನು ಎದುರಿಸಿ ಉತ್ತಮ ಫಲಿತಾಂಶವನ್ನು ಪಡೆದು ಪಾಲಕರು, ಗುರುಗಳು ಹಾಗೂ ಸಂಸ್ಥೆ ಕೀರ್ತಿ ಹೆಚ್ಚಿಸುವಂತೆ ತಿಳಿಸಿದರು.

ಶಾಲಾ ಪ್ರಭಾರಿ ಮುಖ್ಯ ಶಿಕ್ಷಕ ಪ್ರಶಾಂತಕುಬಸದ, ವಿದ್ಯಾರ್ಥಿಗಳು ಜೀವನದಲ್ಲಿ ಮೌಲ್ಯಗಳನ್ನು ಅಳವಡಿಸಿಕೊಳ್ಳಬೇಕು. ಇದರಿಂದ ಬದುಕು ಸುಂದರವಾಗುತ್ತದೆ. ಮೌಲ್ಯಗಳನ್ನು ಕಲಿಯಲು ಮಹಾತ್ಮರ ಜೀವನ ಚರಿತ್ರೆಗಳನ್ನು ಓದುವುದನ್ನು ರೂಢಿಸಿಕೊಳ್ಳಬೇಕು. ವಿದ್ಯಾರ್ಥಿಗಳು ಕನಸನ್ನು ಕಂಡು ಸಾಕಾರಗೊಳಿಸುವ ನಿಟ್ಟಿನಲ್ಲಿ ಕಾರ್ಯ ಪ್ರವೃತ್ತರಾಗಬೇಕೆಂದು ತಿಳಿಸಿದರು.

ಹಿರಿಯ ಶಿಕ್ಷಕಿ ರೇಷ್ಮಾ ಭಾನು, ಶಿಕ್ಷಕರಾದ ಹಾಲಸ್ವಾಮಿ, ಎಂ ಕೆ.ಚಂದನ್, ಚಂದ್ರಶೇಖರ್, ಮಂಜುಳಾ ಪಾಟೀಲ್, ಲಲಿತಾ, ರೇಖಾ, ಚಂದ್ರಮತಿ ಇತರರು ಉಪಸ್ಥಿತರಿದ್ದರು.

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸ ಪೂರ್ಣವೇ ಆದರೂ ಅವುಗಳಲ್ಲಿ ಕೊಡುವ ಮಾಹಿತಿ, ಗುಣಮಟ್ಟ ಮುಂತಾದವುಗಳ ಕುರಿತು ಸಾರ್ವಜನಿಕರು ಜಾಹೀರಾತು ನೀಡಿದವರೊಡನೆ ವ್ಯವಹರಿಸಬೇಕು. ಇದಕ್ಕೆ ಪತ್ರಿಕೆ ಜವಾಬ್ದಾರಿ ಇಲ್ಲಾ.

ಜಾಹೀರಾತು ವ್ಯವಸ್ಥಾಪಕರು

ಮಾನ್ಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.ನ್ಯಾಯಾಲಯ, ಶೃಂಗೇರಿ
ಕ್ರಿಮಿನಲ್.ಮಿಸ್. ನಂ :16/2026

ಅರ್ಜಿದಾರರು: 1)ಪ್ರವೀರ ಹೆಚ್.ಎಸ್. ಬಿನ್ ಶ್ರೀನಿವಾಸ ಗೌಡ, ಸುಮಾರು 46 ವರ್ಷ, ಹಂದಿಗೋಡು, ಉಳುವಳ್ಳಿ ಗ್ರಾಮ, ತ್ಯಾವಣ ಅಂಚೆ, ಶೃಂಗೇರಿ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ,

ವಿರುದ್ಧ

ಎದುರುದಾರರು : 1) ತಹಶೀಲ್ದಾರ್,ಶೃಂಗೇರಿ, ಶೃಂಗೇರಿ ತಾಲ್ಲೂಕು. 2)ಕಮಲಮ್ಮ ಕೋಂ ಕಳಸಪ್ಪ ಗೌಡ, ಸುಮಾರು 81 ವರ್ಷ, ಹಂದಿಗೋಡು, ಉಳುವಳ್ಳಿ ಗ್ರಾಮ, ತ್ಯಾವಣ ಅಂಚೆ, ಶೃಂಗೇರಿ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ, 3)ಹೆಚ್.ಸಿ.ವೀರಪ್ಪ ಗೌಡ ಬಿನ್ ಚಿನ್ನೇಗೌಡ @ಚಿನ್ನಯ್ಯಗೌಡ ಸುಮಾರು 70 ವರ್ಷ, ಪೆಟ್ರೋಲ್ ಬಂಕ್ ಹತ್ತಿರ, ಸಚ್ಚಿದಾನಂದಪುರ, ಶೃಂಗೇರಿ, ಶೃಂಗೇರಿ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ. 4)ಗಿರಿಯಪ್ಪ ಗೌಡ ಹೆಚ್.ಸಿ. ಬಿನ್ ಚಿನ್ನೇಗೌಡ @ಚಿನ್ನಯ್ಯಗೌಡ, ಸುಮಾರು 69 ವರ್ಷ, ಹಂದಿಗೋಡು, ಉಳುವಳ್ಳಿ ಗ್ರಾಮ, ತ್ಯಾವಣ ಅಂಚೆ, ಶೃಂಗೇರಿ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ, 5)ಹೇಮಾವತಿ ಕೋಂ ಶ್ರೀನಿವಾಸಗೌಡ, ಸುಮಾರು 68 ವರ್ಷ, ಹಂದಿಗೋಡು, ಉಳುವಳ್ಳಿ ಗ್ರಾಮ, ತ್ಯಾವಣ ಅಂಚೆ, ಶೃಂಗೇರಿ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.

ಸಾರ್ವಜನಿಕ ಪ್ರಕಟಣೆ (ಮನವಿ)

ಈ ಮೇಲ್ಕಂಡ ಪ್ರಕರಣದಲ್ಲಿ ಅರ್ಜಿದಾರನಾದ ಪ್ರವೀರ ಹೆಚ್.ಎಸ್ ರವರ ಅಜ್ಜ **ಲೇಟ್ ಚಿನ್ನೇಗೌಡ ಬಿನ್ ಅಣ್ಣೇಗೌಡ** ಇವರು **ದಿನಾಂಕ:08-11-1989** ರಲ್ಲಿ ಅವರ ಮನೆಯಲ್ಲಿ ಮರಣ ಹೊಂದಿರುತ್ತಾರೆ.ಈ ಸಂಬಂಧ ಮರಣ ದೃಢೀಕರಣ ಪತ್ರಪಡೆಯುವ ಉದ್ದೇಶದಿಂದ ಮೇಲ್ಕಂಡ ಪ್ರಕರಣವನ್ನು ಶೃಂಗೇರಿ ನ್ಯಾಯಾಲಯದಲ್ಲಿ ಅರ್ಜಿದಾರನು ಸಲ್ಲಿಸಿದ್ದು, **ದಿನಾಂಕ:17-04-2026ಕ್ಕೆ** ಪ್ರಕರಣವು ವಿಚಾರಣೆಗೆ ನಿಗದಿಯಾಗಿರುತ್ತದೆ. ಯಾರಾದರು ಹಿತಾಸಕ್ತಿವುಳ್ಳವರು ಈ ದಿನಾಂಕದಂದು ನ್ಯಾಯಾಲಯಕ್ಕೆ ಹಾಜರಾಗ ಬಹುದಾಗಿರುತ್ತದೆ ಇಲ್ಲವಾದಲ್ಲಿ ನ್ಯಾಯಾಲಯವು ಸೂಕ್ತ ಆದೇಶವನ್ನು ಪ್ರಕರಣವನ್ನಾಧರಿಸಿ ನೀಡಲಿದೆ.

ಅರ್ಜಿದಾರರ ಪರ ನ್ಯಾಯವಾದಿ
ಪ್ರದೀಪ.ಕೆ., ವಕೀಲರು
ಬ್ಯಾಂಕ್ ಆಫ್ ಬರೋಡ ಮುಂಭಾಗ
ಭಾರತಿ ಬೀದಿ, ಶೃಂಗೇರಿ–577139

ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/–ಶಿರಸ್ತೇದಾರರು,
ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಲಯ, ಶೃಂಗೇರಿ

ಮಾನ್ಯ ಸಿವಿಲ್ ನ್ಯಾಯಾಧೀಶರು ಮತ್ತು ಹೆಚ್ಚುವರಿ ಜೆ.ಎಂ.ಎಫ್.ಸಿ.ರವರ ನ್ಯಾಯಾಲಯ, ತರೀಕೆರೆ
ಕ್ರಿಮಿನಲ್.ಮಿಸ್. ನಂ : 491/2025

ಅರ್ಜಿದಾರರು: 1)ನಾಗರಾಜಭೋವಿ ಬಿನ್ ಲೇಟ್ ಬಸವಭೋವಿ, ಸುಮಾರು 40 ವರ್ಷ, ಜಿರಾಯ್ತು ಕಸುಬು, ವಾಸ: 82, ಸಹ್ಯಾದ್ರಿಪುರ, ಲಿಂಗದಹಳ್ಳಿ, ಲಿಂಗದಹಳ್ಳಿ ಹೋಬಳಿ, ತರೀಕೆರೆ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ ವಾಸಿ.

ವಿರುದ್ಧ

ಎದುರುದಾರರು: 1)ತಹಶೀಲ್ದಾರ್‌ರವರು, ತರೀಕೆರೆ ತಾಲ್ಲೂಕು, ತರೀಕೆರೆ. 2)ಗ್ರಾಮ ಲೆಕ್ಕಾಧಿಕಾರಿಗಳು, ಲಿಂಗದಹಳ್ಳಿ ವೃತ್ತ, ತರೀಕೆರೆ ತಾಲ್ಲೂಕು.

ಸಾರ್ವಜನಿಕ ಪ್ರಕಟಣೆ

ಅರ್ಜಿದಾರರ ತಂದೆಯಾದ **ಬಸವಭೋವಿ ಬಿನ್ ನಾಗರಾಜಭೋವಿ ದಿನಾಂಕ: 20-11-2013** ರಂದು ಹಾಗೂ ಅರ್ಜಿದಾರರ ತಾಯಿಯಾದ **ಜಯಮ್ಮ ಕೋಂ ಬಸವಭೋವಿ** ಇವರು **ದಿನಾಂಕ: 10-09-2012** ರಂದು ತರೀಕೆರೆ ತಾಲ್ಲೂಕು,ಲಿಂಗದಹಳ್ಳಿ ಹೋಬಳಿ, ಲಿಂಗದಹಳ್ಳಿ ಗ್ರಾಮದಲ್ಲಿ, ಮರಣ ಹೊಂದಿರುತ್ತಾರೆ ಅರ್ಜಿದಾರರು ಸದರಿಯವರ ಕಾನೂನುಬದ್ಧ ವಾರಸುದಾರರಾಗಿರುತ್ತಾರೆ. ಇವರ ಹೆಸರಿಗೆ ಇರುವ ಖಾತೆಯನ್ನು ಪೌತಿವಾರಸು ಮೇರೆಗೆ ಖಾತೆ ಬದಲಾವಣೆ ಮಾಡಿಸುವ ಸಲುವಾಗಿ ಘನ ನ್ಯಾಯಾಲಯದ ಮೂಲಕ ಸದರಿ **ಬಸವಭೋವಿ ಬಿನ್ ನಾಗರಾಜಭೋವಿ ಮತ್ತು ಜಯಮ್ಮ ಕೋಂ ಬಸವಭೋವಿ** ರವರುಗಳ ಮರಣ ಪ್ರಮಾಣ ಪತ್ರವನ್ನು ಪಡೆಯಲು ಈ ಅರ್ಜಿಯನ್ನು ಅರ್ಜಿದಾರರು ಸಲ್ಲಿಸಿರುತ್ತಾರೆ. ಈ ವಿಷಯದ ಬಗ್ಗೆ ಈ ಅರ್ಜಿಯಲ್ಲಿ ತಿಳಿಸಿರುವ ಅರ್ಜಿದಾರರನ್ನು ಬಿಟ್ಟು ಬೇರೆ ವಾರಸುದಾರರು ಯಾರಾದರೂ ಇದ್ದಲ್ಲಿ ತಕರಾರು ಸಲ್ಲಿಸುವವರು ಇದ್ದರೆ ನ್ಯಾಯಾಲಯದಲ್ಲಿ ಮುದ್ದತ್ತು **ದಿನಾಂಕ:10-04-2026ರಂದು ಬೆಳಿಗ್ಗೆ 11.00 ಗಂಟೆಗೆ** ಈ ಕೇಸಿನಲ್ಲಿ ಖುದ್ದಾಗಿ ಆಗಲಿ ಅಥವಾ ತಮ್ಮ ವಕೀಲರ ಮುಖಾಂತರವಾಗಲೀ ನ್ಯಾಯಾಲಯಕ್ಕೆ ಹಾಜರಾಗಿ ತಮ್ಮ ತಕರಾರನ್ನು ಸಲ್ಲಿಸತಕ್ಕದ್ದು. ತಪ್ಪಿದ್ದಲ್ಲಿ ಈ ಮೇಲ್ಕಂಡ ಅರ್ಜಿಯನ್ನು ಏಕಪಕ್ಷೀಯವಾಗಿ ತೀರ್ಮಾನಿಸಲಾಗುವುದು ಎಂದು ತಿಳಿಯಿರಿ.

ಹೆಚ್.ಬಿ.ನಾಗಭೂಷಣ್
ಅರ್ಜಿದಾರರ ಪರ ವಕೀಲರು
ತರೀಕೆರೆ
ದಿನಾಂಕ:10-03-2026

ನ್ಯಾಯಾಲಯದ ಅಪ್ಪಣೆ ಮೇರೆಗೆ
ಸಹಿ/–ಶಿರಸ್ತೇದಾರರು, ಮಾನ್ಯ ಸಿವಿಲ್ ನ್ಯಾಯಾಧೀಶರು ಮತ್ತು ಹೆಚ್ಚುವರಿ ಜೆ.ಎಂ.ಎಫ್.ಸಿ. ನ್ಯಾಯಾಲಯ, ತರೀಕೆರೆ

ಮುಖ್ಯ ವೈದ್ಯಾಧಿಕಾರಿಗಳ ಕಛೇರಿ, ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ,ತರೀಕೆರೆ

ಚಿಕ್ಕಮಗಳೂರು ಜಿಲ್ಲೆ-577228.
ಇ-ಮೇಲ್: ghtarikere@gmail.com ದೂರವಾಣಿ-08261-295405

ಸಂಖ್ಯೆ: ಸಾಆತ/ಹೊ ಗ್ರೂಪ್ ಡಿ ಟೆಂ/09/2025-26, ದಿನಾಂಕ:05-03-2026

2026-27ನೇ ಸಾಲಿಗೆ ಹೊರಗುತ್ತಿಗೆ ಆಧಾರದ ಮೇಲೆ ಗ್ರೂಪ್ 'ಡಿ' ಸೇವೆ ಪಡೆಯುವ ಸಂಬಂಧ ಮರು ಟೆಂಡರ್‌ಪ್ರಕಟಣೆ (CALL-2)

ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ, ತರೀಕೆರೆ, ಚಿಕ್ಕಮಗಳೂರು ಜಿಲ್ಲೆ ಇಲ್ಲಿನ 2026-27 ನೇ ಸಾಲಿಗೆ ಹೊರಗುತ್ತಿಗೆ ಆಧಾರದ ಮೇಲೆ ಗ್ರೂಪ್ 'ಡಿ' ಸೇವೆ ಪಡೆಯಲು ಅರ್ಹ ಸಂಸ್ಥೆಗಳಿಂದ ಇ-ಪ್ರಕ್ಯೂರ್‌ಮೆಂಟ್ ಮುಖಾಂತರ, ಮರು ಇ-ಟೆಂಡರ್‌ನ್ನು ಆಹ್ವಾನಿಸಿದ್ದು, ಆಸಕ್ತ ಅರ್ಹ ಟೆಂಡರ್‌ದಾರರು **ದಿನಾಂಕ:05/03/2026** ರಂದು ಅಥವಾ ತದನಂತರ ಇಲಾಖಾ ವೆಬ್‌ಸೈಟ್ https://kppp.karnataka.gov.in ಲಾಗಿನ್‌ನಲ್ಲಿ ಇ-ಪೋರ್ಟಲ್ ಮುಖಾಂತರ ಟೆಂಡರ್ ಸಲ್ಲಿಸತಕ್ಕದ್ದು, ಟೆಂಡರ್ ಅಪ್‌ಲೋಡ್ ಮಾಡಲು ಅಂತಿಮ **ದಿನಾಂಕ:20/03/2026 ರ ಸಂಜೆ 04-30** ಗಂಟೆಯವರೆಗೆ, ಹೆಚ್ಚಿನ ಮಾಹಿತಿಯನ್ನು ಇ-ಪೋರ್ಟಲ್‌ನಲ್ಲಿ ಪಡೆಯತಕ್ಕದ್ದು.

**ಸಹಿ/- ಮುಖ್ಯ ವೈದ್ಯಾಧಿಕಾರಿಗಳು,
ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ, ತರೀಕೆರೆ**

ಗೌರವಾನ್ವಿತ ಹಿರಿಯ ಸಿವಿಲ್ ಜಡ್ ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯದಲ್ಲಿ, ಹೊಳಲ್ಕೆರೆ

ಸಿ.ಆರ್.ಮಿಸ್. ನಂ : 215/2025

ಅರ್ಜಿದಾರರು: 1)ಮಂಜಪ್ಪ ಬಿನ್ ಲೇಟ್ ರಂಗಪ್ಪ, ವಯಸ್ಸು ಸುಮಾರು 52 ವರ್ಷ, 2)ತಿಪ್ಪೇಸ್ವಾಮಿ ಬಿನ್ ಲೇಟ್ ರಂಗಪ್ಪ, ವಯಸ್ಸು ಸುಮಾರು 49 ವರ್ಷ. ಇಬ್ಬರೂ ವ್ಯವಸಾಯ ಕೆಲಸ, ದುಮ್ಮಿ ಗ್ರಾಮ, ಹೊಳಲ್ಕೆರೆ ತಾಲ್ಲೂಕು.

ವಿರುದ್ಧ

ಎದುರುದಾರರು : ತಹಶೀಲ್ದಾರರು, ಜನನ ಮತ್ತು ಮರಣ ನೊಂದಣಾಧಿಕಾರಿಗಳು, ಹೊಳಲ್ಕೆರೆ ತಾಲ್ಲೂಕು.

ಸಾರ್ವಜನಿಕ ಪ್ರಕಟಣೆ

ಮೇಲ್ಕಂಡ ಅರ್ಜಿದಾರರು ಎದುರುದಾರರ ವಿರುದ್ಧ ಘನ ನ್ಯಾಯಾಲಯದಲ್ಲಿ ಅರ್ಜಿದಾರರ ಅಜ್ಜಿಯಾದ **ಹಾಲಮ್ಮ ಕೋಂ ನಾರಾಯಣಪ್ಪ** ಇವರು **ದಿನಾಂಕ: 05-11-1973** ರಂದು ಹೊಳಲ್ಕೆರೆ ತಾಲ್ಲೂಕು, ರಾಮಗಿರಿ ಹೋಬಳಿ, ದುಮ್ಮಿ ಗ್ರಾಮದ ಅರ್ಜಿದಾರರ ಸ್ವಗೃಹದಲ್ಲಿ ಮರಣ ಹೊಂದಿದ್ದು, ಸದರಿ ಮೃತರ ಮರಣ ಪ್ರಮಾಣ ಪತ್ರವನ್ನು ಕೋರಿ ಎದುರುದಾರರ ವಿರುದ್ಧ ಅರ್ಜಿಯನ್ನು ಘನ ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ. ಸದರಿ ಅರ್ಜಿಗೆ ಸಂಬಂಧಿಸಿದಂತೆ ಮೇಲ್ಕಂಡ ಎದುರುದಾರರನ್ನು ಬಿಟ್ಟು ಬೇರೆ ಯಾರದರೂ ವಾರಸುದಾರರು ಇದ್ದರೆ ತಮ್ಮ ತಂಟೆ ತಕರಾರುಗಳು ಏನಾದರೂ ಇದ್ದಲ್ಲಿ **ದಿನಾಂಕ:06-06-2026ರಂದು ಪೂರ್ವಾಹ್ನ 11-00 ಗಂಟೆಗೆ** ಖುದ್ದಾಗಿಯಾಗಲೀ ಅಥವಾ ವಕೀಲರ ಮೂಲಕವಾಗಲೀ ಘನ ನ್ಯಾಯಾಲಯಕ್ಕೆ ಹಾಜರಾಗಿ ತಮ್ಮ ಲಿಖಿತ ತಕರಾರು/ಆಕ್ಷೇಪಣೆಗಳು ಏನಾದರೂ ಇದ್ದರೆ ಸಲ್ಲಿಸತಕ್ಕದ್ದು, ತಪ್ಪಿದ ಪಕ್ಷದಲ್ಲಿ ಈ ಮೇಲ್ಕಂಡ ಅರ್ಜಿಯನ್ನು ಗೈರು ಹಾಜರಿಯಲ್ಲಿ ಏಕಪಕ್ಷೀಯವಾಗಿ ತೀರ್ಮಾನಿಸಲಾಗುವುದು ತಿಳಿಯಿರಿ. ನ್ಯಾಯಾಲಯದ ಮುದ್ರೆ, ನನ್ನ ಸಹಿಯೊಂದಿಗೆ ದಿನಾಂಕ:10-03-2026 ರಂದು ಕೊಡಲ್ಪಟ್ಟಿದೆ.

ಅರ್ಜಿದಾರರ ಪರ ವಕೀಲರು	**ನ್ಯಾಯಾಲಯದ ಆದೇಶದ ಮೇರೆಗೆ**
ಶ್ರೀ ಎಸ್.ವಿಜಯ (ಕಾಲ್ಕೆರೆ)	**ಸಹಿ/-ಶಿರಸ್ತೇದಾರರು,**
ವಕೀಲರು,ಹೊಳಲ್ಕೆರೆ	**ಹಿರಿಯ ಸಿವಿಲ್ ಜಡ್ಜ್ ಮತ್ತು**
ದಿನಾಂಕ:10-03-2026	**ಜೆ.ಎಂ.ಎಫ್.ಸಿ.ನ್ಯಾಯಾಲಯ, ಹೊಳಲ್ಕೆರೆ**

ಶಿವಮೊಗ್ಗ ಮಹಾನಗರ ಪಾಲಿಕೆ, ಶಿವಮೊಗ್ಗ,

ಕ್ರಮಾಂಕ:ಶಿಮನಪಾಶಿ:ಕಾವಿ:ಟೆಂಡರ್: 53/2025-26 ದಿನಾಂಕ: 09.03.2026

ಟೆಂಡರ್ ಪ್ರಕಟಣೆ (KPP PORTAL ಮುಖಾಂತರ)

ಶಿವಮೊಗ್ಗ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಈ ಕೆಳಕಂಡ ಕಾಮಗಾರಿ ನಿರ್ವಹಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಆಕ್ಟ್ 1999 ರ ನಿಯಮದಂತೆ ಹಾಗೂ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ನಿಯಮದನ್ವಯ KPP PORTAL ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. KPP PORTAL ಟೆಂಡರ್ ನಲ್ಲಿ ಭಾಗವಹಿಸಲು ಇಚ್ಛಿಸುವ ಗುತ್ತಿಗೆದಾರರು ವಿವರಗಳನ್ನು ವೆಬ್ ಸೈಟ್ www.kppp.karnataka.gov.in ನಲ್ಲಿ ಪಡೆದುಕೊಳ್ಳಬಹುದು.

1) ಪರಿಶಿಷ್ಟ ಜಾತಿ (SC) ಗುತ್ತಿಗೆದಾರರು ಭಾಗವಹಿಸಿಬೇಕಾದ ಕಾಮಗಾರಿ: INDENT 55439, 2) CAT - II (A) ಗುತ್ತಿಗೆದಾರರು ಭಾಗವಹಿಸಿಬೇಕಾದ ಕಾಮಗಾರಿ: INDENT 55440 3) ಇತರೆ ಗುತ್ತಿಗೆದಾರರು ಭಾಗವಹಿಸಿಬೇಕಾದ ಕಾಮಗಾರಿಗಳು: INDENT 55985, 55992, 55976 & 55441 4) KPP PORTAL ಮೂಲಕ ಕಾಮಗಾರಿಗಳಿಗೆ ಅರ್ಜಿ ಸಲ್ಲಿಸಲು ಕೊನೆಯ ದಿ:16.03.2026 (ಸಂಜೆ: 4.00 ಗಂಟೆಗೆ) 5) KPP PORTAL ಮೂಲಕ ಕಾಮಗಾರಿಗಳಿಗೆ ತಾಂತ್ರಿಕ ಬಿಡ್ ತೆರೆಯುವ ದಿನಾಂಕ:17.03.2026 (ಸಂಜೆ: 4.30 ಗಂಟೆಗೆ) 6) ಅನುದಾನ: 2021-22 ನೇ ಸಾಲಿನ 15 ನೇ ಹಣಕಾಸು ಆಯೋಗದ MPC ಅನುದಾನ, 2025-26 ನೇ ಸಾಲಿನ ಪಾಲಿಕೆ ಸಾಮಾನ್ಯ ನಿಧಿ ಮತ್ತು 2023-24ನೇ ಸಾಲಿನ ಎಸ್. ಎಫ್. ಸಿ ಮುಕ್ತ ನಿಧಿ (ಶೇ.5%) ರ ಅನುದಾನ

ಸೂಚನೆ: ಹೆಚ್ಚಿನ ವಿವರಗಳನ್ನು KPP PORTAL ಮುಖಾಂತರ ಪಡೆಯಬಹುದು ಮತ್ತು ಇತರೇ ವಿವರಗಳನ್ನು ಕಛೇರಿ ಸೂಚನಾ ಫಲಕದಲ್ಲಿ ಪಡೆಯಬಹುದಾಗಿದೆ. ಹಾಗೂ ಟೆಂಡರ್ ಗೆ ಸಂಬಂಧಪಟ್ಟ ಯಾವುದೇ ರೀತಿಯ ಬದಲಾವಣೆ ಅಥವಾ ತಿದ್ದುಪಡಿಯನ್ನು KPP PORTAL ಮುಖಾಂತರ ಸೂಚಿಸಲಾಗುವುದು.

ಸಹಿ/- ಕಾರ್ಯಪಾಲಕ ಅಭಿಯಂತರರು, ಮಹಾನಗರಪಾಲಿಕೆ, ಶಿವಮೊಗ್ಗ

ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/25-26/59/03/1984

ಗೌರವಾನ್ವಿತ ಹೊಳಲ್ಕೆರೆ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯದಲ್ಲಿ

ಸಿ.ಆರ್.ಮಿಸ್. ನಂ : 42/2026

ಅರ್ಜಿದಾರರು: 1)ಎಂ.ತಿಪ್ಪೇಶ ಬಿನ್ ಲೇಟ್ ಮಹಂತೇಶ ಯಾನೆ ಮಾಂತೇಶಪ್ಪ, ವಯಸ್ಸು 32ವರ್ಷ,ವ್ಯವಸಾಯ, 2)ಸುನಿತ ಹೆಚ್. ಕೋಂ ಲೇಟ್ ನಾಗರಾಜಪ್ಪ, ವಯಸ್ಸು 32 ವರ್ಷ,ಮನೆಕೆಲಸ,ಇಬ್ಬರ ವಾಸ: ನೇರಲಕಟ್ಟೆ ಗ್ರಾಮ, ತಾಳ್ಯ ಹೋಬಳಿ, ಹೊಳಲ್ಕೆರೆ ತಾಲ್ಲೂಕು.

ವಿರುದ್ಧ

ಎದುರುದಾರರು: ಜನನ ಮತ್ತು ಮರಣ ನೊಂದಣಾಧಿಕಾರಿಗಳು/ ಮಾನ್ಯ ತಹಶೀಲ್ದಾರ್ ರವರ ತಾಲ್ಲೂಕು ಕಛೇರಿ, ಹೊಳಲ್ಕೆರೆ.

ಸಾರ್ವಜನಿಕ ಪ್ರಕಟಣೆ

ಮೇಲ್ಕಂಡ ಕೇಸಿನ 1ನೇ ಅರ್ಜಿದಾರರ ತಾಯಿ ಮತ್ತು 2ನೇ ಅರ್ಜಿದಾರರ ಅತ್ತೆಯಾದ **ಶ್ರೀಮತಿ ಗೌರಮ್ಮ ಕೋಂ ಮಹಂತೇಶ** ರವರು ಹೊಳಲ್ಕೆರೆ ತಾಲ್ಲೂಕು, ತಾಳ್ಯ ಹೋಬಳಿ, ಕಸವನಹಳ್ಳಿ ಗ್ರಾಮದಲ್ಲಿ **ದಿನಾಂಕ:01-03-1997** ರಂದು ಮರಣ ಹೊಂದಿರುತ್ತಾರೆ, ಮರಣ ಸಮರ್ಥನ ಪತ್ರ ಪಡೆಯಲು ಎದುರುದಾರರ ವಿರುದ್ಧ ಅರ್ಜಿದಾರರು ಮಾನ್ಯ ಹೊಳಲ್ಕೆರೆಯ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಸದರಿ **ಶ್ರೀಮತಿ ಗೌರಮ್ಮ ಕೋಂ ಮಹಂತೇಶ ರವರ** ಮರಣ ಸಮರ್ಥನ ಪತ್ರ ಪಡೆಯುವ ಬಗ್ಗೆ ಬೇರೆ ಯಾರಿಗಾದರೂ ತಂಟೆ ತಕರಾರು ಇದ್ದಲ್ಲಿ ಹೊಳಲ್ಕೆರೆಯ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿ **ದಿನಾಂಕ:02-05-2026 ರಂದು ಬೆಳಿಗ್ಗೆ 11ಗಂಟೆಗೆ** ಖುದ್ದಾಗಿಯಾಗಲೀ ಅಥವಾ ವಕೀಲರ ಮೂಲಕವಾಗಲೀ ಹಾಜರಾಗಿ ತಮ್ಮ ಲಿಖಿತ ತಕರಾರು / ಆಕ್ಷೇಪಣೆಗಳು ಏನಾದರೂ ಇದ್ದರೆ ಸಲ್ಲಿಸತಕ್ಕದ್ದು, ತಪ್ಪಿದ ಪಕ್ಷದಲ್ಲಿ ಈ ಮೇಲ್ಕಂಡ ಅರ್ಜಿಯನ್ನು ಯಾವುದೇ ತಕರಾರು ಇಲ್ಲ ಎಂದು ಪರಿಗಣಿಸಿ ಏಕಪಕ್ಷೀಯವಾಗಿ ತೀರ್ಮಾನಿಸಲಾಗುವುದು ತಿಳಿಯಿರಿ. ನ್ಯಾಯಾಲಯದ ಮುದ್ರೆ, ನನ್ನ ಸಹಿಯೊಂದಿಗೆ ದಿನಾಂಕ: 10-03-2026 ರಂದು ಕೊಡಲ್ಪಟ್ಟಿದೆ.

ಅರ್ಜಿದಾರರ ಪರ ವಕೀಲರು	**ನ್ಯಾಯಾಲಯದ ಆದೇಶದ ಮೇರೆಗೆ**
ಶ್ರೀ ಹೆಚ್.ಕೆ.ವಿನಯ್‌ಪ್ರಸಾದ್	**ಸಹಿ/-ಶಿರಸ್ತೇದಾರರು,**
ವಕೀಲರು,ಹೊಳಲ್ಕೆರೆ	**ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
ದಿನಾಂಕ:10-03-2026	**ಜೆ.ಎಂ.ಎಫ್.ಸಿ.ನ್ಯಾಯಾಲಯ, ಹೊಳಲ್ಕೆರೆ**

ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ,

ನಂ.1 ಕಟ್ಟಡಗಳ ವಿಭಾಗ, ಎಸ್.ಜೆ.ಪಿ. ಆವರಣ, ಬೆಂಗಳೂರು.
ದೂರವಾಣಿ: 080-22255210

ಸಂ: ಕಾಅ/ಕವಿ.1/ಎಇ-4/2025-26/82 ದಿನಾಂಕ: 07.03.2026

ಟೆಂಡರ್‌ಗಾಗಿ ಆಹ್ವಾನ

ಮೇಲ್ಕಂಡ ಇಲಾಖೆಯು ಕೆಳಕಂಡ ಕಾಮಗಾರಿಗಳಿಗೆ ಅರ್ಹ ಟೆಂಡರ್‌ದಾರರಿಂದ ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **(http://kppp.karnataka.gov.in)** ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಿದೆ. **ಕಾಮಗಾರಿ ಹೆಸರು:** 1) ತಿರುಪತಿಯ ತಿರುಚನೂರ್‌ನಲ್ಲಿರುವ ಮೈಸೂರು ಮಹಾರಾಜ ಚೌಲ್ಟ್ರಿಯ ನವೀಕರಣ ಕಾಮಗಾರಿ (ಇತರೆ ವರ್ಗಕ್ಕೆ ಮೀಸಲು) (ಟೆಂಡರ್ ಉಲ್ಲೇಖ: ಪಿಡಬ್ಲ್ಯೂಡಿ/2025-26/ಬಿಡಿ/ವರ್ಕ್-ಇಂಡೆಂಟ್33697) (1ನೇ ಕರೆ). ಕಾಮಗಾರಿಗಿಟ್ಟ ಅಂದಾಜು ಮೊತ್ತ: **ರೂ.308.14 ಲಕ್ಷಗಳು.** ಇಎಂಡಿ: **ರೂ.4,62,300/-** (ರೂ.1,00,000/- ಹಣವನ್ನು ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಮತ್ತು ಉಳಿದ ಹಣ ರೂ.3,62,300/-ನ್ನು ಬಿಜಿ, ಎಫ್‌ಡಿಆರ್, ಬ್ಯಾಂಕರ್ಸ್ ಸರ್ಟಿಫಿಕೇಟ್ ಮೂಲಕ ಪಾವತಿಸುವುದು). ಕಾಲಾವಧಿ: **9 ತಿಂಗಳು (ಮಳೆಗಾಲ ಸೇರಿದಂತೆ).** 2) ಬೆಂಗಳೂರಿನ ಕುಮಾರ ಕೃಪ ರಸ್ತೆಯಲ್ಲಿರುವ ನೂತನ ಕುಮಾರ ಕೃಪ ಅತಿಥಿಗೃಹದಲ್ಲಿ ಗ್ರೌಟಿಂಗ್, ಕ್ರ್ಯಾಕ್ ಫಿಲ್ಲಿಂಗ್, ವಾಟರ್ ಪ್ರೂಫಿಂಗ್ ಒದಗಿಸುವ ಮೂಲಕ 4ನೇ ಮತ್ತು 7ನೇ ಮಹಡಿಯಲ್ಲಿನ ಟೆರೇಸ್‌ಗಳಿಂದ ಮತ್ತು 4ನೇ ಮಹಡಿಯಲ್ಲಿನ ಎಕ್ಸ್‌ಪಾನ್ಷನ್ ಜಾಯಿಂಟ್‌ಗಳಿಂದ ಸೋರಿಕೆಯನ್ನು ತಡೆಯುವುದು ಮತ್ತು ಇತರ ಸಂಬಂಧಿತ ಕೆಲಸಗಳು (IIA ವರ್ಗಕ್ಕೆ ಮೀಸಲು). (ಟೆಂಡರ್ ಉಲ್ಲೇಖ: ಪಿಡಬ್ಲ್ಯೂಡಿ/2025-26/ಬಿಡಿ/ವರ್ಕ್-ಇಂಡೆಂಟ್30266/ಕರೆ-2) (2ನೇ ಕರೆ). ಕಾಮಗಾರಿಗಿಟ್ಟ ಅಂದಾಜು ಮೊತ್ತ: **ರೂ.40.70 ಲಕ್ಷಗಳು.** ಇಎಂಡಿ: **ರೂ.40,710/-.** ಕಾಲಾವಧಿ: **2 ತಿಂಗಳು.** ಪ್ರತೀ ಕಾಮಗಾರಿಯ ದಸ್ತಾವೇಜು ಬೆಲೆ: ಇ-ಪೋರ್ಟಲ್‌ನಲ್ಲಿ ತಿಳಿಸಿರುವಂತೆ. ಟೆಂಡರ್‌ಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಡೌನ್‌ಲೋಡ್ ಮಾಡಿಕೊಂಡು ಆನ್‌ಲೈನ್‌ನಲ್ಲಿ ಸಲ್ಲಿಸಲು ಕೊನೆಯ ದಿನಾಂಕ: **16.03.2026, ಸಂಜೆ 4.00 ಗಂಟೆಯೊಳಗೆ.** ಟೆಂಡರ್‌ಗಳನ್ನು ತೆರೆಯುವ ದಿನಾಂಕ: ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ತಿಳಿಸಿರುವಂತೆ. ಕಾಮಗಾರಿಯ ಸಂಕ್ಷಿಪ್ತ ವಿವರಗಳು, ಮೀಸಲಾತಿ, ಇತರೆ ಹೆಚ್ಚಿನ ಮಾಹಿತಿಯನ್ನು ಮೇಲ್ಕಂಡ ಕಚೇರಿಯಿಂದ ಅಥವಾ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **http://kppp.karnataka.gov.in** ಮೂಲಕ ಪಡೆಯಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು

ವಾಸಾಸಂಇ/ ಉನಿ-ಸಿ.ಪಿ/ 6122/ ಕೆಎಸ್‌ಎಂಸಿಎ/ 2025-26

ಗೌರವಾನ್ವಿತ ಹಿರಿಯ ಸಿವಿಲ್ ಜಡ್ ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯದಲ್ಲಿ, ಹೊಳಲ್ಕೆರೆ

ಸಿ.ಆರ್.ಮಿಸ್. ನಂ : 214/2025

ಅರ್ಜಿದಾರರು: 1)ಮಂಜಪ್ಪ ಬಿನ್ ಲೇಟ್ ರಂಗಪ್ಪ, ವಯಸ್ಸು ಸುಮಾರು 52 ವರ್ಷ, 2)ತಿಪ್ಪೇಸ್ವಾಮಿ ಬಿನ್ ಲೇಟ್ ರಂಗಪ್ಪ, ವಯಸ್ಸು ಸುಮಾರು 49 ವರ್ಷ. ಇಬ್ಬರೂ ವ್ಯವಸಾಯ ಕೆಲಸ, ದುಮ್ಮಿ ಗ್ರಾಮ, ಹೊಳಲ್ಕೆರೆ ತಾಲ್ಲೂಕು.

ವಿರುದ್ಧ

ಎದುರುದಾರರು : ತಹಶೀಲ್ದಾರರು, ಜನನ ಮತ್ತು ಮರಣ ನೊಂದಣಾಧಿಕಾರಿಗಳು, ಹೊಳಲ್ಕೆರೆ ತಾಲ್ಲೂಕು.

ಸಾರ್ವಜನಿಕ ಪ್ರಕಟಣೆ

ಮೇಲ್ಕಂಡ ಅರ್ಜಿದಾರರು ಎದುರುದಾರರ ವಿರುದ್ಧ ಘನ ನ್ಯಾಯಾಲಯದಲ್ಲಿ ಅರ್ಜಿದಾರರ ಅಜ್ಜನಾದ **ನಾರಾಯಣಪ್ಪ ಬಿನ್ ಹನುಮಂತಪ್ಪ** ಇವರು **ದಿನಾಂಕ: 29-05-1976** ರಂದು ಹೊಳಲ್ಕೆರೆ ತಾಲ್ಲೂಕು, ರಾಮಗಿರಿ ಹೋಬಳಿ, ದುಮ್ಮಿ ಗ್ರಾಮದ ಅರ್ಜಿದಾರರ ಸ್ವಗೃಹದಲ್ಲಿ ಮರಣ ಹೊಂದಿದ್ದು, ಸದರಿ ಮೃತರ ಮರಣ ಪ್ರಮಾಣ ಪತ್ರವನ್ನು ಕೋರಿ ಎದುರುದಾರರ ವಿರುದ್ಧ ಅರ್ಜಿಯನ್ನು ಘನ ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ. ಸದರಿ ಅರ್ಜಿಗೆ ಸಂಬಂಧಿಸಿದಂತೆ ಮೇಲ್ಕಂಡ ಎದುರುದಾರರನ್ನು ಬಿಟ್ಟು ಬೇರೆ ಯಾರದರೂ ವಾರಸುದಾರರು ಇದ್ದರೆ ತಮ್ಮ ತಂಟೆ ತಕರಾರುಗಳು ಏನಾದರೂ ಇದ್ದಲ್ಲಿ **ದಿನಾಂಕ:06-06-2026ರಂದು ಪೂರ್ವಾಹ್ನ 11-00 ಗಂಟೆಗೆ** ಖುದ್ದಾಗಿಯಾಗಲೀ ಅಥವಾ ವಕೀಲರ ಮೂಲಕವಾಗಲೀ ಘನ ನ್ಯಾಯಾಲಯಕ್ಕೆ ಹಾಜರಾಗಿ ತಮ್ಮ ಲಿಖಿತ ತಕರಾರು/ಆಕ್ಷೇಪಣೆಗಳು ಏನಾದರೂ ಇದ್ದರೆ ಸಲ್ಲಿಸತಕ್ಕದ್ದು, ತಪ್ಪಿದ ಪಕ್ಷದಲ್ಲಿ ಈ ಮೇಲ್ಕಂಡ ಅರ್ಜಿಯನ್ನು ಗೈರು ಹಾಜರಿಯಲ್ಲಿ ಏಕಪಕ್ಷೀಯವಾಗಿ ತೀರ್ಮಾನಿಸಲಾಗುವುದು ತಿಳಿಯಿರಿ. ನ್ಯಾಯಾಲಯದ ಮುದ್ರೆ, ನನ್ನ ಸಹಿಯೊಂದಿಗೆ ದಿನಾಂಕ:10-03-2026 ರಂದು ಕೊಡಲ್ಪಟ್ಟಿದೆ.

ಅರ್ಜಿದಾರರ ಪರ ವಕೀಲರು	**ನ್ಯಾಯಾಲಯದ ಆದೇಶದ ಮೇರೆಗೆ**
ಶ್ರೀ ಎಸ್.ವಿಜಯ (ಕಾಲ್ಕೆರೆ)	**ಸಹಿ/-ಶಿರಸ್ತೇದಾರರು,**
ವಕೀಲರು,ಹೊಳಲ್ಕೆರೆ	**ಹಿರಿಯ ಸಿವಿಲ್ ಜಡ್ಜ್ ಮತ್ತು**
ದಿನಾಂಕ:10-03-2026	**ಜೆ.ಎಂ.ಎಫ್.ಸಿ.ನ್ಯಾಯಾಲಯ, ಹೊಳಲ್ಕೆರೆ**

ಗೌರವಾನ್ವಿತ ಹೊಳಲ್ಕೆರೆ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯದಲ್ಲಿ

ಸಿ.ಆರ್.ಮಿಸ್. ನಂ : 43/2026

ಅರ್ಜಿದಾರರು: 1)ಶ್ರೀ ರುದ್ರಪ್ಪ ಬಿನ್ ಹನುಮಂತಪ್ಪ,ವಯಸ್ಸು 75 ವರ್ಷ, ವ್ಯವಸಾಯ, ಸುರೆಂದರ್ ಗೌಡ ಕ್ಯಾಂಪ್,ಸಿದ್ದಿಪುರ,ಶಿವಮೊಗ್ಗ. 2)ಹನುಮಕ್ಕ ಕೋಂ ಮಂಜಪ್ಪ, ವಯಸ್ಸು 54 ವರ್ಷ, ಮನೆಕೆಲಸ, ಓಬಣ್ಣನಹಳ್ಳಿ ಗ್ರಾಮ, ಚಿತ್ರದುರ್ಗ ತಾಲ್ಲೂಕು ಮತ್ತು ಜಿಲ್ಲೆ. 3)ಯಲಮ್ಮ ಕೋಂ ಜಯ್ಯಪ್ಪ, ವಯಸ್ಸು 51ವರ್ಷ,ಮನೆಕೆಲಸ, ಬೋರೇನಹಳ್ಳಿ ಗ್ರಾಮ,ತಾಳ್ಯ ಹೋಬಳಿ, ಹೊಳಲ್ಕೆರೆ ತಾಲ್ಲೂಕು. 4)ಎಂ.ತಿಪ್ಪೇಶ ಬಿನ್ ಲೇಟ್‌ಮಹಂತೇಶ ಯಾನೆ ಮಾಂತೇಶಪ್ಪ, ವಯಸ್ಸು 32 ವರ್ಷ, ವ್ಯವಸಾಯ, 5)ಷಣ್ಮುಖಪ್ಪ ಬಿನ್ ಗುಂಡೇರಿ ಸಣ್ಣ ಹನುಮಂತಪ್ಪ, ವಯಸ್ಸು 39ವರ್ಷ,ವ್ಯವಸಾಯ ಕೆಲಸ. 6)ರತ್ನಮ್ಮ ಕೋಂ ಮಂಜುನಾಥ, ವಯಸ್ಸು 38 ವರ್ಷ, ಮನೆ ಕೆಲಸ. ಬೂದಿಪುರ ಗ್ರಾಮ, ತಾಳ್ಯ ಹೋಬಳಿ, ಹೊಳಲ್ಕೆರೆ ತಾಲ್ಲೂಕು.7)ಸುನಿತ.ಹೆಚ್ ಕೋಂ ಲೇಟ್ ನಾಗರಾಜಪ್ಪ, ವಯಸ್ಸು 32ವರ್ಷ,ಮನೆ ಕೆಲಸ,ಅರ್ಜಿದಾರ ನಂ:4,5 ಮತ್ತು 7ರವರ ವಾಸ: ನೇರಲಕಟ್ಟೆ ಗ್ರಾಮ, ತಾಳ್ಯ ಹೋಬಳಿ, ಹೊಳಲ್ಕೆರೆ ತಾಲ್ಲೂಕು.

ವಿರುದ್ಧ

ಎದುರುದಾರರು: ಜನನ ಮತ್ತು ಮರಣ ನೊಂದಣಾಧಿಕಾರಿಗಳು/ ಮಾನ್ಯ ತಹಶೀಲ್ದಾರ್ ರವರ ತಾಲ್ಲೂಕು ಕಛೇರಿ, ಹೊಳಲ್ಕೆರೆ.

ಸಾರ್ವಜನಿಕ ಪ್ರಕಟಣೆ

ಮೇಲ್ಕಂಡ ಕೇಸಿನ 1ರಿಂದ 3ನೇ ಅರ್ಜಿದಾರರ ತಂದೆ ಮತ್ತು 4ರಿಂದ 7ನೇ ಅರ್ಜಿದಾರರ ಅಜ್ಜನಾದ **ಶ್ರೀ ಹನುಮಂತಪ್ಪ ಬಿನ್ ದುರ್ಗದ ಹನುಮಭೋವಿ** ರವರು ಹೊಳಲ್ಕೆರೆ ತಾಲ್ಲೂಕು,ತಾಳ್ಯಹೋಬಳಿ,ಕಸವನಹಳ್ಳಿ ಗ್ರಾಮದಲ್ಲಿ **ದಿನಾಂಕ:18-10-1978**ರಂದು ಮರಣ ಹೊಂದಿರುತ್ತಾರೆ,ಎಂದು ಮರಣ ಸಮರ್ಥನ ಪತ್ರಪಡೆಯಲು ಎದುರುದಾರರ ವಿರುದ್ಧ ಅರ್ಜಿದಾರರು ಮಾನ್ಯ ಹೊಳಲ್ಕೆರೆಯ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ.ಸದರಿ **ಶ್ರೀ ಹನುಮಂತಪ್ಪ ಬಿನ್ ದುರ್ಗದ ಹನುಮಭೋವಿ** ರವರ ಮರಣ ಸಮರ್ಥನ ಪತ್ರ ಪಡೆಯುವ ಬಗ್ಗೆ ಬೇರೆ ಯಾರಿಗಾದರೂ ತಂಟೆ ತಕರಾರು ಇದ್ದಲ್ಲಿ ಹೊಳಲ್ಕೆರೆಯ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿ **ದಿನಾಂಕ:02-05-2026 ರಂದು ಬೆಳಿಗ್ಗೆ 11ಗಂಟೆಗೆ** ಖುದ್ದಾಗಿಯಾಗಲೀ ಅಥವಾ ವಕೀಲರ ಮೂಲಕವಾಗಲೀ ಹಾಜರಾಗಿ ತಮ್ಮ ಲಿಖಿತ ತಕರಾರು / ಆಕ್ಷೇಪಣೆಗಳು ಏನಾದರೂ ಇದ್ದರೆ ಸಲ್ಲಿಸತಕ್ಕದ್ದು, ತಪ್ಪಿದ ಪಕ್ಷದಲ್ಲಿ ಈ ಮೇಲ್ಕಂಡ ಅರ್ಜಿಯನ್ನು ಯಾವುದೇ ತಕರಾರು ಇಲ್ಲ ಎಂದು ಪರಿಗಣಿಸಿ ಏಕಪಕ್ಷೀಯವಾಗಿ ತೀರ್ಮಾನಿಸಲಾಗುವುದು ತಿಳಿಯಿರಿ. ನ್ಯಾಯಾಲಯದ ಮುದ್ರೆ, ನನ್ನ ಸಹಿಯೊಂದಿಗೆ ದಿನಾಂಕ: 10-03-2026 ರಂದು ಕೊಡಲ್ಪಟ್ಟಿದೆ.

ಅರ್ಜಿದಾರರ ಪರ ವಕೀಲರು	**ನ್ಯಾಯಾಲಯದ ಆದೇಶದ ಮೇರೆಗೆ**
ಶ್ರೀ ಹೆಚ್.ಕೆ.ವಿನಯ್‌ಪ್ರಸಾದ್	**ಸಹಿ/-ಶಿರಸ್ತೇದಾರರು,**
ವಕೀಲರು,ಹೊಳಲ್ಕೆರೆ	**ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
ದಿನಾಂಕ:10-03-2026	**ಜೆ.ಎಂ.ಎಫ್.ಸಿ.ನ್ಯಾಯಾಲಯ, ಹೊಳಲ್ಕೆರೆ**

ಮಾನ್ಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಜಗಳೂರು

ಓ.ಎಸ್. ನಂ : 15/2017

ವಾದಿ : ಶ್ರೀ ಜಯರಾಮಪ್ಪ ಮತ್ತು ಇತರರು.

ವಿರುದ್ಧ

ಪ್ರತಿವಾದಿಯರು: :1)ಶ್ರೀ ಸುರೇಶ ಮತ್ತು ಇತರರು. **3(ಎ) ರಿಂದ 3(ಡಿ)ನೇ ಪ್ರತಿವಾದಿಗಳು.** 3(ಎ)ಶ್ರೀಮತಿ ಸುಶೀಲಮ್ಮ ಕೋಂ ತಿಮ್ಮಣ್ಣ ,ವಯಸ್ಸು ಸುಮಾರು 72 ವರ್ಷ, ವ್ಯವಸಾಯದ ಕೆಲಸ. 3(ಬಿ) ಶ್ರೀಮತಿ ಜಿ.ಟಿ.ಅನುಸುಯಮ್ಮ ತಂದೆ ತಿಮ್ಮಣ್ಣ,ವಯಸ್ಸು ಸುಮಾರು 42 ವರ್ಷ, ವ್ಯವಸಾಯದ ಕೆಲಸ, 3(ಸಿ) ಶ್ರೀಮತಿ ಗಂಗಮ್ಮ ತಂದೆ ತಿಮ್ಮಣ್ಣ, ವಯಸ್ಸು ಸುಮಾರು 40 ವರ್ಷ. 3(ಡಿ) ಶ್ರೀಮತಿ ಚೇತನಾ ತಂದೆ ತಿಮ್ಮಣ್ಣ, ವಯಸ್ಸು ಸುಮಾರು 38 ವರ್ಷ, ವ್ಯವಸಾಯದ ಕೆಲಸ, 3(ಎ) ರಿಂದ 3(ಡಿ)ನೇ ಪ್ರತಿವಾದಿಗಳು ಖಾಯಂ ವಿಳಾಸ, Electronic city Parappan agraharada road 2nd cross, Bengalur-560068.

ಸಾರ್ವಜನಿಕ ಪ್ರಕಟಣೆ

ಮೇಲ್ಕಂಡ ಪ್ರಕರಣವನ್ನು ವಾದಿಯು ಪ್ರತಿವಾದಿಯರ ವಿರುದ್ಧ ಮಾನ್ಯ ಸಿವಿಲ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಜಗಳೂರು ಇಲ್ಲಿ ಡಿಕ್ಲೇರೆಷನ್ ಮತ್ತು ಪಾಲುವಿಭಾಗದ ಕೋರಿ ದಾವೆ ಸಲ್ಲಿಸಿದ್ದು ಇದರ ಬಗ್ಗೆ ನ್ಯಾಯಾಲಯದಿಂದ ಅನೇಕ ಸಾರಿ ಸಮನ್ಸ್ ಮತ್ತು ನೋಟೀಸ್ ಹಾಗೂ ನೊಂದಾಯಿತ ಅಂಚೆಯ ಮೂಲಕ ನೋಟೀಸ್ ನ್ನು ತಮಗೆ ಕಳಿಸಿದರೂ ಸಹ ತಾವು ಅವುಗಳನ್ನು ಪಡೆದಿರುವುದಿಲ್ಲ ಆದ ಕಾರಣ ಸದರಿ ಪ್ರಕರಣದ ವಿಚಾರಣೆಯನ್ನು **ದಿನಾಂಕ:15-03-2026 ರಂದು ಬೆಳಿಗೆ 11 ಗಂಟೆಗೆ** ನಿಗಧಿಪಡಿಸಿದ್ದು ತಾವು ತಮ್ಮದೇನಾದರೂ ತಂಟೆ ತಕರಾರು ವಗೈರೆ ಇದ್ದಲ್ಲಿ ಆ ದಿವಸ ತಾವಾಗಲೀ ಅಥವಾ ತಮ್ಮ ಪರ ವಕೀಲರ ಮೂಕಂತರವಾಗಲೀ ನಿಗದಿತ ದಿನಾಂಕ ಸಮಯದಂದು ಮೇಲ್ಕಂಡ ನ್ಯಾಯಾಲಯದಲ್ಲಿ ಹಾಜರಾಗಿ ತಮ್ಮ ಅಹವಾಲು ಸಲ್ಲಿಸಬಹುದು ತಪ್ಪಿದಲ್ಲಿ ಪ್ರಕರಣವನ್ನು ಏಕ ಪಕ್ಷೀಯವಾಗಿ ಶಿರ್ಮಾನ ಮಾಡಲಾಗುವುದು ತಿಳಿಯಿರಿ. ನ್ಯಾಯಾಲಯದ ಅಪ್ಪಣೆ ಮೇರೆಗೆ ದಿನಾಂಕ 10.03.2026 ರಂದು ನೀಡಲಾಗಿದೆ.

(ಎ.ಕೆ. ಪರಶುರಾಮಪ್ಪ)	**ನ್ಯಾಯಾಲಯದ ಆದೇಶದ ಮೇರೆಗೆ**
ವಾದಿ ಪರ ವಕೀಲರು	**ಸಹಿ/-ಶಿರಸ್ತೇದಾರರು,**
ಸ್ಥಳ: ಜಗಳೂರು	**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.**
ದಿನಾಂಕ:04-03-2026	**ನ್ಯಾಯಾಲಯ, ಜಗಳೂರು**

ಮಾನ್ಯ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಶಿವಮೊಗ್ಗ ಮಾನ್ಯ 4ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಶಿವಮೊಗ್ಗ ಪೀಠಾಸೀನ, ಭದ್ರಾವತಿ

ಪಿ.ಅಂಡ್ ಎಸ್.ಸಿ. ನಂ : 08/2026

ಅರ್ಜಿದಾರರು: 1)ಶ್ರೀ ಹರೀಶ್ ಜಿ.ಇ @ ಹರೀಶ್ ಗೌಡ ಜಿ.ಇ ಬಿನ್ ಈಶ್ವರಪ್ಪ ಕೆ.ಜಿ ಸುಮಾರು 40 ವರ್ಷ, ವಾಸ:ಗುಡಮಘಟ್ಟ ಗ್ರಾಮ, ಆನವೇರಿ ಅಂಚೆ, ಹೊಳೆಹೊನ್ನೂರು ಹೋಬಳಿ ಭದ್ರಾವತಿ ತಾಲ್ಲೂಕು.

ವಿರುದ್ಧ

ಎದುರುದಾರರು: :1)ಶ್ರೀಮತಿ ರೇಣುಕಮ್ಮ ಕೋಂ ಲೇಟ್ ನಾಗರಾಜಪ್ಪ ಜಿ.ವೈ -ಪೌತಿ ವಾರಸುದಾರರು. 1(ಎ). ಶ್ರೀ ರಮೇಶ ಎನ್ ಬಿನ್ ಲೇಟ್ ನಾಗರಾಜಪ್ಪ.ಜಿ.ವೈ ಸುಮಾರು 34 ವರ್ಷ. 1(ಬಿ)ಶ್ರೀ ರಂಗೇಶ ಜಿ.ಎನ್.ಬಿನ್ ಲೇಟ್ ನಾಗರಾಜಪ್ಪ.ಜಿ.ವೈ ಸುಮಾರು 32 ವರ್ಷ 2)ಶ್ರೀ ರಂಗಪ್ಪ ಬಿನ್ ಲೇಟ್ ಹನುಮಂತಭೋವಿ @ಹನುಮಂತಪ್ಪ,ಸುಮಾರು 54 ವರ್ಷ.3)ಶ್ರೀಮತಿ ನಾಗಮ್ಮ ಕೋಂ ರಂಗಪ್ಪ, ಸುಮಾರು 48 ವರ್ಷ. 4)ಶ್ರೀ ರವಿಕುಮಾರ್ ಆರ್ ಬಿನ್ ರಂಗಪ್ಪ ಸುಮಾರು 22 ವರ್ಷ, ಎಲ್ಲರೂ ವಾಸ: ಭೋವಿಕಾಲೋನಿ ಬೀದಿ ಗುಡುಮಘಟ್ಟ ಗ್ರಾಮ ಹೊಳೆಹೊನ್ನೂರು ಹೋಬಳಿ, ಭದ್ರಾವತಿ ತಾಲ್ಲೂಕು

ಸಾರ್ವಜನಿಕ ಪ್ರಕಟಣೆ

ಅರ್ಜಿದಾರರು ಮೇಲ್ಕಂಡ ಅರ್ಜಿಯನ್ನು ಪ್ರಬೋಟ್ ಪಡೆಯುವ ಸಲುವಾಗಿ ಮೇಲ್ಕಂಡ ನ್ಯಾಯಾಲಯದಲ್ಲಿ ದಾಖಲು ಮಾಡಿದ್ದು ಸದರಿ ಅರ್ಜಿಯಲ್ಲಿನ ನೊಂದಾಯಿತ ವಿಲ್ ಬರೆದಿರುವ ವ್ಯಕ್ತಿಯಾದ **ಶ್ರೀಮತಿ ಹನುಮಕ್ಕ ಕೋಂ ಲೇಟ್: ಹನುಮಂತಪ್ಪ @ ಹನುಮಂತಭೋವಿ** ಇವರು ಬರೆದಿರುವ ಮರಣಶಾಸನದ ಮೂಲಕ ಕೆಳಗೆ ಕಾಣಿಸಿದ ಅನುಸೂಚಿ ಸ್ವತ್ತನ್ನು ತಮ್ಮ ಹೆಸರಿಗೆ ರೆವಿನ್ಯೂ ದಾಖಲಾತಿಗಳನ್ನು ವರ್ಗಾವಣೆ ಮಾಡಿಕೊಳ್ಳುವ ಸಲುವಾಗಿ ಅರ್ಜಿದಾರರಿಗೆ ಮಾನ್ಯ ನ್ಯಾಯಾಲಯದಿಂದ ಪ್ರಬೋಟ್ ಪಡೆದುಕೊಳ್ಳುವುದು ಅವಶ್ಯವಿರುತ್ತದೆ. ಆ ಕಾರಣ ಈ ಸಾರ್ವಜನಿಕ ಪ್ರಕಟಣೆಯನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗಿದ್ದು ಸದರಿ ಅರ್ಜಿ ಸಂಬಂಧ ಮಾನ್ಯ ನ್ಯಾಯಾಲಯವು ವಿಚಾರಣೆ ನಡೆಸಲು **ದಿನಾಂಕ:28-04-2026 ರಂದು** ಮುದ್ದತಿಗೆ ಇದ್ದು, ಆ ದಿವಸ ಸದರಿ ಅರ್ಜಿಯಲ್ಲಿ ಹಿತಾಸಕ್ತಿಯುಳ್ಳವರು ನ್ಯಾಯಾಲಯದ ಮುಂದೆ **ಬೆಳಗ್ಗೆ 11.00 ಗಂಟೆಗೆ** ಹಾಜರಾಗಿ ತಾವಾಗಲೀ ಅಥವಾ ತಮ್ಮ ಪರ ವಕೀಲರಾಗಲೀ ಖುದ್ದಾಗಿ ಹಾಜರಾಗಿ ಏನಾದರು ತಕರಾರು ಇದ್ದಲ್ಲಿ ತಕರಾರು ಸಲ್ಲಿಸಬಹುದು ಎಂದು ಈ ಮೂಲಕ ಸಾರ್ವಜನಿಕ ಪ್ರಕಟಣೆ ನೀಡಿದ್ದು, ತಪ್ಪಿದಲ್ಲಿ ಅರ್ಜಿದಾರರ ಪರ ಏಕಪಕ್ಷೀಯ ತೀರ್ಮಾನ ತೆಗೆದುಕೊಳ್ಳಲಾಗುವುದು ಎಂದು ತಿಳಿಯಿರಿ.

ವಿಲ್‌ಗೆ ಒಳಪಡುವ ಅನುಸೂಚಿ ಸ್ವತ್ತು:ಭದ್ರಾವತಿ ತಾಲ್ಲೂಕು, ಹೊಳೆಹೊನ್ನೂರು ಹೋಬಳಿ, ಗುಡಮಘಟ್ಟ ಗ್ರಾಮದ ಸರ್ವೇ ನಂ.43/★ ರಲ್ಲಿ 2.00 ಎಕರೆ 0-30ಗುಂಟೆ ಖುಷ್ಕಿ ಜಮೀನು ಇದರ **ಚಕ್ಕುಬಂದಿ:** ಪೂರ್ವಕ್ಕೆ: ಗುಡ್ಡ, ಪಶ್ಚಿಮಕ್ಕೆ : ಬಂಡೀದಾರಿ, ಉತ್ತರಕ್ಕೆ: ಯಲ್ಲಪ್ಪನವರ ಜಮೀನು, ದಕ್ಷಿಣಕ್ಕೆ: ಅಪ್ಪಾಜಿ ರಂಗಪ್ಪನವರ ಜಮೀನು.

ಅರ್ಜಿದಾರರ ಪರ ವಕೀಲರು	**ನ್ಯಾಯಾಲಯದ ಅಪ್ಪಣೆ ಮೇರೆಗೆ**
ಶ್ರೀಮತಿ ಹೇಮಾವತಿ.ಬಿ.ವಿ.	**ಸಹಿ/-ಶಿರಸ್ತೇದಾರರು, ಮಾನ್ಯ 4ನೇ ಹೆಚ್ಚುವರಿ**
ನ್ಯಾಯವಾದಿ, ಶಿವಮೊಗ್ಗ/ಭದ್ರಾವತಿ	**ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಶಿವಮೊಗ್ಗ**
ದಿನಾಂಕ:10-03-2026	**ಪೀಠಾಸೀನ, ಭದ್ರಾವತಿ**

ಮಾನ್ಯ ಗೌರವಾನ್ವಿತ 3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಶಿವಮೊಗ್ಗ.

ಪಿ ಮತ್ತು ಎಸ್.ಸಿ. ನಂ : 11/2026

ಅರ್ಜಿದಾರರು: ಪ್ರಸನ್ನ ಎಸ್ ಬಿನ್ ಲೇಟ್ ಶ್ರೀನಿವಾಸ ರಾವ್, ವಯಸ್ಸು ಸುಮಾರು 51 ವರ್ಷ,ವರ್ಕಮೆನ್, ವಾಸ: ನಂ.5, 2ನೇ ತಿರುವು, ರಾಜರಾಜೇಶ್ವರಿ ಲೇಔಟ್,ಕೃಷ್ಣರಾಜಪುರಂ ಅಂಚೆ, ಬೆಂಗಳೂರು ಉತ್ತರ, ಬೆಂಗಳೂರು ಜಿಲ್ಲೆ-560036

ವಿರುದ್ಧ

ಎದುರುದಾರರು: ಯಾರು ಇಲ್ಲ.

ಪತ್ರಿಕಾ ಪ್ರಕಟಣೆ

ಈ ಅರ್ಜಿಯ ಅರ್ಜಿದಾರರು, ತಮ್ಮ ಚಿಕ್ಕಮ್ಮ **ಶ್ರೀಮತಿ ಸರೋಜಮ್ಮ ಕೋಂ ಕೆ.ಜಿ. ಲಕ್ಷ್ಮೀನಾರಾಯಣ ಪ್ರಭು,** ಕೋಟೆಗಂಗೂರು, ಶಿವಮೊಗ್ಗ ತಾಲ್ಲೂಕು ಇವರು ತಮ್ಮ ಪರವಾಗಿ ದಿನಾಂಕ:08-08-2022ರಂದು ಶಿವಮೊಗ್ಗ ತಾಲ್ಲೂಕು, ಕೋಟೆಗಂಗೂರು ಗ್ರಾಮ ಪಂಚಾಯಿತಿಯ ಸ್ವತ್ತಿನ ಸಂ.32, ನಂತರ ಸ್ವತ್ತಿನ ಖಾತೆ ಗಣಕೀಕರಣಗೊಂಡ ನಂತರ ಚಾಲ್ತಿ ಸಾಲಿನಲ್ಲಿ ನಮೂನೆ-9 ಮತ್ತು ನಮೂನೆ-11ಎ ರ ಸ್ವತ್ತಿನ ಸಂ:152400502100100049, ಒಟ್ಟು ಅಳತೆ 860.56 ಚ.ಮೀ. ಜಾಗ ಮತ್ತು ಇದರಲ್ಲಿ 181.16 ಚ.ಮೀ. ವಿಸ್ತೀರ್ಣದ ಮಂಗಳೂರು ಹಂಚಿನ ಮನೆ ಅಂದರೆ, ಈ ಅರ್ಜಿಯ ಶೆಡ್ಯೂಲ್‌ನಲ್ಲಿ ವಿವರಿಸಿರುವ ಆಸ್ತಿಗೆ ಸಂಬಂಧಪಟ್ಟಂತೆ ಅರ್ಜಿದಾರರ ಪರವಾಗಿ ಬರೆದಿರುವ ಮರಣ ಶಾಸನ ಪತ್ರದ ಸಂಬಂಧ, ಪ್ರೋಬೆಟ್ ಕೋರಿ ಘನ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದು, ಸದರಿ ಸ್ವತ್ತಿಗೆ ಸಂಬಂಧಪಟ್ಟಂತೆ ಬೇರೆ ಯಾರದ್ದಾದರೂ ಕ್ಲೇಮ್ ಅಥವಾ ತಕರಾರುಗಳು ಇದ್ದಲ್ಲಿ ಅಂತಹ ತಕರಾರುದಾರರು ಘನ ನ್ಯಾಯಾಲಯದ ಮುಂದೆ **ದಿನಾಂಕ:10-04-2026** ರಂದು ಖುದ್ದಾಗಿ ಆಗಲೀ ಅಥವಾ ವಕೀಲರ ಮೂಲಕವಾಗಲೀ ಹಾಜರಾಗಿ ತಕರಾರನ್ನು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಅರ್ಜಿಯನ್ನು ಏಕಪಕ್ಷೀಯವಾಗಿ ತೀರ್ಮಾನಿಸಲಾಗುವುದು. **ಅನುಸೂಚಿ ಆಸ್ತಿ:** ಶಿವಮೊಗ್ಗ ತಾಲ್ಲೂಕು, ಕೋಟೆಗಂಗೂರು ಗ್ರಾಮ ಪಂಚಾಯತಿ ವ್ಯಾಪ್ತಿಯ ಕೋಟೆಗಂಗೂರು ಗ್ರಾಮದ ಹಿಂದಿನ ಪಂಚಾಯತಿ ಸ್ವತ್ತಿನ ಸಂಖ್ಯೆ:32 ಎಂದಿದ್ದು, ನಂತರ ಸ್ವತ್ತಿನ ಖಾತೆಯು ಗಣಕೀಕರಣಗೊಂಡ ನಂತರ ಚಾಲ್ತಿ ಸಾಲಿನಲ್ಲಿ ನಮೂನೆ-9 ಮತ್ತು ನಮೂನೆ-11ಎ ರ ಸ್ವತ್ತಿನ ಸಂಖ್ಯೆ:152400502100100049 ಅಳತೆ ಪೂರ್ವ-ಪಶ್ಚಿಮ: 47.8536 ಮೀಟರ್ ಮತ್ತು ಉತ್ತರ-ದಕ್ಷಿಣ:17.9832 ಮೀಟರ್ ಒಟ್ಟು 860.56 ಚದರ ಮೀಟರ್ ಜಾಗ ಮತ್ತು ಇದರಲ್ಲಿ 181.16 ಚದರ ಮೀಟರ್ ವಿಸ್ತೀರ್ಣದಲ್ಲಿ ಕಟ್ಟಿರುವ ಮಂಗಳೂರು ಹೆಂಚಿನ ಮನೆ ಇರುವ ಒಟ್ಟು ಸ್ವತ್ತಿಗೆ **ಚಕ್ಕುಬಂಧಿ:** ಪೂರ್ವಕ್ಕೆ: ರಸ್ತೆ,ಪಶ್ಚಿಮಕ್ಕೆ : ಶ್ರೀಮತಿ ಇಂದಿರಮ್ಮರವರ ಸ್ವತ್ತು, ಉತ್ತರಕ್ಕೆ : ರಸ್ತೆ, ದಕ್ಷಿಣಕ್ಕೆ : 6 ಅಡಿ ಅಗಲದ ಕನ್ಸರ್‌ವೆನ್ಸಿ ರಸ್ತೆ.

ನಾಗೇಶನ್	**ನ್ಯಾಯಾಲಯದ ಅಪ್ಪಣೆ ಮೇರೆಗೆ**
ಅರ್ಜಿದಾರರ ಪರ ವಕೀಲರು	**ಸಹಿ/-ಮುಖ್ಯ ಆಡಳಿತ ಅಧಿಕಾರಿ**
ಸ್ಥಳ : ಶಿವಮೊಗ್ಗ.	**ಮಾನ್ಯ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ**
ದಿನಾಂಕ:19-02-2026	**ನ್ಯಾಯಾಲಯ, ಶಿವಮೊಗ್ಗ.**

ಶಿವಮೊಗ್ಗ ಮಹಾನಗರ ಪಾಲಿಕೆ, ಶಿವಮೊಗ್ಗ.

ಕಾರ್ಯಪಾಲಕ ಅಭಿಯಂತರರು ವಿದ್ಯುತ್ ವಿಭಾಗ

ಶಿಮನಪಾಶಿ:ಕಾ.ಅ:ವಿದ್ಯುತ್:ಡಿ:ಎಂ/ಸಿ.ಆರ್:22/2025-26 ದಿನಾಂಕ: 10.03.2026

ಟೆಂಡರ್ ಪ್ರಕಟಣೆ

ಇ-ಪ್ರಕ್ಯೂರ್ ಮೆಂಟ್ www.kppp.karnataka.gov.in ಮುಖಾಂತರ

ಟೆಂಡರ್ ಸಲ್ಲಿಸಲು ಕಡೆಯ ದಿನಾಂಕ & ಸಮಯ: 18.03.2026 10.00 AM

ಟೆಂಡರ್ ತೆರೆಯುವ ದಿನಾಂಕ & ಸಮಯ: 20.03.2026 10.30 AM

ಕ್ರ.ಸಂ. 1. ಇಂಡೆಂಟ್ ಸಂಖ್ಯೆ: DMA/2025-26/SE7463 Providing vehicles along with driver on hire basis for Shivamogga City Corporation (3 numbers A/C Cars and 12 numbers Non A/C Cars) Package 1 **ಟೆಂಡರ್ ಗಿಟ್ಟ ಮೊತ್ತ ರೂ.ಗಳಲ್ಲಿ:** 6541920.00 **ಇ.ಎಂ.ಡಿ ಮೊತ್ತ (ರೂ.ಗಳಲ್ಲಿ):** 164000.00

ಕ್ರ.ಸಂ. 2. ಇಂಡೆಂಟ್ ಸಂಖ್ಯೆ: DMA/2025-26/SE7464 Providing vehicles along with driver on hire basis for Shivamogga City Corporation (3 numbers A/C Cars and 12 numbers Non A/C Cars) - Package 2 **ಟೆಂಡರ್ ಗಿಟ್ಟ ಮೊತ್ತ ರೂ.ಗಳಲ್ಲಿ:** 6541920.00 **ಇ.ಎಂ.ಡಿ ಮೊತ್ತ (ರೂ.ಗಳಲ್ಲಿ):** 164000.00

ಕ್ರ.ಸಂ. 3. ಇಂಡೆಂಟ್ ಸಂಖ್ಯೆ: DMA/2025-26/WT/WORK_INDENT 56247 ಪಾಲಿಕೆ ವ್ಯಾಪ್ತಿಯಲ್ಲಿನ ಮಲಿನ ನೀರು ಶುದ್ದೀಕರಣ ಘಟಕಕ್ಕೆ ಸಂಬಂಧಿಸಿದಂತೆ ಗುಂಡಪ್ಪ ಶೆಡ್ ವೆಟ್ ವೆಲ್ ನ ಡಿ-ಸಿಲ್ಟಿಂಗ್ ಕಾಮಗಾರಿ **ಟೆಂಡರ್ ಗಿಟ್ಟ ಮೊತ್ತ ರೂ.ಗಳಲ್ಲಿ:** 1671411.84 **ಇ.ಎಂ.ಡಿ ಮೊತ್ತ (ರೂ.ಗಳಲ್ಲಿ):** 41800.00

ಸೂಚನೆ: ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತು ಮಾಹಿತಿಯನ್ನು ವೆಬ್ ಸೈಟ್ www.kppp.karnataka.gov.in ಮೂಲಕ ಪಡೆಯಬಹುದು.

ಹೆಚ್ಚಿನ ವಿವರಗಳಿಗೆ ಕಾರ್ಯಪಾಲಕ ಅಭಿಯಂತರರು(ವಿ) ರವರ ಕಛೇರಿಯನ್ನು ಕರ್ತವ್ಯದ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು(ವಿ) ಮಹಾನಗರ ಪಾಲಿಕೆ, ಶಿವಮೊಗ್ಗ

ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/25-26/58/03/1985

ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ,ಚಿಕ್ಕಮಗಳೂರು ವಿಭಾಗ ಚಿಕ್ಕಮಗಳೂರು

**ಡಿ.ದೇವರಾಜು ಅರಸು ಭವನ, ಎ.ಐ.ಟಿ.ಕಾಲೇಜ್ ರಸ್ತೆ, ಜ್ಯೋತಿ ನಗರ, ಚಿಕ್ಕಮಗಳೂರು-577102
ಇ-ಮೇಲ್: dcfchikmagalur@gmail.com ದೂರವಾಣಿ-08262-238800**

ಸಂಖ್ಯೆ: ಬಿ1:ಮುಳ್ಳುತಂತಿ:ಟೆಂಡರ್:ಸಿಆರ್:56/2025-26, ದಿನಾಂಕ:26-02-2026

ಟೆಂಡರ್ ಪ್ರಕಟಣೆ

ಕರ್ನಾಟಕ ಅರಣ್ಯ ಇಲಾಖೆಯ ಚಿಕ್ಕಮಗಳೂರು ವೃತ್ತದ ವಿವಿಧ ಅರಣ್ಯ ವಿಭಾಗಗಳಿಗೆ 2025-26/2026-27ನೇಸಾಲಿಗೆಮುಳ್ಳುತಂತಿಮತ್ತುಸಾದಾತಂತಿಸರಬರಾಜುಮಾಡಲು ಕರ್ನಾಟಕ ಸಾರ್ವಜನಿಕ ಸರಬರಾಜು ಸಂಗ್ರಹಣೆಗಳಿಗೆ ಪಾರದರ್ಶಕ ಅಧಿನಿಯಮ 1999 ಮತ್ತು ನಿಯಮ 2000 ರನ್ವಯ ಮುಳ್ಳುತಂತಿ ಮತ್ತು ಸಾದಾತಂತಿಗಳಿಗೆ (ಪ್ರತಿ ಮೆಟ್ರಿಕ್ ಟನ್‌ಗೆ) ಆಸಕ್ತ ಸರಬರಾಜುದಾರ/ಉತ್ಪಾದಕ ಉದ್ದಿಮೆ ಘಟಕಗಳಿಂದ ಸರಕು ಸರಬರಾಜು ಮತ್ತು ಬೆಲೆ ನಿಗಧಿಪಡಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ ಮುಖಾಂತರ ದ್ವಿ ಲಕೋಟೆಯಲ್ಲಿ ಇ-ಟೆಂಡರ್ ಆಹ್ವಾನಿಸಲಾಗಿದ್ದು, ಸದರಿ ಕಾಮಗಾರಿಗಳಿಗೆ ಟೆಂಡ್‌ರ್ ಸಲ್ಲಿಸಲು ಕೊನೆಯ **ದಿನಾಂಕ:13.03.2026ರ ಸಂಜೆ 4.30** ಗಂಟೆಯವರೆಗೆ ನಿಗಧಿಪಡಿಸಲಾಗಿರುತ್ತದೆ. ಟೆಂಡರ್ ನಿಬಂಧನೆ ಹಾಗೂ ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ. ಹಾಗೂ ಟೆಂಡರ್ ಕುರಿತು ವಿವರಗಳನ್ನು ಅಧಿಕೃತ ವೆಬ್‌ಸೈಟ್:**www.kppp.karnataka.gov.in** ಮೂಲಕ ಪಡೆದುಕೊಳ್ಳಬಹುದಾಗಿರುತ್ತದೆ.

ಸಹಿ/- ಉಪ ಅರಣ್ಯ ಸಂರಕ್ಷಣಾಧಿಕಾರಿ, ಚಿಕ್ಕಮಗಳೂರು ವಿಭಾಗ, ಚಿಕ್ಕಮಗಳೂರು

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿ ಹೊಳಲ್ಕೆರೆ

ಸಿ.ಆರ್.ಮಿಸ್. ನಂ : 36/2026

ಅರ್ಜಿದಾರರು: 1)ಬಿ.ಚಂದ್ರಶೇಖರಪ್ಪ ಬಿನ್ ಲೇಟ್ ಬಸಪ್ಪ, ವಯಸ್ಸು ಸುಮಾರು 85 ವರ್ಷ, ಶ್ರೀ ಕಲ್ಲೇಶ್ವರ ನಿಲಯ, ಬಿ.ವಿ.ಕೆ.ಎಸ್.ಲೇ ಔಟ್, 2ನೇ ಮೇನ್, 4ನೇ ಕ್ರಾಸ್, ಚಿತ್ರದುರ್ಗ ಟೌನ್, ಚಿತ್ರದುರ್ಗ ಜಿಲ್ಲೆ. 2)ಟಿ.ಬಿ.ಚಂದ್ರಶೇಖರಪ್ಪ ಬಿನ್ ಲೇಟ್ ಬಸಪ್ಪ, ವಯಸ್ಸು ಸುಮಾರು 74 ವರ್ಷ, ಗುಂಡೇರಿ ಗ್ರಾಮ, ಕಸಬಾ ಹೋಬಳಿ, ಹೊಳಲ್ಕೆರೆ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ. 3)ಬಿ.ರಾಜಪ್ಪ ಬಿನ್ ಲೇಟ್ ಬಸಪ್ಪ, ವಯಸ್ಸು ಸುಮಾರು 69 ವರ್ಷ, ನಂ. 1675/191, ಹದಡಿ ರೋಡ್,ರಂಗನಾಥ ಬಡಾವಣೆ, ದಾವಣಗೆರೆ ಸಿಟಿ,

ವಿರುದ್ಧ

ಎದುರುದಾರರು: ತಹಶೀಲ್ದಾರ್, ಜನನ ಮತ್ತು ಮರಣ ನೊಂದಣಾಧಿಕಾರಿಗಳು, ಹೊಳಲ್ಕೆರೆ ಹೊಳಲ್ಕೆರೆ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ..

ಸಾರ್ವಜನಿಕ ಪ್ರಕಟಣೆ

ಮೇಲ್ಕಂಡ ಅರ್ಜಿದಾರರು ಎದುರುದಾರರ ವಿರುದ್ಧ ಘನ ನ್ಯಾಯಾಲಯದಲ್ಲಿ 1 ರಿಂದ 3ನೇ ಅರ್ಜಿದಾರರ ತಾಯಿಯಾದ **ಶ್ರೀಮತಿ ಮಲ್ಲಮ್ಮ ಕೋಂ ಬಸಪ್ಪ** ಇವರು **ದಿನಾಂಕ : 13-06-1954** ರಂದು ಚಿತ್ರದುರ್ಗ ಜಿಲ್ಲೆ, ಹೊಳಲ್ಕೆರೆ ತಾಲ್ಲೂಕು, ಕಸಬಾ ಹೋಬಳಿ, ಗುಂಡೇರಿ ಗ್ರಾಮದ ಅರ್ಜಿದಾರರ ಸ್ವಗೃಹದಲ್ಲಿ ವಯಸ್ಸಾದ ಕಾರಣ ಸ್ವಾಭಾವಿಕ ಮರಣ ಹೊಂದಿದ್ದು, ಸದರಿ ಮೃತರ ಮರಣ ಪ್ರಮಾಣ ಪತ್ರವನ್ನು ಕೋರಿ ಎದುರುದಾರರ ವಿರುದ್ಧ ಅರ್ಜಿಯನ್ನು ಘನ ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ. ಸದರಿ ಅರ್ಜಿಗೆ ಸಂಬಂಧಿಸಿದಂತೆ ಮೇಲ್ಕಂಡ ಎದುರುದಾರರನ್ನು ಬಿಟ್ಟು ಬೇರೆ ಯಾರದರೂ ವಾರಸುದಾರರು ಇದ್ದರೆ ಅಥವಾ ಬೇರೆ ಯಾರಿಗಾದರೂ ತಂಟೆ ತಕರಾರುಗಳು ಏನಾದರೂ ಇದ್ದಲ್ಲಿ **ದಿನಾಂಕ:25-04-2026 ರಂದು ಪೂರ್ವಾಹ್ನ 11ಗಂಟೆಗೆ** ಖುದ್ದಾಗಿಯಾಗಲೀ ಅಥವಾ ವಕೀಲರ ಮೂಲಕವಾಗಲೀ ಘನ ನ್ಯಾಯಾಲಯಕ್ಕೆ ಹಾಜರಾಗಿ ತಮ್ಮ ಲಿಖಿತ ತಕರಾರು / ಆಕ್ಷೇಪಣೆಗಳು ಏನಾದರೂ ಇದ್ದರೆ ಸಲ್ಲಿಸತಕ್ಕದ್ದು, ತಪ್ಪಿದ ಪಕ್ಷದಲ್ಲಿ ಈ ಮೇಲ್ಕಂಡ ಅರ್ಜಿಯನ್ನು ಗೈರು ಹಾಜರಿಯಲ್ಲಿ ಏಕಪಕ್ಷೀಯವಾಗಿ ತೀರ್ಮಾನಿಸಲಾಗುವುದು ತಿಳಿಯಿರಿ. ನ್ಯಾಯಾಲಯದ ಮುದ್ರೆ, ನನ್ನ ಸಹಿಯೊಂದಿಗೆ ದಿನಾಂಕ: 10-03-2026 ರಂದು ಕೊಡಲ್ಪಟ್ಟಿದೆ.

ಅರ್ಜಿದಾರರ ಪರ ವಕೀಲರು	**ನ್ಯಾಯಾಲಯದ ಆದೇಶದ ಮೇರೆಗೆ**
ಶ್ರೀ ಬಿ.ಎನ್.ಪ್ರಶಾಂತ್‌ಕುಮಾರ್	**ಸಹಿ/-ಶಿರಸ್ತೇದಾರರು, ಹಿರಿಯ ಸಿವಿಲ್**
ವಕೀಲರು,ಹೊಳಲ್ಕೆರೆ	**ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ**
ದಿನಾಂಕ:10-03-2026	**ದಂಡಾಧಿಕಾರಿಗಳ ನ್ಯಾಯಾಲಯ, ಹೊಳಲ್ಕೆರೆ**

ಮಾನ್ಯ ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಸೊರಬ

ಸಿ.ಮಿಸ್.ನಂ : 58/2026

ಅರ್ಜಿದಾರರು: ಸಣ್ಣನಿಂಗವ್ವ ಮತ್ತು ಇತರರು.

ವಿರುದ್ಧ

ಎದುರುದಾರರು : ತಹಶೀಲ್ದಾರ್, ಸೊರಬ.

ಪತ್ರಿಕಾ ಪ್ರಕಟಣೆ

ಈ ಮೇಲ್ಕಂಡ ಕೇಸಿನಲ್ಲಿ ಅರ್ಜಿದಾರರ ತಂದೆಯಾದ **ಕೆರಿಯಪ್ಪ ತಾಯಿ ಗುತ್ಯಮ್ಮ** ಇವರು **ದಿನಾಂಕ:05-10-2003** ರಂದು ಸೊರಬ ತಾಲ್ಲೂಕು ಜಡೆ ಹೋಬಳಿ,ಕೋಡಿಕೊಪ್ಪ ಗ್ರಾಮದ ಅರ್ಜಿದಾರರ ಮನೆಯಲ್ಲಿ ಮರಣ ಹೊಂದಿರುತ್ತಾರೆ. ಅರ್ಜಿದಾರರು ಮರಣ ದಾಖಲೆಯನ್ನು ಕೋರಿ ಮಾನ್ಯ ಕಿರಿಯ ವಿಭಾಗದ ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಸೊರಬ ಇವರಲ್ಲಿ ಸಿ.ಮಿಸ್.ನಂ:58/2025ರ ರೀತ್ಯಾ ಅರ್ಜಿಯನ್ನು ಸಲ್ಲಿಸಿದ್ದು, ಸದರಿ ಕೇಸಿನ ಸಂಬಂಧ ಯಾರಾದರೂ ಹಿತಾಸಕ್ತರಿದ್ದಲ್ಲಿ ಅರ್ಜಿದಾರರಾಗಿಯಾಗಲೀ, ಎದುರುದಾರರಾಗಿಯಾಗಲೀ ಸೇರಬಯಸುವವರು ಸದರಿ ಅರ್ಜಿಯ ವಿಚಾರಣೆಯ **ದಿನಾಂಕ:06-05-2026 ರಂದು ಬೆಳಿಗ್ಗೆ 11 ಗಂಟೆಗೆ** ಸನ್ನಿಧಿ ನ್ಯಾಯಾಲಯಕ್ಕೆ ತಾವಾಗಲೀ ತಮ್ಮ ಪರ ವಕೀಲರ ಮೂಲಕವಾಗಲೀ ಹಾಜರಾಗಿ ತಮ್ಮ ಹಿತಾಸಕ್ತಿಯನ್ನು ಸ್ಥಾಪಿಸಿಕೊಳ್ಳಬಹುದಾಗಿದೆ.

ಅರ್ಜಿದಾರರ ಪರ ವಕೀಲರು	**ನ್ಯಾಯಾಲಯದ ಅಪ್ಪಣೆ ಮೇರೆಗೆ**
ಶ್ರೀಮತಿ ಮಂಜಮ್ಮ ಸಿ.ಬಿ., ವಕೀಲರು ಸೊರಬ	**ಸಹಿ/-ಶಿರಸ್ತೇದಾರರು,**
ರೋಲ್.ನಂ.ಕೆ.ಎ.ಆರ್. 1736/2011	**ವ್ಯವಹಾರ ನ್ಯಾಯಾಧೀಶರು ಮತ್ತು**
ಮೊ.ನಂ:9740682443	**ಜೆ.ಎಂ.ಎಫ್.ಸಿ. ನ್ಯಾಯಾಲಯ, ಸೊರಬ**

ಮಾನ್ಯ ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿ ಸೊರಬ

ಸಿ.ಮಿಸ್.ನಂ : 471/2025

ಅರ್ಜಿದಾರರು: ಮಂಜಪ್ಪ ಬಿನ್ ಬಂಗಾರಪ್ಪ ಮತ್ತು ಇನ್ನೊಬ್ಬರು.

ವಿರುದ್ಧ

ಎದುರುದಾರರು : ತಹಶೀಲ್ದಾರ್‌ರವರು, ಸೊರಬ, ಸೊರಬ ತಾಲ್ಲೂಕು.

ಪತ್ರಿಕಾ ಪ್ರಕಟಣೆ

ಈ ಮೇಲ್ಕಂಡ ಕೇಸಿನಲ್ಲಿ ಅರ್ಜಿದಾರರ ಅಜ್ಜನಾದ **ರಂಗಪ್ಪ ಬಿನ್ ರಂಗಣ್ಣ** ಇವರು **ದಿನಾಂಕ:10-11-1968** ರಂದು ಸೊರಬ ತಾಲ್ಲೂಕು ಕುಪ್ಪಗುಡ್ಡೆ ಹೋಬಳಿ,ಕೆರೆಹಳ್ಳಿ ಗ್ರಾಮದ ಅರ್ಜಿದಾರರ ಮನೆಯಲ್ಲಿ ಮರಣ ಹೊಂದಿರುತ್ತಾರೆ. ಅರ್ಜಿದಾರರು ಮರಣ ದಾಖಲೆಯನ್ನು ಕೋರಿ ಮಾನ್ಯ ಕಿರಿಯ ವಿಭಾಗದ ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಸೊರಬ ಇವರಲ್ಲಿ ಸಿ.ಮಿಸ್.ನಂ:471/2025ರ ರೀತ್ಯಾ ಅರ್ಜಿಯನ್ನು ಸಲ್ಲಿಸಿದ್ದು, ಸದರಿ ಕೇಸಿನ ಸಂಬಂಧ ಯಾರಾದರೂ ಹಿತಾಸಕ್ತರಿದ್ದಲ್ಲಿ ಅರ್ಜಿದಾರರಾಗಿಯಾಗಲೀ,ಎದುರುದಾರರಾಗಿಯಾಗಲೀ ಸೇರಬಯಸುವವರು ಸದರಿ ಅರ್ಜಿಯ ವಿಚಾರಣೆಯ **ದಿನಾಂಕ:26-03-2026 ರಂದು ಬೆಳಿಗ್ಗೆ 11 ಗಂಟೆಗೆ** ಸನ್ನಿಧಿ ನ್ಯಾಯಾಲಯಕ್ಕೆ ತಾವಾಗಲೀ ತಮ್ಮ ಪರ ವಕೀಲರ ಮೂಲಕವಾಗಲೀ ಹಾಜರಾಗಿ ತಮ್ಮ ಹಿತಾಸಕ್ತಿಯನ್ನು ಸ್ಥಾಪಿಸಿಕೊಳ್ಳಬಹುದಾಗಿದೆ.

ಅರ್ಜಿದಾರರ ಪರ ವಕೀಲರು	**ನ್ಯಾಯಾಲಯದ ಅಪ್ಪಣೆ ಮೇರೆಗೆ**
ಶ್ರೀಮತಿ ಮಂಜಮ್ಮ ಸಿ.ಬಿ., ವಕೀಲರು ಸೊರಬ	**ಸಹಿ/-ಶಿರಸ್ತೇದಾರರು,**
ರೋಲ್.ನಂ.ಕೆ.ಎ.ಆರ್. 1736/2011	**ವ್ಯವಹಾರ ನ್ಯಾಯಾಧೀಶರು ಮತ್ತು**
ಮೊ.ನಂ:9740682443	**ಜೆ.ಎಂ.ಎಫ್.ಸಿ. ನ್ಯಾಯಾಲಯ, ಸೊರಬ**

ಮಾನ್ಯ ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿ ಸೊರಬ

ಸಿ.ಮಿಸ್.ನಂ : 469/2025

ಅರ್ಜಿದಾರರು: ಮಂಜಪ್ಪ ಬಿನ್ ಬಂಗಾರಪ್ಪ ಮತ್ತು ಇನ್ನೊಬ್ಬರು.

ವಿರುದ್ಧ

ಎದುರುದಾರರು : ತಹಶೀಲ್ದಾರ್‌ರವರು, ಸೊರಬ, ಸೊರಬ ತಾಲ್ಲೂಕು.

ಪತ್ರಿಕಾ ಪ್ರಕಟಣೆ

ಈ ಮೇಲ್ಕಂಡ ಕೇಸಿನಲ್ಲಿ ಅರ್ಜಿದಾರರ ಅಜ್ಜಿಯಾದ **ರಂಗಮ್ಮ ಕೋಂ ರಂಗಪ್ಪ** ಇವರು **ದಿನಾಂಕ:05-08-1966** ರಂದು ಸೊರಬ ತಾಲ್ಲೂಕು ಕುಪ್ಪಗುಡ್ಡೆ ಹೋಬಳಿ,ಕೆರೆಹಳ್ಳಿ ಗ್ರಾಮದ ಅರ್ಜಿದಾರರ ಮನೆಯಲ್ಲಿ ಮರಣ ಹೊಂದಿರುತ್ತಾರೆ. ಅರ್ಜಿದಾರರು ಮರಣ ದಾಖಲೆಯನ್ನು ಕೋರಿ ಮಾನ್ಯ ಕಿರಿಯ ವಿಭಾಗದ ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಸೊರಬ ಇವರಲ್ಲಿ ಸಿ.ಮಿಸ್.ನಂ:469/2025ರ ರೀತ್ಯಾ ಅರ್ಜಿಯನ್ನು ಸಲ್ಲಿಸಿದ್ದು, ಸದರಿ ಕೇಸಿನ ಸಂಬಂಧ ಯಾರಾದರೂ ಹಿತಾಸಕ್ತರಿದ್ದಲ್ಲಿ ಅರ್ಜಿದಾರರಾಗಿಯಾಗಲೀ,ಎದುರುದಾರರಾಗಿಯಾಗಲೀ ಸೇರಬಯಸುವವರು ಸದರಿ ಅರ್ಜಿಯ ವಿಚಾರಣೆಯ **ದಿನಾಂಕ:26-03-2026 ರಂದು ಬೆಳಿಗ್ಗೆ 11 ಗಂಟೆಗೆ** ಸನ್ನಿಧಿ ನ್ಯಾಯಾಲಯಕ್ಕೆ ತಾವಾಗಲೀ ತಮ್ಮ ಪರ ವಕೀಲರ ಮೂಲಕವಾಗಲೀ ಹಾಜರಾಗಿ ತಮ್ಮ ಹಿತಾಸಕ್ತಿಯನ್ನು ಸ್ಥಾಪಿಸಿಕೊಳ್ಳಬಹುದಾಗಿದೆ.

ಅರ್ಜಿದಾರರ ಪರ ವಕೀಲರು	**ನ್ಯಾಯಾಲಯದ ಅಪ್ಪಣೆ ಮೇರೆಗೆ**
ಶ್ರೀಮತಿ ಮಂಜಮ್ಮ ಸಿ.ಬಿ., ವಕೀಲರು ಸೊರಬ	**ಸಹಿ/-ಶಿರಸ್ತೇದಾರರು,**
ರೋಲ್.ನಂ.ಕೆ.ಎ.ಆರ್. 1736/2011	**ವ್ಯವಹಾರ ನ್ಯಾಯಾಧೀಶರು ಮತ್ತು**
ಮೊ.ನಂ:9740682443	**ಜೆ.ಎಂ.ಎಫ್.ಸಿ. ನ್ಯಾಯಾಲಯ, ಸೊರಬ**

ಮಾನ್ಯ ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿ ಸೊರಬ

ಸಿ.ಮಿಸ್.ನಂ : 470/2025

ಅರ್ಜಿದಾರರು: ಮಂಜಪ್ಪ ಬಿನ್ ಬಂಗಾರಪ್ಪ ಮತ್ತು ಇನ್ನೊಬ್ಬರು.

ವಿರುದ್ಧ

ಎದುರುದಾರರು : ತಹಶೀಲ್ದಾರ್‌ರವರು, ಸೊರಬ, ಸೊರಬ ತಾಲ್ಲೂಕು.

ಪತ್ರಿಕಾ ಪ್ರಕಟಣೆ

ಈ ಮೇಲ್ಕಂಡ ಕೇಸಿನಲ್ಲಿ ಅರ್ಜಿದಾರರ ತಾಯಿಯಾದ **ಕೆರಿಯಮ್ಮ ಕೋಂ ಉಗ್ರಿ ಬಂಗಾರಪ್ಪ** ಇವರು **ದಿನಾಂಕ:10-11-1992** ರಂದು ಸೊರಬ ತಾಲ್ಲೂಕು ಕುಪ್ಪಗುಡ್ಡೆ ಹೋಬಳಿ,ಕೆರೆಹಳ್ಳಿ ಗ್ರಾಮದ ಅರ್ಜಿದಾರರ ಮನೆಯಲ್ಲಿ ಮರಣ ಹೊಂದಿರುತ್ತಾರೆ. ಅರ್ಜಿದಾರರು ಮರಣ ದಾಖಲೆಯನ್ನು ಕೋರಿ ಮಾನ್ಯ ಕಿರಿಯ ವಿಭಾಗದ ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಸೊರಬ ಇವರಲ್ಲಿ ಸಿ.ಮಿಸ್. ನಂ:470/2025ರ ರೀತ್ಯಾ ಅರ್ಜಿಯನ್ನು ಸಲ್ಲಿಸಿದ್ದು, ಸದರಿ ಕೇಸಿನ ಸಂಬಂಧ ಯಾರಾದರೂ ಹಿತಾಸಕ್ತರಿದ್ದಲ್ಲಿ ಅರ್ಜಿದಾರರಾಗಿಯಾಗಲೀ,ಎದುರುದಾರರಾಗಿಯಾಗಲೀ ಸೇರಬಯಸುವವರು ಸದರಿ ಅರ್ಜಿಯ ವಿಚಾರಣೆಯ **ದಿನಾಂಕ:26-03-2026 ರಂದು ಬೆಳಿಗ್ಗೆ 11 ಗಂಟೆಗೆ** ಸನ್ನಿಧಿ ನ್ಯಾಯಾಲಯಕ್ಕೆ ತಾವಾಗಲೀ ತಮ್ಮ ಪರ ವಕೀಲರ ಮೂಲಕವಾಗಲೀ ಹಾಜರಾಗಿ ತಮ್ಮ ಹಿತಾಸಕ್ತಿಯನ್ನು ಸ್ಥಾಪಿಸಿಕೊಳ್ಳಬಹುದಾಗಿದೆ.

ಅರ್ಜಿದಾರರ ಪರ ವಕೀಲರು	**ನ್ಯಾಯಾಲಯದ ಅಪ್ಪಣೆ ಮೇರೆಗೆ**
ಶ್ರೀಮತಿ ಮಂಜಮ್ಮ ಸಿ.ಬಿ., ವಕೀಲರು ಸೊರಬ	**ಸಹಿ/-ಶಿರಸ್ತೇದಾರರು,**
ರೋಲ್.ನಂ.ಕೆ.ಎ.ಆರ್. 1736/2011	**ವ್ಯವಹಾರ ನ್ಯಾಯಾಧೀಶರು ಮತ್ತು**
ಮೊ.ನಂ:9740682443	**ಜೆ.ಎಂ.ಎಫ್.ಸಿ. ನ್ಯಾಯಾಲಯ, ಸೊರಬ**

ಮಾನ್ಯ ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಸೊರಬ

ಸಿ.ಮಿಸ್.ನಂ : 57/2026

ಅರ್ಜಿದಾರರು: ಸಣ್ಣನಿಂಗವ್ವ ಮತ್ತು ಇತರರು.

ವಿರುದ್ಧ

ಎದುರುದಾರರು : ತಹಶೀಲ್ದಾರ್, ಸೊರಬ.

ಪತ್ರಿಕಾ ಪ್ರಕಟಣೆ

ಮೇಲ್ಕಂಡ ಕೇಸಿನಲ್ಲಿ ಅರ್ಜಿದಾರರ ಸಹೋದರನಾದ **ಬಂಗಾರಪ್ಪ ಬಿನ್ ಕೆರಿಯಪ್ಪ** ಇವರು **ದಿನಾಂಕ:09-04-2013** ರಂದು ಸೊರಬ ತಾಲ್ಲೂಕು ಜಡೆ ಹೋಬಳಿ,ಕೋಡಿಕೊಪ್ಪ ಗ್ರಾಮದ ಅರ್ಜಿದಾರರ ಮನೆಯಲ್ಲಿ ಮರಣ ಹೊಂದಿರುತ್ತಾರೆ. ಅರ್ಜಿದಾರರು ಮರಣ ದಾಖಲೆಯನ್ನು ಕೋರಿ ಮಾನ್ಯ ಕಿರಿಯ ವಿಭಾಗದ ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಸೊರಬ ಇವರಲ್ಲಿ ಸಿ.ಮಿಸ್.ನಂ:57/2026ರ ರೀತ್ಯಾ ಅರ್ಜಿಯನ್ನು ಸಲ್ಲಿಸಿದ್ದು, ಸದರಿ ಕೇಸಿನ ಸಂಬಂಧ ಯಾರಾದರೂ ಹಿತಾಸಕ್ತರಿದ್ದಲ್ಲಿ ಅರ್ಜಿದಾರರಾಗಿಯಾಗಲೀ, ಎದುರುದಾರರಾಗಿಯಾಗಲೀ ಸೇರಬಯಸುವವರು ಸದರಿ ಅರ್ಜಿಯ ವಿಚಾರಣೆಯ **ದಿನಾಂಕ:06-05-2026 ರಂದು ಬೆಳಿಗ್ಗೆ 11 ಗಂಟೆಗೆ** ಸನ್ನಿಧಿ ನ್ಯಾಯಾಲಯಕ್ಕೆ ತಾವಾಗಲೀ ತಮ್ಮ ಪರ ವಕೀಲರ ಮೂಲಕವಾಗಲೀ ಹಾಜರಾಗಿ ತಮ್ಮ ಹಿತಾಸಕ್ತಿಯನ್ನು ಸ್ಥಾಪಿಸಿಕೊಳ್ಳಬಹುದಾಗಿದೆ.

ಅರ್ಜಿದಾರರ ಪರ ವಕೀಲರು	**ನ್ಯಾಯಾಲಯದ ಅಪ್ಪಣೆ ಮೇರೆಗೆ**
ಶ್ರೀಮತಿ ಮಂಜಮ್ಮ ಸಿ.ಬಿ., ವಕೀಲರು ಸೊರಬ	**ಸಹಿ/-ಶಿರಸ್ತೇದಾರರು,**
ರೋಲ್.ನಂ.ಕೆ.ಎ.ಆರ್. 1736/2011	**ವ್ಯವಹಾರ ನ್ಯಾಯಾಧೀಶರು ಮತ್ತು**
ಮೊ.ನಂ:9740682443	**ಜೆ.ಎಂ.ಎಫ್.ಸಿ. ನ್ಯಾಯಾಲಯ, ಸೊರಬ**

Hosadigantha kannada daily Printed & Published by P.S. Prakash on behalf of Jnanabharathi Prakashana Limited. Printed at Digantha Mudrana, New Thirthahalli Road, Shivamogga - 577201 and Published at 'Madhura Nilaya', 4th Cross, Durgigudi, Park Extension, Shivamogga 577202. Ph: (08182) 401752, 8861209076. Editor : P.S. Prakash, Group Editor : Vinayak S. Bhat.

ರಾಷ್ಟ್ರಮಟ್ಟದ ಲಾಂಗ್‌ಜಂಪ್ ಸ್ಪರ್ಧೆಯಲ್ಲಿ ಮಂಟೇನಹಳ್ಳಿ ಯುವಕ ಪ್ರಥಮ

ಅಂತಾರಾಷ್ಟ್ರ ಮಟ್ಟಕ್ಕೆ ಹಾರಿದ ಮಾರುತಿ



ಹೊಸದುರ್ಗ: ತಾಲ್ಲೂಕಿನ ಕಸಬಾ ಹೋಬಳಿಯ ಮಂಟೇನಹಳ್ಳಿ ಗ್ರಾಮದ ನಿವಾಸಿ ಮಾರುತಿ ಎಂ.ಎಲ್ ಇವರು ಈಚೆಗೆ ದೆಹಲಿಯಲ್ಲಿ ನಡೆದ ರಾಷ್ಟ್ರೀಯ ಮಟ್ಟದ ಲಾಂಗ್ ಜಂಪ್ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದು, ಅಂತಾರಾಷ್ಟ್ರೀಯ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ಎಂ.ಎಲ್.ಮಾರುತಿ ಇವರು ತಾಲ್ಲೂಕಿನ ನಾಯಿಗೆರೆ ಗ್ರಾಮದ ಮೊರಾರ್ಜಿ ದೇಸಾಯಿ ವಸತಿಯುತ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಿದ್ದಾರೆ. ವಿದ್ಯಾಭ್ಯಾಸದ ಜೊತೆಗೆ ಅಲ್ಲಿಂದಲೇ ಕ್ರೀಡೆಯನ್ನು ಮೈಗೂಡಿಸಿಕೊಂಡಿದ್ದರು. ರಾಜ್ಯ ಮಟ್ಟದವರೆಗೂ ಭಾಗವಹಿಸಿ, ಪದಕ ಹಾಗೂ ಪ್ರಶಸ್ತಿ ಪತ್ರಗಳನ್ನು ಪಡೆದಿದ್ದರು. ಪ್ರಸ್ತುತ, ಉಜಿರೆಯ ಧರ್ಮಸ್ಥಳ ಮಂಜುನಾಥೇಶ್ವರ ಪ್ರಥಮ ದರ್ಜೆ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಫೆ. 22 ರಂದು ದೆಹಲಿಯಲ್ಲಿ ನಡೆದ ರಾಷ್ಟ್ರೀಯ ಮಟ್ಟದ ಲಾಂಗ್ ಜಂಪ್ ಸ್ಪರ್ಧೆಯಲ್ಲಿ ಭಾಗವಹಿಸಿ, ಪ್ರಥಮ ಸ್ಥಾನ ಪಡೆದಿದ್ದಾರೆ. ಇದೀಗ ಮಾರ್ಚ್ 26 ರಿಂದ 30 ರವರೆಗೆ ನೇಪಾಳದಲ್ಲಿ ನಡೆಯಲಿರುವ ಅಂತಾರಾಷ್ಟ್ರೀಯ ಮಟ್ಟದ ಲಾಂಗ್ ಜಂಪ್ ಸ್ಪರ್ಧೆಗೆ ಆಯ್ಕೆಯಾಗಿದ್ದಾರೆ.

ಮಾರುತಿ ಎಂ.ಎಲ್ ಹಾಗೂ ಅವರ ದೈಹಿಕ ಶಿಕ್ಷಕರುಗಳಾದ ಶಿವಕುಮಾರ ಎಂ.ಪಿ ಹಾಗೂ ರವಿ.ಟಿ ಅವರನ್ನು ಶಾಸಕ ಬಿ ಜಿ ಗೋವಿಂದಪ್ಪ, ನಾಯಿಗೆರೆ ಮುರಾರ್ಜಿ ಶಾಲೆ ಪ್ರಾಚಾರ್ಯ ಮಂಜುನಾಥ್ ಸೇರಿದಂತೆ ಜನಪ್ರತಿನಿಧಿಗಳು, ಮುಖಂಡರು, ಪೋಷಕರು ಹಾಗೂ ಗ್ರಾಮಸ್ಥರು ಅಭಿನಂದನೆ ಸಲ್ಲಿಸಿದ್ದಾರೆ.

ರೈತರಿಗೆ ಶಿಮುಲ್ ನಿರ್ದೇಶಕ ಬಿ.ಸಿ.ಸಂಜೀವಮೂರ್ತಿ ಸಲಹೆ

ಗುಣಮಟ್ಟದ ಹಾಲು ಉತ್ಪಾದಿಸಿ



ಹಿರಿಯೂರು: ಗುಣಮಟ್ಟದ ಹಾಲು ಉತ್ಪಾದನೆ ಮಾಡುವುದರ ಮೂಲಕ ರೈತರು ಒಕ್ಕೂಟವನ್ನು ಸುಭದ್ರ ಪಡಿಸಬೇಕು ಎಂದು ಶಿಮುಲ್ ನಿರ್ದೇಶಕ ಬಿ.ಸಿ. ಸಂಜೀವಮೂರ್ತಿ ತಿಳಿಸಿದರು.

ತಾಲೂಕಿನ ಧರ್ಮಪುರ ಹೋಬಳಿ ಸಮೀಪದ ಕೃಷ್ಣಾಪುರದಲ್ಲಿ ಧರ್ಮಪುರ ಹಾಲು ಉತ್ಪಾದಕರ ಸಹಕಾರ ಸಂಘ ಮತ್ತು ಹಿರಿಯೂರು ಪಶುಪಾಲನಾ ಹಾಗೂ ಪಶುವೈದ್ಯ ಸೇವಾ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿದ್ದ ಮಿಶ್ರತಳಿ ಹಸು, ಕರುಗಳ ಪ್ರದರ್ಶನ ಮತ್ತು ಬರಡು ರಾಸುಗಳ ಚಿಕಿತ್ಸಾ ಶಿಬಿರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕೃಷ್ಣಾಪುರದಲ್ಲಿ ಕೇವಲ 70 ಮನೆಗಳಿದ್ದು, ಸುಮಾರು 400 ಹಸುಗಳನ್ನು ಸಾಕಲಾಗಿದೆ. ಗ್ರಾಮದಿಂದ ಪ್ರತಿನಿತ್ಯ 3 ಸಾವಿರದಿಂದ 4ಸಾವಿರ ಲೀಟರ್ ಹಾಲು ಉತ್ಪಾದನೆಯಾಗುತ್ತಿದೆ. ಗ್ರಾಮದಲ್ಲಿ ಹಸುಗಳನ್ನು ಉತ್ಕೃಷ್ಟವಾಗಿ ಸಾಕಲಾಗಿದೆ. ಅದಕ್ಕಾಗಿ ರೈತರು ರಾಸುಗಳ ಸಾಕಾಣಿಕೆ ತರಬೇತಿಗೆ ಧಾರವಾಡಕ್ಕೆ ಹೋಗಬೇಕಿಲ್ಲ, ಕೃಷ್ಣಾಪುರಕ್ಕೆ ಬಂದು ನೋಡಬೇಕು.

ರಾಜ್ಯದಲ್ಲಿ ಒಟ್ಟು 16 ಒಕ್ಕೂಟಗಳಿದ್ದು, ಎರಡು ಬಿಎಂಸಿ ಕೇಂದ್ರಗಳನ್ನು ಹೊಂದಿರುವ ಏಕೈಕ ಕೇಂದ್ರ ಧರ್ಮಪುರದಲ್ಲಿ ಪ್ರತಿನಿತ್ಯ 6ಸಾವಿರ ಲೀಟರ್ ಹಾಲು ಉತ್ಪಾದನೆಯಾಗುತ್ತಿದೆ. ಇಲ್ಲಿ ಸುಮಾರು 82 ಮಹಿಳಾ ರೈತರಿರುವುದು ವಿಶೇಷವಾಗಿದೆ. ಸಂಘ 2024-25ನೇ ಸಾಲಿನಲ್ಲಿ ಹದಿನಾಲ್ಕುವರೆ ಲಕ್ಷ ನಿವ್ವಳ ಲಾಭ ಗಳಿಸಿದೆ. ಹಾಲು ಉತ್ಪಾದಕ ರೈತ ಸಾವನಪ್ಪಿದರೆ ಕಲ್ಯಾಣ ನಿಧಿ ಮೂಲಕ 60ಸಾವಿರ ವಿಮೆ ಹಣ ನೀಡಲಾಗುವುದು ಎಂದರು.

ಚಿತ್ರದುರ್ಗ ಮತ್ತು ದಾವಣಗೆರೆಗೆ ಪ್ರತ್ಯೇಕವಾಗಿ ಮೆಗಾ ಡೈರಿ ದಾವಣಗೆರೆಯಲ್ಲಿ ಪ್ರಾರಂಭವಾಗುತ್ತಿದ್ದು, ಹದಿನಾಲ್ಕು ಎಕರೆ ವಿಸ್ತೀರ್ಣದಲ್ಲಿ ಸುಮಾರು 300ಕೋಟಿ ವೆಚ್ಚದಲ್ಲಿ ನಿರ್ಮಾಣವಾಗಲಿದೆ. ಈಗಾಗಲೇ ಭೂಮಿ ಪೂಜೆಯಾಗಿದೆ. ಇಲ್ಲಿಂದ 27 ನಂದಿನಿ ಉತ್ಪನ್ನಗಳನ್ನು ಉತ್ಪಾದಿಸುವ ಗುರಿ ಹೊಂದಲಾಗಿದೆ ಎಂದರು.

ಹೊಸದುರ್ಗ ಶಿಮುಲ್ ನಿರ್ದೇಶಕ ರವಿಕುಮಾರ ಮಾತನಾಡಿ ದೇಶದಲ್ಲಿ ಹಾಲು ಉತ್ಪಾದನೆ ಒಂದು ಉದ್ಯಮವಾಗಿ ಬೆಳೆದಿದ್ದು, ರೈತರು ಎಚ್ಚರಿಕೆಯಿಂದ ರಾಸುಗಳ ನಿರ್ವಹಣೆ ಮಾಡಬೇಕು. ವಿಮಾ ಕಂಪನಿಯವರು ರೈತರ ಪರವಾಗಿ ನಿಲ್ಲಬೇಕು. ಆಕಸ್ಮಿಕವಾಗಿ ರಾಸು ಸತ್ತರೆ, ಕಡಿಮೆ ವಿಮೆಯನ್ನು ಪಾವತಿಸಬಾರದು. ರೈತರ ಬದುಕು ಕಷ್ಟಮಯವಾಗಿದೆ ಎಂದರು.

ಬೇಸಿಗೆ ಪ್ರಾರಂಭವಾಗಿದ್ದು ರಾಸುಗಳಿಗೆ ಕಾಲು ಬಾಯಿ ರೋಗ ಮತ್ತು ಗಂಟು ರೋಗ ಬರಲಿವೆ. ಅದಕ್ಕಾಗಿ ರೈತರು ಮುನ್ನೆಚ್ಚರಿಕೆಯಾಗಿ ಲಸಿಕೆ ಹಾಕಿಸಬೇಕು. ರೈತರು ರಾಸುಗಳ ನಿರ್ವಹಣೆಯನ್ನು ಚೆನ್ನಾಗಿ ಮಾಡಿದ್ದಲ್ಲಿ ಗುಣಮಟ್ಟದ ಮತ್ತು ಅಧಿಕ ಹಾಲು ಉತ್ಪಾದನೆಯನ್ನು ಪಡೆಯಬಹುದು. ಜೊತೆಗೆ ತಪ್ಪದೆ ಖನಿಜ ಮಿಶ್ರಣ ಆಹಾರವನ್ನು ಕೊಡಿ ಎಂದು ಮುಖ್ಯ ಪಶು ವೈದ್ಯಾಧಿಕಾರಿ ಡಾ.ನಾಗರಾಜ್ ತಿಳಿಸಿದರು.

ಧರ್ಮಪುರ ಹಾಲು ಉತ್ಪಾದಕರ ಸಂಘದ ಅಧ್ಯಕ್ಷ ಭದ್ರಾಚಲ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಶಿಬಿರದಲ್ಲಿ ಹಸು, ಕರುಗಳ ಪ್ರದರ್ಶನ ಏರ್ಪಡಿಸಲಾಗಿದ್ದು ಒಟ್ಟು 11 ಪ್ರಶಸ್ತಿಗಳನ್ನು ನೀಡಿ ರೈತರನ್ನು ಗೌರವಿಸಲಾಯಿತು.

ವೇದಿಕೆಯಲ್ಲಿ ಧರ್ಮಪುರ ಗ್ರಾ.ಪಂ.ಮಾಜಿ ಅಧ್ಯಕ್ಷೆ ನೂರ್‌ಜಾನ್ ಅಮಾನುಲ್ಲಾ, ಈಶ್ವರಪ್ಪ, ಕೆ.ಕೃಷ್ಣಪ್ಪ, ಪುಟ್ಟರಾಜು, ಭೋಜರಾಜ, ಎಸ್.ಪಿ.ದಿನೇಶ, ಮಹಾಲಿಂಗಪ್ಪ, ಕಿರಣ್ ಕುಮಾರ, ಲತಾ, ಜ್ಯೋತಿ, ಕಾರ್ಯದರ್ಶಿ ಮಾರುತಿ, ಪಶು ವೈದ್ಯಾಧಿಕಾರಿಗಳಾದ ಡಾ.ಗುರುಪ್ರಸಾದ, ಡಾ.ಕಿರಣ್ ಕುಮಾರ, ಡಾ.ಪೂಜಾಶ್ರೀ, ಡಾ.ಮೋಹನ್ ಕುಮಾರ, ಡಾ. ಶಶಿಕುಮಾರ, ಜುಂಜಪ್ಪ, ತಿಪ್ಪೇಸ್ವಾಮಿ ಉಪಸ್ಥಿತರಿದ್ದರು.

ಮಹಿಳೆಯರು ಶೈಕ್ಷಣಿಕವಾಗಿ ಮುಂದೆ ಬರಬೇಕು



ರಾಂಪುರ: ರಾಜ್ಯ ಸರ್ಕಾರ ಪಂಚ ಗ್ಯಾರಂಟಿ ಯೋಜನೆಗಳ ಮೂಲಕ ಮಹಿಳೆಯರನ್ನು ಆರ್ಥಿಕವಾಗಿ ಸ್ವಾವಲಂಬಿಗಳನ್ನಾಗಿ ಮಾಡುತ್ತಿದೆ. ಈ ಗ್ಯಾರಂಟಿ ಯೋಜನೆಗಳಿಂದ ಬಡತನವನ್ನು ಬೇರುಸಮೇತ ಕಿತ್ತೆಸೆಯುವ ಕಾರ್ಯ ನಡೆಯುತ್ತಿದೆ. ಪಂಚಗತಿ ಯೋಜನೆಗಳಿಂದ ಮಹಿಳೆಯರು ತಮ್ಮ ಬದುಕುಗಳನ್ನು ಕಟ್ಟಿಕೊಳ್ಳುತ್ತಿದ್ದಾರೆ ಎಂದು ತಿಳಿಸಿದರು. ಮೊಳಕಾಲ್ಮೂರು ತಾಲೂಕಿನ ರಾಂಪುರ ಗ್ರಾಮ ಪಂಚಾಯಿತಿ ಆವರಣದಲ್ಲಿ ಸೋಮವಾರ ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ವತಿಯಿಂದ ಜರುಗಿದ ಗ್ಯಾರಂಟಿ ಯೋಜನೆಗಳ ಅರಿವು ಹಾಗೂ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಮಹಿಳೆಯರು ಶೈಕ್ಷಣಿಕವಾಗಿ ಮುಂದೆ ಬಂದು ಬದುಕನ್ನು ಕಟ್ಟಿಕೊಂಡಾಗ ಮಾತ್ರ ಸ್ವಾವಲಂಬಿಯಾಗಿ ಬದುಕು ಸಾಗಿಸಲು ಸಾಧ್ಯ. ಮಹಿಳೆಯರು ಸಮಾಜದ ಎಲ್ಲಾ ಕ್ಷೇತ್ರಗಳಲ್ಲಿ ಮುನ್ನಡೆ ಸಾಧಿಸಬೇಕು. ಸರ್ಕಾರದ ವಿವಿಧ ಹಂತದ ಹುದ್ದೆಗಳಿಗೆ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಆಯ್ಕೆಯಾಗಬೇಕು. ಆಗ ಮಹಿಳೆಯರ ಸಬಲೀಕರಣ ಸಂಪೂರ್ಣವಾಗಿ ನೆರವೇರುತ್ತದೆ ಎಂದರು.

ಈ ಹಿಂದೆ ಕೇವಲ ಮನೆಗಷ್ಟೇ ಸೀಮಿತವಾಗಿದ್ದ ಮಹಿಳೆ ಇದೀಗ ಎಲ್ಲಾ ಕ್ಷೇತ್ರಗಳಲ್ಲಿ ಮುಂಚೂಣಿಗೆ ಬಂದು ತನ್ನ ಸಾಮರ್ಥ್ಯ ಪ್ರದರ್ಶಿಸುತ್ತಿದ್ದಾಳೆ. ಇದು ಮಹಿಳಾ ಸ್ವಾಭಿಮಾನ ಮತ್ತು ಸಬಲೀಕರಣಕ್ಕೆ ಸಾಕ್ಷಿಯಾಗಿದೆ.

ವಿಶ್ವದಾದ್ಯಂತ ಮಹಿಳೆಯರಿಗೆ ಮಹತ್ವದ ಸ್ಥಾನಮಾನ ನೀಡಲಾಗುತ್ತಿದೆ. ಮಹಿಳೆ ಸಮಾಜದಲ್ಲಿ ಹಲವಾರು ರೂಪಗಳಲ್ಲಿ ಕಾರ್ಯನಿರ್ವಹಿಸುವ ಸಾಮರ್ಥ್ಯ ಹೊಂದಿದ್ದಾಳೆ. ಹಿಂದೆ ಮಾಜಿ ಪ್ರಧಾನಿ ಇಂದಿರಾಗಾಂಧಿಯವರು 17 ವರ್ಷಗಳ ಕಾಲ ದೇಶವನ್ನು ಸಮರ್ಥವಾಗಿ ಮುನ್ನಡೆಸಿದ್ದಾರೆ. ಮಹಿಳೆಯರಲ್ಲಿ ಅಗಾಧ ಶಕ್ತಿ ಅಡಗಿದ್ದು, ಅದನ್ನು ಸದ್ಬಳಕೆ ಮಾಡಿಕೊಳ್ಳಬೇಕಾಗಿದೆ. ಮಹಿಳೆಯ ಆರ್ಥಿಕ ಅಭಿವೃದ್ಧಿಗಾಗಿ ಸರ್ಕಾರ ಹಲವು ಯೋಜನೆಗಳನ್ನು ಜಾರಿಗೊಳಿಸಿದೆ ಎಂದರು.

ನಮ್ಮ ಸರ್ಕಾರ ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಿ ನುಡಿದಂತೆ ನಡೆದಿದೆ. ಬಡವರು ಹಾಗೂ ಮಹಿಳೆಯರ ಏಳಿಗೆಗೆ ಇವು ಸಹಕಾರಿಯಾಗಿವೆ. ಕುಟುಂಬದ ನಿರ್ವಹಣೆಯ ಜೊತೆಗೆ ಅನೇಕ ಮಹಿಳೆಯರು ಸ್ವಾವಲಂಬಿ ಬದುಕನ್ನು ಕಟ್ಟಿಕೊಂಡಿದ್ದಾರೆ ಎಂದು ತಿಳಿಸಿದ ಜಿಲ್ಲಾ ಗ್ಯಾರಂಟಿ ಸಮಿತಿ ಅಧ್ಯಕ್ಷ ಶಿವಣ್ಣ ತಿಳಿಸಿದ್ದರು.

ಸಮಾಜಮುಖಿ ಕಾರ್ಯದಲ್ಲಿ ತೊಡಗಿದಂತಹ ಮಹಿಳೆಯರನ್ನು ಸನ್ಮಾನಿಸಲಾಯಿತು. ಜಿಲ್ಲಾ ಗ್ಯಾರಂಟಿ ಅನುಷ್ಠಾನ ಸಮಿತಿ ಉಪಾಧ್ಯಕ್ಷ ಮೈಲಾರಪ್ಪ, ತಹಶೀಲ್ದಾರ್ ಟಿ ಜಗದೀಶ, ತಾಪಂ ಇಒ ಹನುಮಂತಪ್ಪ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ ಅಧಿಕಾರಿ ನವೀನ್ ಕುಮಾರ, ಅಶೋಕ, ನಾಗೇಶ್ ರೆಡ್ಡಿ, ಗೋವಿಂದಪ್ಪ, ಬೊಮ್ಮದೇವರಹಳ್ಳಿ ಗೋವಿಂದ, ಗುಂಡಪ್ಪ, ಹೊನ್ನೂರಪ್ಪ, ನರಸಿಂಹ ರೆಡ್ಡಿ, ಸಿದ್ದಬಸಪ್ಪ, ಬಾಂಡ್ರಾವಿ ಪಟೇಲ್ ಇಸ್ಮಾಯಿಲ್, ರಫಿ, ಪರಮೇಶ್ವರಪ್ಪ, ದಡಗೂರು ಮಂಜಣ್ಣ ಉಪಸ್ಥಿತರಿದ್ದರು.

ಈಚಘಟದಲ್ಲಿ ರೈತಸಂಘದಿಂದ ಪುನರುತ್ಥಾನ ಕಾರ್ಯಕ್ರಮ



ಹೊಳಲ್ಕೆರೆ: ತಾಲೂಕು ಈಚಘಟ್ಟ ಗ್ರಾಮದಲ್ಲಿ ಪುರುಷ ಮತ್ತು ಮಹಿಳೆಯರ ಕರ್ನಾಟಕ ರಾಜ್ಯರೈತ ಸಂಘ ಹಾಗೂ ಪುನರುತ್ಥಾನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಈ ಸಂದರ್ಭದಲ್ಲಿ ಗ್ರಾಮದ 80 ವರ್ಷ ಮೇಲ್ಪಟ್ಟಂತಹ ಯಾವುದೇ ರಾಜಕೀಯ ಪಕ್ಷದೊಂದಿಗಾಗಲಿ ಅಥವಾ ಸಂಘ ಸಂಸ್ಥೆ ಜೊತೆ ಗುರುತಿಸಿಕೊಳ್ಳದೆ ಸಮಾಜದಲ್ಲಿ ನಿಷ್ಠೆಯಿಂದ ಬದುಕಿದ ಹಿರಿಯರಿಗೆ ಸನ್ಮಾನ ಮಾಡಲಾಯಿತು. ಗುರಪ್ಪರ ಕರಿಯಜ್ಜಿ, ಬೂದುಗಂಬಜ್ಜರ ಕರಿಯಜ್ಜಿ, ಭುವಣ್ಣರ ಕರಿಯಜ್ಜಿ, ಅಜ್ಜಪ್ಪರ ಪುಟ್ಟಜ್ಜಿ, ಮೇಷ್ಟ್ರು ಸಿದ್ದಜ್ಜಿ, ಗೌಡ್ರ ಬಸಪ್ಪ, ಗೌಡ್ರ ನಿಂಗಮ್ಮ, ಬಸಪ್ಪ ಮೇಷ್ಟ್ರ ವೀರ ಬಸಮ್ಮ, ಮಹಾದೇವಪುರದ ಬಸಕ್ಕ, ನಾಕಿಕೆರೆ ತಿಪ್ಪಕ್ಕ, ತಿಮ್ಮ ಜ್ವರ ದೇವೇಂದ್ರಪ್ಪ, ಮತ್ತು ಗೌರಮ್ಮ ಆಡನೂರ ಮಹದೇವಪ್ಪ ಇವರನ್ನು ಸನ್ಮಾನಿಸಲಾಯಿತು. ಜಗದೀಶ್, ಸೋಮಣ್ಣ, ಕೆಂಗುಂಟೆ ನಾಗರಾಜ್ ಗೌಡ್ರು, ಪ್ರಕಾಶ್ ಅಬ್ಬಿಗೆರೆ, ರಾಜಪ್ಪ ಕಲ್ಲೇಶ್ ರಮೇಶ ಇದ್ದರು.

ಬಲವಂತವಾಗಿ ಶಾಲೆಗಳ ವಿಲೀನಕ್ಕೆ ಖಂಡನೆ

ಚಿತ್ರದುರ್ಗ: ಹೊಂಗನೂರು ಕೆಪಿಎಸ್ ಮ್ಯಾಗ್ನೆಟ್ ಶಾಲಾ ಯೋಜನೆಯ ಹೆಸರಿನಲ್ಲಿ ಸುತ್ತಮುತ್ತಲಿನ ಏಳು ಸರ್ಕಾರಿ ಶಾಲೆಗಳನ್ನು ಬಲವಂತವಾಗಿ ವಿಲೀನಗೊಳಿಸಲು ಆದೇಶ ಹೊರಡಿಸಿರುವ ರಾಜ್ಯ ಸರ್ಕಾರದ ಕ್ರಮವನ್ನು ಆಲ್ ಇಂಡಿಯಾ ಡೆಮಾಕ್ರಟಿಕ್ ಸ್ಟೂಡೆಂಟ್ ಆರ್ಗನೈಸೇಷನ್ ಖಂಡಿಸಿದೆ.

ಜಿಲ್ಲಾ ಸಂಚಾಲಕ ಕೆ.ಈರಣ್ಣ ಪತ್ರಿಕಾ ಹೇಳಿಕೆ ನೀಡಿದ್ದು, ಸರ್ಕಾರದ ಈ ನಿರ್ಧಾರ ಅಪ್ರಜಾತಾಂತ್ರಿಕ ಮತ್ತು ಬಡವರ ಶಿಕ್ಷಣ ವಿರೋಧಿಯಾಗಿದೆ. ಹೂಡಿಕೆ ಹೊಸಹಳ್ಳಿ, ಕನ್ನೀದೊಡ್ಡಿ, ಅಮ್ಮಳ್ಳಿ ದೊಡ್ಡಿ, ಸಂತೆ ಮೊಗೇನಹಳ್ಳಿ ಮತ್ತು ಸುಣ್ಣಘಟ್ಟ ಸೇರಿದಂತೆ ಈ ಭಾಗದ ಹಳ್ಳಿ ಶಾಲೆಗಳನ್ನು ಮುಚ್ಚುವುದನ್ನು ವಿರೋಧಿಸಿ ಪೋಷಕರು ಮತ್ತು ಸ್ಥಳೀಯ ಸಾರ್ವಜನಿಕರು ಈಗಾಗಲೇ ಪ್ರಬಲ ಹೋರಾಟ ನಡೆಸುತ್ತಿದ್ದಾರೆ. ತಮ್ಮ ಮಕ್ಕಳಿಗೆ ಹತ್ತಿರದ ಶಾಲೆಗಳಲ್ಲೇ ಶಿಕ್ಷಣ ಮುಂದುವರೆಯಬೇಕು ಎಂದು ಪೋಷಕರು ಒತ್ತಾಯಿಸಿದ್ದಾರೆ. ಶಿಕ್ಷಣ ಇಲಾಖೆಯು ಇತ್ತೀಚೆಗೆ ಹೊರಡಿಸಿರುವ ಆದೇಶದಲ್ಲಿ, ಈ ಶಾಲೆಗಳನ್ನು ಕೂಡಲೇ ವಿಲೀನಗೊಳಿಸಬೇಕೆಂದು ಒತ್ತಾಯಿಸಿರುವುದು ಮತ್ತು ಪೋಷಕರಿಗೆ ಮನವರಿಕೆ ಮಾಡಿಕೊಡುವಲ್ಲಿ ವಿಫಲರಾಗಿದ್ದಾರೆ ಎಂಬ ನೆಪವೊಡ್ಡಿ ಸ್ಥಳೀಯ ಶಿಕ್ಷಕರು ಹಾಗೂ ಅಧಿಕಾರಿಗಳನ್ನು ಟೀಕಿಸಿರುವುದು ಸರ್ಕಾರದ ಹಠಮಾರಿ ಧೋರಣೆಯನ್ನು ಎತ್ತಿ ತೋರಿಸುತ್ತದೆ ಎಂದು ಹೇಳಿದ್ದಾರೆ.

ಸರ್ಕಾರವು ಒಂದೆಡೆ ನಾವು ಯಾರನ್ನೂ ಬಲವಂತ ಮಾಡುವುದಿಲ್ಲ ಎಂದು ಮಾತಿನ ಭರವಸೆಗಳನ್ನು ನೀಡುತ್ತಿರುವಾಗಲೇ, ಮತ್ತೊಂದೆಡೆ ಪೋಷಕರ ಇಚ್ಛೆಗೆ ವಿರುದ್ಧವಾಗಿ ಮಕ್ಕಳನ್ನು ಒತ್ತಾಯಪೂರ್ವಕವಾಗಿ ಸ್ಥಳಾಂತರಿಸಲು ಆದೇಶ ನೀಡುತ್ತಿರುವುದು ದ್ವಂದ್ವ ನೀತಿಯಾಗಿದೆ ಎಂದು ಆರೋಪಿಸಿದ್ದಾರೆ.

ಪೋಷಕರು ತಮ್ಮ ಮಕ್ಕಳನ್ನು ಹೊಂಗನೂರು ಕೆಪಿಎಸ್ ಶಾಲೆಗೆ ಕಳುಹಿಸಲು ಸಿದ್ಧರಿಲ್ಲದಿದ್ದರೂ, ಅವರ ಮೇಲೆ ಒತ್ತಡ ಹೇರುವುದು ಸಂವಿಧಾನ ಬದ್ಧವಾದ ಶಿಕ್ಷಣದ ಹಕ್ಕಿನ ಉಲ್ಲಂಘನೆಯಾಗಿದೆ. ಸರ್ಕಾರವು ಕೂಡಲೇ ಈ ವಿಲೀನ ಪ್ರಕ್ರಿಯೆಯನ್ನು ಕೈಬಿಟ್ಟು, ಹಳ್ಳಿ ಶಾಲೆಗಳಲ್ಲಿಯೇ ಗುಣಮಟ್ಟದ ಶಿಕ್ಷಣ ನೀಡಲು ಕ್ರಮ ವಹಿಸಬೇಕು. ಜನರ ಪ್ರತಿರೋಧವನ್ನು ಅಲಕ್ಷಿಸಿ ಮುಂದುವರಿದಲ್ಲಿ, ಮುಂಬರುವ ದಿನಗಳಲ್ಲಿ ಈ ಹೋರಾಟವನ್ನು ಮತ್ತಷ್ಟು ತೀವ್ರಗೊಳಿಸಲಾಗುವುದು ಎಂದು ಆಲ್ ಇಂಡಿಯಾ ಡೆಮಾಕ್ರಟಿಕ್ ಸ್ಟೂಡೆಂಟ್ ಆರ್ಗನೈಸೇಷನ್ ಎಚ್ಚರಿಸಿದೆ.

ಶಿವು ಮಠ ಬಿಜೆಪಿ ಸದಸ್ಯನಲ್ಲ ಎಂಬ ಹೇಳಿಕೆ ಹಿಂಪಡೆಯುವೆ: ರವಿಕುಮಾರ್

ಹೊಸದುರ್ಗ: ತಾಲೂಕು ಕುರುಬ ಸಮಾಜ ನೀಡಿದ್ದ ಪತ್ರಿಕಾ ಹೇಳಿಕೆ ಕುರಿತು ಶನಿವಾರ ಪತ್ರಿಕಾ ಹೇಳಿಕೆ ನೀಡುವಾಗ ಶಿವರಾಜಕುಮಾರ್(ಶಿವುಮಠ) ಅವರು ಬಿಜೆಪಿಯ ಪದಾಧಿಕಾರಿಯಲ್ಲ ಎನ್ನುವಾಗ ಅಚಾತುರ್ಯದಿಂದ ಸದಸ್ಯನಲ್ಲ ಎನ್ನುವ ಪದ ಬಳಕೆಯಾಗಿದೆ. ನನ್ನ ಹೇಳಿಕೆ ಯಾರ ವಿರುದ್ಧವೂ ಅಲ್ಲ, ಕುರುಬ ಸಮಾಜದ ಕುರಿತು ಬಿಜೆಪಿಗೆ ಇರುವ ಗೌರವ ಕುರಿತು ತಿಳಿಸುವಾಗ ಇಂತಹ ಪದ ಬಳಕೆಯಾಗಿದೆ ಎನ್ನುವುದನ್ನು ಸ್ಪಷ್ಟಪಡಿಸುತ್ತೇನೆ ಎಂದು ಚಿತ್ರದುರ್ಗ ಜಿಲ್ಲಾ ಬಿಜೆಪಿ ಉಪಾಧ್ಯಕ್ಷ ಹೆಚ್.ಬಿ.ರವಿಕುಮಾರ್ ಪತ್ರಿಕಾ ಪ್ರಕಟಣೆಯ ಮೂಲಕ ತಿಳಿಸಿದ್ದಾರೆ.